www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಪ್ರಸವಾನಂತರದ ಖಿನ್ನತೆ ಎನ್ನುವುದು ಬಾಣಂತಿಯರಲ್ಲಿ ಅಪರೂಪವೇನಲ್ಲ. ಆದರೆ ಕೋವಿಡ್‌ಗಿಂತ ಮುಂಚೆ ಇದ್ದ ಪ್ರಮಾಣ ಈಗ ಒಮ್ಮೆಲೇ ಜಾಸ್ತಿಯಾಗಿದೆ ಎನ್ನುತ್ತದೆ ಅಂಕಿ–ಅಂಶ.



ಕೋವಿಡ್ ಆಸ್ಪತ್ರೆಯಲ್ಲಿ ಬೆಂಕಿ: 10 ಸಾವು 3B

ಆಳ–ಅಗಲ
ಭಾರತ–ಬಾಂಗ್ಲಾ: ಸುವರ್ಣ ಬಂಧ

ದೇಗುಲ ಸಿಬ್ಬಂದಿಗೆ 6ನೇ ವೇತನ ಶ್ರೇಣಿ 6

ಸೆನ್ಸೆಕ್ಸ್	ನಿಫ್ಟಿ	₹/$
49,008 ▲	14,507 ▲	72.51 ▲

ಉಪ ಚುನಾವಣೆ ಸತೀಶ್ ಜಾರಕಿಹೊಳಿ ಕಾಂಗ್ರೆಸ್ ಅಭ್ಯರ್ಥಿ



ನವದೆಹಲಿ: ಯಮಕನಮರಡಿ ಕ್ಷೇತ್ರದ ಶಾಸಕ ಸತೀಶ್ ಜಾರಕಿಹೊಳಿ ಅವರನ್ನು ಬೆಳಗಾವಿ ಲೋಕಸಭೆ ಕ್ಷೇತ್ರದ ಉಪ ಚುನಾವಣೆಯ ಅಭ್ಯರ್ಥಿಯನ್ನಾಗಿ ಕಾಂಗ್ರೆಸ್ ಶುಕ್ರವಾರ ಘೋಷಿಸಿದೆ.

ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಸತೀಶ್ ಅವರನ್ನು ಪಕ್ಷದ ಅಭ್ಯರ್ಥಿಯಾಗಿ ನೇಮಿಸಿ ಅನುಮೋದಿಸಿದ್ದಾರೆ ಎಂದು ಪ್ರಧಾನ ಕಾರ್ಯದರ್ಶಿ ಮುಕುಲ್ ವಾಸ್ನಿಕ್ ತಿಳಿಸಿದ್ದಾರೆ.

ರೈಲ್ವೆ ಖಾತೆ ರಾಜ್ಯ ಸಚಿವರಾಗಿದ್ದ ಸುರೇಶ ಅಂಗಡಿ ಅವರ ನಿಧನದಿಂದ ತೆರವಾಗಿರುವ ಬೆಳಗಾವಿ ಕ್ಷೇತ್ರದ ಉಪ ಚುನಾವಣೆ ಏಪ್ರಿಲ್ 17ರಂದು ನಿಗದಿಯಾಗಿದೆ.

ಇಂದಿನ ಪಾಡ್‌ಕಾಸ್ಟ್ ವಿಶೇಷ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ



ಯುವತಿ ದೂರು ಆಧರಿಸಿ ಅತ್ಯಾಚಾರ ಪ್ರಕರಣ ದಾಖಲು

ರಮೇಶ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ ಪ್ರಕರಣ ಮಹಾ ತಿರುವು ಪಡೆದುಕೊಂಡಿದ್ದು, 'ಕೆಲಸದ ಆಮಿಷವೊಡ್ಡಿ ಯುವತಿ ಮೇಲೆ ಅತ್ಯಾಚಾರ ಎಸಗಿದ' ಆರೋಪದಡಿ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಅದರ ಬೆನ್ನಲ್ಲೇ, ಸಂತ್ರಸ್ತ ಯುವತಿ ತನ್ನ ತಮ್ಮ ಹಾಗೂ ಅಮ್ಮನ ಜತೆ ಮಾತನಾಡಿದ್ದಾರೆ ಎನ್ನಲಾದ ಆಡಿಯೊ ಬಹಿರಂಗಗೊಂಡಿದೆ. ಅದರಲ್ಲಿ 'ತಾನು ಡಿ.ಕೆ. ಶಿವಕುಮಾರ್ ಮನೆ ಬಳಿ ಬಂದಿದ್ದೀನಿ' ಎಂದು ಯುವತಿ ಹೇಳಿದ್ದಾರೆ.

ಆಡಿಯೊ ಹೊರಬರುತ್ತಿದ್ದಂತೆ ಸುದ್ದಿಗಾರರ ಎದುರು ಕಾಣಿಸಿಕೊಂಡ ರಮೇಶ ಜಾರಕಿಹೊಳಿ, 'ಇದು ಟ್ರಯಲ್ ಅಷ್ಟೆ. ನಾಳೆ ದೊಡ್ಡ ಸುದ್ದಿ ಕೊಡ್ತೀನಿ' ಎಂದು ಹೇಳಿದ್ದಾರೆ. 'ಇದರಲ್ಲಿ ಡಿ.ಕೆ. ಶಿವಕುಮಾರ್ ಪಾತ್ರ ಇದೆಯೇ' ಎಂಬ ಸುದ್ದಿಗಾರರ ಪ್ರಶ್ನೆಗೆ, 'ಶಿವಕುಮಾರ್ ನನ್ನ ಹಳೆಯ ಗೆಳೆಯ. ನನ್ನ ಕಷ್ಟಕ್ಕೆ ಆಗಿದ್ದಾನೆ. ಅವನು ನನ್ನಂತೆ ರಾಜೀನಾಮೆ ಕೊಡುವುದು ಬೇಡ, ಕೆಪಿಸಿಸಿ ಅಧ್ಯಕ್ಷರಾಗಿ ಹೋರಾಟ ಮಾಡುತ್ತಲೇ ಇರಲಿ' ಎಂದು ರಮೇಶ ಪ್ರತಿಕ್ರಿಯಿಸಿದ್ದಾರೆ.

ಆದರೆ, ಆಡಿಯೊ ಹೊರಬಂದ ಬಳಿಕ ಪ್ರತಿಕ್ರಿಯೆ ಪಡೆಯಲು ಡಿ.ಕೆ. ಶಿವಕುಮಾರ್ ಲಭ್ಯರಾಗಲಿಲ್ಲ.

ಸಿ.ಡಿ. ಬಯಲಿಗೆ ಬಂದಾಗಿನಿಂದ ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದ್ದ ಪ್ರಕರಣ ಶುಕ್ರವಾರ ಸಂಜೆಯ ಹೊತ್ತಿಗೆ ಕ್ಷಣ ಕ್ಷಣದ ಬದಲಾವಣೆಗೆ ದಾರಿ ಮಾಡಿಕೊಟ್ಟಿತು.

ಏತನ್ಮಧ್ಯೆ, ಗುಪ್ತಚರ ವಿಭಾಗದ ಮುಖ್ಯಸ್ಥರನ್ನು ತಮ್ಮ ಮನೆಗೆ ಕರೆಯಿಸಿಕೊಂಡ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಈ ಎಲ್ಲ ಘಟನಾವಳಿಗಳ ಬಗ್ಗೆ ಮಾಹಿತಿ ಪಡೆದರು. ಶಿವಕುಮಾರ್ ಹೆಸರು ಮುನ್ನೆಲೆಗೆ ಬಂದಿರುವುದರಿಂದಾಗಿ ಸಿ.ಡಿ ಪ್ರಕರಣವೀಗ ರಾಜಕೀಯ ಜಿದ್ದಾಜಿದ್ದಿಗೆ ದಾರಿ ಮಾಡಿಕೊಡುವ ಸಾಧ್ಯತೆಯೂ ಇದೆ.

ಆಡಿಯೊದಲ್ಲಿದೆ ಡಿ.ಕೆ. ಶಿವಕುಮಾರ್ ಹೆಸರು

ಬೆಂಗಳೂರು: ಸಂತ್ರಸ್ತ ಯುವತಿ ತನ್ನ ಕುಟುಂಬದವರ ಜತೆ ಮಾತನಾಡಿದ್ದು ಎನ್ನಲಾದ 6.59 ನಿಮಿಷದ ಆಡಿಯೊ ತುಣುಕು ಶುಕ್ರವಾರ ಬಹಿರಂಗಗೊಂಡಿದೆ.

ಈ ಆಡಿಯೊದಲ್ಲಿ ಡಿ.ಕೆ.ಶಿವಕುಮಾರ್ ಅವರ ಹೆಸರು ಪ್ರಸ್ತಾಪವಾಗಿದೆ. ಅದರ ಪೂರ್ಣ ಪಾಠ ಇಲ್ಲಿದೆ.

ಯುವತಿಯ ತಮ್ಮ: ಏನ್ ಮಾಡಕ್ಕ ಹತ್ತಿದ್ದಿ?
ಯುವತಿ: ಇಲ್ಲೇ ನಾನು, ಆಕಾಶ್ ಇದ್ದೀವಿ.
ತಮ್ಮ: ಊಟ...?
ಯುವತಿ: ಊಟ ಆಯ್ತುಲೇಪ್ಪಾ. ಚಿನ್ನಿ ನಿನ್ನ ಮೇಲೆ ಆಣೆ, ನಮ್ಮ ಮಮ್ಮಿ ಮೇಲೆ ಆಣೆ, ನಾನು ನಂಬುವ ಕೃಷ್ಣನ ಮೇಲೆ ಆಣೆ, ಅದು ನಾನಲ್ಲ. ನೀ ಆದರೂ ನನ್ನ ನಂಬಲೇ ಪಾ, ಯಾರೂ ನನ್ನ ನಂಬ್ತಿಲ್ಲ.
ತಮ್ಮ: ನಂಬಿದೀನಿಲೇಪ್ಪಾ
ಯುವತಿ: ಊಟ ಆಯ್ತು. ನ್ಯೂಸ್‌ನಾಗ ಅದೆಲ್ಲ ಏನ್ ತೋರ್ಸಾ ಹತ್ತೆರಾ ಅದೆಲ್ಲ ಗ್ರಾಫಿಕ್ಸ್ ಅದಾ ಚಿನ್ನಿ.
ತಮ್ಮ: ಗ್ರಾಫಿಕ್ಸಾ?
ಯುವತಿ: ಲೇಪಾ ನಾ ಯಾಕ್ ಅಂತಾ ಕೆಲ್ಸಕ್ ಹೋಕ್ಕೀನಿ ಹೇಳು? ಒಂದ್ ಸ್ವಲ್ಪ ನೀನೇ ಯೋಚ್ನೆ ಮಾಡು.
ತಮ್ಮ: ನಿಂದೆಲ್ಲ ವಾಯ್ಸ್ ಐತಲ್ಲ? ಆಡಿಯೊ ಎಲ್ಲ ಇದೆಯಲ್ಲ? ಬಿಯರ್ ಕುಡಿತಿಯಾ? ಅದು ಕುಡಿತಿಯಾ? ಎಲ್ಲ ಕೇಳ್ಯಾನಾ?
ಯುವತಿ: ಲೇ ಒಲ್ಲೆಪ್ಪಾ. ನಾ ವಾಯ್ಸ್ ಕೊಟ್ಟಿದ್ದು. ಬೇರೆ ಹುಡ್ಗಿ ಮಾತಾಡಿದ್ದು ವಿತ್ ವಿಡಿಯೊ ನಿಂಗೇನೋ ನಾ ಕಳಿಸ್ತೀನಿ ಇರು.
ತಮ್ಮ: ಕಳ್ಸ್ ನಮಗಾ
ಯುವತಿ: ಅವರು ಬರ್ಲಿ ತಡಿ. ನನ್ನ ಕಡೆ ಯಾವುದೂ ವಿಡಿಯೊ ಇಲ್ಲ. ಡಿ.ಕೆ. ಶಿವಕುಮಾರ್‌ದು ಯಾರೋ ಬರಾ ಹತ್ತಾರಾ. ಅವ್ರು ಎಲ್ಲ ಬಂದ ಮ್ಯಾಲೆ ಮಾತಾಡಿ ಕಳ್ಸ್ತೀನಿ.
ತಮ್ಮ: ಯಾಕ್ ಬೇಕ್ ಲೇ. ಶಿವಕುಮಾರ್, ಗಿವಕುಮಾರ್
ಮತ್ತೊಬ್ಬ ಯುವಕ: ಭಾಯಿ, ಭಾಯಿ, ಹಲೋ

6ನೇ ಪುಟ ನೋಡಿ

ಎಫ್‌ಐಆರ್‌ನಲ್ಲಿ ಸೆಕ್ಷನ್ ಹೇಳುವುದೇನು?


ರಮೇಶ ಜಾರಕಿಹೊಳಿ

ರಮೇಶ ಜಾರಕಿಹೊಳಿ ವಿರುದ್ಧ ದಾಖಲಿಸಿರುವ ಎಫ್‌ಐಆರ್‌ನಲ್ಲಿ ಭಾರತೀಯ ದಂಡ ಸಂಹಿತೆ (ಐಪಿಸಿ) ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆಯ ಹಲವು ಸೆಕ್ಷನ್‌ಗಳನ್ನು ಉಲ್ಲೇಖಿಸಿದ್ದು, ಆ ಸೆಕ್ಷನ್‌ಗಳು ಏನನ್ನು ಹೇಳುತ್ತವೆ ಎಂಬ ವಿವರ ಇಲ್ಲಿದೆ

ಐಪಿಸಿ ಸೆಕ್ಷನ್ 354 (ಎ)– ಮಹಿಳೆಯ ಮೇಲೆ ಅತ್ಯಾಚಾರ ಮಾಡುವ ಉದ್ದೇಶದಿಂದ ಬಲ ಪ್ರಯೋಗ ನಡೆಸುವುದು, ಲೈಂಗಿಕ ಸುಖಕ್ಕಾಗಿ ಒತ್ತಾಯಿಸುವುದು, ಮಹಿಳೆಯ ಇಚ್ಛೆಗೆ ವಿರುದ್ಧವಾಗಿ ನೀಲಿ ಚಿತ್ರಗಳನ್ನು ತೋರಿಸುವುದು ಮತ್ತು ಮಹಿಳೆಯ ಕುರಿತು ಲೈಂಗಿಕ ಭಾವನೆಗಳುಳ್ಳ ಹೇಳಿಕೆ ನೀಡುವುದು.

ಐಪಿಸಿ ಸೆಕ್ಷನ್ 506– ಕೊಲೆ ಬೆದರಿಕೆ.

ಐಪಿಸಿ ಸೆಕ್ಷನ್ 504– ಶಾಂತಿಭಂಗ ಮಾಡಲು ಉದ್ದೇಶಪೂರ್ವಕವಾಗಿ ಪ್ರಚೋದನಕಾರಿ ಮಾತನ್ನಾಡುವುದು.

ಐಪಿಸಿ ಸೆಕ್ಷನ್ 376 ಸಿ– ತನ್ನ ಅಧಿಕಾರದ ಪ್ರಭಾವ ಬಳಸಿ ಅತ್ಯಾಚಾರ ನಡೆಸುವುದು.

ಐಪಿಸಿ ಸೆಕ್ಷನ್ 417– ವಂಚನೆ ಅಪರಾಧಿಗೆ ಎರಡು ವರ್ಷಗಳವರೆಗೂ ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸುತ್ತದೆ

ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 67(ಎ)– ಲೈಂಗಿಕ ದೃಶ್ಯಗಳನ್ನು ವಿದ್ಯುನ್ಮಾನ ಮಾಧ್ಯಮದಲ್ಲಿ ಪ್ರಸಾರ ಮಾಡಿದವರಿಗೆ ಐದು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ₹ 10 ಲಕ್ಷಗಳವರೆಗೆ ದಂಡ ವಿಧಿಸಲು ಅವಕಾಶ ಕಲ್ಪಿಸುತ್ತದೆ.

ಯುವತಿ ದೂರು: ಸಿ.ಡಿ ಬಯಲಾದ 24 ದಿನಗಳ ನಂತರ ತಮ್ಮ ವಕೀಲ ಕೆ.ಎನ್. ಜಗದೀಶ್‌ಕುಮಾರ್ ಮೂಲಕ ಯುವತಿ, ನಗರ ಪೊಲೀಸ್ ಕಮಿಷನರ್ ಅವರಿಗೆ ಶುಕ್ರವಾರ ಮಧ್ಯಾಹ್ನ ದೂರು ನೀಡಿದ್ದಾರೆ.

6ನೇ ಪುಟ ನೋಡಿ

ಆಡಿಯೊ–ವಿಡಿಯೊ ಏನಾದರೂ ಬಿಡುಗಡೆಯಾಗಲಿ. ಯಾವುದರಿಂದಲೂ ತನಿಖೆ ದುರ್ಬಲಗೊಳ್ಳುವುದಿಲ್ಲ. ಯುವತಿ ಕುಟುಂಬಕ್ಕೆ ರಕ್ಷಣೆ ಒದಗಿಸಲು ಸಿದ್ಧ
ಬಸವರಾಜ ಬೊಮ್ಮಾಯಿ
ಗೃಹ ಸಚಿವ

ಯುವತಿ ಹಾಗೂ ಅವರ ಕುಟುಂಬದ ಸದಸ್ಯರಿಗೆ ಭಯವಿದೆ. ಪ್ರಕರಣದ ವಿಚಾರಣೆಗಾಗಿ ಪೊಲೀಸರ ಎದುರು ಬೇಗನೇ ಬರುತ್ತಾರೆ. ಪೊಲೀಸರು ರಕ್ಷಣೆ ಭರವಸೆ ಕೊಡಬೇಕು
ಕೆ.ಎನ್. ಜಗದೀಶ್‌ಕುಮಾರ್, ವಕೀಲ

ಏ.14ರಿಂದ ಭಜನಾ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಗದ್ಗುರು ಸಿದ್ಧಾರೂಢ ಮಹಾಸ್ವಾಮಿಗಳ ಜಯಂತ್ಯುತ್ಸವದ ಅಂಗವಾಗಿ ಮುಖ್ಯ ಸಿದ್ಧಾರೂಢರ ಮಠದಲ್ಲಿ ಏಪ್ರಿಲ್ 14ರಿಂದ 20ರವರೆಗೆ ರಾಜ್ಯ ಮಟ್ಟದ ಆರನೇ ವರ್ಷದ ಭಜನಾ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ.

ಈ ಕುರಿತು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಠದ ಟ್ರಸ್ಟಿ ಶಾಮಾನಂದ ಬಾ.ಪೂಜೇರಿ, 'ಸ್ಪರ್ಧೆಯಲ್ಲಿ ಗೆದ್ದ ತಂಡಕ್ಕೆ ₹90 ಸಾವಿರ ಬಹುಮಾನ ನೀಡಲಾಗುತ್ತದೆ. ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ತಂಡಗಳಿಗೆ ಕ್ರಮವಾಗಿ ₹70 ಸಾವಿರ ಹಾಗೂ ₹60 ಸಾವಿರ ಸಿಗಲಿದೆ. ಉತ್ತಮ ಸಾಮರ್ಥ್ಯ ತೋರಿದ ಹತ್ತು ತಂಡಗಳನ್ನು ಆಯ್ಕೆ ಮಾಡಿ ಆ ತಂಡಗಳಿಗೆ ತಲಾ ₹8 ಸಾವಿರ ಸಮಾಧಾನಕರ ಬಹುಮಾನ ಕೊಡಲಾಗುತ್ತದೆ. 16 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ತಂಡಗಳಿಗೆ ತಲಾ ₹9 ಸಾವಿರ ಹಾಗೂ ಉತ್ತಮ ಪ್ರದರ್ಶನ ನೀಡುವ ಮಹಿಳಾ ತಂಡವೊಂದಕ್ಕೆ ₹9 ಸಾವಿರ ಬಹುಮಾನ ದೊರೆಯಲಿದೆ' ಎಂದರು.

ಆಸಕ್ತ ತಂಡ ಏಪ್ರಿಲ್ 10ರೊಳಗೆ ಮಠದ ಟ್ರಸ್ಟ್ ಕಮಿಟಿಯ ಕಾರ್ಯಾಲಯದಲ್ಲಿ ಹೆಸರು ನೋಂದಾಯಿಸಬೇಕು. ಹೆಚ್ಚಿನ ಮಾಹಿತಿಗೆ 9620693060.

ಆರೋಪಿ ಪರಾರಿ: ಪೊಲೀಸರ ಅಮಾನತು

ಚಿಕ್ಕಮಗಳೂರು: 'ಪೋಕ್ಸೊ' ಅಡಿ ಬಂಧಿತನಾಗಿದ್ದ ಆರೋಪಿ ಲಾಕ್ ಅಪ್‌ನಿಂದ ಪರಾರಿಯಾಗಿದ್ದ ಪ್ರಕರಣಕ್ಕೆ ಸಂಬಂಧಿಸಿ ಸಖರಾಯಪಟ್ಟಣ ಠಾಣೆಯ ಎಎಸ್‌ಐ ಸಹಿತ ಮೂವರು ಪೊಲೀಸರನ್ನು ವರಿಷ್ಠಾಧಿಕಾರಿ ಅಕ್ಷಯ್ ಎಂ. ಹಾಕೆ ಅಮಾನತು ಮಾಡಿದ್ದಾರೆ.

'ಎಎಸ್‌ಐ ಶಿವಕುಮಾರ್ ಮತ್ತು ಕಾನ್‌ಸ್ಟೆಬಲ್‌ಗಳಾದ ಶಿವಾಜಿ, ಶಿವು ಅವರನ್ನು ಕರ್ತವ್ಯ ಲೋಪದಡಿ ಅಮಾನತುಗೊಳಿಸಲಾಗಿದೆ' ಎಂದು ಅವರು ತಿಳಿಸಿದ್ದಾರೆ.

ನಮ್ಮ ಮೆಟ್ರೊ: ಗುಲಾಬಿ ಮಾರ್ಗದ ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿನ ಕಾಮಗಾರಿ ಗುತ್ತಿಗೆ ರದ್ದು

ಕಾಮಗಾರಿ ಸ್ಥಗಿತ–ದಟ್ಟಣೆ ವಿಪರೀತ

• ಗುರು ಪಿ.ಎಸ್.

ಬೆಂಗಳೂರು: 'ನಮ್ಮ ಮೆಟ್ರೊ' ಎರಡನೇ ಹಂತದಲ್ಲಿ ಗುಲಾಬಿ ಮಾರ್ಗದಲ್ಲಿ ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿ ನಡೆಯುತ್ತಿರುವ ಕಾಮಗಾರಿ ಏಕಾಏಕಿ ಸ್ಥಗಿತಗೊಂಡಿದೆ. ಈ ಮಾರ್ಗದಲ್ಲಿ ಸಂಚರಿಸುವ ವಾಹನ ಮತ್ತು ಜನರ ಪರದಾಟ ಮುಂದುವರಿದಿದೆ.

'ಸುಮಾರು ಒಂದೂವರೆ ವರ್ಷಗಳ ಹಿಂದೆಯೇ ಈ ಮಾರ್ಗದಲ್ಲಿ ಮೆಟ್ರೊ ಪಿಲ್ಲರ್‌ಗಳನ್ನು ಹಾಕಲಾಗಿದೆ. ಉಳಿದಂತೆ ಯಾವ ಕಾಮಗಾರಿಯೂ ನಡೆಯುತ್ತಿಲ್ಲ. ಪಿಲ್ಲರ್‌ಗಳ ಮಧ್ಯೆ ಅಲ್ಲಲ್ಲಿ ಬಿದ್ದಿರುವ ಮಣ್ಣು ರಸ್ತೆಯವರೆಗೂ ಹರಡಿದ್ದು ವಾಹನ ಸಂಚಾರಕ್ಕೂ ತೊಂದರೆಯಾಗುತ್ತಿದೆ' ಎಂದು ವಾಹನ ಸವಾರ ರಮೇಶ್ ಅಸಮಾಧಾನ ವ್ಯಕ್ತಪಡಿಸಿದರು.

'ಈ ಮಾರ್ಗದಲ್ಲಿ ಮೊದಲೇ ಸಂಚಾರ ದಟ್ಟಣೆ ಹೆಚ್ಚು. ಪರಿಸ್ಥಿತಿ ನೋಡಿದರೆ ಕಾಮಗಾರಿ ಇನ್ನೂ ಎರಡು ಮೂರು ವರ್ಷಗಳಾದರೂ ಮುಗಿಯುವಂತೆ ಕಾಣುತ್ತಿಲ್ಲ' ಎಂದು ಅವರು ಹೇಳಿದರು.

ಗುತ್ತಿಗೆ ರದ್ದು: ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿ ಕಾಮಗಾರಿಯ ಗುತ್ತಿಗೆ ಪಡೆದಿದ್ದ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿ ಹಣಕಾಸಿನ ತೊಂದರೆಯ ಕಾರಣ ನಿಗದಿತ ಅವಧಿಯಲ್ಲಿ ಮುಗಿಸಬೇಕಾದಷ್ಟು ಕಾಮಗಾರಿ ಮುಗಿಸಿಲ್ಲ. ಕಳಪೆ ಕಾರ್ಯಾಚರಣೆ ಪರಿಣಾಮ ಈ ಟೆಂಡರ್ ಅನ್ನು ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ರದ್ದು ಮಾಡಿದೆ.

21 ಕಿ.ಮೀ. ಉದ್ದದ ಈ ಮಾರ್ಗದಲ್ಲಿ 14 ಕಿ.ಮೀ. ಉದ್ದದ ಸುರಂಗ ಮಾರ್ಗವೂ ಬರುತ್ತದೆ. ಎತ್ತರಿಸಿದ ಮಾರ್ಗದ ನಿರ್ಮಾಣ ಕಾಮಗಾರಿಯ ಗುತ್ತಿಗೆಯನ್ನು ಸಿಂಪ್ಲೆಕ್ಸ್ ಪಡೆದಿತ್ತು.

2019ರ ಡಿಸೆಂಬರ್ ವೇಳೆಗೆ ಶೇ 22ರಷ್ಟು ಸಿವಿಲ್ ಕಾಮಗಾರಿಯನ್ನು ಕಂಪನಿ ಪೂರ್ಣಗೊಳಿಸಿತ್ತು. 2021ರ ಫೆಬ್ರುವರಿಯಾದರೂ ಶೇ 37ರಷ್ಟು ಕಾಮಗಾರಿ ಮಾತ್ರ ಪೂರ್ಣಗೊಂಡಿತ್ತು. ಕಾಮಗಾರಿ ತೀರಾ ವಿಳಂಬವಾದ ಕಾರಣ ನಿಗಮವು ಕಂಪನಿಗೆ ನೋಟಿಸ್ ನೀಡಿತ್ತು.

'ಟೆಂಡರ್‌ನ ಷರತ್ತಿಗೆ ಅನುಗುಣವಾಗಿ ಕಾಲಮಿತಿಯಲ್ಲಿ ಮುಗಿಸಬೇಕಾದಷ್ಟು ಕಾಮಗಾರಿಯನ್ನು ಕಂಪನಿ ಮುಗಿಸಿರಲಿಲ್ಲ. ಅವರಿಗೆ ನೀಡಿದ್ದ ಗುತ್ತಿಗೆ ರದ್ದು ಮಾಡಿ, ಹೊಸ ಟೆಂಡರ್ ಕರೆಯಲಾಗಿದೆ. ಈ ಮಾರ್ಗದಲ್ಲಿ ಮತ್ತೆ ಕೆಲಸ ಪ್ರಾರಂಭವಾಗಲು ಇನ್ನೂ 3ರಿಂದ 4 ತಿಂಗಳು ಆಗಬಹುದು' ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಜಯ್ ಸೇಠ್ 'ಪ್ರಜಾವಾಣಿ'ಗೆ ತಿಳಿಸಿದರು.

ಏ.21 ಕೊನೆಯ ದಿನ: ಈ ಮಾರ್ಗದಲ್ಲಿ ಬಾಕಿ ಉಳಿದಿರುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ನಿಗಮವು ಮಾ.22ರಂದು ನಿಗಮವು ಹೊಸ ಟೆಂಡರ್ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಏ.21 ಕೊನೆಯ ದಿನ.

ಗೊಟ್ಟಿಗೆರೆಯಿಂದ ಸ್ವಾಗತ್ ಕ್ರಾಸ್‌ವರೆಗೆ ವಯಡಕ್ಟ್ ಮತ್ತು ಐದು ನಿಲ್ದಾಣಗಳ ನಿರ್ಮಾಣ ಹಾಗೂ ಕೊತ್ತನೂರು ಡಿಪೊ ನಿರ್ಮಾಣ ಗುತ್ತಿಗೆಯನ್ನು ಇದು ಹೊಂದಿದೆ.

ಗೊಟ್ಟಿಗೆರೆ, ಹುಳಿಮಾವು, ಐಐಎಂಬಿ, ಜೆ.ಪಿ.ನಗರ 4ನೇ ಹಂತ ಹಾಗೂ ಸ್ವಾಗತ್ ಕ್ರಾಸ್ ನಿಲ್ದಾಣಗಳನ್ನು ನಿರ್ಮಿಸಬೇಕಾಗುತ್ತದೆ.

ಮೂರು ವರ್ಷ ಪರದಾಟ: 'ಗುಲಾಬಿ ಮಾರ್ಗದ ಈ ಎತ್ತರಿಸಿದ ಮಾರ್ಗ ನಿರ್ಮಾಣ ಕಾಮಗಾರಿಯು 2023ರ ಡಿಸೆಂಬರ್ ವೇಳೆಗೆ ಪೂರ್ಣಗೊಳ್ಳಲಿದೆ' ಎಂದು ನಿಗಮ ಹೇಳಿದೆ.

ಅಂದರೆ, ಈ ಮಾರ್ಗದಲ್ಲಿ ಇನ್ನೂ ಮೂರು ವರ್ಷಗಳವರೆಗೆ ದೂಳು, ಸಂಚಾರ ದಟ್ಟಣೆ ಸಾಮಾನ್ಯವಾಗಿರಲಿದೆ.



ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿ ಮೆಟ್ರೊ ಕಾಮಗಾರಿ ಸ್ಥಗಿತಗೊಂಡಿದ್ದು ಪಿಲ್ಲರ್‌ಗಳ ನಡುವೆ ಮಣ್ಣು ಬಿದ್ದಿರುವುದು
ಪ್ರಜಾವಾಣಿ ಚಿತ್ರ/ಅನೂಪ್ ರಾಘ್ ಟಿ.

ಗುಲಾಬಿ ಮಾರ್ಗದ ವಿವರ

21.25 ಕಿ.ಮೀ. ಮಾರ್ಗದ ಉದ್ದ

ಟ್ರ್ಯಾಕ್: **ಎರಡು**

18 ನಿಲ್ದಾಣಗಳ ಸಂಖ್ಯೆ

ಡಿಪೊ: **ಕೊತ್ತನೂರಿನಲ್ಲಿ ಡಿಪೊ**

ಎಲ್ಲಿಂದ ಎಲ್ಲಿಯವರೆಗೆ
ಕಾಳೇನ ಅಗ್ರಹಾರದಿಂದ ಸ್ವಾಗತ್ ಕ್ರಾಸ್‌ವರೆಗೆ (ನಾಗವಾರ ನಿಲ್ದಾಣ)



ಜೈಕಾದಿಂದ ಮೆಟ್ರೊಗೆ ₹3,717 ಕೋಟಿ ಸಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ'ದ ಎರಡನೇ ಹಂತದಲ್ಲಿ 72 ಕಿ.ಮೀ. ಉದ್ದದ ಮೆಟ್ರೊ ರೈಲು ಮಾರ್ಗ ನಿರ್ಮಾಣ ಕಾಮಗಾರಿಗೆ ಜಪಾನ್‌ನ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆ (ಜೈಕಾ) ₹3,717 ಕೋಟಿ ಸಾಲ ನೀಡುವುದಾಗಿ ಘೋಷಿಸಿದೆ.

ಈ ಸಂಬಂಧ ಕೇಂದ್ರ ಸರ್ಕಾರ ಮತ್ತು ಜೈಕಾ ಮಧ್ಯೆ ಶುಕ್ರವಾರ ಒಪ್ಪಂದ ಏರ್ಪಟ್ಟಿದೆ. ಕೇಂದ್ರ ಹಣಕಾಸು ಇಲಾಖೆ ಆರ್ಥಿಕ ವ್ಯವಹಾರಗಳ ಹೆಚ್ಚುವರಿ ಕಾರ್ಯದರ್ಶಿ ಡಾ.ಸಿ.ಎಸ್. ಮಹಾಪಾತ್ರ ಮತ್ತು ಜೈಕಾ ಮುಖ್ಯ ಪ್ರತಿನಿಧಿ ಮಾಟ್ಸುಮೊಟೊ ಕಾಟ್ಸುವೊ ಅವರು ಒಪ್ಪಂದಕ್ಕೆ ಹಾಕಿದ್ದಾರೆ.

ನಮ್ಮ ಮೆಟ್ರೊ ಎರಡನೇ ಹಂತದ ನಾಗವಾರ-ಗೊಟ್ಟಿಗೆರೆ (ರೀಚ್-6), ಸಿಲ್ಕ್ ಬೋರ್ಡ್- ಕೆ.ಆರ್. ಪುರ (2ಎ) ಹಾಗೂ ಕೆ.ಆರ್. ಪುರ- ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಟರ್ಮಿನಲ್ (2ಬಿ) ನಡುವಿನ ಮಾರ್ಗ ನಿರ್ಮಾಣ ಯೋಜನೆಗೆ ಈ ಹಣವನ್ನು ಬಳಸಿಕೊಳ್ಳಲು ಉದ್ದೇಶಿಸಲಾಗಿದೆ.

ಉದ್ದೇಶಿತ ಈ ಮಾರ್ಗಗಳಲ್ಲಿ ಸಂಚರಿಸುವವರಿಗೆ ಸುಗಮ ಸಾರ್ವಜನಿಕ ಸಾರಿಗೆ ವ್ಯವಸ್ಥೆ ದೊರೆಯಲಿದೆ. ಸಕಾಲದಲ್ಲಿ ಯೋಜನೆ ಪೂರ್ಣಗೊಂಡರೆ, ಸಂಚಾರದಟ್ಟಣೆ ಗಣನೀಯ ಪ್ರಮಾಣದಲ್ಲಿ ಇಳಿಮುಖವಾಗುವ ಸಾಧ್ಯತೆ ಇದೆ.

ನಗರದಲ್ಲಿ ಖಾಸಗಿ ವಾಹನಗಳ ನೋಂದಣಿ ಗಣನೀಯವಾಗಿ ಏರಿಕೆಯಾಗಿದ್ದು, 2019ರ ಅಂತ್ಯಕ್ಕೆ 80 ಲಕ್ಷ ವಾಹನಗಳು ನೋಂದಣಿಯಾಗಿವೆ. ದೇಶದಲ್ಲಿ ದೆಹಲಿ ನಂತರ ಬೆಂಗಳೂರು ಎರಡನೇ ಅತಿ ಹೆಚ್ಚು ಇಂಗಾಲ ಹೊರಸೂಸುವ ನಗರವಾಗಿದ್ದು, 'ನಮ್ಮ ಮೆಟ್ರೊ' ಯೋಜನೆಯಿಂದ ವಾರ್ಷಿಕ 89,952 ಟನ್‌ನಷ್ಟು ಇಂಗಾಲದ ಡೈ ಆಕ್ಸೈಡ್ ಕಡಿಮೆ ಆಗಲಿದೆ ಎಂದು ನಿರೀಕ್ಷಿಸಲಾಗಿದೆ.

'ನಮ್ಮ ಮೆಟ್ರೊ ಮೊದಲ ಹಂತದಲ್ಲೂ ಅಂದರೆ 2006ರಲ್ಲಿ ಸಾಲದ ರೂಪದಲ್ಲಿ ಜೈಕಾ ಆರ್ಥಿಕ ನೆರವು ನೀಡಿತ್ತು. ಬೆಂಗಳೂರು, ಚೆನ್ನೈ, ಕೋಲ್ಕತ್ತ, ಮುಂಬೈ, ಅಹಮದಾಬಾದ್ ಸೇರಿದಂತೆ ದೇಶದಲ್ಲಿ ನಡೆಯುತ್ತಿರುವ ಮೆಟ್ರೊ ಯೋಜನೆಗಳಿಗೆ ಒಟ್ಟಾರೆ ₹87 ಸಾವಿರ ಕೋಟಿ ಆರ್ಥಿಕ ನೆರವು ನೀಡಿದೆ.

ಆಡಳಿತಾಧಿಕಾರಿ ಗೌರವ್ ಅವರಿಂದ ಮಂಡನೆ • ಕೊನೆಗೂ ದಿನಾಂಕ ನಿಗದಿ

ಬಿಬಿಎಂಪಿ ಬಜೆಟ್ ಮಂಡನೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಮುಂದಿನ ಆರ್ಥಿಕ ವರ್ಷದ (2021–22) ಬಜೆಟ್ ಮಂಡನೆಗೆ ಕೊನೆಗೂ ಮುಹೂರ್ತ ನಿಗದಿಯಾಗಿದೆ.

ಮಲ್ಲೇಶ್ವರದ ಐಪಿಪಿ ತರಬೇತಿ ಕೇಂದ್ರದಲ್ಲಿ ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ಅವರ ಅಧ್ಯಕ್ಷತೆಯಲ್ಲಿ ಶನಿವಾರ ಬೆಳಿಗ್ಗೆ 10ಕ್ಕೆ ಬಜೆಟ್ ಮಂಡನೆಯಾಗಲಿದೆ. ಬಜೆಟ್ ಗಾತ್ರ ₹7,500 ಕೋಟಿ ಇರಲಿದೆ ಎಂದು ಮೂಲಗಳು ತಿಳಿಸಿವೆ.

'ಮಹತ್ವಾಕಾಂಕ್ಷಿ ಬಜೆಟ್ ಮಂಡಿಸಲಿದ್ದು, ನಮಗೆ ಬರುವ ಆದಾಯ ಮತ್ತು ಅವಶ್ಯಕತೆಗಳನ್ನು ಗಮನದಲ್ಲಿ ಇಟ್ಟುಕೊಂಡು ಬಜೆಟ್ ಗಾತ್ರ ನಿರ್ಧರಿಸಲಾಗುವುದು' ಎಂದು ಗೌರವ್ ಗುಪ್ತ ಹೇಳಿದ್ದಾರೆ.



ಗೌರವ್ ಗುಪ್ತ

'ಸರ್ಕಾರದ ಹಲವು ಯೋಜನೆಗಳನ್ನು ಬಿಬಿಎಂಪಿ ಅನುಷ್ಠಾನಗೊಳಿಸುತ್ತಿದೆ. ಹೀಗಾಗಿ, ಸರ್ಕಾರದಿಂದಲೂ ಪಾಲಿಕೆಗೆ ಹೆಚ್ಚು ನೆರವು ಬೇಕಾಗಿದೆ. ಬಿಬಿಎಂಪಿ ಶಾಲೆ, ಆಸ್ಪತ್ರೆಗಳಿಗೆ ಮೂಲಸೌಕರ್ಯ ಒದಗಿಸುವುದು ಮತ್ತು ಇನ್ನಿತರ ಯೋಜನೆಗಳ ತ್ವರಿತಗತಿಯ ಅನುಷ್ಠಾನವನ್ನು ಗಮನದಲ್ಲಿಟ್ಟುಕೊಂಡು ಬಜೆಟ್ ಮಂಡಿಸಲಾಗುವುದು' ಎಂದು ಅವರು ತಿಳಿಸಿದ್ದಾರೆ.

ಅಧಿಕಾರವೆಲ್ಲವೂ ಆಡಳಿತಾಧಿಕಾರಿ ಬಳಿ: ಹೊಸ ಆರ್ಥಿಕ ವರ್ಷ ಆರಂಭಕ್ಕೆ ಕೇವಲ ಐದೇ ದಿನಗಳು ಬಾಕಿ ಇದೆ. ಪಾಲಿಕೆಯಲ್ಲಿ ಪ್ರಸ್ತುತ 2020ರ ಬಿಬಿಎಂಪಿ ಕಾಯ್ದೆಯನ್ವಯ ಆಡಳಿತ ನಡೆಯುತ್ತಿದೆ. ಈ ಕಾಯ್ದೆಯ ಸೆಕ್ಷನ್ 196ರ ಪ್ರಕಾರ ಪಾಲಿಕೆಯ ಬಜೆಟ್ ಅಂದಾಜು ಯಾವ ವರ್ಷಕ್ಕೆ ಸಂಬಂಧಿಸಿದೆಯೋ ಆ ವರ್ಷದ ಆರಂಭಕ್ಕೆ ಕನಿಷ್ಠ ಮೂರು ವಾರಗಳಿಗೆ ಮುಂಚೆ ಅದನ್ನು ಅಂಗೀಕರಿಸತಕ್ಕದ್ದು. ಈ ಪ್ರಕಾರ ಮಾ. 10ರ ಒಳಗೆ ಬಜೆಟ್ ಅಂಗೀಕಾರಗೊಳ್ಳಬೇಕಿತ್ತು.

ಬಿಬಿಎಂಪಿಯಲ್ಲಿ ಚುನಾಯಿತ ಕೌನ್ಸಿಲ್ ಅಸ್ತಿತ್ವದಲ್ಲಿಲ್ಲದ ಕಾರಣ ಬಜೆಟ್ ರೂಪಿಸುವ ಹೊಣೆಗಳೆಲ್ಲವೂ ಆಡಳಿತಾಧಿಕಾರಿಯವರದು. ಅವರು ಮೇಯರ್ ಹಾಗೂ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಅಧಿಕಾರಗಳೆಲ್ಲವೂ ಆಡಳಿತಾಧಿಕಾರಿ ಹೊಂದಿರುತ್ತಾರೆ.

ಜಂಟಿ ಆಯುಕ್ತರಿಂದ ವರದಿ: ಪ್ರತಿ ಬಜೆಟ್ ಸಂದರ್ಭದಲ್ಲಿ ವಾರ್ಡ್ ಸಮಿತಿಗಳಿಂದ ಬೇಡಿಕೆ ಪಟ್ಟಿ ಪಡೆದುಕೊಂಡು ಬಿಬಿಎಂಪಿ ಬಜೆಟ್ ಅನ್ನು ವಲಯವಾರು ಸಿದ್ಧಗೊಳಿಸಲಾಗುತ್ತಿತ್ತು. ಅಸ್ತಿತ್ವದಲ್ಲಿರುವ ಯೋಜನೆಗಳನ್ನು ಕಾರ್ಯಗತಗೊಳಿಸಲು ಅಗತ್ಯವಾದ ಮಾನವ ಸಂಪನ್ಮೂಲ ಮತ್ತು ಇತರ ವೆಚ್ಚಗಳನ್ನು ಪ್ರತಿ ವಲಯ ಸಮಿತಿಯು ಸಲ್ಲಿಸತಕ್ಕದ್ದು. ಚುನಾಯಿತ ಕೌನ್ಸಿಲ್ ಇಲ್ಲದ ಕಾರಣ ವಲಯ ಸಮಿತಿಗಳು ಅಸ್ತಿತ್ವದಲ್ಲಿಲ್ಲ. ಈಗ, ಪ್ರತಿ ವಲಯದ ಜಂಟಿ ಆಯುಕ್ತರಿಂದ ವರದಿ ತರಿಸಿಕೊಂಡು ಬಜೆಟ್ ಸಿದ್ಧಗೊಳಿಸಲಾಗುತ್ತದೆ.

ನಿಗದಿತ ಅವಧಿಯೊಳಗೆ ಬಿಬಿಎಂಪಿ ಬಜೆಟ್ ಮಂಡನೆ ಮಾಡದಿರುವ ಬಗ್ಗೆ ಭಾರತೀಯ ಕಮ್ಯೂನಿಸ್ಟ್ ಪಕ್ಷ ಸೇರಿದಂತೆ ಹಲವು ಪಕ್ಷಗಳು, ಸಂಘ–ಸಂಸ್ಥೆಗಳು ಅಸಮಾಧಾನ ವ್ಯಕ್ತಪಡಿಸಿದ್ದವು.

ಉಪಚುನಾವಣೆ: ಆರೋಗ್ಯ ಇಲಾಖೆ ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿ, ಮಸ್ಕಿ, ಬಸವಕಲ್ಯಾಣ ಉಪಚುನಾವಣೆಗೆ ಸಂಬಂಧಿಸಿದಂತೆ ಚುನಾವಣಾ ಪ್ರಕ್ರಿಯೆ ಸಂದರ್ಭದಲ್ಲಿ ಪಾಲಿಸಬೇಕಾದ ನಿಯಮಾವಳಿಗಳ ಮಾರ್ಗಸೂಚಿಯನ್ನು ಆರೋಗ್ಯ ಇಲಾಖೆ ಬಿಡುಗಡೆ ಮಾಡಿದೆ.

ಅದರ ಪ್ರಕಾರ, ಚುನಾವಣೆ ನಡೆಯುವ ಜಿಲ್ಲೆ ಮತ್ತು ತಾಲ್ಲೂಕು ವ್ಯಾಪ್ತಿಯಲ್ಲಿ ಚುನಾವಣಾ ಆಯೋಗ ಸಿಬ್ಬಂದಿಗೆ ಮಾರ್ಗದರ್ಶನ ನೀಡುವ ಉದ್ದೇಶದಿಂದ ಆರೋಗ್ಯ ಅಧಿಕಾರಿಯನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲಾಗುವುದು. ಇವರು ಕಾಲ ಕಾಲಕ್ಕೆ ಅನುಸರಿಸಬೇಕಾದ ನಿಯಮಗಳ ಬಗ್ಗೆ ಮಾಹಿತಿ ನೀಡುತ್ತಾರೆ.

ಚುನಾವಣೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ನಡೆಸುವಾಗ ಕಡ್ಡಾಯವಾಗಿ ಮತ್ತು ಸರಿಯಾದ ರೀತಿಯಲ್ಲಿ ಅಂದರೆ ಬಾಯಿ ಮತ್ತು ಮೂಗು ಮುಚ್ಚುವಂತೆ ಮಾಸ್ಕ್ ಧರಿಸಬೇಕು. ಕೋವಿಡ್ ಲಸಿಕೆ ಹಾಕಿಸಿಕೊಂಡಿದ್ದರೂ ಮಾಸ್ಕ್ ಧರಿಸಲೇಬೇಕು.

ಮತದಾನ ಅಥವಾ ಚುನಾವಣಾ ಪ್ರಕ್ರಿಯೆ ನಡೆಸುವ ಕೊಠಡಿಗಳನ್ನು ಪ್ರವೇಶಿಸುವ ಸಂದರ್ಭದಲ್ಲಿ ಥರ್ಮಲ್ ಸ್ಕ್ರೀನಿಂಗ್ ಮೂಲಕ ತಪಾಸಣೆ ನಡೆಸಬೇಕು. ಸ್ಯಾನಿಟೈಸರ್, ಲಿಕ್ವಿಡ್ ಸೋಪ್, ನೀರಿನ ವ್ಯವಸ್ಥೆ ಮಾಡಬೇಕು.

ವ್ಯಕ್ತಿಗಳ ಮಧ್ಯೆ ಅಂತರವನ್ನು ಕಾಯ್ದುಕೊಳ್ಳಲು ಚುನಾವಣಾ ಚಟುವಟಿಕೆ ನಡೆಸಲು ದೊಡ್ಡ ಕೊಠಡಿಗಳನ್ನೇ ಪಡೆದುಕೊಳ್ಳಬೇಕು. ಚುನಾವಣಾ ಮತ್ತು ಭದ್ರತಾ ಸಿಬ್ಬಂದಿಯ ಓಡಾಟಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳ ವ್ಯವಸ್ಥೆ ಮಾಡಬೇಕು. ಚುನಾವಣಾ ಅಧಿಕಾರಿಗಳಿಗೆ ಮಾಸ್ಕ್, ಸ್ಯಾನಿಟೈಸರ್, ಗ್ಲೋವ್, ಫೇಸ್ ಶೀಲ್ಡ್‌ಗಳನ್ನು ಒಳಗೊಂಡ ಕಿಟ್ ಒದಗಿಸಬೇಕು.

ಅಭ್ಯರ್ಥಿಗಳ ಪರವಾಗಿ ಮನೆ ಮನೆಗೆ ಹೋಗಿ ಪ್ರಚಾರ ಮಾಡುವವರ ಸಂಖ್ಯೆ ಒಂದು ಗುಂಪಿನಲ್ಲಿ ಐದಕ್ಕಿಂತ ಹೆಚ್ಚು ಇರಬಾರದು. ಕೋವಿಡ್ ಮಾರ್ಗಸೂಚಿ ಪಾಲಿಸುವುದು ಕಡ್ಡಾಯ.

ಮತದಾನ ಮತ್ತು ಮತ ಎಣಿಕೆಯ ಸಂದರ್ಭ ಆರೋಗ್ಯ ಇಲಾಖೆ ಬಿಡುಗಡೆ ಮಾಡಿರುವ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಹೇಳಿದೆ.

ಕಪ್ಪತಗುಡ್ಡಕ್ಕೆ ಬೆಂಕಿ

ಡಂಬಳ (ಗದಗ): ಚಿಕ್ಕವಡ್ಡಟ್ಟಿ ವ್ಯಾಪ್ತಿಯ ಕಪ್ಪತಗುಡ್ಡದಲ್ಲಿ ಶುಕ್ರವಾರ ಮಧ್ಯರಾತ್ರಿ ಎರಡು ಗಂಟೆ ಸುಮಾರಿಗೆ ಬೆಂಕಿ ತಗುಲಿದ್ದು, ನೂರಾರು ಹೆಕ್ಟೇರ್ ಅರಣ್ಯ ಪ್ರದೇಶ ಬೆಂಕಿಗೆ ಆಹುತಿಯಾಗಿದೆ. 24 ಗಂಟೆಗಳ ನಂತರ ಬೆಂಕಿ ತಹಬದಿಗೆ ಬಂದಿದ್ದು ವಿವಿಧ ಗಿಡಮೂಲಿಕೆಯ ಸಸ್ಯಗಳು ನಾಶವಾಗಿವೆ.

ವರ್ಷದ ಆರಂಭದಿಂದ ಈವರೆಗೆ ಅಂದಾಜು 2 ಸಾವಿರ ಎಕರೆಗೂ ಅಧಿಕ ಅರಣ್ಯ ಪ್ರದೇಶ ನಾಶವಾಗಿದೆ. ಪದೇ ಪದೇ ಅರಣ್ಯ ಪ್ರದೇಶಕ್ಕೆ ಬೆಂಕಿ ಹಚ್ಚುವ ಪ್ರಕರಣಗಳು ನಡೆಯುತ್ತಿದ್ದರೂ, ಬೆಂಕಿ ಹಚ್ಚಿದ ಕಿಡಗೇಡಿಗಳ ಬಂಧನವಾಗಿಲ್ಲ ಎಂದು ಪರಿಸರವಾದಿಗಳು, ವಿವಿಧ ಸಂಘಟನೆ ಮುಖಂಡರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. 'ವೇಗವಾಗಿ ಗಾಳಿ ಬೀಸುತ್ತಿರುವುದರಿಂದ ಬೆಂಕಿ ವಿವಿಧ ಪ್ರದೇಶಗಳಿಗೆ ವ್ಯಾಪಿಸುತ್ತಿದೆ. ಬೆಂಕಿ ನಂದಿಸುವ ಕಾರ್ಯ ನಡೆದಿದೆ' ಎಂದು ವಲಯ ಅರಣ್ಯಾಧಿಕಾರಿ ಪ್ರದೀಪ ಪವಾರ 'ಪ್ರಜಾವಾಣಿ'ಗೆ ತಿಳಿಸಿದರು.

ಬಿಬಿಎಂಪಿ ಎಸ್‌ಡಿಎ ಅಮಾನತು

ಬೆಂಗಳೂರು: ಕರ್ತವ್ಯ ಲೋಪ ಎಸಗಿದ ಆರೋಪದ ಮೇಲೆ ಬಿಬಿಎಂಪಿಯ ದ್ವಿತೀಯ ದರ್ಜೆ ಸಹಾಯಕ ಚಿಕ್ಕಹೊನ್ನಯ್ಯ ಅವರನ್ನು ಅಮಾನತು ಮಾಡಲಾಗಿದೆ.



ಚಿಕ್ಕಹೊನ್ನಯ್ಯ

ಗಾಂಧಿನಗರ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಅವರ ಕಚೇರಿಯಲ್ಲಿ ಚಿಕ್ಕಹೊನ್ನಯ್ಯ ಕೆಲಸ ಮಾಡುತ್ತಿದ್ದರು. ಗಾಂಧಿನಗರ ವಾರ್ಡ್ ಸಂಖ್ಯೆ 121ರಲ್ಲಿನ ಗೋಪಾಲಪುರ ಮತ್ತು ಸುತ್ತ-ಮುತ್ತಲಿನ ಪ್ರದೇಶದ ರಸ್ತೆಗಳ ಗುಂಡಿ ಮುಚ್ಚುವ ಕಾಮಗಾರಿಯಲ್ಲಿನಡೆದಿರುವಅವ್ಯವಹಾರಕ್ಕೆಸಂಬಂಧಿಸಿದಂತೆ ಬಿಬಿಎಂಪಿಯು ಈ ಕ್ರಮ ಕೈಗೊಂಡಿದೆ. ಈ ಕಾಮಗಾರಿಯನ್ನು ಕೆಐಆರ್‌ಡಿಎಲ್ ಸಂಸ್ಥೆ ಸಮರ್ಪಕವಾಗಿ ಪೂರ್ಣಗೊಳಿಸಿದ್ದಾರೆ ಎಂದು ತಿಳಿಸಿ, ₹1.09 ಕೋಟಿ ಮೊತ್ತದ ಪೈಕಿ, ₹96.83 ಲಕ್ಷವನ್ನು ಚೆಕ್ ಮೂಲಕ ಬಿಡುಗಡೆ ಮಾಡಲಾಗಿದೆ. ಆದರೆ, ಬೇರೆ ಸ್ಥಳದಲ್ಲಿ ನಿರ್ವಹಿಸಿರುವ ಕಾಮಗಾರಿಯ ಛಾಯಾಚಿತ್ರಗಳನ್ನು ಲಗತ್ತಿಸಿ, ನಡೆಯದೇ ಇರುವ ಕಾಮಗಾರಿಯನ್ನು ಪೂರ್ಣಗೊಳಿಸಿರುವುದಾಗಿ ತೋರಿಸಿ ಪಾಲಿಕೆಗೆ ₹1 ಕೋಟಿ ಮೊತ್ತವನ್ನು ವಂಚಿಸಲಾಗಿದೆ ಎಂದು ಬಿಬಿಎಂಪಿ ಹೇಳಿದೆ.



ನವದೆಹಲಿಯ ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವು ಹಮ್ಮಿಕೊಂಡಿದ್ದ ಸಹಕಾರ ಬ್ಯಾಂಕುಗಳ ಅಧ್ಯಕ್ಷರ ಸಭೆಯಲ್ಲಿ ರಾಷ್ಟ್ರಿಯ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷ ಜ್ಯೋತೀಂದ್ರ ಮೆಹ್ತಾ ಹಾಗೂ ರಾಜ್ಯ ಪಟ್ಟಣ ಬ್ಯಾಂಕುಗಳ ಮಹಾಮಂಡಳಿಯ ಅಧ್ಯಕ್ಷ ಎಚ್.ಕೆ.ಪಾಟೀಲ ಅವರನ್ನು ತ್ಯಾಗರಾಜ ಕೋಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷ ಎಂ.ಆರ್.ವೆಂಕಟೇಶ್ ಸನ್ಮಾನಿಸಿದರು.

‘ಮೀಸಲಾತಿ ವಂಚಿಸುವ ಹುನ್ನಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಗೆ (ಕೆಟಿಪಿಪಿ) ಬಿಜೆಪಿ ಸರ್ಕಾರ ತಂದಿರುವ ತಿದ್ದುಪಡಿ ಕಾಯ್ದೆಯನ್ನು ಕೂಡಲೇ ವಾಪಸ್ ಪಡೆಯಬೇಕು ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ತಾವು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ₹ 50 ಲಕ್ಷದವರೆಗಿನ ಮೊತ್ತದ ಕಾಮಗಾರಿಗಳ ಟೆಂಡರ್‌ನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಗುತ್ತಿಗೆದಾರರಿಗೆ ಮೀಸಲಾತಿ ಒದಗಿಸುವ ಕಾನೂನು ತರಲಾಗಿತ್ತು. ಅದಕ್ಕೆ ತಿದ್ದುಪಡಿ ತಂದಿರುವುದು ಮೀಸಲಾತಿ ವಂಚಿಸುವ ಹುನ್ನಾರ ಎಂದು ಕಿಡಿಕಾರಿದರು.

₹ 2 ಕೋಟಿವರೆಗಿನ ವೆಚ್ಚದ ಕಾಮಗಾರಿಗಳ ಗುತ್ತಿಗೆಯನ್ನು ಕೆಆರ್‌ಐಡಿಎಲ್ ಮೂಲಕ ಟೆಂಡರ್ ಇಲ್ಲದೆ ತಮಗೆ ಬೇಕಾದವರಿಗೆ ನೀಡಲು ಸರ್ಕಾರದಲ್ಲಿರುವವರು ಈ ತಿದ್ದುಪಡಿ ತಂದಿದ್ದಾರೆ. ಇದು ಭ್ರಷ್ಟಾಚಾರಕ್ಕೂ ಕಾರಣವಾಗಲಿದೆ ಎಂದರು.

ಕೆಆರ್‌ಐಡಿಎಲ್‌ಗೆ ವಹಿಸುವ ಈ ತೀರ್ಮಾನದಿಂದ ಪರಿಶಿಷ್ಟ ಜಾತಿ ಮತ್ತು ವರ್ಗದ ಗುತ್ತಿಗೆದಾರರಿಗೆ ಭಾರಿ ಅನ್ಯಾಯವಾಗುತ್ತದೆ. ದಲಿತರಿಗೆ ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯವೂ ಸಿಗಬೇಕು ಎಂದು ಡಾ. ಬಿ.ಆರ್. ಅಂಬೇಡ್ಕರ್ ಹೇಳಿದ್ದರು. ಆದರೆ, ರಾಜ್ಯ ಸರ್ಕಾರ ತಿದ್ದುಪಡಿ ಮೂಲಕ ದಲಿತರಿಗೆ ದೊಡ್ಡ ದ್ರೋಹ ಮತ್ತು ಅನ್ಯಾಯ ಎಸಗಿದೆ. ಎಂದು ಅವರು ಪ್ರತಿಪಾದಿಸಿದರು.

ಹೊಸ ತಾಲ್ಲೂಕುಗಳಿಗೆ ತಲಾ ₹2.50 ಲಕ್ಷ ಬಿಡುಗಡೆ

ಬೆಂಗಳೂರು: ಅಲಮೇಲ, ಉಳ್ಳಾಲ, ಪೊನ್ನಂಪೇಟೆ ಮತ್ತು ಕುಶಾಲ ನಗರ ಸೇರಿ ಒಟ್ಟು 54 ಹೊಸ ತಾಲ್ಲೂಕುಗಳಿಗೆ ತಲಾ ₹2.50 ಲಕ್ಷದಂತೆ ಒಟ್ಟು ₹1.35 ಕೋಟಿ ಅನುದಾನ ಬಿಡುಗಡೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

2018 ರಿಂದ ಈಚೆಗೆ ರಚನೆಯಾದ ಹೊಸ ತಾಲ್ಲೂಕುಗಳಿಗೆ ಈಗಾಗಲೇ ₹3 ಕೋಟಿ ಅನುದಾನ ಬಿಡುಗಡೆ ಮಾಡಿದ್ದು, ಈಗ ಆಡಳಿತಾತ್ಮಕ ಮತ್ತು ಇತರೆ ಖರ್ಚು ಭರಿಸಲು ₹1.35 ಕೋಟಿ ಬಿಡುಗಡೆ ಮಾಡಿರುವುದಾಗಿ ಸರ್ಕಾರ ಆದೇಶದಲ್ಲಿ ತಿಳಿಸಿದೆ.

ಕನ್ನಡ ತಿಳಿದವರ ಕೊರತೆಯಿಂದ ಮಾಹಿತಿಗೆ ಸಮಸ್ಯೆ

ಕನ್ನಡದಲ್ಲೂ ಹವಾಮಾನ ಮಾಹಿತಿ

• ಮನೋಹರ್ ಎಂ.

ಬೆಂಗಳೂರು: ರಾಜ್ಯದ ಜನರಿಗೆ ಹವಾಮಾನ ಸ್ಥಿತಿಗತಿಯ ಮುನ್ಸೂಚನೆ ಹಾಗೂ ವರದಿ ನೀಡಲು ಹವಾಮಾನ ಇಲಾಖೆಯು ರಾಜ್ಯವಾರು ಜಾಲತಾಣಗಳನ್ನು ಅಭಿವೃದ್ಧಿಪಡಿಸಿದೆ. ಬೆಂಗಳೂರು ಹವಾಮಾನ ಇಲಾಖೆ ಜಾಲತಾಣದಲ್ಲಿ ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳಲ್ಲಿ ಮಾತ್ರ ಹವಾಮಾನ ವರದಿ ಸಿಗುತ್ತಿದ್ದು, ಕನ್ನಡದಲ್ಲೂ ಮಾಹಿತಿ ಸಿಗಬೇಕು ಎಂಬ ಕೂಗು ಸಾರ್ವಜನಿಕರಿಂದ ಕೇಳಿಬಂದಿದೆ.

ಹವಾಮಾನ ಇಲಾಖೆಯ ಬೆಂಗಳೂರು ಜಾಲತಾಣ www.imdbangalore.gov.inದಲ್ಲಿ ಪ್ರತಿದಿನವೂ ಹವಾಮಾನ ವರದಿ ಅಪ್‌ಡೇಟ್ ಮಾಡಲಾಗುತ್ತಿದೆ. ಹವಾಮಾನ ಇಲಾಖೆಯಲ್ಲಿ ಕನ್ನಡ ಗೊತ್ತಿಲ್ಲದ ಸಿಬ್ಬಂದಿಯೇ ಹೆಚ್ಚು. ಇದರಿಂದಾಗಿ ಕನ್ನಡದಲ್ಲೇ ನಿರಂತರವಾಗಿ ಹವಾಮಾನ ಮಾಹಿತಿ ನೀಡಲು ಇಲಾಖೆಗೆ ಸಾಧ್ಯವಾಗುತ್ತಿಲ್ಲ.

‘ರಾಜ್ಯದಲ್ಲಿ ಮುಂದಿನ ವಾರ ಮಳೆ ಬರುತ್ತದೆಯೇ ಎಂದು ತಿಳಿಯಬೇಕಾಗಿತ್ತು. ಇದಕ್ಕಾಗಿ ಬೆಂಗಳೂರಿನ ಹವಾಮಾನ ಇಲಾಖೆಯ ಜಾಲತಾಣ ತೆರೆದಾಗ, ಅದು ಪೂರ್ತಿ ಇಂಗ್ಲಿಷ್ ಮತ್ತು ಹಿಂದಿಮಯವಾಗಿತ್ತು. ಕನ್ನಡದ ಒಂದು ಚಿಕ್ಕ ಕೊಂಡಿ ಇದೆ. ಅದರ ಮೂಲಕ ಹೋದರೂ, ಬೆಂಗಳೂರು ಹಾಗೂ ರಾಜ್ಯದ ಮುನ್ಸೂಚನೆಗಳು ಇಂಗ್ಲಿಷ್ ಅಥವಾ ಹಿಂದಿಯಲ್ಲೇ ಡೌನ್‌ಲೋಡ್ ಆಗುತ್ತವೆ’ ಎಂದು ಬೆಂಗಳೂರಿನ ನಿವಾಸಿ ರಾಜಾರಾಮ ಭಟ್ ತಿಳಿಸಿದರು.

> ಇಂಗ್ಲಿಷ್ ಹಾಗೂ ಹಿಂದಿಯಲ್ಲಿರುವ ಹವಾಮಾನ ಮಾಹಿತಿ ರೈತರಿಗೆ ಅರ್ಥವಾಗುವುದಿಲ್ಲ. ಹವಾಮಾನ ಮಾಹಿತಿ ಕನ್ನಡದಲ್ಲಿ ಸಿಕ್ಕರೆ ರೈತರಿಗೆ ಹೆಚ್ಚು ಅನುಕೂಲ.
> **ಯೋಗೇಂದ್ರ,** ಯುವ ರೈತ

ಪ್ರಜಾವಾಣಿ ವಿಶೇಷ

‘ಕುತೂಹಲದಿಂದ ಹವಾಮಾನ ಇಲಾಖೆಯ ಚೆನ್ನೈ ಜಾಲತಾಣ ತೆಗೆದು ನೋಡಿದರೆ, ಅಲ್ಲಿನ ಬಹುಪಾಲು ಹವಾಮಾನ ಮಾಹಿತಿ ತಮಿಳು ಭಾಷೆಯಲ್ಲಿದೆ. ಕನ್ನಡಿಗರಿಗೆ ಕನ್ನಡದಲ್ಲೇ ಹವಾಮಾನದ ಬಗ್ಗೆ ಮಾಹಿತಿ ಬೇಡವೇ? ಕನ್ನಡದಲ್ಲೇ ಮಾಹಿತಿ ಸಿಕ್ಕರೆ ರೈತರಿಗೂ ಅನುಕೂಲವಲ್ಲವೇ?’ ಎಂದು ಪ್ರಶ್ನಿಸಿದರು.

‘ಕನ್ನಡದಲ್ಲಿ ಹವಾಮಾನ ಮಾಹಿತಿ ನೀಡಲು ಅಭ್ಯಂತರವಿಲ್ಲ. ಈಗಾಗಲೇ ಬೆಂಗಳೂರು ಹವಾಮಾನ ಇಲಾಖೆ ಜಾಲತಾಣದಲ್ಲಿ ಕನ್ನಡದಲ್ಲೂ ವರದಿ ಪ್ರಕಟಿಸುವ ಪ್ರಯತ್ನ ಮಾಡಿದ್ದೇವೆ. ಇಲಾಖೆಯು ಕೇಂದ್ರ ಸರ್ಕಾರದ ಸ್ವಾಮ್ಯದಡಿ ಕಾರ್ಯನಿರ್ವಹಿಸುತ್ತಿರುವುದರಿಂದ ಸಿಬ್ಬಂದಿಯಲ್ಲಿ ಬಹುತೇಕರು ಬೇರೆ ರಾಜ್ಯದವರಿದ್ದಾರೆ. ಇವರಲ್ಲಿ ಕನ್ನಡ ತಿಳಿದವರು ಕಡಿಮೆ. ಇದರಿಂದ ನಿರಂತರವಾಗಿ ಎಲ್ಲ ಮಾಹಿತಿ ಕನ್ನಡದಲ್ಲಿ ನೀಡಲು ಸಾಧ್ಯವಾಗುತ್ತಿಲ್ಲ’ ಎಂದು ಹವಾಮಾನ ಇಲಾಖೆಯ ಬೆಂಗಳೂರು ವಿಭಾಗದ ಉಸ್ತುವಾರಿ ನಿರ್ದೇಶಕಿ ಗೀತಾ ಅಗ್ನಿಹೋತ್ರಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕನ್ನಡ ತಿಳಿದವರು ಕರ್ತವ್ಯದಲ್ಲಿದ್ದಾಗ ಮಾತ್ರ ಹವಾಮಾನ ಮಾಹಿತಿ ಕನ್ನಡದಲ್ಲಿ ಪ್ರಕಟಿಸಲು ಸಾಧ್ಯವಾಗುತ್ತಿದೆ. ಇನ್ನು ಮುಂದೆ ನಿರಂತರವಾಗಿ ಕನ್ನಡದಲ್ಲೇ ಹವಾಮಾನ ವರದಿ ನೀಡಲು ಪ್ರಯತ್ನಿಸಲಾಗುವುದು’ ಎಂದೂ ಹೇಳಿದರು.

‘ಕನ್ನಡಕ್ಕಾಗಿ ತಂತ್ರಜ್ಞಾನ ಬಳಸಿ’



‘ಕಚೇರಿಗಳಲ್ಲಿ ಕನ್ನಡ ಭಾಷೆ ಬಳಕೆಗೆ ಆದ್ಯತೆ ನೀಡಿದರೆ, ಈ ಸಮಸ್ಯೆ ಆಗುತ್ತಿರಲಿಲ್ಲ. ಸಿಬ್ಬಂದಿ ಲಭ್ಯವಿರದಿದ್ದರೆ, ಕನಿಷ್ಠ ಪಕ್ಷ ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರಿಸುವ ತಂತ್ರಜ್ಞಾನಗಳು ಸಾಕಷ್ಟಿವೆ. ಅವುಗಳನ್ನಾದರೂ ಬಳಸಹುದಿತ್ತು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಸಲಹೆ ನೀಡಿದರು.

‘ಕೇಂದ್ರ ಸರ್ಕಾರ ಸ್ವಾಮ್ಯದ ಎಲ್ಲ ಇಲಾಖೆಗಳಲ್ಲಿ ಇದೇ ಸಮಸ್ಯೆ. ಕನ್ನಡ ಬಳಕೆಗೆ ಮೊದಲಿನಿಂದಲೂ ಇಲಾಖೆಗಳಲ್ಲಿ ಅಸಡ್ಡೆ ತೋರಲಾಗುತ್ತಿದೆ. ಮಾಹಿತಿಯನ್ನು ಪ್ರಾದೇಶಿಕ ಭಾಷೆಗಳಲ್ಲಿ ನೀಡಬೇಕಿರುವುದು ಕೇಂದ್ರ ಸರ್ಕಾರದ ಕರ್ತವ್ಯ. ಇಲಾಖೆಗಳಲ್ಲಿ ಕನ್ನಡ ಬಳಸುವ ವಿಚಾರದಲ್ಲಿ ರಾಜ್ಯ ಸರ್ಕಾರಗಳೂ ಕೇಂದ್ರದ ಮೇಲೆ ಒತ್ತಡ ಹೇರಬೇಕಿದೆ’ ಎಂದು ಒತ್ತಾಯಿಸಿದರು.

ಎಂಜಿನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಕೊರತೆ

ಬೆಂಗಳೂರು: ರಾಜ್ಯದ ಬಹುತೇಕ ಎಂಜಿನಿಯರ್ ಕಾಲೇಜುಗಳು ವಿದ್ಯಾರ್ಥಿಗಳ ಕೊರತೆ ಎದುರಿಸುತ್ತಿದ್ದು, ಎರಡಂಕಿಯಷ್ಟು ದಾಖಲಾತಿಗಳೂ ನಡೆದಿಲ್ಲ.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 2020ರ ಸಿಇಟಿ ಮೂಲಕ ದಾಖಲಾತಿ ಪಡೆದವರ ಸಂಖ್ಯೆ ಬಹುತೇಕ ಕಾಲೇಜುಗಳಲ್ಲಿ ಒಂದಂಕಿಯಷ್ಟಿದೆ.

ವಿವಿಧ ಕೋರ್ಸ್‌ಗಳಿಗೆ 150ಕ್ಕೂ ಹೆಚ್ಚು ಸೀಟುಗಳು ಲಭ್ಯವಿದ್ದರೂ ಕೆಲವು ಕಾಲೇಜುಗಳಲ್ಲಿ 20 ವಿದ್ಯಾರ್ಥಿಗಳೂ ದಾಖಲಾಗಿಲ್ಲ ಎಂಬುದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳುತ್ತವೆ.

‘ರಾಜ್ಯದಲ್ಲಿ 280 ಎಂಜಿನಿಯರಿಂಗ್ ಕಾಲೇಜುಗಳಿವೆ. ಇದರಲ್ಲಿ 15 ಕಾಲೇಜುಗಳಲ್ಲಿ ಒಂದಂಕಿಯೊಳಗೆ ದಾಖಲಾತಿಗಳು ನಡೆದಿದ್ದರೆ, 28ಕ್ಕೂ ಹೆಚ್ಚು ಕಾಲೇಜುಗಳಲ್ಲಿ 20ಕ್ಕೂ ಕಡಿಮೆ ವಿದ್ಯಾರ್ಥಿಗಳು ದಾಖಲಾಗಿದ್ದಾರೆ’ ಎಂದು ಕೆಇಎ ಮೂಲಗಳು ಹೇಳಿವೆ.

‘ಎಂಜಿನಿಯರಿಂಗ್‌ನಲ್ಲಿನ ಹಲವು ಕೋರ್ಸ್‌ಗಳು ಬೇಡಿಕೆ ಕಳೆದುಕೊಂಡಿವೆ. ಪಾಲಿಮರ್ ಟೆಕ್ನಾಲಜಿ, ಎನ್ವಿರಾನ್ಮೆಂಟಲ್ ಎಂಜಿನಿಯರಿಂಗ್, ಕನ್‌ಸ್ಟ್ರಕ್ಷನ್ ಎಂಜಿನಿಯರಿಂಗ್ ಮ್ಯಾನೇಜ್‌ಮೆಂಟ್, ಸಿಲ್ಕ್ ಟೆಕ್ನಾಲಜಿ, ಸೆರಾಮಿಕ್ಸ್, ಮೈನಿಂಗ್‌ನಂತಹ ಕೋರ್ಸ್‌ಗಳಿಗೆ ಒಬ್ಬರೂ ದಾಖಲಾಗಿಲ್ಲ. ಇಂತಹ ಕೋರ್ಸ್‌ಗಳನ್ನು ಮುಂದಿನ ಬಾರಿಯಿಂದ ತೆಗೆಯಬೇಕು ಎಂದು ಉನ್ನತ ಶಿಕ್ಷಣ ಇಲಾಖೆಗೆ ಕೆಇಎಯಿಂದ ವರದಿ ನೀಡಲಾಗುವುದು’ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದರು.



ವಸಂತ ನೃತ್ಯ

ಪದ್ಮಿನಿಪ್ರಿಯ ನೃತ್ಯ ಕಲಾ ಅಕಾಡೆಮಿ ಆಯೋಜಿಸಿದ ‘ವಸಂತ ನೃತ್ಯೋತ್ಸವ - 2021’ ಕಾರ್ಯಕ್ರಮದಲ್ಲಿ ಅಕಾಡೆಮಿಯ ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿದರು.

ಶರತ್ ವರ್ಗಾವಣೆ: ಆದೇಶ ಹೊರಡಿಸಲು ಸಿಎಟಿಗೆ ನಿರ್ದೇಶನ

ಬೆಂಗಳೂರು: ಐಎಎಸ್ ಅಧಿಕಾರಿ ಬಿ.ಶರತ್ ಸಲ್ಲಿಸಿರುವ ಅರ್ಜಿ ಸಂಬಂಧ ಕಾಯ್ದಿರಿಸಿರುವ ಆದೇಶವನ್ನು ಕೂಡಲೇ ಹೊರಡಿಸುವಂತೆ ಕೇಂದ್ರ ಆಡಳಿತ ನ್ಯಾಯಮಂಡಳಿಗೆ (ಸಿಎಟಿ) ಹೈಕೋರ್ಟ್ ನಿರ್ದೇಶನ ನೀಡಿದೆ.

ಮೈಸೂರು ಜಿಲ್ಲಾಧಿಕಾರಿ ಆಗಿದ್ದ ಶರತ್ ಅವರನ್ನು 2020 ಸೆಪ್ಟೆಂಬರ್ 28ರಂದು ವರ್ಗಾವಣೆ ಮಾಡಿ ಅವರ ಜಾಗಕ್ಕೆ ರೋಹಿಣಿ ಸಿಂಧೂರಿ ಅವರನ್ನು ಸರ್ಕಾರ ನೇಮಕ ಮಾಡಿತ್ತು. ಇದನ್ನು ಪ್ರಶ್ನಿಸಿ ಶರತ್ ಅವರು ಸಿಎಟಿ ಮೊರೆ ಹೋಗಿದ್ದರು.

ವಿಚಾರಣೆ ಪೂರ್ಣಗೊಳಿಸಿರುವ ಪೀಠ, 2020 ಡಿಸೆಂಬರ್ 22ರಂದು ಆದೇಶ ಕಾಯ್ದಿರಿಸಿದೆ. ಸಿಎಟಿ ನಿಯಮಗಳ ಪ್ರಕಾರ ಆದೇಶವನ್ನು ಮೂರು ವಾರಗಳ ತನಕ ಮಾತ್ರ ಕಾಯ್ದಿರಿಸಬಹುದು ಎಂದು ಶರತ್ ವಾದಿಸಿದ್ದಾರೆ.

ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ, ಅರ್ಜಿ ವಿಲೇವಾರಿ ಮಾಡಿತು. ಹೈಕೋರ್ಟ್ ಆದೇಶದ ಪ್ರತಿ ಸ್ವೀಕರಿಸಿದ ಎರಡು ವಾರಗಳಲ್ಲಿ ನಿರ್ಧಾರ ತೆಗೆದುಕೊಳ್ಳುವಂತೆ ಸಿಎಟಿಗೆ ತಿಳಿಸಿದೆ.

‘ಗೌರವ ಧನ ಸಿಗದೆ ಬೀದಿಗೆ ಬಿದ್ದಿದ್ದೇವೆ’

ಬೆಂಗಳೂರು: ‘27 ತಿಂಗಳುಗಳಿಂದ ನಮಗೆ ಗೌರವ ಧನವನ್ನೇ ನೀಡಿಲ್ಲ. ಇದರಿಂದ ಜೀವನ ನಿರ್ವಹಣೆ ಕಷ್ಟವಾಗಿದೆ. ಇದನ್ನೇ ನಂಬಿಕೊಂಡಿದ್ದ ನಾವು ಈಗ ಬೀದಿಗೆ ಬಿದ್ದಿದ್ದೇವೆ’ ಎಂದು ಕರ್ನಾಟಕ ರಾಜ್ಯ ಅಂಗನವಾಡಿ ತರಬೇತಿ ಕೇಂದ್ರಗಳ ನೌಕರರ ಸಂಘದ ಸಿಬ್ಬಂದಿ ಅಳಲು ತೋಡಿಕೊಂಡರು.

ಈ ಕುರಿತು ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನೌಕರರು ‘ರಾಜ್ಯದಲ್ಲಿ ಒಟ್ಟು 21 ಅಂಗನವಾಡಿ ಕಾರ್ಯಕರ್ತೆಯರ ತರಬೇತಿ ಕೇಂದ್ರಗಳಿವೆ. ಇವೆಲ್ಲಾ ಸ್ವಯಂ ಸೇವಾ ಸಂಸ್ಥೆಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಸಂಸ್ಥೆಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನುದಾನ ಒದಗಿಸುತ್ತವೆ. ಇವುಗಳಲ್ಲಿ ಒಟ್ಟು 189 ಸಿಬ್ಬಂದಿ ಕೆಲಸ ಮಾಡುತ್ತಿದ್ದೇವೆ. ನಮಗೆ ಹಿಂದಿನ 27 ತಿಂಗಳುಗಳಿಂದ ಗೌರವ ಧನವೇ ಸಿಕ್ಕಿಲ್ಲ’ ಎಂದರು.

‘ಈ ಸಂಬಂಧ ನಾವು ಹಿಂದಿನ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಕುಮಾರಸ್ವಾಮಿ ಹಾಗೂ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರಿಗೆ ಅನೇಕ ಬಾರಿ ಮನವಿ ಮಾಡಿದ್ದೇವೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರನ್ನೂ ಭೇಟಿ ಮಾಡಿ ಸಮಸ್ಯೆ ಹೇಳಿಕೊಂಡಿದ್ದೇವೆ. ಹೀಗಿದ್ದರೂ ಕೂಡ ನಮ್ಮ ಸಮಸ್ಯೆಗೆ ಯಾರೂ ಕಿವಿಗೊಟ್ಟಿಲ್ಲ. ಇನ್ನಾದರೂ ಸರ್ಕಾರ ಎಚ್ಚೆತ್ತುಕೊಳ್ಳಬೇಕು. ನಮ್ಮ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕು’ ಎಂದು ಹೇಳಿದರು.

ಸಾರಿಗೆ ಮುಷ್ಕರ: ಪರ್ಯಾಯ ವ್ಯವಸ್ಥೆಯತ್ತ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಸಂಸ್ಥೆಗಳ ನೌಕರರು ಏ.7ರಿಂದ ಮುಷ್ಕರಕ್ಕೆ ಅಣಿಯಾಗುತ್ತಿರುವ ಬೆನ್ನಲ್ಲೇ, ಸಾರ್ವಜನಿಕರಿಗೆ ಪರ್ಯಾಯ ಸಾರಿಗೆ ವ್ಯವಸ್ಥೆ ಕಲ್ಪಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಒಪ್ಪಂದದ ತಾತ್ಕಾಲಿಕ ರಹದಾರಿ ನೀಡಲು ಖಾಸಗಿ ಬಸ್, ಮಿನಿ ಬಸ್, ಮ್ಯಾಕ್ಸಿಕ್ಯಾಬ್ ಮಾಲೀಕರಿಂದ ಅರ್ಜಿ ಆಹ್ವಾನಿಸಿದೆ.

ಮುಷ್ಕರದ ಅವಧಿಯಲ್ಲಿ ಪ್ರಯಾಣಿಕರಿಗೆ ತೊಂದರೆಯಾಗದಂತೆ ಪರ್ಯಾಯ ಸಾರಿಗೆ ವ್ಯವಸ್ಥೆ ಕಲ್ಪಿಸಲು ಆಲೋಚಿಸಿದೆ. ಮ್ಯಾಕ್ಸಿಕ್ಯಾಬ್ ಮತ್ತು ಬಸ್‌ಗಳಿಗೆ ತಾತ್ಕಾಲಿಕ ರಹದಾರಿ ನೀಡಲು ನಿರ್ಧರಿಸಿದೆ. ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಕಾರ್ಯದರ್ಶಿ ಅವರನ್ನು ಸಂಪರ್ಕಿಸಿ ರಹದಾರಿಗಾಗಿ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದೆ.

ಈ ಹಿಂದಿನ ಮುಷ್ಕರದ ವೇಳೆ 9 ಬೇಡಿಕೆಗಳ ಈಡೇರಿಕೆಗೆ ಸರ್ಕಾರ ನೀಡಿದ್ದ ಭರವಸೆ ಈಡೇರಿಸಿಲ್ಲ ಎಂದು ಆರೋಪಿಸಿ ಮತ್ತೊಮ್ಮೆ ಮುಷ್ಕರಕ್ಕೆ ಸಾರಿಗೆ ನೌಕರರ ಕೂಟ ನಿರ್ಧರಿಸಿದೆ. ಈ ಸಂಬಂಧ ಸರ್ಕಾರಕ್ಕೆ ನೋಟಿಸ್ ನೀಡಿದೆ.

‘8 ಬೇಡಿಕೆಗಳನ್ನು ಈಗಾಗಲೇ ಈಡೇರಿಸಲಾಗಿದ್ದು, 6ನೇ ವೇತನ ಆಯೋಗದ ಜಾರಿಯೊಂದು ಬಾಕಿ ಇದೆ. ಅದಕ್ಕೆ ಸಿದ್ಧತೆಯೂ ನಡೆದಿದೆ’ ಎಂದು ಸರ್ಕಾರ ಹೇಳುತ್ತಿದೆ.

6ನೇ ವೇತನ ಆಯೋಗದ ಶಿಫಾರಸು ಜಾರಿಯ ಬೇಡಿಕೆ ಈಡೇರಿಲ್ಲ. ಹೀಗಾಗಿ ಮುಷ್ಕರ ಅನಿವಾರ್ಯ’ ಎಂದು ಸಾರಿಗೆ ನೌಕರರ ಕೂಟ ಹೇಳಿದೆ.

‘ಸರ್ಕಾರ ಹಟಮಾರಿ ಧೋರಣೆ ಮುಂದುವರಿಸಿದೆ. ನಮ್ಮ ಜತೆ ಮಾತುಕತೆಗೂ ಮುಂದಾಗದ ಸರ್ಕಾರ, ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುತ್ತಿದೆ. ಮುಷ್ಕರಕ್ಕೆ ನಾವೂ ಸಿದ್ಧತೆ ಮಾಡುತ್ತಿದ್ದೇವೆ’ ಎಂದು ಸಾರಿಗೆ ನೌಕರರ ಕೂಟದ ಅಧ್ಯಕ್ಷ ಚಂದ್ರಶೇಖರ್ ತಿಳಿಸಿದರು.

ಏಪ್ರಿಲ್ 1ರಿಂದ ಅಂತರ ನಿಗಮ ವರ್ಗಾವಣೆ

ಸಾರಿಗೆ ನಿಗಮಗಳ ನೌಕರರ ಅಂತರ ನಿಗಮ ವರ್ಗಾವಣೆಗೆ ಮಾರ್ಗಸೂಚಿ ಹೊರಡಿಸಿರುವ ಸರ್ಕಾರ, ಏಪ್ರಿಲ್ 1ರಿಂದ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದೆ.

ಒಂದು ನಿಗಮದಲ್ಲಿ ಕನಿಷ್ಠ 10 ವರ್ಷ ಕೆಲಸ ಮಾಡಿರುವ ಕಾಯಂ ನೌಕರರಿಗೆ ಒಂದು ಬಾರಿ ಮಾತ್ರ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶ ಇದೆ. ಪತಿ–ಪತ್ನಿ ವರ್ಗಾವಣೆ ಪ್ರಕರಣಗಳಿಗೆ 10 ವರ್ಷದ ಷರತ್ತು ಅನ್ವಯಿಸುವುದಿಲ್ಲ. ನಿಗಮದ ನೌಕರನ ಪತಿ ಅಥವಾ ಪತ್ನಿ ಕೇಂದ್ರ–ರಾಜ್ಯ ಸರ್ಕಾರ ಹಾಗೂ ಸಂಸ್ಥೆಗಳಲ್ಲಿ ನೌಕರಿಯಲ್ಲಿದ್ದರೆ ಪ್ರಮಾಣ ಪತ್ರ ಲಗತ್ತಿಸಬೇಕು ಎಂದು ಮಾರ್ಗಸೂಚಿ ಹೇಳಿದೆ.

ಗಡಿ ಭಾಗದಲ್ಲಿ ವರ್ಷಪೂರ್ತಿ ಕನ್ನಡ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಗಡಿ ಭಾಗಗಳಲ್ಲಿ ವರ್ಷಪೂರ್ತಿ ಕನ್ನಡ ಭಾಷೆ ಮತ್ತು ಸಂಸ್ಕೃತಿ ಜಾಗೃತಿಗೊಳಿಸುವ ಕಾರ್ಯಕ್ರಮಗಳನ್ನು ನಡೆಸಲು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ನಿರ್ಧಾರ ಕೈಗೊಂಡಿದೆ.

ಪ್ರಾಧಿಕಾರದ ಅಧ್ಯಕ್ಷ ಡಾ.ಸಿ. ಸೋಮಶೇಖರ ನೇತೃತ್ವದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಬಿ.ವಿ. ವಸಂತಕುಮಾರ್, ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ ಮತ್ತೀಹಳ್ಳಿ ಹಾಗೂ ಸದಸ್ಯರು ಮತ್ತು ಅಧಿಕಾರಿಗಳು ಭಾಗವಹಿಸಿದ್ದರು. ಗಡಿ ಪ್ರದೇಶದಲ್ಲಿ ನಾಡು–ನುಡಿಯ ಶ್ರೇಯೋಭಿವೃದ್ಧಿಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಿದರು. ಮಹಾರಾಷ್ಟ್ರದ ಗಡಿಯಲ್ಲಿ ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಸಭೆಯಲ್ಲಿ ಖಂಡನಾ ನಿರ್ಣಯ ಅಂಗೀಕರಿಸಲಾಯಿತು.

ಗಡಿ ನಾಡಿನ ಜಿಲ್ಲೆಗಳಲ್ಲಿ ಪ್ರತಿ ತಿಂಗಳಿಗೊಮ್ಮೆ ಕನ್ನಡ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲಾಯಿತು. ಇದಕ್ಕೆ ಸಭೆಯಲ್ಲಿದ್ದ ಎಲ್ಲರೂ ಸಹಮತ ಸೂಚಿಸಿದರು.

ಹುದ್ದೆ ಭರ್ತಿಗೆ ಅನುಮತಿ ನೀಡಲು ಒತ್ತಾಯ

ಬೆಂಗಳೂರು: ರಾಜ್ಯದ ಅನುದಾನಿತ ಶಾಲಾ–ಕಾಲೇಜುಗಳಲ್ಲಿನ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಬೇಕು ಎಂದು ರಾಜ್ಯ ಅನುದಾನಿತ ಶಾಲಾ–ಕಾಲೇಜುಗಳ ಬೋಧಕ ಮತ್ತು ಬೋಧಕೇತರ ಸಂಘಟನೆಗಳ ಒಕ್ಕೂಟ ಸರ್ಕಾರಕ್ಕೆ ಮನವಿ ಮಾಡಿದೆ.

‘ಈ ಹಿಂದೆ ಶಾಲಾ–ಕಾಲೇಜುಗಳಲ್ಲಿನ ಹುದ್ದೆಗಳು ತೆರವುಗೊಂಡ ತಕ್ಷಣವೇ ಇವುಗಳನ್ನು ಭರ್ತಿ ಮಾಡಿಕೊಳ್ಳುವ ಪ್ರಕ್ರಿಯೆ ಚಾಲನೆ ಇತ್ತು. ಈ ಪದ್ಧತಿಯನ್ನು ತೆಗೆದು ಹಾಕಿರುವುದರಿಂದ ಶೈಕ್ಷಣಿಕ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತಿದೆ’ ಎಂದು ಒಕ್ಕೂಟದ ಅಧ್ಯಕ್ಷ ಎಂ.ಪಿ. ಕರಬಸಪ್ಪ ಪ್ರಕಟಣೆಯಲ್ಲಿ ಹೇಳಿದ್ದಾರೆ.

‘ಅನುದಾನಿತ ಶಾಲಾ–ಕಾಲೇಜುಗಳಲ್ಲಿ ಸಾವಿರಾರು ಹುದ್ದೆಗಳು ಖಾಲಿ ಇವೆ. ಪದವಿಪೂರ್ವ ಕಾಲೇಜುಗಳಲ್ಲಿ ಕಾರ್ಯಭಾರ ಕೊರತೆಯಿಂದ ಮೂರು ದಿನ ಒಂದು ಕಾಲೇಜಿಗೆ, ಮೂರು ದಿನ ಮತ್ತೊಂದು ಕಾಲೇಜಿಗೆ ಹೋಗಿ ಉಪನ್ಯಾಸಕರು ಕೆಲಸ ಮಾಡಬೇಕಾಗಿದೆ. ಇದರಿಂದಲೂ ಶಿಕ್ಷಣದ ಗುಣಮಟ್ಟದ ಮೇಲೆ ಹೊಡೆತ ಬೀಳುತ್ತಿದೆ. ಈ ಹಿಂದಿನಂತೆ ಒಂದು ವಿಷಯಕ್ಕೆ ಒಬ್ಬ ಉಪನ್ಯಾಸಕರು ಕರ್ತವ್ಯ ನಿರ್ವಹಿಸುವ ವ್ಯವಸ್ಥೆಯನ್ನು ಸರ್ಕಾರ ರೂಪಿಸಬೇಕು’ ಎಂದು ಮನವಿ ಮಾಡಿದ್ದಾರೆ.

‘ಚಾಲುಕ್ಯ ಕನ್ನಡೋತ್ಸವ’ಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಲಕ್ಷ್ಮೀ ಬಡಾವಣೆಯ ಚಾಲುಕ್ಯ ಡಾ.ರಾಜಕುಮಾರ್ ಟ್ರಸ್ಟ್ ವತಿಯಿಂದ ಕುರುಬರಹಳ್ಳಿಯ ಕುಮಾರವ್ಯಾಸ ವೃತ್ತದಲ್ಲಿ ಹಮ್ಮಿಕೊಂಡಿರುವ ಚಾಲುಕ್ಯ ಕನ್ನಡೋತ್ಸವ ಹಾಗೂ ದೊಡ್ಡಮ್ಮ ದೇವಿ ಉತ್ಸವಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.



ಚಾಲುಕ್ಯ ಕನ್ನಡೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಸಚಿವ ಕೆ.ಗೋಪಾಲಯ್ಯ, ಪತ್ನಿ ಹೇಮಲತಾ ಗೋಪಾಲಯ್ಯ , ಸ್ಥಳೀಯ ಮುಖಂಡರು ಭಾಗವಹಿಸಿದ್ದರು.

ಕಾರ್ಯಕ್ರಮದ ಅಂಗವಾಗಿ ಮಾ.29ರವರೆಗೆ ಜಾನಪದ ಉತ್ಸವ, ಅರ್ಜುನ ಜನ್ಯ ಸಂಗೀತ ರಸಸಂಜೆ, ಯುವಾಸ್ ಮೆಲೋಡೀಸ್ ವತಿಯಿಂದ ವಾದ್ಯಗೋಷ್ಠಿ, ಕನ್ನಡ ಚಿತ್ರರಂಗದ ದಿಗ್ಗಜರು, ಚಲನ ಚಿತ್ರ ತಾರೆಯರ ಸಮಾಗಮ ಸೇರಿದಂತೆ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಚಾಲುಕ್ಯ ಡಾ.ರಾಜಕುಮಾರ್ ಟ್ರಸ್ಟ್‌ನ ಗೌರವಾಧ್ಯಕ್ಷ ಹಾಗೂ ಸಚಿವ ಕೆ.ಗೋಪಾಲಯ್ಯ ಹಾಗೂ ಪತ್ನಿ ಹೇಮಲತಾ ಗೋಪಾಲಯ್ಯ ಅವರು ಭುವನೇಶ್ವರಿ ದೇವಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಧ್ವಜಾರೋಹಣ ನೆರವೇರಿಸಿದರು.

ಸಂಜೆ ನಡೆದ ಜಾನಪದ ಉತ್ಸವದಲ್ಲಿ ಸಂಗೀತ ನಿರ್ದೇಶಕ ಹಂಸಲೇಖ, ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ಟಿ.ಎ.ನಾರಾಯಣಗೌಡ, ಚಿತ್ರ ನಟ ಹರೀಶ್ ರಾಜ್, ಟ್ರಸ್ಟ್‌ನ ಅಧ್ಯಕ್ಷ ಸುರೇಶ್, ಉಪಾಧ್ಯಕ್ಷ ಎಂ.ಶಿವರಾಜ್, ಮುಖಂಡರುಗಳಾದ ಜಯರಾಂ, ಶಿವಾನಂದ್ ಮೂರ್ತಿ, ಜಯಸಿಂಹ, ಶ್ರೀನಿವಾಸ್, ಸುರೇಶ್, ರಾಘವೇಂದ್ರ ನಾಗರಾಜ್, ನಾಗಣ್ಣ-ಪುರುಷೋತ್ತಮ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು.

ಏಳು ಗಂಟೆಯಲ್ಲೇ ಆರೋಪಿಗಳ ಬಂಧನ: ಪೊಲೀಸರ ತಂಡಕ್ಕೆ ನಗದು ಬಹುಮಾನ ಘೋಷಣೆ

ಯುವಕನ ಅಪಹರಿಸಿ ₹ 2 ಕೋಟಿಗೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅಪಹರಣಕ್ಕೊಳಗಾದ ಯುವಕನ ಕೈ–ಕಾಲು ಕತ್ತರಿಸುವುದಾಗಿ ಬೆದರಿಕೆ
- ಸಿ.ಸಿ ಟಿ.ವಿ ಕ್ಯಾಮೆರಾ ಸಹಾಯದಿಂದ ಆರೋಪಿಗಳ ಬಂಧನ

ಬೆಂಗಳೂರು: ನಗರದ ನರ್ಸಿಂಗ್ ಕಾಲೇಜು ಮುಖ್ಯಸ್ಥರೊಬ್ಬರ ಮಗನನ್ನು ಅಪಹರಿಸಿ, ಅವರ ಬಿಡುಗಡೆಗೆ ₹ 2 ಕೋಟಿಗೆ ಬೇಡಿಕೆ ಇಟ್ಟಿದ್ದ ಆರೋಪಿಗಳನ್ನು ಪೂರ್ವ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

‘ಕೆ.ಜಿ.ಹಳ್ಳಿ ನಿವಾಸಿಯಾಗಿದ್ದ ರಬೀಜ್ ಅರಾಫತ್ (22) ಎಂಬುವರನ್ನು ಗುರುವಾರ (ಮಾರ್ಚ್ 25) ಅಪಹರಣ ಮಾಡಲಾಗಿತ್ತು. ಆ ಸಂಬಂಧ ಅವರ ತಂದೆ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಾದ ಏಳು ಗಂಟೆಯಲ್ಲೇ ಯುವಕನನ್ನು ರಕ್ಷಿಸಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಇಲ್ಲಿ ತಿಳಿಸಿದರು.

‘ಸ್ಥಳೀಯ ನಿವಾಸಿಗಳಾದ ಅಬ್ದುಲ್ ಪಹಾದ್, ಜಬೀವುಲ್ಲಾ, ಕೊರವೆಲ್ ಸಲ್ಮಾನ್ ಹಾಗೂ ತೌಫಿಕ್ ಬಂಧಿತರು. ಪ್ರಕರಣದಲ್ಲಿ ಭಾಗಿಯಾಗಿದ್ದ ಕೆಲವರು ತಲೆಮರೆಸಿಕೊಂಡಿದ್ದಾರೆ. ಮದುವೆ ಹಾಗೂ ಇತರೆ ಕೆಲಸಕ್ಕಾಗಿ ಆರೋಪಿಗಳು ಸಾಲ ಮಾಡಿಕೊಂಡಿದ್ದರು. ಅದನ್ನು ತೀರಿಸುವುದಕ್ಕಾಗಿ, ಶ್ರೀಮಂತನ ಮಗನನ್ನು ಅಪಹರಿಸಿ ಹಣ ಸಂಪಾದಿಸಲು ಮುಂದಾಗಿದ್ದರು’ ಎಂದೂ ಹೇಳಿದರು.

ಕೈ, ಕಾಲು ಕತ್ತರಿಸುವ ಬೆದರಿಕೆ: ‘ಅಪಹರಣಕ್ಕೀಡಾಗಿದ್ದ ರಬೀಜ್ ಅವರ ತಂದೆ, ನರ್ಸಿಂಗ್ ಕಾಲೇಜು ಮುಖ್ಯಸ್ಥರು. ಅವರ ಬಳಿ ಹಣವಿರುವುದನ್ನು ತಿಳಿದುಕೊಂಡಿದ್ದ ಆರೋಪಿಗಳು ಸಂಚು ರೂಪಿಸಿದ್ದರು. ಗುರುವಾರ ಮಧ್ಯಾಹ್ನ ರಬೀಜ್ ಅವರನ್ನು ಅಪಹರಿಸಿದ್ದ ಆರೋಪಿಗಳು, ಎರಡು ಗಂಟೆ ಬಿಟ್ಟು ತಂದೆಗೆ ಕರೆ ಮಾಡಿದ್ದರು’ ಎಂದೂ ಕಮಲ್ ಪಂತ್ ತಿಳಿಸಿದರು.

‘₹ 2 ಕೋಟಿ ಕೊಟ್ಟರೆ ನಿಮ್ಮ ಮಗನನ್ನು ಬಿಟ್ಟು ಕಳುಹಿಸುತ್ತೇವೆ. ಇಲ್ಲದಿದ್ದರೆ, ಮಗನ ಕೈ–ಕಾಲು ಕತ್ತರಿಸುತ್ತೇವೆ’ ಎಂಬುದಾಗಿ ಆರೋಪಿಗಳು ಬೆದರಿಸಿದ್ದರು. ಪೊಲೀಸರಿಗೆ ದೂರು ನೀಡದಂತೆಯೂ ಎಚ್ಚರಿಕೆ ನೀಡಿದ್ದರು.’

ಬಹುಮಾನ ಘೋಷಣೆ: ‘ಅಪಹರಣ ಮಾಡಿದ ಜಾಗ ಹಾಗೂ ಇತರೆ ಪ್ರದೇಶಗಳಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಿದ್ದ ಪೊಲೀಸರ ತಂಡ, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ. ಪೊಲೀಸರ ತಂಡಕ್ಕೆ ₹ 40 ಸಾವಿರ ಬಹುಮಾನ ಘೋಷಿಸಲಾಗಿದೆ’ ಎಂದೂ ಕಮಲ್ ಪಂತ್ ಹೇಳಿದರು.



ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ರಾಜೇಂದ್ರಪ್ರಸಾದ್ ಅವರು ರೈತರಿಗೆ ಜೇನುಕೃಷಿ ಪರಿಕರಗಳನ್ನು ವಿತರಿಸಿದರು

‘ಜೇನು ರಫ್ತಿಗೆ ವಿಪುಲ ಅವಕಾಶ’

ಪ್ರಜಾವಾಣಿ ವಾರ್ತೆ

ಯಲಹಂಕ: ಜೇನುತುಪ್ಪದಲ್ಲಿ ಕಲಬೆರಕೆ ತಡೆಗಟ್ಟುವುದರ ಜೊತೆಗೆ ಗುಣಮಟ್ಟ ಕಾಯ್ದುಕೊಂಡು ನಿರ್ದಿಷ್ಟ ಬ್ರ್ಯಾಂಡ್ ಸೃಷ್ಟಿಸಿಕೊಂಡರೆ ಹೊರರಾಜ್ಯ ಮತ್ತು ರಾಷ್ಟ್ರಗಳಿಗೆ ರಫ್ತು ಮಾಡಲು ವಿಪುಲ ಅವಕಾಶಗಳಿವೆ ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ರಾಜೇಂದ್ರಪ್ರಸಾದ್ ಹೇಳಿದರು.

ಅಖಿಲಭಾರತ ಸುಸಂಘಟಿತ ಜೇನುನೊಣ ಮತ್ತು ಪರಾಗಸ್ಪರ್ಶಗಳ ಸಂಶೋಧನಾ ಪ್ರಾಯೋಜನೆ ಹಾಗೂ ಜೇನುಕೃಷಿ ವಿಭಾಗದ ಆಶ್ರಯದಲ್ಲಿ ಜಿಕೆವಿಕೆಯಲ್ಲಿ ಆಯೋಜಿಸಿದ್ದ ಜೇನು ಸಾಕಾಣಿಕೆ ತರಬೇತಿ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

‘ಜೇನುತುಪ್ಪದಲ್ಲಿ ಕಲಬೆರಕೆ ಪದಾರ್ಥಗಳನ್ನು ಪತ್ತೆಹಚ್ಚಿ, ಗುಣಮಟ್ಟವನ್ನು ದೃಢಪಡಿಸುವ ನಿಟ್ಟಿನಲ್ಲಿ ಉತ್ಕೃಷ್ಟ ಜೇನು ಪ್ರಯೋಗಾಲಯ ಸ್ಥಾಪಿಸುವ ಸಂಬಂಧ ಅನುದಾನ ಬಿಡುಗಡೆಗಾಗಿ ಕೇಂದ್ರ ಮತ್ತು ರಾಜ್ಯಸರ್ಕಾರಗಳಿಗೆ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದರು.

ಕೃಷಿ ವಿಶ್ವವಿದ್ಯಾಲಯದ ಹಿರಿಯ ವಿಜ್ಞಾನಿ ಡಾ.ಎಸ್.ನಿರಂಜನಮೂರ್ತಿ ಮಾತನಾಡಿ, ‘ಸಮಗ್ರ ಕೃಷಿಪದ್ಧತಿಯಲ್ಲಿ ಜೇನುಕೃಷಿಯನ್ನು ಉಪ ಕಸುಬನ್ನಾಗಿ ಅಳವಡಿಸಿಕೊಳ್ಳುವುದರಿಂದ ಆರೋಗ್ಯಯುತ ಜೇನು ದೊರೆಯುವುದರ ಜೊತೆಗೆ ಬೆಳೆಗಳ ಇಳುವರಿಯೂ ಹೆಚ್ಚಾಗಲಿದೆ’ ಎಂದು ಸಲಹೆ ನೀಡಿದರು.

ಸಮಾರಂಭದಲ್ಲಿ ಮದಕರಿ ಸೌಹಾರ್ದ ಸಹಕಾರಿ ಅಧ್ಯಕ್ಷ ಡಿ.ಎ. ನಾಗರಾಜು, ಜೇನುಕೃಷಿ ವಿಭಾಗದ ಮುಖ್ಯಸ್ಥರಾದ ಡಾ.ಕೆ.ಎಸ್. ಜಗದೀಶ್, ಡಾ.ಕೆ.ಟಿ. ವಿಜಯ ಕುಮಾರ್, ಸಂಪನ್ಮೂಲ ವ್ಯಕ್ತಿ ಜಿ. ಈಶ್ವರಪ್ಪ, ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎಸ್. ಭಟ್, ಡಾ.ಜೆ.ಸಿ. ಕುಬೇರಪ್ಪ ಉಪಸ್ಥಿತರಿದ್ದರು.

ಟ್ರಕ್‌ನಲ್ಲಿ ಸಾಗಿಸುತ್ತಿದ್ದ 500 ಕೆ.ಜಿ ಗಾಂಜಾ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಡಿಶಾದಿಂದ ನಗರಕ್ಕೆ ಟ್ರಕ್‌ನಲ್ಲಿ ಸಾಗಿಸುತ್ತಿದ್ದ ₹ 1 ಕೋಟಿ ಮೌಲ್ಯದ 500 ಕೆ.ಜಿ ಗಾಂಜಾವನ್ನು ಕೆ.ಆರ್.ಪುರ ಪೊಲೀಸರು ಜಪ್ತಿ ಮಾಡಿದ್ದು, ಪ್ರಕರಣ ಸಂಬಂಧ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

‘ರಾಜಸ್ಥಾನ ಜೋಧಪುರದ ದಯಾಲ್‌ರಾಮ್ (38), ಪೂನರಾಮ್ (24) ಹಾಗೂ ಬುದ್ದಾರಾಮ್ (23) ಬಂಧಿತರು. ಅವರೆಲ್ಲರ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಒಡಿಶಾದಲ್ಲಿರುವ ಪೆಡ್ಲರ್ ಜೊತೆ ಸಂಪರ್ಕವಿಟ್ಟುಕೊಂಡಿದ್ದ ಆರೋಪಿಗಳು, ಅಲ್ಲಿಂದ ಗಾಂಜಾವನ್ನು ಖರೀದಿಸಿ ತಂದು ನಗರಕ್ಕೆ ಮಾರಾಟ ಮಾಡುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದೂ ತಿಳಿಸಿದರು.

ಪ್ರತ್ಯೇಕ ಕ್ಯಾಬಿನ್‌ನಲ್ಲಿ ಗಾಂಜಾ: ‘ಆರೋಪಿಗಳು ರಾಜಸ್ಥಾನ ನೋಂದಣಿ ಸಂಖ್ಯೆ ಟ್ರಕ್‌ನಲ್ಲಿ ಗಾಂಜಾ ಇಟ್ಟುಕೊಂಡು ಗ್ರಾಹಕರಿಗೆ ನೀಡಲು ಹೊರಟಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಗ್ರಾಹಕರ ಸೋಗಿನಲ್ಲಿ ಕಾರ್ಯಾಚರಣೆ ನಡೆಸಲಾಯಿತು’ ಎಂದು ಅಧಿಕಾರಿ ಹೇಳಿದರು.

‘ಆರಂಭದಲ್ಲಿ ಟ್ರಕ್‌ನಲ್ಲಿ ಶೋಧ ಮಾಡಿದಾಗ ಗಾಂಜಾ ಸಿಕ್ಕಿರಲಿಲ್ಲ. ಚಾಲಕನ ಆಸನದ ಹಿಂಭಾಗದಲ್ಲಿ ಪ್ರತ್ಯೇಕ ಕ್ಯಾಬಿನ್ ಮಾಡಿದ್ದ ಆರೋಪಿಗಳು, ಅಲ್ಲಿಯೇ 82 ಬಂಡಲ್‌ಗಳಲ್ಲಿ ಗಾಂಜಾ ಬಚ್ಚಿಟ್ಟು ಸಾಗಿಸುತ್ತಿದ್ದರು. ಅದನ್ನು ಪತ್ತೆ ಮಾಡಿ ಜಪ್ತಿ ಮಾಡಲಾಗಿದೆ’ ಎಂದೂ ತಿಳಿಸಿದರು.

‘ಹಲವು ದಿನಗಳಿಂದ ನಡೆಯುತ್ತಿದ್ದ ಗಾಂಜಾ ಸಾಗಣೆ ಹಾಗೂ ಮಾರಾಟ ಜಾಲವನ್ನು ಭೇದಿಸಿರುವ ಪೊಲೀಸರಿಗೆ ನಗರ ಪೊಲೀಸ್ ಕಮಿಷನರ್ ಅವರು ₹80 ಸಾವಿರ ಬಹುಮಾನ ಘೋಷಿಸಿದ್ದಾರೆ’ ಎಂದೂ ಹೇಳಿದರು.

ಬಸ್ ನಿಲ್ದಾಣದಲ್ಲಿ ಮಾರಾಟ



ಗಾಂಜಾ (ಪ್ರಾತಿನಿಧಿಕ ಚಿತ್ರ)

ಬೆಂಗಳೂರು: ನಾಗರಬಾವಿ ಎರಡನೇ ಹಂತದ ಬಿಎಂಟಿಸಿ ಬಸ್ ನಿಲ್ದಾಣ ಬಳಿ ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪದಡಿ ರಘು (27) ಎಂಬಾತನನ್ನು ಅನ್ನಪೂರ್ಣೇಶ್ವರಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಸುಂಕದಕಟ್ಟೆಯ ರಘು, ಹಲವು ದಿನಗಳಿಂದ ಗಾಂಜಾ ಮಾರುತ್ತಿದ್ದ. ಆತನಿಂದ 1 ಕೆ.ಜಿ 700 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ತೆಲಂಗಾಣದ ವಜ್ರಕಂಟೆ ನಿವಾಸಿಯೊಬ್ಬರನ್ನು ಪರಿಚಯ ಮಾಡಿಕೊಂಡಿದ್ದ ಆರೋಪಿ, ಅವರಿಂದ ಗಾಂಜಾ ತರಿಸಿಕೊಂಡು ನಗರದಲ್ಲಿ ಮಾರಾಟ ಮಾಡಿ ಹಣ ಸಂಪಾದನೆ ಮಾಡುತ್ತಿದ್ದ. ಗುರುವಾರ ಆತ ಬಸ್ ನಿಲ್ದಾಣ ಆವರಣದಲ್ಲಿ ನಿಂತು ಗಾಂಜಾ ಮಾರುತ್ತಿದ್ದ. ಆತನನ್ನು ಬಂಧಿಸಿ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದೂ ತಿಳಿಸಿದರು.

ದಾಖಲೆ ಸಲ್ಲಿಕೆಗೆ ಏ. 8ರವರೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು–ಮೈಸೂರು ವಿಭಾಗದಲ್ಲಿ 2020–21ನೇ ಸಾಲಿನಲ್ಲಿ ಖಾಸಗಿ ಅನುದಾನರಹಿತ ಪ್ರೌಢಶಾಲೆಗಳನ್ನು ನೋಂದಾಯಿಸಲು ಆಡಳಿತ ಮಂಡಳಿಗಳಿಗೆ ಏ.8ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಅವಶ್ಯಕ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ಮಾ.30ರಿಂದ ಏ.8ರವರೆಗೆ ಸಮಯ ನೀಡಲಾಗಿದೆ. ಶಿಕ್ಷಣ ಸಂಸ್ಥೆಗಳನ್ನು ನೋಂದಾಯಿಸಲು ಬಯಸುವ ಆಡಳಿತ ಮಂಡಳಿಯವರು https://sts.karnataka.gov.in/SCHOOLRR/schoolreg/instruction.htm ಲಾಗಿನ್ ಸಂಪರ್ಕಿಸಬೇಕು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೌಡಿ ಕಾಲಿಗೆ ಪೊಲೀಸರಿಂದ ಗುಂಡೇಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾನ್‌ಸ್ಟೆಬಲ್ ಮೇಲೆ ಹಲ್ಲೆ ಮಾಡಿ ಪರಾರಿಯಾಗಲು ಯತ್ನಿಸಿದ್ದ ರೌಡಿ ಧನುಷ್‌ನನ್ನು ಕಾಲಿಗೆ ಗುಂಡು ಹಾರಿಸಿ ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ ಪೊಲೀಸರು ಗುರುವಾರ ತಡರಾತ್ರಿ ಸೆರೆ ಹಿಡಿದಿದ್ದಾರೆ.

‘ಕೊಲೆ, ಕೊಲೆ ಯತ್ನ ಸೇರಿ ಹಲವು ಪ್ರಕರಣಗಳಲ್ಲಿ ಭಾಗಿಯಾಗಿದ್ದ ರೌಡಿ, ಜೈಲಿಗೂ ಹೋಗಿ ಬಂದಿದ್ದ. ಇತ್ತೀಚೆಗೆ ಪುನಃ ಕೃತ್ಯ ಎಸಗಲಾರಂಭಿಸಿದ್ದ. ಎದುರಾಳಿ ಗ್ಯಾಂಗ್‌ನ ಮಂಜುನಾಥ್ ಎಂಬಾತನನ್ನು ಇತ್ತೀಚೆಗೆ ಕೊಲೆ ಮಾಡಿದ್ದ. ನಂತರ ತಲೆಮರೆಸಿಕೊಂಡಿದ್ದ’ ಎಂದು ಪೊಲೀಸರು ಹೇಳಿದರು.

‘ಹನುಮಗಿರಿ ಬೆಟ್ಟದಲ್ಲಿ ಧನುಷ್ ಅವಿತುಕೊಂಡಿದ್ದ ಮಾಹಿತಿ ಗುರುವಾರ ರಾತ್ರಿ ಇನ್‌ಸ್ಪೆಕ್ಟರ್ ಪಿ.ಆರ್.ಜನಾರ್ದನ ಅವರಿಗೆ ಸಿಕ್ಕಿತ್ತು. ಸಿಬ್ಬಂದಿ ಜತೆ ಸ್ಥಳಕ್ಕೆ ಹೋಗಿದ್ದರು. ಕಾನ್‌ಸ್ಟೆಬಲ್ ಲೋಕೇಶ್ ಅವರು ರೌಡಿ ಧನುಷ್‌ನನ್ನು ಹಿಡಿಯಲು ಮುಂದಾಗಿದ್ದರು. ಅದೇ ಸಂದರ್ಭದಲ್ಲೇ ರೌಡಿ, ಕಾನ್‌ಸ್ಟೆಬಲ್ ಮೇಲೆ ಹಲ್ಲೆ ಮಾಡಿದ್ದ. ರಕ್ಷಣೆಗೆ ಹೋದ ಇನ್‌ಸ್ಪೆಕ್ಟರ್ ಜನಾರ್ದನ್, ರೌಡಿ ಕಾಲಿಗೆ ಗುಂಡು ಹಾರಿಸಿ ಸೆರೆ ಹಿಡಿದಿದ್ದಾರೆ’ ಎಂದು ಹೇಳಿದರು.

‘ಗಾಯಗೊಂಡಿರುವ ಧನುಷ್‌ನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಕಾನ್‌ಸ್ಟೆಬಲ್ ಲೋಕೇಶ್ ಅವರಿಗೂ ಚಿಕಿತ್ಸೆ ಕೊಡಿಸಲಾಗುತ್ತಿದೆ’ ಎಂದೂ ತಿಳಿಸಿದರು.

ಎಂ.ಎಸ್. ಸಾಗರ್‌ಗೆ ‘ಪಬ್ಲಿಷಿಂಗ್ ನೆಕ್ಸ್ಟ್’ ಪ್ರಶಸ್ತಿ



ಎಂ.ಎಸ್. ಸಾಗರ್

ಬೆಂಗಳೂರು: ಪ್ರಕಾಶನ ಕ್ಷೇತ್ರದ ವಿವಿಧ ವಿಭಾಗಗಳಲ್ಲಿ ನೀಡುವ ‘ಪಬ್ಲಿಷಿಂಗ್ ನೆಕ್ಸ್ಟ್’ ಪ್ರಶಸ್ತಿಗಳು ಘೋಷಣೆಯಾಗಿದ್ದು, ಬಹುರೂಪಿ ಪ್ರಕಾಶನದ ‘ದುಪ್ಪಟ್ಟು’ ಕೃತಿಯ ಮುಖಪುಟ ವಿನ್ಯಾಸಕ್ಕಾಗಿ ಎಂ.ಎಸ್. ಸಾಗರ್ ಅವರು ರನ್ನರ್ ಅಪ್ ಸ್ಥಾನ ಪಡೆದಿದ್ದಾರೆ.

ಕಳೆದ 7 ವರ್ಷಗಳಿಂದ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಈ ಬಾರಿ ‘ಬಹುರೂಪಿ’ಯ ಎರಡು ಕೃತಿಗಳು ಅಂತಿಮ 5ರಲ್ಲಿ ಸ್ಥಾನ ಪಡೆದಿದ್ದವು. ರಾಜಾರಾಂ ತಲ್ಲೂರು ಅವರು ‘ದುಪ್ಪಟ್ಟು’ ಕೃತಿಯನ್ನು ರಚಿಸಿದ್ದಾರೆ. ದೇಶ, ವಿದೇಶದ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದವು ಎಂದು ಪ್ರಕಟಣೆಯು ತಿಳಿಸಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರೇಹಳ್ಳಿ ಶ್ರೀಲಕ್ಷ್ಮೀನರಸಿಂಹಸ್ವಾಮಿ ಕೈಂಕರ್ಯ ಸಭಾ ವತಿಯಿಂದ ಶ್ರೀವೈಷ್ಣವ (ಅಯ್ಯಂಗಾರ್) ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ, ಡಿಪ್ಲೊಮ, ತಾಂತ್ರಿಕ ಹಾಗೂ ವೈದ್ಯಕೀಯ ಪದವಿಗಳಲ್ಲಿ ಹೆಚ್ಚು ಅಂಕ ಪಡೆದಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಆಸಕ್ತ ವಿದ್ಯಾರ್ಥಿಗಳು ತಮ್ಮ ಸ್ವವಿವರ, ಅಂಕಪಟ್ಟಿ ಹಾಗೂ ಭಾವಚಿತ್ರ ಸಹಿತ ಅರ್ಜಿಯನ್ನು ಏ.15ರೊಳಗೆ ಕಚೇರಿಗೆ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.

ವಿಳಾಸ: ಮಾರೇಹಳ್ಳಿ ಶ್ರೀಲಕ್ಷ್ಮೀನರಸಿಂಹಸ್ವಾಮಿ ಕೈಂಕರ್ಯ ಸಭಾ, ಈಜುಕೊಳ ಎಕ್ಸ್‌ಟೆಂಷನ್, ಮಲ್ಲೇಶ್ವರ

ಸಂಪರ್ಕಕ್ಕೆ ಮೊಬೈಲ್ ನಂ : 94488 71127.

ಐದು ದಿನಗಳ ಕಮ್ಮಟಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು ಗಿರಿಜನ ಉಪಯೋಜನೆಯಡಿ ಮೇ ತಿಂಗಳಲ್ಲಿ ‘ಬುಡಕಟ್ಟು ಸಾಹಿತ್ಯ ಮತ್ತು ಸಂಸ್ಕೃತಿ’ ಕಮ್ಮಟ ಹಮ್ಮಿಕೊಂಡಿದೆ. ಈ ಸಂಬಂಧ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ರಾಜ್ಯ ಮಟ್ಟದ ಐದು ದಿನಗಳ ಈ ಕಮ್ಮಟಕ್ಕೆ ಅರ್ಜಿ ಸಲ್ಲಿಸಲು 20ರಿಂದ 50 ವರ್ಷದೊಳಗಿನವರು ಅರ್ಹರಾಗಿರುತ್ತಾರೆ.

ಅರ್ಜಿ ನಮೂನೆಗಳು ಅಕಾಡೆಮಿಯ ವೆಬ್‌ಸೈಟ್ karnatakasahithyaacademy.orgಯಲ್ಲಿ ಪಡೆದು, ಏಪ್ರಿಲ್ 20ರೊಳಗೆ ಅಕಾಡೆಮಿಗೆ ಸಲ್ಲಿಸಬೇಕು ಎಂದು ಅಕಾಡೆಮಿಯ ರಿಜಿಸ್ಟ್ರಾರ್ ಕರಿಯಪ್ಪ ಎನ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೃಷ್ಣಪ್ಪ ಶ್ರದ್ಧಾಂಜಲಿ ಸಭೆ 29ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇತ್ತೀಚೆಗೆ ನಿಧನರಾದ ಮಾಜಿ ಸಚಿವ ಎಚ್.ಟಿ. ಕೃಷ್ಣಪ್ಪ ಅವರ ಶ್ರದ್ಧಾಂಜಲಿ ಸಭೆಯನ್ನು ಇದೇ 29 ರಂದು ನಾಗಮಂಗಲದಲ್ಲಿ ಆಯೋಜಿಸಲಾಗಿದೆ.

ಕುಟುಂಬದವರು ಮತ್ತು ಅವರ ಅಭಿಮಾನಿಗಳು ಈ ಸಭೆ ಆಯೋಜಿಸಿದ್ದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕಾಂಗ್ರೆಸ್ ಶಾಸಕ ಕೆ.ಆರ್. ರಮೇಶ್ ಕುಮಾರ್ ಹಾಗೂ ವಾಗ್ಮಿ ಪ್ರೊ.ಕೃಷ್ಣೇಗೌಡ ಪಾಲ್ಗೊಳ್ಳಲಿದ್ದಾರೆ.

ನಾಗಮಂಗಲದ ಟಿ.ಬಿ. ಬಡಾವಣೆಯಲ್ಲಿರುವ ಜಯಮ್ಮ ಕೃಷ್ಣಪ್ಪ ಸಮುದಾಯ ಭವನದಲ್ಲಿ ಸೋಮವಾರ ಬೆಳಿಗ್ಗೆ 10.30 ಕ್ಕೆ ಕಾರ್ಯಕ್ರಮ ಆರಂಭವಾಗಲಿದೆ. ದೇವಾನಂದ್ ವರಪ್ರಸಾದ್ ಮತ್ತು ತಂಡದವರಿಂದ ಗೀತ ನಮನ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಿಧನ ವಾರ್ತೆ

ಕೆಂಪಮ್ಮ



ಬೆಂಗಳೂರು: ನಗರದ ಎಲೆಕ್ಟ್ರಾನಿಕ್ ಸಿಟಿ ಬಡಾವಣೆಯಲ್ಲಿ ವಾಸವಿದ್ದ ಕೆಂಪಮ್ಮ (105) ಶುಕ್ರವಾರ ನಿಧನರಾದರು.

ಅವರಿಗೆ ಆರು ಪುತ್ರರು, ಐವರು ಪುತ್ರಿಯರು ಇದ್ದಾರೆ. ಹಾಸನ ಜಿಲ್ಲೆ ಚನ್ನರಾಯ ಪಟ್ಟಣ ತಾಲ್ಲೂಕಿನ ಸ್ವಗ್ರಾಮ ಕೆ.ಮಲ್ಲೇನ ಹಳ್ಳಿಯಲ್ಲಿ ಅಂತ್ಯಕ್ರಿಯೆ ಶುಕ್ರವಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ರಾಷ್ಟ್ರಪತಿ ಆಸ್ಪತ್ರೆಗೆ ದಾಖಲು



ನವದೆಹಲಿ (ಪಿಟಿಐ): ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಗೆ ಎದೆನೋವು ಕಾಣಿಸಿಕೊಂಡಿದ್ದು ಶುಕ್ರವಾರ ದೆಹಲಿಯ ಸೇನಾ ಸಂಶೋಧನೆ ಮತ್ತು ರೆಫರಲ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ರಾಷ್ಟ್ರಪತಿ ಅವರ ಆರೋಗ್ಯದ ಮೇಲೆ ವೈದ್ಯರು ತೀವ್ರ ನಿಗಾ ವಹಿಸಿದ್ದಾರೆ. ಅವರ ಆರೋಗ್ಯ ಸ್ಥಿರವಾಗಿದೆ ಎಂದು ಆಸ್ಪತ್ರೆ ತಿಳಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರಪತಿ ಅವರ ಪುತ್ರನಿಗೆ ಕರೆ ಮಾಡಿ, ಕೋವಿಂದ್ ಅವರ ಆರೋಗ್ಯದ ಬಗ್ಗೆ ವಿಚಾರಿಸಿದ್ದಾರೆ.

ಉತ್ತರ ಪ್ರದೇಶ: ಸ್ವಾಮಿ ಚಿನ್ಮಯಾನಂದ ಖುಲಾಸೆ

ಲಖನೌ (ಪಿಟಿಐ): ಅತ್ಯಾಚಾರ ಎಸಗುವ ಉದ್ದೇಶದಿಂದ ಕಾನೂನು ವಿದ್ಯಾರ್ಥಿನಿಯನ್ನು ಬಂಧನದಲ್ಲಿ ಇರಿಸಿದ್ದ ಆರೋಪ ಎದುರಿಸುತ್ತಿದ್ದ ಬಿಜೆಪಿ ಮುಖಂಡ ಹಾಗೂ ಕೇಂದ್ರದ ಮಾಜಿ ಸಚಿವ ಸ್ವಾಮಿ ಚಿನ್ಮಯಾನಂದ ಅವರನ್ನು ಇಲ್ಲಿನ ವಿಶೇಷ ಕೋರ್ಟ್ ಶುಕ್ರವಾರ ಖುಲಾಸೆಗೊಳಿಸಿದೆ.

'ಸ್ವಾಮಿ ಚಿನ್ಮಯಾನಂದ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸುವ ಸಾಕ್ಷ್ಯಗಳನ್ನು ಒದಗಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ' ಎಂದು ವಿಶೇಷ ನ್ಯಾಯಾಧೀಶ ಪಿ.ಕೆ.ರೈ ಅಭಿಪ್ರಾಯಪಟ್ಟರು.

ಸ್ವಾಮಿ ಚಿನ್ಮಯಾನಂದ ಅವರಿಂದ ಹಣ ವಸೂಲಿಗಾಗಿ ಯತ್ನಿಸಿದ ಆರೋಪದಿಂದ ಕಾನೂನು ವಿದ್ಯಾರ್ಥಿನಿ, ಇತರ ಆರೋಪಿಗಳಾದ ಸಂಜಯ್ ಸಿಂಗ್, ಡಿ.ಪಿ.ಎಸ್. ರಾಥೋಡ್, ವಿಕ್ರಮ್ ಸಿಂಗ್, ಸಚಿನ್ ಸಿಂಗ್ ಹಾಗೂ ಅಜಿತ್ ಸಿಂಗ್ ಅವರನ್ನು ಖುಲಾಸೆಗೊಳಿಸಲಾಗಿದೆ.

ನಗರ ಮತ್ತು ಪಟ್ಟಣ ಪ್ರದೇಶಗಳ ಒಳಚರಂಡಿ ನೀರು, ಕೈಗಾರಿಕೆಗಳ ತ್ಯಾಜ್ಯ ಸೇರ್ಪಡೆಯೇ ಕಾರಣ

'ರಾಜ್ಯದ 17 ನದಿಗಳು ಕಲುಷಿತ'

ಪ್ರಜಾವಾಣಿ ವಾರ್ತೆ

ನವದೆಹಲಿ: ನಗರ ಮತ್ತು ಪಟ್ಟಣ ಪ್ರದೇಶಗಳ ಒಳಚರಂಡಿ ನೀರು ಹಾಗೂ ಆಯಾ ಜಲಾನಯನ ಪ್ರದೇಶಗಳಲ್ಲಿನ ಕೈಗಾರಿಕೆಗಳ ತ್ಯಾಜ್ಯ ಸೇರುವುದರಿಂದ ರಾಜ್ಯದ 17 ನದಿಗಳು ಕಲುಷಿತಗೊಂಡಿವೆ ಎಂದು ಕೇಂದ್ರದ ಜಲಶಕ್ತಿ ಸಚಿವಾಲಯ ಬಹಿರಂಗಪಡಿಸಿದೆ.

ಜೀವರಾಸಾಯನಿಕ ಆಮ್ಲಜನಕದ ಬೇಡಿಕೆಯ ಪ್ರಮಾಣದ ಮೇಲ್ವಿಚಾರಣೆಯ ಫಲಿತಾಂಶದ ಪ್ರಕಾರ, ದೇಶದ ಒಟ್ಟು 351 ನದಿಗಳ ಪೈಕಿ 323 ನದಿಗಳು ಮಲಿನಗೊಂಡಿವೆ ಎಂದು ಜಲಶಕ್ತಿ ಖಾತೆ ರಾಜ್ಯ ಸಚಿವ ರತನ್‌ಲಾಲ್ ಕಟಾರಿಯಾ ಅವರು ಲೋಕಸಭೆಗೆ ಸಲ್ಲಿಸಿರುವ ಲಿಖಿತ ಉತ್ತರದಲ್ಲಿ ವಿವರಿಸಿದ್ದಾರೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಉಸ್ತುವಾರಿ ಕೇಂದ್ರ ಜಾಲವು, ಆಯಾ ರಾಜ್ಯಗಳ ಮಾಲಿನ್ಯ ನಿಯಂತ್ರಣ ಮಂಡಳಿಗಳ ಸಹಯೋಗದೊಂದಿಗೆ ನಿಯಮಿತವಾಗಿ ನದಿಗಳು ಹಾಗೂ ಇತರ ಜಲಮೂಲಗಳ ಗುಣಮಟ್ಟದ ಮೇಲ್ವಿಚಾರಣೆ ನಡೆಸುತ್ತಿದೆ. ಕೃಷಿ ತ್ಯಾಜ್ಯ, ಬಯಲು ಬಹಿರ್ದೆಸೆ, ಪಟ್ಟಣ ಮತ್ತು ನಗರ ಪ್ರದೇಶಗಳ ಘನತ್ಯಾಜ್ಯ ಮುಂತಾದವು ನದಿಗಳ ಮಾಲಿನ್ಯದ ಮೂಲಗಳಾಗಿವೆ ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

ದೇಶದ ನಗರ ಪ್ರದೇಶಗಳಲ್ಲಿ ನಿತ್ಯವೂ ಅಂದಾಜು 61,948 ದಶಲಕ್ಷ ಲೀಟರ್ (ಎಂಎಲ್‌ಡಿ) ಒಳಚರಂಡಿ ನೀರು ಉತ್ಪತ್ತಿಯಾಗುತ್ತಿದ್ದು, ಆ ಪೈಕಿ ಕೇವಲ 23,277 ಎಂಎಲ್‌ಡಿ ನೀರನ್ನು ಸಂಸ್ಕರಿಸಿ ನದಿ, ಹಳ್ಳಗಳತ್ತ ಹರಿಸಲಾಗುತ್ತಿದೆ. ಕರ್ನಾಟಕದಲ್ಲಿ ನಾಲ್ಕು ಕೈಗಾರಿಕೆಗಳು ಅಧಿಕ ಮಾಲಿನ್ಯಕಾರಕವಾಗಿದ್ದು, ಎಲ್ಲವೂ ಪರಿಸರ ಇಲಾಖೆ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿಯ ಮಾನದಂಡ ಅನುಸರಿಸುತ್ತಿವೆ ಎಂದು ಅವರು ಹೇಳಿದ್ದಾರೆ.

ಸಕ್ಕರೆ ಕಾರ್ಖಾನೆಗಳು ನಿರಂತರ ಹೊರಸೂಸುವ ತ್ಯಾಜ್ಯದ ಪರಿಶೀಲನಾ ವ್ಯವಸ್ಥೆ ಅಳವಡಿಸುವಂತೆ ಮಾಲಿನ್ಯ ನಿಯಂತ್ರಣ ಮಂಡಳಿ ಸೂಚಿಸಿದೆ. ದೇಶದಾದ್ಯಂತ ಒಟ್ಟು 2,968 ಮಾಲಿನ್ಯ ಕಾರಕ ಕೈಗಾರಿಕೆಗಳ ಪೈಕಿ 2,318 ಕೈಗಾರಿಕೆಗಳು ಕಾರ್ಯ ನಿರ್ವಹಿಸುತ್ತಿವೆ. 650 ಕೈಗಾರಿಕೆಗಳು ಸ್ಥಗಿತಗೊಂಡಿವೆ. ಕಾರ್ಯ ನಿರ್ವಹಿಸುತ್ತಿರುವ ಕಾರ್ಖಾನೆಗಳ ಪೈಕಿ 2,190ರಲ್ಲಿ ನಿಗದಿತ ಪರಿಸರ ಮಾನದಂಡವನ್ನು ಅನುಸರಿಸಲಾಗುತ್ತಿದೆ ಎಂದು ತಿಳಿಸಲಾಗಿದೆ.

ಯಾವ್ಯಾವ ನದಿಗಳು?

ಅರ್ಕಾವತಿ, ಲಕ್ಷ್ಮಣತೀರ್ಥ, ಮಲಪ್ರಭಾ, ತುಂಗಭದ್ರಾ, ಕಾವೇರಿ, ಭದ್ರಾ, ತುಂಗಾ, ಕಬಿನಿ, ಕಾಗಿಣಾ, ಆಸಂಗಿ ನಾಲಾ, ಕಾಳಿ, ಕೃಷ್ಣಾ, ಶಿಂಶಾ, ಭೀಮಾ, ಕುಮಾರಧಾರಾ, ನೇತ್ರಾವತಿ ಮತ್ತು ಯಗಚಿ ನದಿಗಳು ಕಲುಷಿತಗೊಂಡಿದ್ದಾಗಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ವರದಿ ಹೇಳಿದ್ದಾಗಿ ಜಲಶಕ್ತಿ ಸಚಿವಾಲಯ ತಿಳಿಸಿದೆ.

ಅಂಗಾಂಗ ವೈಫಲ್ಯ: 6 ಮಕ್ಕಳಿಗೆ ಯಕೃತ್ ಕಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಕೃತ್ತಿನ ಸಮಸ್ಯೆ ಎದುರಿಸುತ್ತಿದ್ದ ಆರು ಮಕ್ಕಳಿಗೆ ಅವರ ಪಾಲಕರೇ ಅಂಗಾಂಗ ದಾನ ಮಾಡಿದ್ದು, ಆಸ್ಟರ್ ಆರ್‌ವಿ ಆಸ್ಪತ್ರೆಯ ವೈದ್ಯರು ಕಸಿ ಶಸ್ತ್ರಚಿಕಿತ್ಸೆ ಮಾಡಿದ್ದಾರೆ.

3 ವರ್ಷದಿಂದ 10 ವರ್ಷದೊಳಗಿನ ಮಕ್ಕಳು ಅಂಗಾಂಗ ಕಸಿಗೆ ಒಳಪಟ್ಟಿದ್ದಾರೆ. ಇವರಲ್ಲಿ ನಾಲ್ಕು ಮಂದಿ ಬಾಲಕಿಯರು ಹಾಗೂ ಇಬ್ಬರು ಬಾಲಕರು. ಆರು ಕುಟುಂಬಗಳ ಚಿಕಿತ್ಸಾ ವೆಚ್ಚವನ್ನು ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಹಾಗೂ ದಾನಿಗಳ ನೆರವಿನಿಂದ ಆಸ್ಪತ್ರೆ ಭರಿಸಿದೆ.

'ಕೋವಿಡ್ ಕಾರಣ ಅಂಗಾಂಗ ದಾನ ಪ್ರಕ್ರಿಯೆಗೆ ಹಿನ್ನಡೆಯಾಗಿದೆ. ಮಕ್ಕಳು ಗಂಭೀರ ಸ್ವರೂಪದ ಯಕೃತ್ ಸಮಸ್ಯೆಯನ್ನು ಎದುರಿಸುತ್ತಿದ್ದರು. ಕಸಿ ಶಸ್ತ್ರಚಿಕಿತ್ಸೆಯನ್ನು ವಿಳಂಬ ಮಾಡಿದ್ದಲ್ಲಿ ಅವರ ಜೀವಕ್ಕೆ ಅಪಾಯವಾಗುವ ಸಾಧ್ಯತೆಗಳಿದ್ದವು. ಹೀಗಾಗಿ, ಅವರ ಪಾಲಕರಿಂದಲೇ ಅಂಗಾಂಗ ಪಡೆದು ಕಸಿ ಮಾಡಲಾಯಿತು. ಈಗ ಎಲ್ಲ ಮಕ್ಕಳು ಚೇತರಿಸಿಕೊಂಡಿದ್ದಾರೆ' ಎಂದು ಆಸ್ಪತ್ರೆಯ ಕಸಿ ಶಸ್ತ್ರಚಿಕಿತ್ಸಕ ಡಾ. ರಾಜೀವ್ ಲೋಚನ್ ತಿಳಿಸಿದ್ದಾರೆ.

ಬಂದ್‌ಗೆ ಬೆಂಬಲ: ರೈತ ಹೋರಾಟಗಾರರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಕಿಸಾನ್ ಮೋರ್ಚಾ ಕರೆ ನೀಡಿದ್ದ ಬಂದ್‌ಗೆ ಬೆಂಬಲವಾಗಿ ಪ್ರತಿಭಟನೆ ನಡೆಸಲು ಮುಂದಾಗಿದ್ದ ರೈತ ಮತ್ತು ಕಾರ್ಮಿಕ ಸಂಘಟನೆಗಳ ಮುಖಂಡರನ್ನು ಪೊಲೀಸರು ಬಂಧಿಸಿದರು.

ಸಂಯುಕ್ತ ಹೋರಾಟ ಕರ್ನಾಟಕ ನೇತೃತ್ವದಲ್ಲಿ ನಗರದ ಪುರಭವನದ ಬಳಿ ಮಸೂದೆಗಳ ಶವಯಾತ್ರೆ ಮೂಲಕ ಹೋರಾಟ ನಡೆಸಲು ರೈತರು ಮುಂದಾದರು. ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್, ಜಿ.ಸಿ. ಬಯ್ಯಾರೆಡ್ಡಿ, ಎಸ್. ವರಲಕ್ಷ್ಮಿ, ಗೋಪಾಲ್, ಹನುಮೇಶ್, ಕುಮಾರ್ ಸಮತಲ, ಅಣ್ಣಪ್ಪ, ಕೆ.ಎಸ್. ವಿಮಲಾ, ಸುರೇಂದ್ರ ರಾವ್, ಸಚಿನ್ ಮಿಗಾ, ವೆಂಕಟೇಶ್ ಸೇರಿ ನೂರಾರು ಕಾರ್ಯಕರ್ತರು ಟೌನ್‌ಹಾಲ್ ಮುಂಭಾಗಕ್ಕೆ ಬಂದ ಕೂಡಲೇ ಪೊಲೀಸರು ವಶಕ್ಕೆ ಪಡೆದರು.



ಪುರಭವನದ ಬಳಿ ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ಅವರನ್ನು ಬಂಧಿಸಿದ ಪೊಲೀಸರು –ಪ್ರಜಾವಾಣಿ ಚಿತ್ರ

'ಶಾಂತಿಯುತ ಪ್ರತಿಭಟನೆಗೆ ಮುಂದಾಗಿದ್ದ ಹೋರಾಟಗಾರರನ್ನು ಬಂಧಿಸಲಾಗಿದೆ. ಪೊಲೀಸ್ ವ್ಯವಸ್ಥೆಯನ್ನು ಬಳಕೆ ಮಾಡಿಕೊಂಡು ರೈತರ ಪ್ರತಿಭಟನೆಯನ್ನು ಹತ್ತಿಕ್ಕುವ ಕೆಲಸವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಾಡುತ್ತಿದ್ದಾರೆ' ಎಂದು ಹೋರಾಟಗಾರರು ದೂರಿದರು.

'ಕೇಂದ್ರ ಸರ್ಕಾರಕ್ಕೆ ಶ್ರೀಸಾಮಾನ್ಯರ ಗೋಳು ತಿಳಿಯುತ್ತಿಲ್ಲ. ನಾನು ನಡೆದಿದ್ದೇ ಸರಿ ಎಂಬ ರೀತಿಯಲ್ಲಿ ದುರ್ವರ್ತನೆ ತೋರಿಸುತ್ತಿದೆ. ತನ್ನ ಆಡಳಿತ ವೈಫಲ್ಯ ಮುಚ್ಚಿಕೊಳ್ಳಲು ಅನೇಕ ರೀತಿಯ ತಂತ್ರಗಳನ್ನು ಹೆಣೆಯುತ್ತಿದೆ. ಮುಂದಿನ ದಿನಗಳಲ್ಲಿ ಜನ ಬುದ್ಧಿ ಕಲಿಸಲಿದ್ದಾರೆ' ಎಂದರು.

'ಶಾಂತಿಯುತ ಪ್ರತಿಭಟನೆಗೂ ಅವಕಾಶ ನೀಡದೆ ಹೋರಾಟಗಾರರನ್ನು ಬಂಧಿಸಿರುವುದು ಖಂಡನೀಯ. ಎಲ್ಲರನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕು. ರೈತ ಮುಖಂಡರನ್ನು ಮಾತುಕತೆಗೆ ಕರೆದು ಹೊಸ ಕೃಷಿ ಕಾಯ್ದೆಗಳನ್ನು ಕೈಬಿಡಬೇಕು. ಇಲ್ಲದಿದ್ದರೆ ಹೋರಾಟ ಇನ್ನಷ್ಟು ತೀವ್ರಗೊಳ್ಳಲಿದೆ' ಎಂದು ಎಚ್ಚರಿಸಿದರು.

ಈರುಳ್ಳಿ ಮಾರಾಟ ಮಾಡಿದ ವಾಟಾಳ್

ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿ ಖಂಡಿಸಿ ಕೆಂಪೇಗೌಡ ಬಸ್ ನಿಲ್ದಾಣದ ಬಳಿ ಕನ್ನಡ ಚಳವಳಿ ವಾಟಾಳ್ ಪಕ್ಷದ ನಾಯಕ ವಾಟಾಳ್ ನಾಗರಾಜ್ ಅವರು ಈರುಳ್ಳಿ ಮತ್ತು ಬೆಳ್ಳುಳ್ಳಿ ಮಾರಾಟ ಮಾಡುವ ಮೂಲಕ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ವಾಟಾಳ್ ನಾಗರಾಜ್ ಮಾತನಾಡಿ, 'ಅಗತ್ಯ ವಸ್ತುಗಳ ಬೆಲೆಗಳು ದಿನೇ ದಿನೇ ಗಗನಕ್ಕೇ ಏರುತ್ತಿವೆ. ಬಡವರು ಅಡುಗೆ ಅನಿಲ ಖರೀದಿ ಮಾಡಲಾಗದ ಸ್ಥಿತಿ ಎದುರಾಗಿದೆ. ಬೆಲೆ ಏರಿಕೆಗೆ ಕಡಿವಾಣ ಹಾಕಬೇಕಾದ ಸರ್ಕಾರ ಕೈಚೆಲ್ಲಿ ಕುಳಿತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಸೂರ್ಯಕಾಂತಿ ಎಣ್ಣೆ, ಬೇಳೆ ಸೇರಿ ಎಲ್ಲ ವಸ್ತುಗಳು ದುಬಾರಿಯಾಗಿವೆ. ಶ್ರೀಸಾಮಾನ್ಯರು ಜೀವನ ನಡೆಸುವುದೇ ಕಷ್ಟವಾಗಿದೆ' ಎಂದು ಅವರು ಹೇಳಿದರು.

ಪೊಲೀಸರ ಮೇಲೆ ಗುಂಡಿನ ದಾಳಿ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ವಿಟ್ಲ (ದಕ್ಷಿಣ ಕನ್ನಡ ಜಿಲ್ಲೆ): ಇಲ್ಲಿನ ಸಾಲೆತ್ತೂರು ಕೊಡಂಗೆ ಚೆಕ್‌ಪೋಸ್ಟ್‌ನಲ್ಲಿ ಶುಕ್ರವಾರ ನಸುಕಿನಲ್ಲಿ ಕೇರಳದ 'ಡಿ ಗ್ಯಾಂಗ್' ತಂಡವು ಪೊಲೀಸರ ಮೇಲೆ ಗುಂಡಿನ ದಾಳಿ ನಡೆಸಿದ್ದು, ಪೊಲೀಸರು ಅಪಾಯದಿಂದ ಪಾರಾಗಿದ್ದಾರೆ. ಘಟನೆ ಸಂಬಂಧ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ.

ನೆರೆಯ ಕೇರಳದ ಉಪ್ಪಳದಲ್ಲಿ ಬಾರ್‌ನಲ್ಲಿ ಗಲಾಟೆ ಮಾಡಿ, ಪೊಲೀಸರ ಮೇಲೆ ದಾಳಿ ನಡೆಸಿ ಪರಾರಿಯಾಗುತ್ತಿದ್ದ 'ಡಿ ಗ್ಯಾಂಗ್' ತಂಡವನ್ನು ವಿಟ್ಲ ಠಾಣೆಯ ಪೊಲೀಸರು ಚೆಕ್‌ಪೋಸ್ಟ್‌ನಲ್ಲಿ ತಡೆಯಲು ಮುಂದಾದಾಗ ಗುಂಡಿನ ದಾಳಿ ನಡೆಸಿದೆ.

ಗ್ಯಾಂಗ್‌ನ ಸದಸ್ಯರಾದ ಕಾಸರಗೋಡಿನ ಮಂಗಲ್ಪಾಡಿಯ ಅಬ್ದುಲ್ ಲತೀಫ್ (26), ಮೀಯಪದವಿನ ಶಾಕೀರ್ (23) ಮತ್ತು ಅಡ್ಕಂತಗುರಿ ನಿವಾಸಿ ಅಶ್ಫಾಕ್ (25) ಬಂಧಿತರು.

ಕೋವಿಡ್ ಆಸ್ಪತ್ರೆಯಲ್ಲಿ ಬೆಂಕಿ, 10 ಸಾವು

ಪ್ರಜಾವಾಣಿ ವಾರ್ತೆ

ಮುಂಬೈ: ಕೊರೊನಾ ಸೋಂಕು ಪೀಡಿತರಿಗೆ ಚಿಕಿತ್ಸೆ ನೀಡುತ್ತಿದ್ದ ಇಲ್ಲಿನ ಸನ್‌ರೈಸ್ ಆಸ್ಪತ್ರೆಯಲ್ಲಿ ಗುರುವಾರ ತಡರಾತ್ರಿ ಬೆಂಕಿ ಅವಘಡ ಸಂಭವಿಸಿದ್ದು, 10 ಮಂದಿ ಮೃತಪಟ್ಟಿದ್ದಾರೆ. ಐವರು ಗಾಯಗೊಂಡಿದ್ದಾರೆ.

ಆಸ್ಪತ್ರೆಯು ಇಲ್ಲಿನ ಭಂಡಪ್ ಪ್ರದೇಶದ ನಾಲ್ಕು ಮಹಡಿಗಳ ಡ್ರೀಮ್ಸ್ ಮಾಲ್ ಸಂಕೀರ್ಣದ ಕೊನೆಯಲ್ಲಿ ಇದ್ದ ಆಸ್ಪತ್ರೆಯಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಅವಘಡ ಸಂಭವಿಸಿದಾಗ 78 ಮಂದಿ ರೋಗಿಗಳಿದ್ದರು. ಇವರಲ್ಲಿ ಬಹುತೇಕ ಮಂದಿ ಕೋವಿಡ್ ಸೋಂಕಿತರು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಅಗ್ನಿಶಾಮಕ ಸೇವೆ ಮತ್ತು ಬೃಹತ್ ಮುಂಬೈ ನಗರಪಾಲಿಕೆಯ ಸಿಬ್ಬಂದಿಯು ರೋಗಿಗಳು, ಆಸ್ಪತ್ರೆ ಸಿಬ್ಬಂದಿ ಮತ್ತು ಮಾಲ್‌ನ ಸಿಬ್ಬಂದಿ ಒಳಗೊಂಡಂತೆ 100ಕ್ಕೂ ಹೆಚ್ಚು ಮಂದಿಯನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮುಂಬೈನಲ್ಲಿ ಈಗಾಗಲೇ ಸೋಂಕು ಪ್ರಕರಣಗಳು ಹೆಚ್ಚುತ್ತಿದ್ದು, ಅದರ ಹಿಂದೆಯೇ ಈ ಬೆಳವಣಿಗೆ ನಡೆದಿದೆ. ಅವಘಡಕ್ಕೆ ಕಾರಣ ಸ್ಪಷ್ಟವಾಗಿಲ್ಲ.

ಮೃತರ ಕುಟುಂಬಗಳಿಗೆ ತಲಾ 5 ಲಕ್ಷ ಪರಿಹಾರವನ್ನು ಮಹಾರಾಷ್ಟ್ರ ಸರ್ಕಾರ ಪ್ರಕಟಿಸಿದೆ. ನಗರಪಾಲಿಕೆ ಅಧಿಕಾರಿಯೊಬ್ಬರ ಪ್ರಕಾರ, ಸುರಕ್ಷತಾ ಕ್ರಮಗಳನ್ನು ಒದಗಿಸುವಲ್ಲಿ ನಿಯಮ ಉಲ್ಲಂಘನೆಗೆ ಸಂಬಂಧಿಸಿ ಮಾಲ್‌ಗೆ ಕಳೆದ ವರ್ಷ ನೋಟಿಸ್ ಜಾರಿ ಮಾಡಲಾಗಿತ್ತು.

59,118 ಹೊಸ ಪ್ರಕರಣ (ನವದೆಹಲಿ ವರದಿ): ಶುಕ್ರವಾರ ಬೆಳಿಗ್ಗೆ 8ಕ್ಕೆ ಅಂತ್ಯಗೊಂಡಂತೆ 24 ಗಂಟೆಗಳಲ್ಲಿ ಹೊಸದಾಗಿ 59,118 ಪ್ರಕರಣಗಳು ವರದಿಯಾಗಿದ್ದು, 257 ಮಂದಿ ಮೃತಪಟ್ಟಿದ್ದಾರೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

4,24,349 ಒಟ್ಟು ಸೋಂಕಿತರು

4,06,449 ಗುಣಮುಖರಾದವರು

13,327 ಸಕ್ರಿಯ ಪ್ರಕರಣ

4,572 ಸಾವು

ಶುಕ್ರವಾರದ ಏರಿಕೆ

1,490 ದೃಢಪಟ್ಟ ಪ್ರಕರಣ

632 ಗುಣಮುಖ

03 ಸಾವು

ಜೋಗುಪಾಳ್ಯ: 9 ವಿದ್ಯಾರ್ಥಿಗಳಿಗೆ ಸೋಂಕು

ಬೆಂಗಳೂರು: ನಗರದ ಜೋಗುಪಾಳ್ಯದ ಬಿಬಿಎಂಪಿ ಶಾಲೆಯಲ್ಲಿ ಓದುತ್ತಿದ್ದ 9 ವಿದ್ಯಾರ್ಥಿಗಳಿಗೆ ಶುಕ್ರವಾರ ಕೋವಿಡ್ ದೃಢಪಟ್ಟಿದೆ. ಈ ಶಾಲೆಯನ್ನು ಕ್ಲಸ್ಟರ್ ಎಂದು ಘೋಷಿಸಲಾಗಿದ್ದು, ಐದು ದಿನಗಳವರೆಗೆ ಶಾಲೆಯನ್ನು ಮುಚ್ಚಲಾಗಿದೆ.

ಈ ಶಾಲೆಯಲ್ಲಿ ಒಟ್ಟು 51 ವಿದ್ಯಾರ್ಥಿಗಳು ಓದುತ್ತಿದ್ದಾರೆ. ಪಾಲಿಕೆಯ ಆರೋಗ್ಯಾಧಿಕಾರಿಗಳು ಮಾ.24ರಂದು ಎಲ್ಲ ವಿದ್ಯಾರ್ಥಿಗಳಿಗೆ ಕೋವಿಡ್ ಪರೀಕ್ಷೆ ಮಾಡಿದ್ದರು.

'9 ವಿದ್ಯಾರ್ಥಿಗಳಿಗೆ ಸೋಂಕು ದೃಢಪಟ್ಟಿದ್ದು, ಸೋಂಕಿನ ಸೌಮ್ಯ ಲಕ್ಷಣಗಳನ್ನು ಹೊಂದಿದ್ದಾರೆ. ವಿದ್ಯಾರ್ಥಿಗಳನ್ನು ಹೋಂ ಐಸೊಲೇಶನ್‌ನಲ್ಲಿ ಇರಿಸಲು ಅವರ ಮನೆಯಲ್ಲಿ ಪ್ರತ್ಯೇಕ ವ್ಯವಸ್ಥೆ ಇಲ್ಲ. ಹೀಗಾಗಿ, ಪೋಷಕರ ಮನವೊಲಿಸಿ ಎಚ್‌ಎಎಲ್‌ನಲ್ಲಿನ ಕೋವಿಡ್ ಆರೈಕೆ ಕೇಂದ್ರದಲ್ಲಿ ಮಕ್ಕಳನ್ನು ಇರಿಸಲಾಗಿದೆ' ಎಂದು ಬಿಬಿಎಂಪಿ ಪೂರ್ವ ವಲಯದ ಜಂಟಿ ಆಯುಕ್ತರಾದ ಕೆ.ಆರ್. ಪಲ್ಲವಿ ಹೇಳಿದ್ದಾರೆ.

'ಶಾಲೆಯ ಶಿಕ್ಷಕರು ಹಾಗೂ ಸಹಾಯಕ ಸಿಬ್ಬಂದಿ ಸೇರಿದಂತೆ 89 ಜನರ ಗಂಟಲು ದ್ರವ ಮಾದರಿ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಸೋಂಕು ದೃಢಪಟ್ಟವರ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರನ್ನೂ ಸಹ ಪರೀಕ್ಷೆಗೆ ಒಳಪಡಿಸಲಾಗಿದೆ' ಎಂದು ಅವರು ತಿಳಿಸಿದರು.

'ಪಾಲಿಕೆಯ ಎಲ್ಲ ಶಾಲಾ–ಕಾಲೇಜಿನ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಿಬ್ಬಂದಿ ಸೇರಿದಂತೆ ಎಲ್ಲರನ್ನೂ ಕಡ್ಡಾಯವಾಗಿ 15 ದಿನಗಳಿಗೊಮ್ಮೆ ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ' ಎಂದೂ ಹೇಳಿದರು.



ರಂಭಾಪುರಿ ಪೀಠಕ್ಕೆ ಆರ್.ಬಿ.ಬಸವರಾಜ್ ಅವರು 32 ಅಡಿ ಉದ್ದದ ಪಂಚಮುಖಿ ರುದ್ರಾಕ್ಷಿ ಮಾಲೆಯನ್ನು ಸಮರ್ಪಿಸಿದರು

32 ಅಡಿ ಉದ್ದದ ರುದ್ರಾಕ್ಷಿ ಮಾಲೆ

ಪ್ರಜಾವಾಣಿ ವಾರ್ತೆ

ಬಾಳೆಹೊನ್ನೂರು: ಬೆಂಗಳೂರಿನ ಆರ್.ವಿ. ಭದ್ರಯ್ಯ ಸ್ಟೋರ್ಸ್‌ನ ಆರ್.ಬಿ.ಬಸವರಾಜ್ ಮತ್ತು ಕುಟುಂಬದವರು 32 ಅಡಿ ಉದ್ದದ ಪಂಚಮುಖಿ ರುದ್ರಾಕ್ಷಿ ಮಾಲೆಯನ್ನು ಇಲ್ಲಿನ ರಂಭಾಪುರಿ ಪೀಠಕ್ಕೆ ಶುಕ್ರವಾರ ಅರ್ಪಿಸಿದರು.

ನಂತರ ಮಾತನಾಡಿದ ಆರ್.ಬಿ. ಬಸವರಾಜ್, 'ಈ ಮಾಲೆ ನಿರ್ಮಾಣಕ್ಕೆ ನೇಪಾಳದಿಂದ ರುದ್ರಾಕ್ಷಿ ತರಿಸಲಾಗಿದೆ. 30 ಜನರ ತಂಡವು 15 ದಿನಗಳ ಕಾಲ ಶ್ರಮಿಸಿದ್ದು, 50,108 ಪಂಚಮುಖಿ ರುದ್ರಾಕ್ಷಿಗಳಿಂದ ಮಾಲೆ ಮಾಡಲಾಗಿದೆ. ಸುಮಾರು 300 ಕೆಜಿ ತೂಕ ಇದೆ. ರುದ್ರಾಕ್ಷಿಯನ್ನು ಪೋಣಿಸಲು 50 ಕೆ.ಜಿ ಹಿತ್ತಾಳೆ ತಂತಿ ಬಳಸಲಾಗಿದ್ದು, ನಡುವೆ 5 ಸಾವಿರ ಕ್ರಿಸ್ಟಲ್ ಬಾಲ್ ಅಳವಡಿಸಲಾಗಿದೆ' ಎಂದು ಅವರು ಹೇಳಿದರು.

ಕಸಾಪ: ಮತದಾರರ ಅಂತಿಮ ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಚುನಾವಣೆಗೆ ಸಂಬಂಧಿಸಿಂತೆ ಅಂತಿಮ ಮತದಾರರ ಪಟ್ಟಿ ಪ್ರಕಟವಾಗಿದೆ.

ಪರಿಷತ್ತಿನ ರಾಜ್ಯಾಧ್ಯಕ್ಷ, ಜಿಲ್ಲಾ ಘಟಕಗಳ ಅಧ್ಯಕ್ಷ ಹಾಗೂ ಗಡಿನಾಡು ಘಟಕಗಳ ಅಧ್ಯಕ್ಷರ ಸ್ಥಾನಕ್ಕೆ ಮೇ 9ಕ್ಕೆ ಚುನಾವಣೆ ನಡೆಯಲಿದೆ. ಕೇಂದ್ರ ಚುನಾವಣಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅವರು ಫೆ.8ರಂದು ಕರಡು ಮತದಾರರ ಪಟ್ಟಿ ಪ್ರಕಟಿಸಿ, ಆಕ್ಷೇಪಣೆ ಸಲ್ಲಿಸಲು ಫೆ.22ರವರೆಗೆ ಕಾಲಾವಕಾಶ ನೀಡಿದ್ದರು. ಈಗ ಮತದಾರರ ಪಟ್ಟಿ ಅಂತಿಮಗೊಂಡಿದ್ದು, ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ಗುರುತಿಸಲಾದ ಚುನಾವಣಾ ಕಚೇರಿಗಳಲ್ಲಿ ಹಾಗೂ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಎಲ್ಲ ತಾಲ್ಲೂಕು ತಹಶೀಲ್ದಾರರ ಕೇಂದ್ರ ಕಚೇರಿಯಲ್ಲಿ ಪಟ್ಟಿ ಪ್ರಕಟಿಸಲಾಗಿದೆ.

ಮತದಾರರ ವಿಳಾಸ ಮತ್ತು ವಿವರಗಳನ್ನು ಸುಲಭವಾಗಿ ಪಡೆದುಕೊಳ್ಳಲು Election kasapa ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ಪರಿಷತ್ತಿನ ವೆಬ್ ಪೋರ್ಟಲ್ www.kasapa.inನಲ್ಲಿಯೂ ವಿವರಗಳು ದೊರೆಯಲಿವೆ. ಮತದಾರರ ಪಟ್ಟಿಯನ್ನು ಕನ್ನಡ ವರ್ಣಮಾಲೆಯ ಅಕ್ಷರಗಳಿಗೆ ಅನುಗುಣವಾಗಿ ಮುದ್ರಿಸಲಾಗಿದೆ ಎಂದು ಜಿ.ಎಂ. ಗಂಗಾಧರಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

28ರಿಂದ ಮಹಾರಾಷ್ಟ್ರದಲ್ಲಿ ರಾತ್ರಿ ಕರ್ಫ್ಯೂ ಜಾರಿ

ಮುಂಬೈ (ಪಿಟಿಐ): ದಿನದಿಂದ ದಿನಕ್ಕೆ ಕೋವಿಡ್ ಪ್ರಕರಣಗಳು ಏರಿಕೆಯಾಗುತ್ತಿರುವ ಬೆನ್ನಲ್ಲೇ, ಮಹಾರಾಷ್ಟ್ರ ಸರ್ಕಾರ ಭಾನುವಾರ (ಮಾರ್ಚ್ 28) ರಿಂದ ರಾಜ್ಯದಾದ್ಯಂತ ರಾತ್ರಿ ಕರ್ಫ್ಯೂ ಹೇರಲಾಗುವುದು ಎಂದು ಹೇಳಿದೆ.

ಮುಂದಿನ ಆದೇಶದವರೆಗೆ ರಾತ್ರಿ ಕರ್ಫ್ಯೂ ಜಾರಿಯಲ್ಲಿರುತ್ತದೆ ಎಂದು ಮುಖ್ಯಮಂತ್ರಿ ಕಚೇರಿ ತಿಳಿಸಿದೆ.



ಜನಸಾಗರ

ಕೋವಿಡ್ ಕಾರಣ ನಿರ್ಬಂಧ ಹೇರಿದ್ದರೂ, ಶುಕ್ರವಾರ ಭಾರಿ ಜನಸ್ತೋಮದ ನಡುವೆ ನೆರವೇರಿದ ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿ ರಥೋತ್ಸವ. ಈ ವೇಳೆ ಪಾರ್ವತಿ ಅಮ್ಮನವರ ತೇರಿನ ಮರದ ಚಕ್ರ ಪುಡಿಯಾಗಿ ಮುರಿಯಿತು –ಪ್ರಜಾವಾಣಿ ಚಿತ್ರ

ಹಸಿರು ಇಂಧನ ಬಳಕೆ: ಇಸ್ರೊ ಅಧ್ಯಕ್ಷ ಶಿವನ್

ನವದೆಹಲಿ (ಪಿಟಿಐ): ಭವಿಷ್ಯದ ಬಾಹ್ಯಾಕಾಶ ಕಾರ್ಯಕ್ರಮಗಳಲ್ಲಿ ಹಸಿರು ಇಂಧನವನ್ನೇ ಬಳಸುವ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗುತ್ತಿದೆ ಎಂದು ಇಸ್ರೊ ಮುಖ್ಯಸ್ಥ ಕೆ.ಶಿವನ್ ಶುಕ್ರವಾರ ಹೇಳಿದರು.

'ಇಂಡಿಯಾ ಎಕನಾಮಿಕ್ ಕಾಂಕ್ಲೇವ್'ನಲ್ಲಿ ಮಾತನಾಡಿದ ಅವರು, 'ಮಾನವ ಸಹಿತ ಬಾಹ್ಯಾಕಾಶ ಕಾರ್ಯಕ್ರಮ 'ಗಗನಯಾನ'ದಲ್ಲಿ ಹಸಿರು ಇಂಧನ ಬಳಕೆ ಮಾಡುವ ಸಾಧ್ಯತೆಯೂ ಇದೆ' ಎಂದರು.

'ಗಗನಯಾನ' ಕಾರ್ಯಕ್ರಮಕ್ಕಾಗಿ ಕೊಕೊ ದ್ವೀಪದಲ್ಲಿ ಭೂಕೇಂದ್ರವೊಂದನ್ನು ಸ್ಥಾಪಿಸುವ ಸಂಬಂಧ ಆಸ್ಟ್ರೇಲಿಯಾದೊಂದಿಗೆ ಮಾತುಕತೆ ನಡೆಯುತ್ತಿದೆ ಎಂದೂ ಅವರು ಹೇಳಿದರು.

ನಗರದಲ್ಲಿ ಇಂದು

ಅಲಯನ್ಸ್ ವಿಶ್ವವಿದ್ಯಾಲಯದ ಘಟಿಕೋತ್ಸವ (ಆನ್‌ಲೈನ್): ಅತಿಥಿಗಳು–ಉಪಮುಖ್ಯಮಂತ್ರಿ ಸಿ.ಎನ್. ಅಶ್ವತ್ಥನಾರಾಯಣ, ಟ್ರ್ಯೂ ಬೇಕನ್ ಸಂಸ್ಥೆಯ ಸಹ ಸಂಸ್ಥಾಪಕ ನಿಖಿಲ್ ಕಾಮತ್, ಹಿರಿಯ ವಕೀಲ ಡಿ.ಎನ್. ನಂಜುಂಡಸ್ವಾಮಿ. ಬೆಳಿಗ್ಗೆ 10.30

ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಸರ್.ಸಿ.ವಿ. ರಾಮನ್ ರಾಜ್ಯಮಟ್ಟದ ವಿಜ್ಞಾನ ರಸಪ್ರಶ್ನೆ ಸ್ಪರ್ಧೆ: ಉದ್ಘಾಟನೆ–ಹಿರಿಯ ವಿಜ್ಞಾನಿ ಎಂ.ಆರ್.ಎನ್. ಮೂರ್ತಿ, ಅಧ್ಯಕ್ಷತೆ:ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಅಧ್ಯಕ್ಷ ಗಿರೀಶ ಕಡ್ಲೇವಾಡಿ, ಸ್ಥಳ:ಕರ್ನಾಟಕ ಸ್ಟೇಟ್ ಕೌನ್ಸಿಲ್ ಫಾರ್ ಚೈಲ್ಡ್ ವೆಲ್‌ಫೇರ್. ಬೆಳಿಗ್ಗೆ 10.30

ವಿಶ್ವ ರಂಗಭೂಮಿ ದಿನ, ಮಾಸ್ತಿ ಪ್ರಶಸ್ತಿ ಪ್ರದಾನ ಹಾಗೂ 'ಯಶೋಧರಾ' ನಾಟಕ ಪ್ರದರ್ಶನ: ರಚನೆ–ಶ್ರೀನಿವಾಸ, ನಿರ್ದೇಶನ–ಶ್ರೀಪಾದ್ ಭಟ್, ಪ್ರಸ್ತುತಿ–ನಯನ ಪ್ರತಿಷ್ಠಾನ, ಭಾಗವಹಿಸುವವರು–ಶಿಕ್ಷಣ ತಜ್ಞ ಗುರುರಾಜ ಕರಜಗಿ, ಜಾನಪದ ವಿದ್ವಾಂಸ ಬಿ.ಎ.ವಿವೇಕ ರೈ, ಮಾಸ್ತಿ ಟ್ರಸ್ಟ್ ಅಧ್ಯಕ್ಷ ಮಾವಿನಕೆರೆ ರಂಗನಾಥ್, ಆಯೋಜನೆ–ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್, ಸ್ಥಳ–ಭಾರತೀಯ ವಿದ್ಯಾಭವನ, ಬೆಳಿಗ್ಗೆ 10

ರಾಜ್ಯ ಬಜೆಟ್ ಜನಪರವೋ? ಜಾತಿಪರವೋ? ಸಂವಾದ: ಉದ್ಘಾಟನೆ–ಸಮತಾ ಸೈನಿಕ ದಳದ ಅಧ್ಯಕ್ಷ ಎಂ.ವೆಂಕಟಸ್ವಾಮಿ, ಅಧ್ಯಕ್ಷತೆ–ಬಿಎಂಎಸ್ ಕಾಲೇಜು ಪ್ರಾಧ್ಯಾಪಕ ಭೀಮ್‌ಶಾ ಆರ್ಯ, ಭಾಗವಹಿಸುವವರು–ವೈ.ಮರಿಸ್ವಾಮಿ, ಎಂ.ರಾಜು, ಲೋಲಾಕ್ಷ, ಪಾವಗಡ ಶ್ರೀರಾಮ್, ಆಯೋಜನೆ–ದಲಿತ ಸಂಘಟನೆಗಳ ಒಕ್ಕೂಟ, ಸ್ಥಳ–ಶಾಸಕರ ಭವನ–2, ಬೆಳಿಗ್ಗೆ 11.30

'ಜಲಶಕ್ತಿ ಅಭಿಯಾನ' ಉದ್ಘಾಟನೆ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ, ಸ್ಥಳ–ಕೊಠಡಿ ಸಂ.122, ಮೊದಲನೆ ಮಹಡಿ, ವಿಕಾಸಸೌಧ, ಮಧ್ಯಾಹ್ನ 12.30

'ಡಿಜಿಟಲ್ ಜೆನೆಸಿಸ್–ಮಿಷನ್ ಟೆಕ್‌ವಿಸ್ತಾರಾ' ಹಾಗೂ ಮರುಬಳಕೆಯ ಕಾಗದ ಉತ್ಪನ್ನಗಳ ಅನಾವರಣ: ಅತಿಥಿಗಳು–ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಆಯುಕ್ತ ಪಿ.ಜಿ.ಆರ್.ಸಿಂಧ್ಯ, ಪಾಲಿಕೆ ಜಂಟಿ ಆಯುಕ್ತೆ ಕೆ.ಆರ್.ಪಲ್ಲವಿ, ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನಾಯ್ಡು, ಆಯೋಜನೆ–ವೈವರ್ನ್ ಎಜು ಸಲೂಷನ್ಸ್, ಸ್ಥಳ–ಹ್ಯಾಟ್ ಸೆಂಟ್ರಿಕ್ ಹೋಟೆಲ್, ಎಂ.ಜಿ. ರಸ್ತೆ, ಮಧ್ಯಾಹ್ನ 3

ಸಂದೀಪ್ ನಾರಾಯಣ್ ಅವರಿಂದ ಕರ್ನಾಟಕ ಸಂಗೀತ ಗಾಯನ (ಆನ್‌ಲೈನ್): ಸೊಸೈಟಿ ಫಾರ್ ದಿ ಪ್ರಮೋಷನ್ ಆಫ್ ಇಂಡಿಯನ್ ಕ್ಲಾಸಿಕಲ್ ಮ್ಯೂಸಿಕ್ ಆ್ಯಂಡ್ ಕಲ್ಚರ್ ಅಮಾಂಗ್ ಯೂತ್, ಸಂಜೆ 7



ಸಂದೀಪ್ ನಾರಾಯಣ್

ವಿಶ್ವ ರಂಗಭೂಮಿ ದಿನದ ಅಂಗವಾಗಿ 'ಚಿರಸ್ಥಾಯಿ ಶ್ರೀಗುರು ಪುಟ್ಟರಾಜ' ಭಕ್ತಿಪ್ರಧಾನ ನಾಟಕ ಪ್ರದರ್ಶನ: ಉದ್ಘಾಟನೆ–ರಂಗ ಸಂಘಟಕ ಎಸ್.ಎಲ್.ಎನ್.ಸ್ವಾಮಿ, ಸಂದೇಶ ವಾಚನ–ಕಲಾವಿದ ಆರ್.ವೆಂಕಟರಾಜ್, ಅಧ್ಯಕ್ಷತೆ–ನಿರ್ದೇಶಕ ಚಿಂದೋಡಿ ಬಂಗಾರೇಶ್, ಅತಿಥಿಗಳು–ಗಂಡಸಿ ಸದಾನಂದ ಸ್ವಾಮಿ, ಉಮೇಶ್ ಅರಸೀಕೆರೆ, ಶಿವಕುಮಾರ್, ರಂಗಗೌರವ–ಡಿಂಗ್ರಿ ನಾಗರಾಜ್, ಪ್ರೇಮಾ ಬದಾಮಿ, ಆಯೋಜನೆ–ಕರ್ನಾಟಕ ನಾಟಕ ಅಕಾಡೆಮಿ, ಸಹಯೋಗ–ರಂಗ ಬದುಕು ಟ್ರಸ್ಟ್, ಸ್ಥಳ–ಗುಬ್ಬಿ ವೀರಣ್ಣ ರಂಗ ಮಂದಿರ, ಗಾಂಧಿನಗರ, ಮಧ್ಯಾಹ್ನ 3.30

ಕಣಕಟ್ಟೆ ಕೃಷ್ಣಮೂರ್ತಿ ರಾವ್ ದತ್ತಿ ಕಾರ್ಯಕ್ರಮ: ನವ್ಯಾ ನಾಗರಾಜ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಆಯೋಜನೆ–ಬಿಎಂಶ್ರೀ ಪ್ರತಿಷ್ಠಾನ, ಸ್ಥಳ–ಎಂವಿಸೀ ಸಭಾಂಗಣ, ಬಿಎಂಶ್ರೀ ಕಲಾಭವನ, ಎನ್.ಆರ್.ಕಾಲೊನಿ, ಸಂಜೆ 4.30

ವಿಶ್ವ ರಂಗಭೂಮಿ ದಿನದ ಅಂಗವಾಗಿ ರಂಗಗೀತೆ, ಜಾನಪದ ಗೀತೆ, ಹಾಸ್ಯ ನಾಟಕ: ಅತಿಥಿಗಳು–ಶಾಸಕ ರವಿ ಸುಬ್ರಹ್ಮಣ್ಯ, ಶ್ಯಾಮಲಾ ಕುಮಾರ್, ಮನೋರಂಜನ್ ಪ್ರಭಾಕರ್, ಸಿ.ವಿ.ಶಿವಶಂಕರ್, ಶಂಕರನಾರಾಯಣ ಉಪಾಧ್ಯ, ಎಂ.ಎಸ್.ಗುಣಶೀಲನ್, ಸನ್ಮಾನಿತರು–ಸಿ.ಎಂ. ತಿಮ್ಮಯ್ಯ, ನಾಗೇಂದ್ರ ಪ್ರಸಾದ್, ಶಾಂತಾ, ಆಯೋಜನೆ–ಕರ್ನಾಟಕ ಜಾನಪದ ಅಕಾಡೆಮಿ ಹಾಗೂ ಉದ್ಭವ ಕಲಾವಿದರು, ಸ್ಥಳ–ದೊಡ್ಡರಂಗೇಗೌಡರ ಬಯಲು ರಂಗಮಂದಿರ, ಚನ್ನಮ್ಮನಕೆರೆ ಅಚ್ಚುಕಟ್ಟು, ಬನಶಂಕರಿ 3ನೇ ಹಂತ, ಸಂಜೆ 5

'ನಮಸ್ತುಭ್ಯಂ' ಯುವ ಸಂಗೀತೋತ್ಸವ: ರಾಹುಲ್ ವೆಲ್ಲಾಳ್ ಹಾಗೂ ನಂದಿನಿ ಗಾಯಕ್ವಾಡ್ ಅವರಿಂದ ಸಂಗೀತ ಕಾರ್ಯಕ್ರಮ, ಆಯೋಜನೆ–ಭಾರತೀಯ ಸಾಮಗಾನ ಸಭಾ, ಸ್ಥಳ–ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 5

ಡಿ.ವಿ.ಜಿ ಅವರ ಸಾಕ್ಷ್ಯಚಿತ್ರ ಪ್ರದರ್ಶನ ಹಾಗೂ ಎಸ್. ದಿವಾಕರ್ ಅವರಿಂದ ಡಿ.ವಿ.ಜಿ ಅವರ ಬದುಕು ಮತ್ತು ಸಾಧನೆ ಕುರಿತು ಮಾತುಕತೆ: ಆಯೋಜನೆ–ಸಾಹಿತ್ಯ ಸಂಜೆ, ಸ್ಥಳ–ಸುಚಿತ್ರ ಸಭಾಂಗಣ, ಬಿ.ವಿ.ಕಾರಂತ ರಸ್ತೆ, ಬನಶಂಕರಿ ಎರಡನೇ ಹಂತ, ಸಂಜೆ 5.30

ಪಿ.ಲಂಕೇಶ್ ಅವರ 'ತೆರೆಗಳು' ನಾಟಕದ ಪೂರ್ವಾಭ್ಯಾಸದ ಓದು: ಆಯೋಜನೆ–ಅಂತರಂಗ ಸಂಸ್ಥೆ, ಸ್ಥಳ–ರಂಗಶಂಕರ, ಸಂಜೆ 5.30

ಗಾಳಿ ಸತ್ಯನಾರಾಯಣ ಭಟ್ ಅವರಿಂದ ಮ್ಯಾಜಿಕ್ ಶೋ ಹಾಗೂ 'ಪಂಚವಟಿ' ಯಕ್ಷಗಾನ ಪ್ರದರ್ಶನ: ಅತಿಥಿಗಳು–ಚಂದ್ರಶೇಖರ್ ಹೆಬ್ಬಾರ್, ಆನಗಳ್ಳಿ ಕರುಣಾಕರ ಹೆಗ್ಡೆ, ಆರ್.ಚಂದ್ರಶೇಖರ್, ಕೆ.ಎಂ.ಶೇಖರ್, ರಾಘವೇಂದ್ರ ಹತ್ವಾರ್, ಆಯೋಜನೆ–ಸಿರಿಕಲಾ ಮೇಳ, ಸಹಕಾರ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ಉದಯಭಾನು ಕಲಾಸಂಘ, ಗವಿಪುರ, ಸಂಜೆ 6

ವಿಶ್ವ ರಂಗಭೂಮಿ ದಿನ ಹಾಗೂ 'ಮಾರೀಕಾಡು' ನಾಟಕ ಪ್ರದರ್ಶನ: ಅತಿಥಿಗಳು–ಕವಿ ಸಿದ್ಧಲಿಂಗಯ್ಯ, ಕರ್ನಾಟಕ ಸಚಿವಾಲಯ ಕ್ಲಬ್‌ನ ಗೌರವ ಕಾರ್ಯದರ್ಶಿ ಯು.ಡಿ. ನರಸಿಂಹಯ್ಯ, ವಿಶ್ವ ಮಾನವ ರಾಷ್ಟ್ರಕವಿ ಕುವೆಂಪು ಕಲಾನಿಕೇತನ ಅಧ್ಯಕ್ಷ ಕುವೆಂಪು ಪ್ರಕಾಶ್, ಎಸ್. ಎನ್.ಕೃಷ್ಣಕುಮಾರ್, ರಂಗಗೌರವ–ಕೆ.ಎಸ್.ಡಿ.ಎಲ್. ಚಂದ್ರು, ಮಾಲತೇಶ ಬಡಿಗೇರ, ಆಯೋಜನೆ–ಕುವೆಂಪು ಕಲಾ ಕೇತನ, ಕರ್ನಾಟಕ ಸರ್ಕಾರ ಸಚಿವಾಲಯ ಕ್ಲಬ್, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 6.30



ಕವಿ ಸಿದ್ಧಲಿಂಗಯ್ಯ

'ಈ ಪ್ರೇಮಲೋಕದ ಗೀತೆಯೂ' ನಾಟಕ ಪ್ರದರ್ಶನ: ಪ್ರಸ್ತುತಿ–ಸೈಡ್‌ವಿಂಗ್ ತಂಡ, ನಿರ್ಮಾಣ–ಶೈಲೇಶ್ ಕುಮಾರ್, ರಚನೆ, ನಿರ್ದೇಶನ–ಭರತ್ ಸ.ಜಗನ್ನಾಥ, ಸ್ಥಳ–ಸೇವಾಸದನ, ಮಲ್ಲೇಶ್ವರ, ಸಂಜೆ 7

ಟಿಕೆಟ್ ಹಂಚಿಕೆ: ತೇಜಸ್ವಿನಿ ಅನಂತಕುಮಾರ್– ಮಂಗಲಾ ಅಂಗಡಿಗೆ ವಿಭಿನ್ನ ನಿಲುವು

ಅನುಕಂಪದಲ್ಲೂ ತಾರತಮ್ಯವೇ?

● ಎಸ್. ರವಿಪ್ರಕಾಶ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಬೆಳಗಾವಿ ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಮಾಜಿ ಕೇಂದ್ರ ಸಚಿವ ದಿವಂಗತ ಸುರೇಶ ಅಂಗಡಿ ಅವರ ಪತ್ನಿ ಮಂಗಲಾ ಅಂಗಡಿಯವರಿಗೆ ಟಿಕೆಟ್ ನೀಡಿದ ವಿಚಾರ ರಾಜ್ಯ ಬಿಜೆಪಿಯಲ್ಲಿ ಚರ್ಚೆಗೆ ಕಾರಣವಾಗಿದೆ.

ಕೋವಿಡ್‌ನಿಂದ ಸುರೇಶ ಅಂಗಡಿ ಮೃತಪಟ್ಟ ಕಾರಣ ಉಪಚುನಾವಣೆ ಎದುರಾಗಿದೆ. ಈ ಕ್ಷೇತ್ರವನ್ನು ಗೆಲ್ಲುವುದು ಬಿಜೆಪಿಗೆ ಪ್ರತಿಷ್ಠೆಯ ವಿಷಯ. ಆದರೆ, ಹಿಂದೆ ದಿವಂಗತ ಎಚ್.ಎನ್. ಅನಂತ್ ಕುಮಾರ್ ಪತ್ನಿಗೆ ಟಿಕೆಟ್ ತಪ್ಪಿಸಿದ್ದು ಎಷ್ಟು ಸರಿ ಎಂಬ 'ಯಕ್ಷ ಪ್ರಶ್ನೆ' ಚರ್ಚೆಯ ಮುನ್ನೆಲೆಗೆ ಬಂದಿದೆ.

ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ತೇಜಸ್ವಿನಿ ಅನಂತಕುಮಾರ್ ಅವರಿಗೆ ಟಿಕೆಟ್ ನೀಡಬೇಕು ಎಂದು ಬಿಜೆಪಿ ಮತ್ತು ಸಂಘ ಪರಿವಾರದ ಮುಖಂಡರು ಒಮ್ಮತದ ನಿರ್ಣಯ ಮಾಡಿ ಹೆಸರನ್ನು ಕಳಿಸಿದ್ದರು. ಆದರೆ, 'ಕುಟುಂಬ ರಾಜಕಾರಣ' ಪ್ರೋತ್ಸಾಹಿಸುವುದಿಲ್ಲ ಎಂಬ ಕಾರಣ ನೀಡಿ ವರಿಷ್ಠರು ಟಿಕೆಟ್ ನಿರಾಕರಿಸಿದ್ದರು. ಈಗ ವರಿಷ್ಠರಿಗೆ ಕುಟುಂಬ ರಾಜಕಾರಣ ನೆನಪಾಗಲಿಲ್ಲವೇ ಎಂಬ ಪ್ರಶ್ನೆ ಮುಂದಿಡುತ್ತಾರೆ ಬಿಜೆಪಿಯ ಹಲವು ಪ್ರಮುಖರು.



ತೇಜಸ್ವಿನಿ ಅನಂತಕುಮಾರ್



ಮಂಗಲಾ ಅಂಗಡಿ

ತೇಜಸ್ವಿನಿ ರಾಜಕೀಯ ಪ್ರವೇಶದ ಇಚ್ಛೆ ವ್ಯಕ್ತಪಡಿಸದೇ ಇದ್ದರೂ, ಪಕ್ಷ ಮತ್ತು ಸಂಘ ಪರಿವಾರದ ವ್ಯಕ್ತಿಗಳು ಅವರನ್ನು ಅಭ್ಯರ್ಥಿ ಎಂಬಂತೆ ಬಿಂಬಿಸಿದ್ದರು. ಪ್ರಚಾರದಲ್ಲೂ ತೊಡಗಿಸಿದ್ದರು. ಆದರೆ, ದೆಹಲಿಯಲ್ಲಿರುವ ಕರ್ನಾಟಕ ಮೂಲದ 'ವರಿಷ್ಠ'ರು ಬೇರೆಯದೇ ದಾಳ ಉರುಳಿಸಿದ್ದರು. ಅನಂತಕುಮಾರ್ ಅವರ 'ಕುಟುಂಬ ರಾಜಕಾರಣ'ಕ್ಕೆ ಇತಿಶ್ರೀ ಹಾಡುವುದರ ಜತೆಗೆ ಹೊಸ ಮುಖವನ್ನು ಪರಿಚಯಿಸುವ ಕಾರಣ ನೀಡಿ ತೇಜಸ್ವಿ ಸೂರ್ಯ ಅವರಿಗೆ ಟಿಕೆಟ್ ನೀಡಿದರು.

ತೇಜಸ್ವಿನಿ ಅವರು ತಮ್ಮ ಪತಿ ಪರವಾಗಿ ಹಲವು ಚುನಾವಣೆಗಳಲ್ಲಿ ಸ್ವತಃ ತಾವೇ ಮುಂಚೂಣಿಯಲ್ಲಿ ನಿಂತು ಕೆಲಸ ಮಾಡಿದ್ದರು. ಸಮಾಜಸೇವೆಯ ಕಾರಣಕ್ಕೆ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಪರಿಚಿತರೂ ಆಗಿದ್ದರು. ಮಂಗಲಾ ಅವರದ್ದು ಬೇರೆಯದೇ ವ್ಯಕ್ತಿತ್ವ. ರಾಜಕಾರಣದ ಬಗ್ಗೆ ತಲೆಕೆಡಿಸಿಕೊಳ್ಳದ ಅಪ್ಪಟ ಗೃಹಿಣಿ. ಆದರೆ, ಸುರೇಶ ಅವರ ಮಗಳು ಶ್ರದ್ಧಾ ಅವರನ್ನು (ಜಗದೀಶ ಶೆಟ್ಟರ್ ಅವರ ಸೊಸೆ) ಕಣಕ್ಕೆ ಇಳಿಸುವ ಪ್ರಯತ್ನ ನಡೆದಿತ್ತು. ಇತರ ಆಕಾಂಕ್ಷಿಗಳೂ ಇದ್ದರು.

ಕಾಂಗ್ರೆಸ್ ಪಕ್ಷ ಸತೀಶ ಜಾರಕಿಹೊಳಿಯವರನ್ನು ಕಣಕ್ಕೆ ಇಳಿಸಿದೆ. ಅವರನ್ನು ಮಣಿಸಬೇಕಿದ್ದರೆ ಅನುಕಂಪ ಮತ್ತು ಉತ್ತಮ ಅಭ್ಯರ್ಥಿಯ ಅವಶ್ಯಕತೆ ಇದೆ. ಸುರೇಶ ಅಂಗಡಿಯವರ ಜನಪ್ರಿಯತೆಯಿಂದ ಮಂಗಲಾ ಗೆಲುವು ಸುಲಭ. ಈ ಕಾರಣಕ್ಕೆ 'ಕುಟುಂಬ' ಕ್ಕೆ ಆದ್ಯತೆ ಬೇಡ ಎಂಬ ವಾದ ಬದಿಗಿಡಲಾಯಿತು ಎಂಬ ವಾದವೂ ಆ ಪಕ್ಷದ ಒಂದು ಗುಂಪಿನಲ್ಲಿದೆ.

ಸಂವಿಧಾನದ 103ನೇ ತಿದ್ದುಪಡಿ: ಟಿಪ್ಪಣಿ ಬಹಿರಂಗಪಡಿಸಲು ಸರ್ಕಾರಕ್ಕೆ ನಿರ್ದೇಶನ

ನವದೆಹಲಿ (ಪಿಟಿಐ): ಆರ್ಥಿಕವಾಗಿ ದುರ್ಬಲವಾದ ಮೇಲ್ವರ್ಗದವರಿಗೆ ಶೇಕಡಾ 10ರಷ್ಟು ಮೀಸಲಾತಿ ಅವಕಾಶ ಕಲ್ಪಿಸುವ ಸಂವಿಧಾನದ 103ನೇ ತಿದ್ದುಪಡಿಗೆ ಸಂಬಂಧಿಸಿದ ಸಚಿವ ಸಂಪುಟದ ಟಿಪ್ಪಣಿ ಮತ್ತು ಪತ್ರ ವ್ಯವಹಾರ ಮತ್ತು ಅನುಬಂಧವನ್ನು ಬಹಿರಂಗಪಡಿಸುವಂತೆ ಕೇಂದ್ರ ಮಾಹಿತಿ ಆಯೋಗ ಸರ್ಕಾರಕ್ಕೆ ನಿರ್ದೇಶಿಸಿದೆ.

ಸಚಿವ ಸಂಪುಟದ ಟಿಪ್ಪಣಿ ಸೇರಿದಂತೆ ಸಚಿವರು, ಕಾರ್ಯದರ್ಶಿಗಳು ಮತ್ತು ಇತರೆ ಅಧಿಕಾರಿಗಳು ನೀಡುವ ದಾಖಲೆಗಳನ್ನು ಬಹಿರಂಗ ಪಡಿಸಲು ವಿನಾಯಿತಿ ನೀಡುವ ಮಾಹಿತಿ ಹಕ್ಕು ಸೆಕ್ಷನ್ 8(1) ಉಲ್ಲೇಖಿಸಿ ಮಂಡಿಸಿದ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ವಾದವನ್ನು ಮಾಹಿತಿ ಆಯೋಗ ತಳ್ಳಿಹಾಕಿತು. ಇದು ಪೂರ್ಣವಾಗಿ ಒಪ್ಪುವಂಥದ್ದಲ್ಲ ಎಂದು ಹೇಳಿತು.

ಸಂಪುಟದ ನಿರ್ಧಾರಗಳು, ನಿರ್ಧಾರ ತೆಗೆದುಕೊಂಡಿದ್ದರ ಹಿಂದಿನ ಕಾರಣಗಳು ಮತ್ತು ಯಾವ ಆಧಾರದ ಮೇಲೆ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ ಎಂಬುದನ್ನು ಸಾರ್ವಜನಿಕವಾಗಿ ಪ್ರಕಟಿಸಲು ಈ ಸೆಕ್ಷನ್ ಅನುಮತಿ ನೀಡುತ್ತದೆ ಎಂದು ಆಯೋಗ ಹೇಳಿದೆ.

ಚುನಾವಣಾ ಬಾಂಡ್ ಮಾರಾಟ ತಡೆ ಅರ್ಜಿ ತಿರಸ್ಕೃತ

ನವದೆಹಲಿ (ಪಿಟಿಐ): ದೇಶದಲ್ಲಿ ನಡೆಯುತ್ತಿರುವ ವಿಧಾನಸಭಾ ಚುನಾವಣೆಗಳಿಗೆ ಮುನ್ನ ಮತ್ತಷ್ಟು ಚುನಾವಣಾ ಬಾಂಡ್‌ಗಳನ್ನು ಮಾರಾಟ ಮಾಡುವುದಕ್ಕೆ ತಡೆ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ತಿರಸ್ಕರಿಸಿದೆ.

'ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್' ಎನ್ನುವ ಸರ್ಕಾರೇತರ ಸಂಸ್ಥೆ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ ನೇತೃತ್ವದ ಪೀಠ ತಿರಸ್ಕರಿಸಿದೆ.

ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಗೆ ಮುನ್ನ ಚುನಾವಣಾ ಬಾಂಡ್‌ಗಳ ಮಾರಾಟಕ್ಕೆ ಅವಕಾಶ ನೀಡುವುದರಿಂದ ರಾಜಕೀಯ ಪಕ್ಷಗಳ ಅಕ್ರಮ ಹಣ ಹಂಚಿಕೆ ಪ್ರಕರಣಗಳು ಹೆಚ್ಚಾಗುವ ಸಾಧ್ಯತೆ ಇದೆ' ಎಂದು ಸರ್ಕಾರೇತರ ಸಂಸ್ಥೆ ಅರ್ಜಿಯಲ್ಲಿ ಉಲ್ಲೇಖಿಸಿತ್ತು. ಏಪ್ರಿಲ್ 1ರಿಂದ 10ರವರೆಗೆ ಚುನಾವಣಾ ಬಾಂಡ್‌ಗಳನ್ನು ಮಾರಾಟ ಮಾಡುವುದಾಗಿ ಕೇಂದ್ರ ಸರ್ಕಾರವು ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ ಮತ್ತು ವಿ.ರಾಮಸುಬ್ರಮಣಿಯನ್ ಅವರನ್ನೊಳಗೊಂಡ ಪೀಠಕ್ಕೆ ತಿಳಿಸಿತ್ತು.

ಬಂದ್: ಕೆಲವೆಡೆ ರೈಲು, ರಸ್ತೆ ಸಂಚಾರಕ್ಕೆ ಅಡ್ಡಿ

ಚಂಡೀಗಡ/ನವದೆಹಲಿ (ಪಿಟಿಐ): ಕೇಂದ್ರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತ ಸಂಘಟನೆಗಳು ಶುಕ್ರವಾರ ಕರೆ ನೀಡಿದ್ದ ಭಾರತ್ ಬಂದ್‌ಗೆ ದೇಶದ ಹಲವೆಡೆ ಬೆಂಬಲ ವ್ಯಕ್ತವಾಗಿದ್ದರೆ, ಕೆಲವೆಡೆ ನೀರಸ ಪ್ರತಿಕ್ರಿಯೆ ದೊರೆತಿದೆ.

ರಾಷ್ಟ್ರ ರಾಜಧಾನಿ ದೆಹಲಿ ಸೇರಿ ದೇಶದಾದ್ಯಂತ ಬೆಳಿಗ್ಗೆ 6ರಿಂದ ಸಂಜೆ 6ರವರೆಗೂ ಶಾಂತಿಯುತ ಬಂದ್ ನಡೆಯಿತು.

ಪಂಜಾಬ್, ಹರಿಯಾಣ ರಾಜ್ಯಗಳಲ್ಲಿ ಹಲವು ನಗರಗಳಲ್ಲಿ ರೈಲುಗಳ ಸಂಚಾರಕ್ಕೆ ಪ್ರತಿಭಟನಕಾರರು ಅಡ್ಡಿಪಡಿಸಿದ್ದಾರೆ. ರಾಷ್ಟ್ರೀಯ ಹೆದ್ದಾರಿ ಮತ್ತು ಪ್ರಮುಖ ರಸ್ತೆಗಳಲ್ಲಿ ಸಂಚಾರ ತಡೆಗಟ್ಟಿ, ಪ್ರತಿಭಟಿಸಿದ್ದಾರೆ. ಅಂಗಡಿಮುಂಗಟ್ಟುಗಳನ್ನು ಮುಚ್ಚಲಾಗಿತ್ತು.

ದೆಹಲಿಯ ಗಾಜಿಪುರ, ಸಿಂಘು ಗಡಿಗಳಲ್ಲಿ ಧರಣಿ ನಡೆಸುತ್ತಿರುವ ರೈತರು ನೃತ್ಯ ಮಾಡುವ ಮೂಲಕ ವಿನೂತನ ಪ್ರತಿಭಟನೆ ಕೈಗೊಂಡಿದ್ದಾರೆ.

ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿ ಎಡಪಕ್ಷಗಳ ಕಾರ್ಯಕರ್ತರು ರಸ್ತೆ ತಡೆ ನಡೆಸಿ, ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಪ್ರತಿಭಟಿಸುತ್ತಿದ್ದಾರೆ.



ಪಟ್ನಾದಲ್ಲಿ ಶುಕ್ರವಾರ ಭಾರತ್ ಬಂದ್ ಅಂಗವಾಗಿ ಪ್ರತಿಭಟನೆ ನಡೆಸಿದ ರಾಷ್ಟ್ರೀಯ ಜನತಾ ದಳದ ಕಾರ್ಯಕರ್ತರು ಪೊಲೀಸರನ್ನು ತಡೆದರು ಪಿಟಿಐ ಚಿತ್ರ

ಚುನಾವಣೆ ನಡೆಯಲಿರುವ ತಮಿಳುನಾಡು, ಅಸ್ಸಾಂ, ಪಶ್ಚಿಮ ಬಂಗಾಳ, ಕೇರಳ ಹಾಗೂ ಪುದುಚೇರಿಯಲ್ಲಿ ಬಂದ್ ಆಚರಿಸದಂತೆ ಸಂಯುಕ್ತ ಕಿಸಾನ್ ಮೋರ್ಚಾ ಜನರಲ್ಲಿ ವಿನಂತಿಸಿದ್ದರಿಂದ ಆ ರಾಜ್ಯಗಳಲ್ಲಿ ಬಂದ್ ವಾತಾವರಣ ಇರಲಿಲ್ಲ.

ನಾಲ್ಕು ಶತಾಬ್ದಿ ರೈಲುಗಳ ಸಂಚಾರ ರದ್ದು: ಭಾರತ್ ಬಂದ್ ಅಂಗವಾಗಿ ಪಂಜಾಬ್ ಮತ್ತು ಹರಿಯಾಣದ 44 ಸ್ಥಳಗಳಲ್ಲಿ ರೈಲು ಹಳಿಗಳ ಮೇಲೆ ಪ್ರತಿಭಟನಾಕಾರರು ಕುಳಿತಿದ್ದರಿಂದ ನಾಲ್ಕು ಶತಾಬ್ದಿ ರೈಲುಗಳ ಸಂಚಾರ ಶುಕ್ರವಾರ ರದ್ದುಪಡಿಸಲಾಗಿದೆ.

35 ಪ್ರಯಾಣಿಕ ರೈಲುಗಳ ಸಂಚಾರ ಸ್ಥಗಿತಗೊಂಡಿದೆ. 40 ಸರಕು ರೈಲುಗಳ ಸಂಚಾರದಲ್ಲೂ ಪರಿಣಾಮ ಬೀರಿದೆ ಎಂದು ಉತ್ತರ ರೈಲ್ವೆ ವಿಭಾಗದ ವಕ್ತಾರ ದೀಪಕ್ ಕುಮಾರ್ ತಿಳಿಸಿದ್ದಾರೆ.

ಪಂಜಾಬ್ ಮತ್ತು ಹರಿಯಾಣದ ಕೆಲವು ಸ್ಥಳಗಳನ್ನು ಹೊರತುಪಡಿಸಿ, ಭಾರತ್ ಬಂದ್ ದೇಶದಾದ್ಯಂತ ರೈಲು ಸೇವೆಗಳ ಮೇಲೆ ಯಾವುದೇ ಪರಿಣಾಮ ಬೀರಿಲ್ಲ ಎಂದು ರೈಲ್ವೆ ತಿಳಿಸಿದೆ.

ಸತ್ಯಾಗ್ರಹವು ದೌರ್ಜನ್ಯ, ಅನ್ಯಾಯ ಕೊನೆಗೊಳಿಸಲಿದೆ: ರೈತರ 'ಭಾರತ್ ಬಂದ್'ಗೆ ಬೆಂಬಲ ವ್ಯಕ್ತಪಡಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, 'ಸತ್ಯಾಗ್ರಹ'ವು ದೌರ್ಜನ್ಯ, ಅನ್ಯಾಯ ಮತ್ತು ದುರಹಂಕಾರ ಕೊನೆಗೊಳಿಸಲಿದೆ ಎನ್ನುವುದನ್ನು ದೇಶದ ಇತಿಹಾಸ ತೋರಿಸಿದೆ' ಎಂದು ಹೇಳಿದ್ದಾರೆ.

ಹಿಂದಿಯಲ್ಲಿ ಟ್ವೀಟ್ ಮಾಡಿರುವ ಅವರು, 'ಈ ಚಳವಳಿ ದೇಶದ ಹಿತಕ್ಕಾಗಿ ಮತ್ತು ಶಾಂತಿಯುತವಾಗಿ ನಡೆಯಬೇಕು' ಎಂದು ವಿನಂತಿಸಿದ್ದಾರೆ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ-6/ಟೆಂಡರ್.ಅಧಿಸೂಚನೆ/2020-21/9253 ದಿನಾಂಕ: 25.03.2021

ಅಲ್ಪಾವಧಿ ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ **8443** ಯೋಜನೆಯ ಕಾಮಗಾರಿಗಳಿಗೆ e-procurement ಮುಖಾಂತರ ಟೆಂಡರ ಕರೆಯಲಾಗಿದೆ. ಕಾಮಗಾರಿಯ ವರ್ಕ ಇಂಡೆಂಟ ನಂ : **134352,** 2) ಕಾಮಗಾರಿ ಅಂದಾಜು ಮೊತ್ತ : ರೂ. 66.95 ಲಕ್ಷಗಳು, 3) ಗುತ್ತಿಗೆದಾರರ ಅರ್ಹತೆ ವಿವರ : ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ಪ್ರಥಮ ದರ್ಜೆ ನೊಂದಾಯಿತ ಗುತ್ತಿಗೆದಾರರಾಗಿರಬೇಕು, 4) ಟೆಂಡರ ಅರ್ಜಿಯ ಬೆಲೆ : ಅರ್ಜಿ ಬೆಲೆ e-procurement ನಂತೆ, 5) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : 16-04-2021 (17.30 ಗಂಟೆ), 6) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : 17-04-2021 (16.00 ಗಂಟೆ), 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 19-04-2021 (16.30 ಗಂಟೆ), 8) ಆರ್ಥಿಕ ಬಿಡ್ ತೆರೆಯುವ ದಿನಾಂಕ : 20-04-2021 (16.30 ಗಂಟೆ), 9) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ ಕಚೇರಿ, 10) ಅಂತರ್ಜಾಲ ತಾಣದ ವಿಳಾಸ : www.e-proc.karnataka.gov.in

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/1157/ಎಂ.ಸಿ.&ಎ/2020-21

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಯಾದಗಿರಿ.
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಯಾದಗಿರಿ.
E-mail: dhoyadgiri2@gmail.com ದೂರವಾಣಿ ಸಂ: 08473-251312.

ಸಂ/ಜಿ.ಆ.ಕು.ಕ.ಅ/ಯಾದ/22/2020-21 ದಿನಾಂಕ:25.03.2021.

:: ಟೆಂಡರ ಪ್ರಕಟಣೆ ::

ವಿಷಯ :- ಈ ಕಾರ್ಯಾಲಯದ 2-ಗಣಕಯಂತ್ರ ಸಹಾಯಕ ಹುದ್ದೆಗಳನ್ನು ಮತ್ತು ಅಧೀನ ಸಂಸ್ಥೆಗಳಲ್ಲಿ ಖಾಲಿಯಿರುವ 8-ಸ್ಟಾಫ್ ನರ್ಸ್, 3-ವಾಹನ ಚಾಲಕ, 34-ಗ್ರೂಪ್ ಡಿ ಮತ್ತು 17-ನಾನ್‌ಕ್ಲಿನಿಕಲ್‌ಗ್ರೂಪ್ ಡಿ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡುವ ಸಲುವಾಗಿ ನೊಂದಾಯಿತ ಅರ್ಹ ಮಾನವ ಸಂಪನ್ಮೂಲ ಸಂಸ್ಥೆಗಳಿಂದ E-Procurement ಟೆಂಡರ್ ಆಹ್ವಾನಿಸುವ ಕುರಿತು.

ಈ ಕಾರ್ಯಾಲಯದ 2-ಗಣಕಯಂತ್ರ ಸಹಾಯಕ ಹುದ್ದೆಗಳನ್ನು ಮತ್ತು ಅಧೀನ ಸಂಸ್ಥೆಗಳಲ್ಲಿ ಖಾಲಿಯಿರುವ 8-ಸ್ಟಾಫ್ ನರ್ಸ್, 3-ವಾಹನ ಚಾಲಕ, 34-ಗ್ರೂಪ್ ಡಿ ಮತ್ತು 17-ನಾನ್ ಕ್ಲಿನಿಕಲ್ ಗ್ರೂಪ್ ಡಿ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಅರ್ಹ ಪೂರೈಕೆದಾರರಿಂದ ಇ-ಪ್ರಕ್ಯೂರ್‌ಮೆಂಟ್ (E-Procurement) ಮೂಲಕ ಟೆಂಡರ್‌ಆಹ್ವಾನಿಸಲಾಗಿದೆ.

E-Procurement ನಲ್ಲಿ ವಿವಿಧ ಹಂತದ ಘಟನಾವಳಿಗಳನ್ನು ಜರುಗಿಸಲು ಸಿದ್ದಪಡಿಸಿದ ಕಾಲಬದ್ಧ ವೇಳಾಪಟ್ಟಿ
1) ಟೆಂಡರ್ ಪ್ರಕಟಣೆ ಹೊರಡಿಸುವ ದಿನಾಂಕ : **25-03-2021,** 2) ಪತ್ರಿಕಾ ಪ್ರಕಟಣೆ ಹೊರಡಿಸುವ ದಿನಾಂಕ: **25.03.2021,** 3) ಟೆಂಡರ್ ನಲ್ಲಿ ಕಾಯ್ದಿರಿಸಿದ ಮೊತ್ತ ಮತ್ತು ಇ.ಎಂ.ಡಿ ಮೊತ್ತ : ಅಂದಾಜು ಮೊತ್ತ 120. ಲಕ್ಷ ರೂ.ಗಳು, 3 ಲಕ್ಷ ರೂ.ಗಳು ಇ.ಎಂ.ಡಿ. ಮೊತ್ತ, 4) ಆನ್‌ಲೈನ್ ಮೂಲಕ ಟೆಂಡರ್ ಬುಕ್‌ಲೆಟ್, ಆಸಕ್ತ ಟೆಂಡರ್‌ದಾರರಿಗೆ ಒದಗಿಸುವಂತೆ ಮಾಡುವದು : **25-03-2021,** 5) ಟೆಂಡರ್ ಬುಕ್‌ಲೆಟ್ ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ : **25-03-2021,** 6) ಟೆಂಡರ್ ಬುಕ್‌ಲೆಟ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ವೇಳೆ : **03-04-2021 ಸಾಯಂಕಾಲ 5:00 ಗಂಟೆ,** 7) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ ಮತ್ತು ವೇಳೆ: **04-04-2021,** 8) ಆರ್ಥಿಕ ಲಕೋಟೆ ತೆರೆಯುವ ದಿನಾಂಕ : **06-04-2021.**
1) ಆನ್‌ಲೈನ ಮೂಲಕ ಸಲ್ಲಿಸಿದ ಟೆಂಡರ್‌ಗಳನ್ನು ಮಾತ್ರ ಪರಿಗಣಿಸಲಾಗುವುದು, 2) ಕಾರ್ಯಾಲಯದಲ್ಲಿ ಭೌತಿಕವಾಗಿಟೆಂಡರ್ ಕವರ್‌ಗಳನ್ನು ನೀಡಿದವುಗಳನ್ನು ಪರಿಗಣಿಸಲಾಗುವುದಿಲ್ಲ, 3) ಕ್ರಮ ಸಂಖ್ಯೆ 6,7 ಮತ್ತು 8 ರಲ್ಲಿ ಇರುವ ದಿನಾಂಕಗಳನ್ನು ಟೆಂಡರ್ ಸಮಿತಿಯ/ಟೆಂಡರ್ ಸಮಿತಿಯ ಅಧ್ಯಕ್ಷರ ಆಡಳಿತಾತ್ಮಕ ಅನುಕೂಲತೆಗೆ ಅನುಗುಣವಾಗಿ (ಅನಿವಾರ್ಯ ಸಂಧರ್ಭದಲ್ಲಿ) ಬದಲಾವಣೆಗೊಳಿಸಬಹುದಾಗಿದೆ, 4) ಟೆಂಡರ್ ತೆರೆಯುವ ಸಂದರ್ಭದಲ್ಲಿ ಆಸಕ್ತ ಹಾಗೂ ಉಪಸ್ಥಿತರಿದ್ದ ಟೆಂಡರ್‌ದಾರರ ಸಮಕ್ಷಮದಲ್ಲಿ ತೆರೆಯಲಾಗುವುದು. (ಅನಿವಾರ್ಯ ಕಾರಣದಿಂದಾಗಿ ಭಾಗವಹಿಸಿದ ಟೆಂಡರದಾರರು ಅನುಪಸ್ಥಿತಿ ಇದ್ದರೂ ಕೂಡ ಟೆಂಡರ್ ತೆರೆಯುವ ಕಾರ್ಯ ಮುಂದುವರೆಯುತ್ತದೆ.), 5) ಟೆಂಡರ್‌ನಲ್ಲಿ ನಿಗದಿತ ಇ.ಎಂ.ಡಿ/ಟೆಂಡರ್ ಬುಕ್‌ಲೆಟ್‌ಗಾಗಿ ನಿಗದಿಪಡಿಸಿದ ಶುಲ್ಕಗಳಿಗಾಗಿ ಬ್ಯಾಂಕ್‌ಡಿಡಿ (ಹುಂಡಿ)ಯನ್ನು E-Procurement ಮೂಲಕವೇ ಸಲ್ಲಿಸತಕ್ಕದ್ದು.

ಸಹಿ/- ಜಿಲ್ಲಾ ಆರೋಗ್ಯ ಮತ್ತು
ಕುಟುಂಬ ಕಲ್ಯಾಣ ಅಧಿಕಾರಿಗಳು ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/348/ಎಂಸಿ&ಎ/2020-21

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ, ಬೆಂಗಳೂರು

ಸಂ.ಸಿಒ 20 ಎಂ.ಆರ್.ಇ.2021 ದಿನಾಂಕ: 20.03.2021

ಅಧಿಸೂಚನೆ

ದಿನಾಂಕ: 05.10.1994ರ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ. 138 ಎಂಆರ್‌ಇ 89(1)ರಲ್ಲಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 4ನ್ನು ಹಾಗೂ ಕಾಯ್ದೆ ಕಲಂ 96 ರ ಸಹವಾಚನದಂತೆ ಹಣ್ಣು ಮತ್ತು ತರಕಾರಿಗಳ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ಸ್ಥಾಪಿಸಿ ಹಣ್ಣು ಮತ್ತು ತರಕಾರಿಗಳ ಮಾರಾಟ ನಿಯಂತ್ರಣವನ್ನು ಹಣ್ಣು ಮತ್ತು ತರಕಾರಿಗಳ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವ್ಯಾಪ್ತಿಗೆ ಒಳಪಡಿಸಲಾಗಿದೆ ಹಾಗೂ ಹಣ್ಣು ಮತ್ತು ತರಕಾರಿಗಳ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಹೆಸರನ್ನು "ಹಣ್ಣು ಮತ್ತು ತರಕಾರಿಗಳ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು" ಎಂದು ನಿರ್ದಿಷ್ಟಪಡಿಸಲಾಗಿದೆ.

ಪ್ರಸ್ತುತ, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ ಅಧಿನಿಯಮ, 1966ರ ಕಲಂ 9(2)ರನ್ವಯ ಈಗಾಗಲೇ ನಿಗದಿಪಡಿಸಿರುವ "ಹಣ್ಣು ಮತ್ತು ತರಕಾರಿಗಳ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಬೆಂಗಳೂರು" ಎಂಬ ಹೆಸರನ್ನು "ಹಣ್ಣು, ಹೂವು ಮತ್ತು ತರಕಾರಿಗಳ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು' ಎಂದು ಬದಲಾಯಿಸಿ ಪುನರ್‌ನಾಮಕರಣ ಮಾಡಲು ಉದ್ದೇಶಿಸಲಾಗಿದೆ.

ಮೇಲಿನ ಪ್ರಸ್ತಾವನೆಗೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ ಅಧಿನಿಯಮ 1966ರ ಕಲಂ 3 ಮತ್ತು 4ರನ್ವಯ ಆಕ್ಷೇಪಣೆ / ಸಲಹೆಗಳನ್ನು ಆಹ್ವಾನಿಸಿದ್ದು, ಈ ಬಗ್ಗೆ ಯಾವುದೇ ಆಕ್ಷೇಪಣೆಗಳು / ಸಲಹೆಗಳು ಇದ್ದಲ್ಲಿ ಈ ಅಧಿಸೂಚನೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಅಥವಾ ಕನ್ನಡ ದಿನ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ ಯಾವುದರಲ್ಲಿ ತಡವೋ ಆ ದಿನಾಂಕದಿಂದ 30 ದಿವಸದೊಳಗಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560 001 ಇವರಿಗೆ ಸಲ್ಲಿಸತಕ್ಕದ್ದು.

ಸಂ.ಸಿಒ 20 ಎಂ.ಆರ್.ಇ.2021 ದಿನಾಂಕ: 26.03.2021

ಸೇರ್ಪಡೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಒ 20 ಎಂಆರ್‌ಇ 2021, ದಿನಾಂಕ; 20.03.2021ರ ಮೊದಲನೆಯ ಕಂಡಿಕೆಯ ನಂತರ ಈ ಕೆಳಕಂಡ ಕಂಡಿಕೆಯನ್ನು ಸೇರ್ಪಡೆಗೊಳಿಸಿ ಓದಿಕೊಳ್ಳತಕ್ಕದ್ದು.

"ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಕ್ಷೇತ್ರದಲ್ಲಿ ಈಗಾಗಲೇ ಅಧಿಸೂಚಿಸಲ್ಪಟ್ಟಿರುವ ಕೃಷಿ ಉತ್ಪನ್ನಗಳ ಪಟ್ಟಿಯಿಂದ ಹೂವು ಉತ್ಪನ್ನವನ್ನು ಅಪವರ್ಜಿಸಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 96 ರಡಿ ಇರುವ ಅಂಶಗಳನ್ನು ಪರಿಗಣಿಸಿ ಹೂವು ಮಾರಾಟ ನಿಯಂತ್ರಣವನ್ನು ಹಣ್ಣು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವ್ಯಾಪ್ತಿಗೆ ಒಳಪಡಿಸಲು ಉದ್ದೇಶಿಸಲಾಗಿದೆ".

ಸಹಿ/-
ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಎಸ್. ಮಂಜುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ, ಸಹಕಾರ ಇಲಾಖೆ.

ವಾಸಾಸಂಇ/ಉನಿಕ/ಬೆಂ.ನಗರ/ಶಿರಡಿ ಸಾಯಿ/3252/2020-21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರಸಭೆ ಕಾರ್ಯಾಲಯ, ಗಂಗಾವತಿ
ತಾಲೂಕ: ಗಂಗಾವತಿ - 583227,
ಜಿಲ್ಲೆ: ಕೊಪ್ಪಳ, ರಾಜ್ಯ: ಕರ್ನಾಟಕ. ದೂರವಾಣಿ ಸಂ: 08533-230243
ವೆಬ್ ಸೈಟ್: www.gangavathicity.mrc.gov.in ಇ-ಮೇಲ್: itstaff_ulb_gangavati@yahoo.com

ಸಂ:ನಸಗಂ/ತಾಂಶಾ/15ನೇ ಹ.ಕಾ.ಯೋ/2020-21 ದಿನಾಂಕ: 23.03.2021

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಪ್ರೊಕ್ಯೂರ್‌ಮೆಂಟ್ ಕೆ.ಡಬ್ಲ್ಯೂ-3 ನಿಬಂಧನೆಗಳಿಗೆ ಒಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ) ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ 2020-21ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಯೋಜನೆಯಡಿ ಮಂಜೂರಾದ ಕಾಮಗಾರಿಗೆ ಇ-ಪ್ರೊಕ್ಯೂರ್‌ಮೆಂಟ್ ದ್ವಿ-ಲಕೋಟೆ ಪದ್ಧತಿಯಡಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್: http://eproc.karnataka.gov.in ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು. ಟೆಂಡರ್ ಫಾರಂಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ. ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

1. ಖಾಲಿ ಟೆಂಡರ್ ಫಾರಂಗೆ ಇ-ಪ್ರೊಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ 'ಶೆಡ್ಯೂಲ್-ಬಿ' ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: **23/03/2021 ರಿಂದ 06/04/2021ರ ಸಂಜೆ 5.30 ರವರೆಗೆ.** 2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **08/04/2021 ಬೆಳಿಗ್ಗೆ 11.00 ಗಂಟೆಗೆ.** 3. ಪ್ರೀ ಬಿಡ್ ಮೀಟಿಂಗ್ ದಿನಾಂಕ: **27/03/2021 ಬೆಳಿಗ್ಗೆ 11.00 ಗಂಟೆಗೆ** 4. ಆರ್ಥಿಕ ಬಿಡ್ ತೆರೆಯುವ ದಿನಾಂಕ: **09/04/2021 ಬೆಳಿಗ್ಗೆ 11.00 ಗಂಟೆಗೆ** ನಂತರ ದಿನಗಳು. 5. ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) : ಇ-ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ.

ಒಂದುವೇಳೆ ಸೂಚಿಸಲಾಗಿರುವ ದಿನಾಂಕಗಳು ಸಾರ್ವಜನಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು.

ಕ್ರ. ಸಂ.	ಕಾಮಗಾರಿಗಳ ವಿವರ	ಟೆಂಡರ್‌ಗಿಟ್ಟ ಅಂದಾಜು ಮೊತ್ತ	ಕೆಲಸ ಮಾಡಲು ನಿಗದಿಪಡಿಸಿದ ಅವಧಿ
	15th Finance General Basic Grant/2020-21		
1	Construction and Maintenance of Vermi Compost Yard at SWM Site Malakanamaradi. Indent No.DMA/2020-21/BD/WORK_INDENT110778	95,00,000.00	06 ತಿಂಗಳು

Note: Any changes in Calendar of events will be published in e-procurement portal only.

ಷರತ್ತು: 1) ಟೆಂಡರ್ ದಸ್ತಾವೇಜಿನಲ್ಲಿರುವಂತೆ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. 2) ಗುತ್ತಿಗೆದಾರರು, ತಾವು ಬೇರೆ ಬೇರೆ ಇಲಾಖೆಗಳಲ್ಲಿ ಟೆಂಡರ್ ನಲ್ಲಿ ಭಾಗಿಯಾಗಿರುವ ಮತ್ತು ನಿರ್ವಹಿಸುತ್ತಿರುವ ಪ್ರಸಕ್ತ ಕಾಮಗಾರಿಗಳ ಮಾಹಿತಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು. 3) ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಗರಸಭೆಯು ಕಾಯ್ದಿರಿಸಿಕೊಂಡಿದೆ.

ಸಹಿ/- ಸ.ಕಾ.ನಿ. ಅಭಿಯಂತರರು, ನಗರಸಭೆ, ಗಂಗಾವತಿ | ಸಹಿ/- ಪೌರಾಯುಕ್ತರು, ನಗರಸಭೆ, ಗಂಗಾವತಿ | ಸಹಿ/- ಅಧ್ಯಕ್ಷರು, ನಗರಸಭೆ, ಗಂಗಾವತಿ

ವಾಸಾಸಂಇ/ಕೊಪ್ಪಳ/510/ ಅಲಕನಂದ/2020-21

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
49, 'ಪರಿಸರ ಭವನ', ಚರ್ಚ್ ರಸ್ತೆ, ಬೆಂಗಳೂರು-560 001
ದೂ: 080-2558 6520/ 2558 9112 ಫ್ಯಾಕ್ಸ್ : 080-2558 6321
ಇ-ಮೇಲ್: ho@kspcb.gov.in, ವೆಬ್‌ಸೈಟ್: www.kspcb.gov.in

ಕರಾಮಾನಿಮಂ/160/ಹಿಪಅ/ಗಣಿ/ಪಸಾಸ/2020-21/5882 ದಿನಾಂಕ: 26.03.2021

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಮೆ. ಪಿ.ವಿ.ಎಸ್.ಆರ್. ಸ್ಟೀಲ್ ಅಂಡ್ ಪವರ್ ಪ್ರೈ. ಲಿ. ಇವರು **ಸರ್ವೆ ನಂ. 228/1, 228/2 ಮತ್ತು 228/3, ಹಲಕುಂದಿ ಗ್ರಾಮ, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ** 7.34 ಹೆಕ್ಟೇರ್ ಪ್ರದೇಶದಲ್ಲಿ 2x100 ಟಿ.ಪಿ.ಡಿ. ಸಾಮರ್ಥ್ಯದ ಸ್ಪಾಂಜ್ ಐರನ್ (ಡಿ.ಆರ್.ಐ) ಸ್ಥಾವರ, ಪ್ರತಿ ಗಂಟೆಗೆ 2 ಮೆ.ವ್ಯಾ. ಸಾಮರ್ಥ್ಯದ ಸಹ ವಿದ್ಯುತ್ ಘಟಕ ಮತ್ತು 2x5 ಟಿ.ಪಿ.ಹೆಚ್. ಸಾಮರ್ಥ್ಯದ ಬಾಯ್ಲರ್ ಸ್ಥಾಪನೆಯ ಪ್ರಸ್ತಾವನೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ (ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಿದೆ. ಕೇಂದ್ರ ಅರಣ್ಯ ಪರಿಸರ ಮತ್ತು ಹವಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರ Terms of Reference ಪತ್ರ ಸಂಖ್ಯೆ: F. No. J-11011/42/2020-IA.II(I) ದಿನಾಂಕ 05.05.2020 ಮತ್ತು ತಿದ್ದುಪಡಿ ದಿನಾಂಕ: 15.12.2020 ಮತ್ತು ದಿನಾಂಕ:04.01.2021 ರಂದು ಉದ್ದಿಮೆಯವರು ನೀಡಿದ ನಿವೇದನೆಯ ಪತ್ರದ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆಯನ್ನು ಮಂಡಳಿವತಿಯಿಂದ ನಡೆಸಲಾಗುತ್ತಿದೆ.
ಯೋಜನೆಯ ವಿವರಗಳು ಕೆಳಕಂಡಂತಿವೆ.

1.	ಕಂಪನಿಯ ಹೆಸರು ಮತ್ತು ವಿಳಾಸ: **ಮೆ. ಪಿ.ವಿ.ಎಸ್.ಆರ್. ಸ್ಟೀಲ್ ಅಂಡ್ ಪವರ್ ಪ್ರೈ. ಲಿ.,** ಟಿ.ಎಸ್. ನಂ. 715/ಬಿ4/ಎ ಭಾಗ, ಪ್ಲಾಟ್ ನಂ. 80 ಭಾಗ, ಸಿ.ಎಂ.ಸಿ ವಾರ್ಡ್ ನಂ. 18, ಸಿ.ಟಿ.ಸಿ. ವಾರ್ಡ್ ನಂ. 16, ಬ್ಲಾಕ್ ನಂ. 20, ಬಾಲ ಭಾರತಿ ಶಾಲೆ ಹತ್ತಿರ, 3ನೇ ಕ್ರಾಸ್, ಗಾಂಧಿ ನಗರ, ಬಳ್ಳಾರಿ - 583 103
2.	ಉದ್ದೇಶಿತ ಯೋಜನೆಯ ಸ್ಥಳ: **ಸರ್ವೆ ನಂ. 228/1, 228/2 ಮತ್ತು 228/3, ಹಲಕುಂದಿ ಗ್ರಾಮ, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆ**
3.	ಯೋಜನೆಯ ಕಾರ್ಯ ಚಟುವಟಿಕೆ: 2x100 ಟಿ.ಪಿ.ಡಿ. ಸಾಮರ್ಥ್ಯದ ಸ್ಪಾಂಜ್ ಐರನ್ (ಡಿ.ಆರ್.ಐ) ಸ್ಥಾವರ, ಪ್ರತಿ ಗಂಟೆಗೆ 2 ಮೆ.ವ್ಯಾ. ಸಾಮರ್ಥ್ಯದ ಸಹ ವಿದ್ಯುತ್ ಘಟಕ ಮತ್ತು 2x5 ಟಿ.ಪಿ.ಹೆಚ್. ಸಾಮರ್ಥ್ಯದ ಬಾಯ್ಲರ್ ಸ್ಥಾಪನೆಯ ಪ್ರಸ್ತಾವನೆಯನ್ನು ಮಾಡಲು ಉದ್ದೇಶಿಸಿರುತ್ತಾರೆ.
4.	ಮಾಲಿನ್ಯ ನಿಯಂತ್ರಣ ಕ್ರಮಗಳು: ಉದ್ಯಮದ ಕಾರ್ಮಿಕರಿಂದ ಉತ್ಪತ್ತಿಯಾಗುವ ಗೃಹ ಬಳಕೆಯ ತ್ಯಾಜ್ಯ ನೀರನ್ನು 10 ಕೆ.ಎಲ್.ಡಿ. ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಸಂಸ್ಕರಿಸಲಾಗುವುದು. ಈ ಪ್ರಕ್ರಿಯೆಯಿಂದ ತ್ಯಾಜ್ಯನೀರಿನ ಉತ್ಪಾದನೆಯಾಗುವುದಿಲ್ಲ. ಉತ್ಪತ್ತಿಯಾದ ನೀರನ್ನು ಮರುಬಳಕೆ ಮಾಡಲಾಗುವುದು ಮತ್ತು ಪ್ರಕ್ರಿಯೆಯಲ್ಲಿ ಬಳಸಲಾಗುವುದು. ನೀರಿನ ನಿಶ್ಚಲತೆಯನ್ನು ತಪ್ಪಿಸಲು ನಿರ್ಮಾಣದ ಸ್ಥಳದ ಸುತ್ತಲೂ ತಾತ್ಕಾಲಿಕ ದಂಡೆ ಚರಂಡಿಗಳ ವ್ಯವಸ್ಥೆಯನ್ನು ಕೈಗೊಳ್ಳಲಾಗುವುದು. ಸದರಿ ನೀರನ್ನು ಕ್ಯಾಚ್ ಪಿಟ್‌ಗಳಲ್ಲಿ ಸಂಗ್ರಹಿಸಲಾಗುತ್ತದೆ ಮತ್ತು ಯೋಜನಾ ಸ್ಥಳದ ಸುತ್ತಲೂ ಧೂಳು ನಿಗ್ರಹಿಸಲು ಮರುಬಳಕೆ ಮಾಡಲಾಗುತ್ತದೆ. ಸಂಚಾರ ಧೂಳನ್ನು ನಿಗ್ರಹಿಸಲು ನೀರು ಚಿಮುಕಿಸುವ ವ್ಯವಸ್ಥೆಯನ್ನು ಮಾಡಲಾಗುವುದು. ಕಣಗಳ ಹೊರಸೂಸುವಿಕೆಯನ್ನು ನಿಯಂತ್ರಿಸಲು ಎಲ್ಲಾ ಆಂತರಿಕ ರಸ್ತೆಗಳನ್ನು ಡಾಂಬರೀಕರಣ ಮಾಡಲಾಗುತ್ತದೆ. ವಾಯುಮಾಲಿನ್ಯವನ್ನು ತಗ್ಗಿಸಲು ಉದ್ಯಮದ ಪರಧಿಯ ಉದ್ದಕ್ಕೂ ಹಸಿರುಪಟ್ಟಿಯನ್ನು ಅಭಿವೃದ್ಧಿಪಡಿಸಲಾಗುತ್ತದೆ.
5.	ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: **ಉದ್ದೇಶಿತ ಯೋಜನಾ ಸ್ಥಳ, ಸರ್ವೆ ನಂ. 228/1, 228/2 ಮತ್ತು 228/3, ಹಲಕುಂದಿ ಗ್ರಾಮ, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆ. ದಿನಾಂಕ: 27.04.2021(ಮಂಗಳವಾರ) ರಂದು ಪೂರ್ವಾಹ್ನ 11:00 ಗಂಟೆಗೆ**

ಯೋಜನೆಯ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ: (ಅ) ಜಿಲ್ಲಾಧಿಕಾರಿಗಳ ಕಛೇರಿ, ಬಳ್ಳಾರಿ ಜಿಲ್ಲೆ, ಬಳ್ಳಾರಿ (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಬಳ್ಳಾರಿ (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ (ಈ) ತಾಲ್ಲೂಕು ಪಂಚಾಯಿತಿ, ಬಳ್ಳಾರಿ (ಉ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಹಲಕುಂದಿ (ಊ) ಪ್ರಾದೇಶಿಕ ಅಧಿಕಾರಿಗಳ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ (ಋ) ಕೇಂದ್ರ ಪರಿಸರ ಅರಣ್ಯ ಮತ್ತು ಹವಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ-3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560 034 (ಎ) **ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560 001.

ಸೂಚನೆ : ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ಮೌಖಿಕ/ಲಿಖಿತ/ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: kspcb.karnataka.gov.in** ನಲ್ಲಿ ಪಡೆಯಬಹುದು.

ಸಹಿ/-
ಸದಸ್ಯ ಕಾರ್ಯದರ್ಶಿ

ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಇ-ಆಡಳಿತ ಕೇಂದ್ರ
CeG CENTRE FOR e-GOVERNANCE e-Enabling Government
ಟಿಟಿಎಂಸಿ - ಬಿಎಂಟಿಸಿ, ಬಿ ಬ್ಲಾಕ್, 2ನೇ ಮಹಡಿ, ಶಾಂತಿನಗರ,
ಬೆಂಗಳೂರು - 560 027. ದೂರವಾಣಿ : 080-22230060

ಸಂಖ್ಯೆ: ಸಿಇಜಿ-13011/5/2018-ಇಆಫೀಸ್-ಸಿಇಜಿ ದಿನಾಂಕ: 25-03-2021

ಟೆಂಡರ್ ಪ್ರಕಟಣೆ

"RFP for Supply of Digital Signature Certificates Class - III and Encryption Certificates with two years (2) Validity to e-Office Project"

ಮೇಲ್ಕಂಡ ಟೆಂಡರ್‌ಗೆ ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಈ ಟೆಂಡರ್‌ನ ವಿವರಗಳು ಏಕೀಕೃತ ಇ-ಸಂಗ್ರಹಣಾ ವೇದಿಕೆ **https://eproc.karnataka.gov.in**ಯಲ್ಲಿ ದೊರೆಯುವುದು. ಬಿಡ್ ಅನ್ನು ವಿದ್ಯುನ್ಮಾನವಿಧಾನದಲ್ಲಿ **https://eproc.karnataka.gov.in** ಇಲ್ಲಿಗೆ ಸಲ್ಲಿಸಬೇಕು. ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **26.04.2021ರ ಮಧ್ಯಾಹ್ನ 3.00 ಗಂಟೆಯವರೆಗೆ.**

ಸಹಿ/- ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಇ-ಆಡಳಿತ ಕೇಂದ್ರ

DIPR/DDU/YC/3246/2020-21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ
"ಜ್ಞಾನಸಾಗರ" ಆವರಣ, ವಿನಾಯಕನಗರ, ಕಂಟೋನ್ಮೆಂಟ್, ಬಳ್ಳಾರಿ-583105
ದೂರವಾಣಿ: 08392-242703 ಫ್ಯಾಕ್ಸ್: 08392-242806
ಕುಲಸಚಿವರು

ಸಂಖ್ಯೆ: ವಿಶ್ರೀಕೃವಿಬ/ಆಡಳಿತ/ಟೆಂಡರ್/ವಿವನಿ-ಮೆಸ್/2020-21/2191 ದಿನಾಂಕ: 25.03.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯವು **Providing Mess Facility At Boys Hostel at Vijayanagara Sri Krishnadevaraya Unversty Ballari : ರೂ.54,91,200** ರ ಕೆಲಸಗಳನ್ನು ನಿರ್ವಹಿಸಲು ನಿಯಮಾನುಸಾರ ಅರ್ಹ ಏಜೆನ್ಸಿಗಳಿಂದ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಟೆಂಡರನ್ನು ಸ್ವೀಕರಿಸಲಾಗುವುದು. ವಿವರಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **www.e-proc.karnataka.gov.in** ಮುಖಾಂತರ ದಿನಾಂಕ: **10.04.2021ರ** ಸಂಜೆ **5.00** ಗಂಟೆಯವರೆಗೆ ಪಡೆದು ಟೆಂಡರ್‌ಗಳನ್ನು ಸಲ್ಲಿಸಬಹುದು. ಸಂಪೂರ್ಣ ವಿವರಗಳನ್ನು ಈ ಕೆಳಕಂಡ ಅಧಿಕಾರಿಯ ಕಛೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/- ಕುಲಸಚಿವರು
ವಿ.ಶ್ರೀ.ಕೃ ವಿಶ್ವವಿದ್ಯಾಲಯ, ಬಳ್ಳಾರಿ.

ವಾಸಾಸಂಇ/ಬಳ್ಳಾರಿ/ಶಿರಡಿ ಸಾಯಿ/481/2020-21

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ಕಾರವಾರ ವಿಭಾಗ, ಕಾರವಾರ ಉತ್ತರ ಕನ್ನಡ ಜಿಲ್ಲೆ

ಸಂ: ಕಾ.ನಿ.ಇಂ./ಲೋ.ಇ.ವಿ.ಕಾ/ಪಿ.ಬಿ-4/ಟೆಂಡರ-32/2020-21/5705 ದಿನಾಂಕ: 24.03.2021

ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗೆ ವಿವರಿಸಿರುವ ಕಾಮಗಾರಿಗೆ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ-ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವುದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (**ಕೆಡಬ್ಲ್ಯೂ-4**) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವುದು.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿನಾಂಕ: 07.04.2021, 16.30 ಗಂಟೆವರೆಗೆ. (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿನಾಂಕ: 08.04.2021, 16.30 ಗಂಟೆವರೆಗೆ. (3) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.04..2021, 17.00 ಗಂಟೆಗೆ. (4) ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ: 12.04.2021, 17.00 ಗಂಟೆಗೆ.

ಕಾಮಗಾರಿಯ ಹೆಸರು: **ಲೆಕ್ಕಶೀರ್ಷಿಕೆ: 5054- MDR Bridge Improvements (Plan) ವರ್ಕ್ ಇಂಡೆಂಟ್** 133478. Construction of Bridge across Molkod River on Kelagin Idagunji Taribagilu Mulkod Road in Honnavar Tq, UK Dist Under Appendix E 2019-20 **ಗುತ್ತಿಗೆಗೆ ಇಟ್ಟ ಮೊತ್ತ ರೂ. 311,13,015.14** ಗುತ್ತಿಗೆಯ ಅವಧಿ : **9 ತಿಂಗಳು (ಮಳೆಗಾಲ ಸಹಿತ)**

ಕೆಡಬ್ಲೂ-4 ನಿಬಂಧನೆಗಳನ್ನು e-proc ನಲ್ಲಿ ಸೂಚಿಸಲಾದ ನಿಬಂಧನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ "www.eproc.karnataka.gov.in" ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 918025501216 & 918025501227) ಇವರನ್ನು ಸಂಪರ್ಕಿಸಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಕಾರವಾರ ವಿಭಾಗ, ಕಾರವಾರ

DIPR/ADK/MCA/895/20-21 dt.25.3.2021

ಜಿಲ್ಲಾ ತರಬೇತಿ ಕೇಂದ್ರ, ವಿಜಯಪುರ.
ಜಿಲ್ಲಾ ಆಸ್ಪತ್ರೆ ಆವರಣ, ತೊರವಿ ರಸ್ತೆ, ವಿಜಯಪುರ-586 102.
ದೂರವಾಣಿ ಸಂಖ್ಯೆ : 08352-271308, ಇ-ಮೇಲ್: dtcbijapur@gmail.com

ಸಂಖ್ಯೆ: ಡಿಟಿಸಿ/ವ್ಹಿಜೆಪಿ/ಟೆಂಡರ್/ /2020-21. ದಿನಾಂಕ: 24.03.2021

"ಟೆಂಡರ್ ಹಾಗೂ ಇ-ಟೆಂಡರ್ ಪ್ರಕಟಣೆ"
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ವಿಷಯ: ಊಟ, ಉಪಹಾರ, ಲೇಖನ ಸಾಮಗ್ರಿ ಹಾಗೂ ಕೈಪಿಡಿಗಳನ್ನು ಝರಾಕ್ಸ್ ಮಾಡಿ ಒದಗಿಸಲು ಇ-ಟೆಂಡರ್ ಟೆಂಡರ್ ಪ್ರಕಟಣೆ ಕುರಿತು.

ಉಲ್ಲೇಖ: 1. ನಿರ್ದೇಶಕರು, ರಾಜ್ಯ ಆರೋಗ್ಯ ಮತ್ತು ಕು.ಕ. ಸಂಸ್ಥೆ, ಬೆಂಗಳೂರು ಇವರ ಅ.ಜ್ಞಾ. ಪತ್ರ ಸಂಖ್ಯೆ: ರಾ.ಆ.ಸಂ/ಎನ್.ಹೆಚ್.ಎಂ/ಅನುದಾನ/18/20-21. ದಿನಾಂಕ: 19.02.2021.

1. ಜಿಲ್ಲಾ ತರಬೇತಿ ಕೇಂದ್ರ, ವಿಜಯಪುರದಲ್ಲಿ 2021-22ನೇ ಸಾಲಿನಲ್ಲಿ ನಡೆಯುವ ವಿವಿಧ ತರಬೇತಿಗಳಲ್ಲಿ ಭಾಗವಹಿಸುವ ಶಿಬಿರಾರ್ಥಿಗಳಿಗೆ ಊಟ/ಉಪಹಾರ/ ಕಾಫಿ/ ಚಹಾ/ ಸೌಲಭ್ಯವನ್ನು ತರಬೇತಿ ಕೇಂದ್ರದ ವಸತಿ ನಿಲಯಕ್ಕೆ ಸೇರಿದ ಅಡುಗೆ ಕೋಣೆಯಲ್ಲಿಯೇ ಸ್ಥಳೀಯವಾಗಿ ತಯಾರಿಸಿ, ಟೆಂಡರ್‌ನಲ್ಲಿನ ಷರತ್ತು ನಿಬಂಧನೆಗಳಿಗೆ ಒಳಪಟ್ಟು ಪೂರೈಸಲು ಅರ್ಹ ಹೊಟೇಲ್/ಕ್ಯಾಟರಿಂಗ್/ಅಡಿಗೆ ಕಾಂಟ್ರ್ಯಾಕ್ಟರ್‌ರವರಿಂದ **ಇ-ಟೆಂಡರ್ ಆಹ್ವಾನಿಸಲಾಗಿದೆ. (ಸದರೀ ಸೇವೆಗೆ ಟೆಂಡರನ್ನು ಕಡ್ಡಾಯವಾಗಿ ಇ-ಟೆಂಡರ್‌ನಲ್ಲಿ ಸಲ್ಲಿಸಬೇಕು)**

2. ಜಿಲ್ಲಾ ತರಬೇತಿ ಕೇಂದ್ರ, ವಿಜಯಪುರದಲ್ಲಿ 2021-22ನೇ ಸಾಲಿನಲ್ಲಿ ನಡೆಯುವ ತರಬೇತಿಗಳಲ್ಲಿ ಭಾಗವಹಿಸುವ ಶಿಬಿರಾರ್ಥಿಗಳಿಗೆ ಹಾಗೂ ಕಛೇರಿಯ ದಿನ ನಿತ್ಯದ ಕೆಲಸಕ್ಕೆ ಬೇಕಾಗುವ ತರಬೇತಿ ಸಾಮಗ್ರಿಗಳು, ಲೇಖನ ಸಾಮಗ್ರಿಗಳನ್ನು ಟೆಂಡರ್‌ನಲ್ಲಿನ ಷರತ್ತು ನಿಬಂಧನೆಗಳಿಗೆ ಒಳಪಟ್ಟು ಪೂರೈಸ ಬಯಸುವ ಅರ್ಹ ಪೂರೈಕೆದಾರರಿಂದ/ಅಂಗಡಿಗಾರರಿಂದ **ಇ-ಟೆಂಡರ್ ಆಹ್ವಾನಿಸಲಾಗಿದೆ. (ಸದರೀ ಸೇವೆಗೆ ಟೆಂಡರನ್ನು ಕಡ್ಡಾಯವಾಗಿ ಇ-ಟೆಂಡರ್‌ನಲ್ಲಿ ಸಲ್ಲಿಸಬೇಕು)**

3. ಜಿಲ್ಲಾ ತರಬೇತಿ ಕೇಂದ್ರ, ವಿಜಯಪುರದಲ್ಲಿ 2021-22ನೇ ಸಾಲಿನಲ್ಲಿ ಜರುಗುವ ವಿವಿಧ ತರಬೇತಿಗಳಿಗೆ ಹಾಜರಾಗುವ ಪ್ರಶಿಕ್ಷಣಾರ್ಥಿಗಳಿಗೆ ಪೂರೈಸಲ್ಪಡುವ ತರಬೇತಿ ಕೈಪಿಡಿಗಳು ಕೊರತೆಯಾದಾಗ ಕೈಪಿಡಿಗಳನ್ನು ಝರಾಕ್ಸ್ ಹಾಗೂ ಸ್ಪೈರಲ್ ಬೈಂಡಿಂಗ್ ಮಾಡಿ ಟೆಂಡರ್‌ನಲ್ಲಿನ ಷರತ್ತು ನಿಬಂಧನೆಗಳಿಗೆ ಒಳಪಟ್ಟು ಪೂರೈಸಲು ಅರ್ಹ ವ್ಯಕ್ತಿಗಳಿಂದ **ಇ-ಟೆಂಡರ್ ಆಹ್ವಾನಿಸಲಾಗಿದೆ. (ಸದರೀ ಸೇವೆಗೆ ಟೆಂಡರನ್ನು ಕಡ್ಡಾಯವಾಗಿ ಇ- ಟೆಂಡರ್‌ನಲ್ಲಿ ಸಲ್ಲಿಸಬೇಕು)**

ಅಂತರ್ಜಾಲದ ಮೂಲಕ ಟೆಂಡರ್ ನಮೂನೆಗಳನ್ನು **ದಿನಾಂಕ: 29.03.2021** ರಿಂದ ಪಡೆಯಬಹುದು. ಇ-ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 15.04.2021 ರ ಅಪರಾಹ್ನ 04:00 ಗಂಟೆಯವರೆಗೆ.** ಟೆಂಡರ್ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 21.04.2021 ರಂದು ಅಪರಾಹ್ನ 04:00 ಗಂಟೆ,** ಟೆಂಡರ್ ಹಣಕಾಸಿನ ಬಿಡ್ ತೆರೆಯುವ **ದಿನಾಂಕ 26.04.2021 ರಂದು ಅಪರಾಹ್ನ 04:00 ಗಂಟೆ. (ಇ-ಟೆಂಡರ್ ಸಂಬಂದಿಸಿದಂತೆ ಮಾಹಿತಿಯನ್ನು E-procurement GoK ಪೋರ್ಟಲ್‌ನಲ್ಲಿ ಪಡೆಯಬಹುದು)** ಹೆಚ್ಚಿನ ಮಾಹಿತಿಗಾಗಿ ತರಬೇತಿ ಕೇಂದ್ರದ ಕಛೇರಿ ಕೆಲಸದ ದಿನಗಳಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/-ಪ್ರಾಂಶುಪಾಲರು,
ಜಿಲ್ಲಾ ತರಬೇತಿ ಕೇಂದ್ರ, ಆರೋಗ್ಯ ಮತ್ತು
ಕು.ಕ ಇಲಾಖೆ, ವಿಜಯಪುರ

ವಾಸಾಸಂಇ/ವಿಜಯಪುರ/664/2020-21

ಸುಶಾಂತ್ ಸಿಂಗ್ ಪ್ರಕರಣ: ಪ್ರಿಯಾಂಕ ಮೇಲ್ಮನವಿ ವಜಾಗೊಳಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಬಾಲಿವುಡ್ ನಟ ಸುಶಾಂತ್ ಸಿಂಗ್ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ತನ್ನ ವಿರುದ್ಧ ದಾಖಲಾದ ಎಫ್‌ಐಆರ್ ರದ್ದುಗೊಳಿಸಲು ನಿರಾಕರಿಸಿದ ಬಾಂಬೆ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸುಶಾಂತ್ ಸಹೋದರಿ ಸಲ್ಲಿಸಿದ್ದ ಮೇಲ್ಮನವಿಯನ್ನು ವಿಚಾರಣೆಗೆ ಸ್ವೀಕರಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

ಈ ಪ್ರಕರಣದಲ್ಲಿ ಸುಶಾಂತ್ ಗೆಳತಿ ರಿಯಾ ಚಕ್ರವರ್ತಿ ಸಲ್ಲಿಸಿದ್ದ ದೂರಿನ ಮೇರೆಗೆ, ಆತನ ಸಹೋದರಿ ಪ್ರಿಯಾಂಕ ಸಿಂಗ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿತ್ತು. ಈ ಎಫ್‌ಐಆರ್ ರದ್ದುಗೊಳಿಸುವಂತೆ ಕೋರಿ ಬಾಂಬೆ ಹೈ ಕೋರ್ಟ್‌ನಲ್ಲಿ ಪ್ರಿಯಾಂಕ ಅರ್ಜಿ ಸಲ್ಲಿಸಿದ್ದರು. ಇದನ್ನು ಹೈಕೋರ್ಟ್ ವಜಾಗೊಳಿಸಿ ಆದೇಶಿಸಿತ್ತು.

ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ ಮತ್ತು ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಮತ್ತು ವಿ. ರಾಮಸುಬ್ರಮಣಿಯನ್ ಅವರು ಪ್ರಿಯಾಂಕ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿದ್ದು, ಈ ವಿಷಯದ ವಿಚಾರಣೆ ನಡೆಸಲು ಆಸಕ್ತಿ ಇಲ್ಲ ಎಂದು ಹೇಳಿತು.

ಜಮ್ಮು-ಕಾಶ್ಮೀರದಿಂದ ರಾಮ ಮಂದಿರಕ್ಕೆ ₹17 ಕೋಟಿ ದೇಣಿಗೆ

ಶ್ರೀನಗರ: ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ನಿಧಿ ಸಮರ್ಪಣೆ ಅಭಿಯಾನದ ಭಾಗವಾಗಿ ಜಮ್ಮು ಕಾಶ್ಮೀರವು ₹17 ಕೋಟಿ ದೇಣಿಗೆ ನೀಡಿದೆ ಎಂದು ಪ್ರಾಂತ ಸಹ ಸಂಘಚಾಲಕ ಗೌತಮ್ ಮೆಂಗಿ ತಿಳಿಸಿದ್ದಾರೆ.

'ಸುಮಾರು 44 ದಿನಗಳ ಸುದೀರ್ಘ ಅಭಿಯಾನದಲ್ಲಿ 21,331 ಆರ್‌ಎಸ್‌ಎಸ್ ಕಾರ್ಯಕರ್ತರು ಕೇಂದ್ರಾಡಳಿತ ಪ್ರದೇಶದ 4693 ಹಳ್ಳಿಗಳು ಮತ್ತು ಪಟ್ಟಣಗಳಲ್ಲಿನ ಸುಮಾರು 6.37 ಲಕ್ಷ ಮನೆಗಳಿಗೆ ಭೇಟಿ ನೀಡಿ, ದೇಣಿಗೆ ಸಂಗ್ರಹಿಸಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

'ಈ ರಾಮಮಂದಿರವೂ ಕೇವಲ ದೇವಾಲಯವಲ್ಲ. ಇದು ಭಾರತೀಯ ಸಂಸ್ಕೃತಿಯ ಭಾಗ. ಕೋವಿಡ್ ಸಂದರ್ಭದಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರು ಜಮ್ಮು ಮತ್ತು ಕಾಶ್ಮೀರದ 2,902 ಹಳ್ಳಿ ಮತ್ತು ಪಟ್ಟಣಗಳಿಗೆ 1.97 ಲಕ್ಷ ಆಹಾರ ಪೊಟ್ಟಣ, 4567 ಸ್ಯಾನಿಟೈಸರ್, 1.36 ಲಕ್ಷ ಮಾಸ್ಕ್, 58,716 ಪಡಿತರ ಕಿಟ್ ಮತ್ತು 510 ಪಿಪಿಇ ಕಿಟ್ ವಿತರಿಸಿದ್ದರು' ಎಂದು ತಿಳಿಸಿದ್ದಾರೆ.

ಜನವರಿ 15 ರಂದು ರಾಮಮಂದಿರ ನಿರ್ಮಾಣ ನಿಧಿ ಸಮರ್ಪಣೆ ಅಭಿಯಾನ ಪ್ರಾರಂಭಗೊಂಡು, ಫೆಬ್ರುವರಿ 27ರಂದು ಮುಕ್ತಾಯಗೊಂಡಿತು.

ನಿಧನ ವಾರ್ತೆ

ಪತ್ರಕರ್ತ, ಲೇಖಕ ಅನಿಲ್ ಧಾರ್ಕರ್



ಮುಂಬೈ (ಪಿಟಿಐ): ಹಿರಿಯ ಪತ್ರಕರ್ತ, ಲೇಖಕ ಅನಿಲ್ ಧಾರ್ಕರ್ (74) ಶುಕ್ರವಾರ ನಿಧನರಾದರು.

ಮುಂಬೈನ ಆಸ್ಪತ್ರೆಯಲ್ಲಿ ಹೃದಯ ಶಸ್ತ್ರಚಿಕಿತ್ಸೆಗೆ ಒಳಪಟ್ಟಿದ್ದರು. ಧಾರ್ಕರ್ ಅವರಿಗೆ ಸಂಗಾತಿ ಅಮಿ ಫರ್ನಾಂಡೀಸ್ ಮತ್ತು ಪುತ್ರಿ, ಲಂಡನ್‌ನಲ್ಲಿ ನೆಲೆಯೂರಿರುವ ನಟಿ ಆಯೇಷಾ ಇದ್ದಾರೆ. ಧಾರ್ಕರ್ ಅವರು, ಮುಂಬೈ ಅಂತರ ರಾಷ್ಟ್ರೀಯ ಸಾಹಿತ್ಯ ಸಮ್ಮೇಳನದ ಸ್ಥಾಪಕ ನಿರ್ದೇಶಕರೂ ಆಗಿದ್ದರು. ವರ್ಷಪೂರ್ತಿ ಸಾಹಿತ್ಯಕ ಸಂವಾದ ಆಯೋಜಿಸುವ 'ಲಿಟರೇಚರ್ ಲೈವ್'ನ ಸ್ಥಾಪಕರೂ ಆಗಿದ್ದರು. ಐದು ದಶಕಗಳವರೆಗೆ ಸಾಹಿತ್ಯ ಕ್ಷೇತ್ರದ ಒಡನಾಟದಲ್ಲಿ ಅವರು ಅಂಕಣಕಾರ, ಬರಹಗಾರ, ವಿವಿಧ ಸಂಸ್ಥೆಗಳ ಸ್ಥಾಪಕರಾಗಿ ಗಮನಸೆಳೆದಿದ್ದರು. ಇಂಡಿಯನ್ ಎಕ್ಸ್‌ಪ್ರೆಸ್ ಆಂಗ್ಲ ಪತ್ರಿಕೆಯ ಅಂಕಣಕಾರರಾಗಿದ್ದ ಅವರು 'ದ ರೋಮಾನ್ಸ್ ಆಫ್ ಸಾಲ್ಟ್', ಮಹಾತ್ಮಾಗಾಂಧಿ ದಂಡಿಯಾತ್ರೆ ಕುರಿತ ಪುಸ್ತಕ ರಚಿಸಿದ್ದರು. ಕಿರುತೆರೆ ನಿರ್ಮಾಪಕ, ನಿರೂಪಕನಾಗಿ ಗಮನಸೆಳೆದಿದ್ದರು. ಇಂಗ್ಲಿಷ್ ಸುದ್ದಿವಾಹಿನಿಯ ಮುಖ್ಯಸ್ಥರಾಗಿಯೂ ಕಾರ್ಯ ನಿರ್ವಹಿಸಿದ್ದರು.



ಪ್ರಸವಾನಂತರದ ಖಿನ್ನತೆ ಎನ್ನುವುದು ಬಾಣಂತಿಯರಲ್ಲಿ ಅಪರೂಪವೇನಲ್ಲ. ಆದರೆ ಕೋವಿಡ್‌ಗಿಂತ ಮುಂಚೆ ಇದ್ದ ಪ್ರಮಾಣ ಈಗ ಒಮ್ಮೆಲೇ ಜಾಸ್ತಿಯಾಗಿದೆ ಎನ್ನುತ್ತದೆ ಅಂಕಿ– ಅಂಶ.

ಕೋವಿಡ್ ಸಂದರ್ಭದಲ್ಲಿ ಒಂದಿಷ್ಟು ದಿನಗಳ ಕಾಲ ಸಂತಾನ ನಿಯಂತ್ರಣದ ಮಾತ್ರೆಗಳ ಕೊರತೆಯಿಂದಾಗಿ ಕೆಲವರು ಬೇಡದ ಗರ್ಭ ಧರಿಸಿ ಸಮಸ್ಯೆ ಅನುಭವಿಸಿದರು. ಈ ಸಂದರ್ಭದಲ್ಲಿ ಹೆಚ್ಚಾದ ಕೌಟುಂಬಿಕ ಹಿಂಸೆಯೂ ಖಿನ್ನತೆಗೆ ಇನ್ನೊಂದು ಕಾರಣ ಎನ್ನಬಹುದು. ಮೊದಲೇ ಒಂದು ಮಗುವಿದ್ದು, ಎರಡನೆಯ ಹೆರಿಗೆಯಾದಾಗ ಕುಟುಂಬದ ಸದಸ್ಯರ ನೆರವೂ ಇಲ್ಲದಿದ್ದರೆ ಮೊದಲ ಮಗುವನ್ನೂ ನಿಭಾಯಿಸಬೇಕು. ಹಾಗೆಯೇ ಖರ್ಚು ಹೆಚ್ಚಾಗುವ ಆತಂಕವೂ ಈ ಖಿನ್ನತೆಗೆ ದಾರಿಯಾಗಬಹುದು. ಇದರ ಜೊತೆಗೆ ಕೆಲವೊಂದು ಆಸ್ಪತ್ರೆಗಳು ಹೆರಿಗೆಗೆಂದು ಬಂದ ಗರ್ಭಿಣಿಯರಿಗೆ ಪ್ರವೇಶ ನೀಡದೆ ವಾಪಸ್ ಕಳಿಸಿದಂತಹ ಪ್ರಕರಣಗಳು ಕೂಡ ನಡೆದು ಇತರ ಗರ್ಭಿಣಿಯರಲ್ಲಿ ಆತಂಕ ಮೂಡಿಸಿತ್ತು.

ಕೋವಿಡ್ ಸಂಕಷ್ಟ

ಕಾಡುವ ಪ್ರಸವಾನಂತರ ಖಿನ್ನತೆ

ಎಸ್ಸೆಚ್

ಕಳೆದ ಮೇ ತಿಂಗಳಲ್ಲಿ ಮುದ್ದಾದ ಹೆಣ್ಣುಮಗುವಿಗೆ ಜನ್ಮ ನೀಡಿದ ಅನುರಾಧಾಗೆ ಲಾಕ್‌ಡೌನ್ ಕಾರಣದಿಂದಾಗಿ ಬಾಣಂತನಕ್ಕೆಂದು ತವರುಮನೆಗೆ ಹೋಗಲೂ ಸಾಧ್ಯವಾಗಲಿಲ್ಲ. ಹಾಗಂತ ಪತಿ ಮತ್ತು ಅತ್ತೆ ಯಾವುದಕ್ಕೂ ಕೊರತೆಯಾಗದಂತೆ ಚೆನ್ನಾಗಿಯೇ ನೋಡಿಕೊಂಡರು. ಆದರೆ ಮಗುವಿಗೆ ಮೂರು ವಾರಗಳಾದ ಮೇಲೆ ಅನುರಾಧಾಳಲ್ಲಿ ವಿಚಿತ್ರ ಬದಲಾವಣೆಗಳು ಕಾಣಿಸಿಕೊಂಡವು. ತೊಟ್ಟಿಲಲ್ಲಿದ್ದ ಮಗು ಸತ್ತು ಹೋಗಿದೆ ಎಂಬಂತಹ ಆಲೋಚನೆ ಬಂದು ಪದೇ ಪದೇ ನೋಡುವುದು, ಸಂಜೆಯಾಗುತ್ತಿದ್ದಂತೆ ಯಾವುದೋ ಅವ್ಯಕ್ತ ನೆರಳು ಮಗುವಿನ ಮೇಲೆ ಮುಸುಕಿ ಕೊಲ್ಲುತ್ತಿದೆ ಎನಿಸಿ ಕೆಲವೊಮ್ಮೆ ಚೀರುವುದು, ಗಂಡ ಮಗುವನ್ನು ಎತ್ತಿಕೊಂಡರೆ ಸ್ಮಶಾನಕ್ಕೆ ಒಯ್ಯುತ್ತಿರಬಹುದು ಎಂಬ ಕೆಟ್ಟ ಆಲೋಚನೆಗಳು ಬರುವುದು.. ಒಟ್ಟಿನಲ್ಲಿ ಎಲ್ಲವೂ ಅಯೋಮಯ.

ಕೋವಿಡ್‌ನಿಂದಾಗಿ ಸೀಮಂತದ ಸಂಭ್ರಮವನ್ನೂ ಕಾಣದ ಅನುರಾಧಾಗೆ ಚೊಚ್ಚಲ ಗರ್ಭದಿಂದಾಗಿ ಹುಟ್ಟಿಕೊಂಡ ಆತಂಕ ವಿಪರೀತ ದುಗುಡಕ್ಕೆ ಕಾರಣವಾಗಿತ್ತು. ಆಸ್ಪತ್ರೆಯಲ್ಲೂ ಆಪ್ತರನ್ನು ಹತ್ತಿರಕ್ಕೆ ಬಿಡದಿದ್ದರಿಂದ ಆತಂಕ ಇನ್ನಷ್ಟು ಹೆಚ್ಚಿತ್ತು. ಇವೆಲ್ಲವೂ ಸೇರಿಕೊಂಡು ಆಕೆಯಲ್ಲಿ ಪ್ರಸವಾನಂತರದ ಖಿನ್ನತೆ ಶುರುವಾಗಿತ್ತು.

ಈ ಪ್ರಸವಾನಂತರದ ಖಿನ್ನತೆ ಎನ್ನುವುದು ಬಾಣಂತಿಯರಲ್ಲಿ ಅಪರೂಪವೇನಲ್ಲ. ಆದರೆ ಕೋವಿಡ್‌ಗಿಂತ ಮುಂಚೆ ಇದ್ದ ಪ್ರಮಾಣ ಈಗ ಒಮ್ಮೆಲೇ ಜಾಸ್ತಿಯಾಗಿದೆ ಎನ್ನುತ್ತದೆ ಅಂಕಿ– ಅಂಶ. ಲಾಕ್‌ಡೌನ್ ಹಾಗೂ ನಂತರದ ದಿನಗಳಲ್ಲಿ ಗರ್ಭಿಣಿಯರು ಹಾಗೂ ಬಾಣಂತಿಯರಲ್ಲಿ ಈ ದಿಗಿಲು ಹಾಗೂ ಖಿನ್ನತೆಯ ಪ್ರಮಾಣ ಎಷ್ಟು ಹೆಚ್ಚಾಗಿದೆಯೆಂದರೆ ಒಂದು ಸಮೀಕ್ಷೆಯ ಪ್ರಕಾರ ಇದು ಭಾರತದಲ್ಲಿ ಶೇ 68ರಷ್ಟಿದೆ. ಬ್ರಿಟನ್‌ನಲ್ಲಿ ನಡೆದ ಸಮೀಕ್ಷೆಯಲ್ಲಿ ಇದು ಶೇ 15ರಿಂದ ಶೇ 43ಕ್ಕೆ ಏರಿರುವುದು ಕಂಡು ಬಂದಿದೆ.

ಇದಕ್ಕೆ ಕಾರಣ ಸರಳ, ಕೋವಿಡ್ ಪಿಡುಗು ಹಾಗೂ ಅದರಿಂದ ಉದ್ಭವಿಸಿದ ಸಮಸ್ಯೆ ಸೃಷ್ಟಿಸಿದ ಒತ್ತಡ. ಆದರೆ ಇದನ್ನು ಅನುಭವಿಸುತ್ತಿರುವವರ ಲಕ್ಷಣಗಳನ್ನು ಪತ್ತೆ ಮಾಡುವುದು ಈ ಪರಿಸ್ಥಿತಿಯಲ್ಲಿ ಅಷ್ಟು ಸರಳವಲ್ಲ.

‘ನನ್ನ ಬಳಿ ಬರುವ ಗರ್ಭಿಣಿಯರಲ್ಲಿ ಬಹುತೇಕ ಮಂದಿಯಲ್ಲಿ ಈ ಒತ್ತಡ, ದಿಗಿಲಿನಂತಹ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಗರ್ಭಿಣಿಯರಲ್ಲಿ, ಅದರಲ್ಲೂ ಚೊಚ್ಚಲಾಗಿದ್ದರೆ ಈ ಆತಂಕ ಸಾಮಾನ್ಯವೇ. ಆದರೆ ಕೋವಿಡ್‌ನಿಂದಾಗಿ ಅವರಲ್ಲಿ ಅಭದ್ರತೆಯ ಜೊತೆಗೆ ಇನ್ನಿತರ ಸಮಸ್ಯೆಗಳು ಕಾಣಿಸಿಕೊಂಡು ಖಿನ್ನತೆಗೆ ಕಾರಣವಾಗುತ್ತಿದೆ’ ಎನ್ನುತ್ತಾರೆ ಪ್ರಸೂತಿ ತಜ್ಞೆ ಡಾ. ವೈಶಾಲಿ ಎಂ.

ಲಕ್ಷಣಗಳು

ಹೆರಿಗೆಯ ನಂತರ ಮಹಿಳೆಯರಲ್ಲಿ ಕಾಣಿಸಿಕೊಳ್ಳುವ ಮಾನಸಿಕ ಸಮಸ್ಯೆ ಕೆಲವೊಮ್ಮೆ ಗಂಭೀರ ಸ್ಥಿತಿಯನ್ನು ತಲುಪಬಹುದು. ಬಾಣಂತಿಯರಲ್ಲಿ ಅಲ್ಪಸ್ವಲ್ಪ ಕಿರಿಕಿರಿ ಸಾಮಾನ್ಯವೆಂದು ಪರಿಗಣಿಸಬಹುದು. ಆದರೆ ಕಾರಣವಿಲ್ಲದೇ ಅಳುವುದು, ಒಮ್ಮೆಲೇ ರೇಗುವುದು, ಇಡೀ ದಿನ ಚಡಪಡಿಸುವುದು, ಹಸಿವು ಹಾಗೂ ನಿದ್ರೆಯ ಕೊರತೆ ಇವೆಲ್ಲವೂ ಪ್ರಸವಾನಂತರದ ಖಿನ್ನತೆಯ ಲಕ್ಷಣಗಳು; ಮಗುವಿಗೆ ಏನೋ ತೊಂದರೆ ಆಗಿದೆ ಎನ್ನುವುದು, ಕೆಲವೊಮ್ಮೆ ಮಗುವಿಗೆ ದೈಹಿಕವಾಗಿ ಹಾನಿ ಮಾಡಲು ಯತ್ನಿಸುವುದು ತೀವ್ರತರದ ಖಿನ್ನತೆಯ ಲಕ್ಷಣ ಎನ್ನುತ್ತಾರೆ ತಜ್ಞರು.

ಹೆರಿಗೆಯ ನಂತರ ಕೆಲವು ವಾರಗಳ ಕಾಲ ಬಾಣಂತಿಗೆ ಮಾನಸಿಕವಾಗಿ ಏರುಪೇರಾಗುವುದರಿಂದ ಈ ಅವಧಿಯಲ್ಲಿ ಹೆಚ್ಚಿನ ನಿಗಾ ವಹಿಸುವುದು ಸಾಮಾನ್ಯ. ಭಾರತದಲ್ಲಂತೂ ತವರುಮನೆಯಲ್ಲಿ ತಾಯಂದಿರೇ ಮಗಳ ಬಾಣಂತನ ಮಾಡುವ ಸಂಪ್ರದಾಯ ಬಹುತೇಕ ಸಮುದಾಯಗಳಲ್ಲಿದೆ. ಆದರೆ ಕೋವಿಡ್‌ನಿಂದಾಗಿ, ಅದರಲ್ಲೂ ಲಾಕ್‌ಡೌನ್ ಅವಧಿಯಲ್ಲಿ ಈ ಕೌಟುಂಬಿಕ ಸಾಂತ್ವನ ಅನುಭವಿಸುವ ಅದೃಷ್ಟ ಕೆಲವರಿಗೆ ಇರಲಿಲ್ಲ. ಇದಲ್ಲದೇ ಅಂತರ ಕಾಪಾಡಿಕೊಳ್ಳುವ ನಿಯಮದಿಂದಾಗಿ ಎಷ್ಟೋ ಮಂದಿ ಗರ್ಭಿಣಿಯರು, ಬಾಣಂತಿಯರು ಆಪ್ತರ ಉಪಸ್ಥಿತಿಯಿಲ್ಲದೇ ನೋವು ಅನುಭವಿಸಬೇಕಾಯಿತು.

ಅನುರಾಧಾಳಿಗೆ ಆಗಿದ್ದೂ ಇದೇ ಅನುಭವ. ಹೆರಿಗೆ ಯಾವುದೇ ಸಮಸ್ಯೆಗಳಿಲ್ಲದೇ ಆದರೂ ಕೂಡ ಆಕೆಗೆ ಕೊನೆಯ ಸ್ಕ್ಯಾನಿಂಗ್‌ಗೆ ಹೋಗಲು ಕಷ್ಟವಾಯಿತು. ಜೊತೆಗೆ ದೂರದ ಊರಿನಲ್ಲಿದ್ದ ತಾಯಿಗೆ ಮಗಳನ್ನು ಹೆರಿಗೆಗೆ ಕರೆದೊಯ್ಯಲೂ ಆಗಿಲ್ಲ. ಮಗುವಿನೊಂದಿಗೆ ಆಸ್ಪತ್ರೆಯಿಂದ ಮನೆಗೆ ಬಂದಾಗಲೂ ತಾಯಿ– ಮಗುವಿಗೆ ಸೋಂಕಾಗಿಬಿಟ್ಟರೆ ಎಂಬ ಭಯದಿಂದ ಮನೆಯವರು ಆದಷ್ಟು ದೂರವೇ ಉಳಿಯುತ್ತಿದ್ದರು. ಇವೆಲ್ಲವೂ ಸೇರಿ ವಿನಾಕಾರಣ ಕೋಪ, ದುಃಖ, ತನ್ನ ಮಗುವಿಗೆ ಏನೋ ಆಗಿದೆ ಎಂಬ ಶಂಕೆ ಆಕೆಯನ್ನು ಆವರಿಸಿದ್ದವು.

ಚಿಕಿತ್ಸೆ

‘ಫೋನ್ ಮೂಲಕ, ಆನ್‌ಲೈನ್ ಮೂಲಕ ವೈದ್ಯರು ಸಲಹೆಗಳನ್ನು ನೀಡಬೇಕಾದ ಸಂದರ್ಭವಿತ್ತು. ಇಂತಹ ಲಕ್ಷಣಗಳನ್ನು ವೈಯಕ್ತಿಕವಾಗಿ ರೋಗಿಗಳನ್ನು ನೋಡಿದರೆ ಮಾತ್ರ ಪತ್ತೆ ಹಚ್ಚಬಹುದು. ಆದರೂ ಕುಟುಂಬದ ಸದಸ್ಯರು ಸೂಕ್ಷ್ಮವಾಗಿ ಗಮನಿಸಿದರೆ, ಅದರಲ್ಲೂ ಅನುಭವಿ ತಾಯಂದಿರು ಇದನ್ನು ಪತ್ತೆ ಹಚ್ಚಿ ಹೇಳಿದರೆ ವೈದ್ಯರಿಗೆ ಚಿಕಿತ್ಸೆ ನೀಡುವುದು ಸುಲಭ’ ಎನ್ನುತ್ತಾರೆ ಡಾ. ವೈಶಾಲಿ. ಪ್ರಸವಾನಂತರದ ಆತಂಕ, ಖಿನ್ನತೆಗೆ ಆಪ್ತ ಸಮಾಲೋಚನೆ, ಔಷಧಿ ಮೊದಲಾದ ಪರಿಹಾರಗಳಿವೆ.



ಹೂವಿನ ಚಿತ್ತಾರದ ಮ್ಯಾಕ್ಸಿಯಲ್ಲಿ ಶಿಲ್ಪಾ ಶೆಟ್ಟಿ (ಚಿತ್ರ ಇನ್‌ಸ್ಟಾಗ್ರಾಂ)

ಫ್ಯಾಷನ್

ಟ್ರೆಂಡ್ ಸೃಷ್ಟಿಸಿದ ಹೂವಿನ ಚಿತ್ತಾರದ ಉಡುಪು

ಮನಸ್ವಿ

ಋತುಮಾನಗಳು ಬದಲಾದಂತೆ ಫ್ಯಾಷನ್ ಟ್ರೆಂಡ್‌ಗಳೂ ಬದಲಾಗುತ್ತವೆ. ಆಯಾ ಋತುಮಾನಕ್ಕೆ ಹೊಂದುವಂತಹ ಉಡುಪುಗಳು ಫ್ಯಾಷನ್ ಪ್ರಿಯರ ಮನ ತಣಿಸಲು ಮಾರುಕಟ್ಟೆಗೆ ಲಗ್ಗೆ ಇಡುತ್ತವೆ. ಬೇಸಿಗೆ ಆರಂಭವಾಗಿರುವುದರಿಂದ ಹೊಸ ಬಗೆಯ ಫ್ಯಾಷನ್ ದಾಂಗುಡಿಯಿಟ್ಟಿದೆ. ಈ ಬೇಸಿಗೆಯಲ್ಲಿ ದೊಡ್ಡ ದೊಡ್ಡ ಹೂವಿನ ಚಿತ್ತಾರದ ಉಡುಪುಗಳನ್ನು ಫ್ಯಾಷನ್ ಪ್ರಿಯರು ಹೆಚ್ಚು ಮೆಚ್ಚುತ್ತಿದ್ದಾರೆ. 1980 ಹಾಗೂ 1990ರ ಕಾಲಘಟ್ಟದಲ್ಲಿ ಹೆಚ್ಚಾಗಿದ್ದ ಈ ದೊಡ್ಡ ಹೂವಿನ ಚಿತ್ತಾರದ ಉಡುಪುಗಳು ಮಹಿಳೆ ಹಾಗೂ ಪುರುಷ ಇಬ್ಬರನ್ನೂ ಸೆಳೆಯುತ್ತಿವೆ.

ಪಾಶ್ಚಾತ್ಯ ಹಾಗೂ ಭಾರತೀಯ ಈ ಎರಡೂ ಶೈಲಿಯ ಉಡುಪುಗಳಲ್ಲಿ ಈಗ ಹೂವಿನ ಚಿತ್ತಾರ ಎದ್ದು ಕಾಣುತ್ತಿದೆ. ಕಸೂತಿ ಮಾಡಿದ ಉಡುಪಿನಲ್ಲೂ ಇದೇ ಹೆಚ್ಚು ಗಮನ ಸೆಳೆಯುತ್ತಿದೆ.

ಜೀನ್ಸ್, ಪಲಾಜೊದೊಂದಿಗೆ..: ಸಾಮಾನ್ಯವಾಗಿ ಜೀನ್ಸ್ ಅಥವಾ ಪಲಾಜೊ ಪ್ಯಾಂಟ್ ಮೇಲೆ ಪ್ಲೇನ್ ಟಾಪ್ ಅಥವಾ ಚಿಕ್ಕ ಚಿಕ್ಕ ಹೂವಿನ ವಿನ್ಯಾಸದ ಟಾಪ್‌ಗಳನ್ನು ತೊಡುವುದು ಸಾಮಾನ್ಯ. ಆದರೆ ಈಗ ಟಾಪ್, ಕ್ರಾಪ್ ಟಾಪ್, ಟೀ ಶರ್ಟ್ ಎಲ್ಲದರ ಮೇಲೆ ದೊಡ್ಡ ಚಿತ್ತಾರದ ವಿವಿಧ ಬಣ್ಣದ ಹೂಗಳ ವಿನ್ಯಾಸವು ಹೆಚ್ಚು ಆಕರ್ಷಿಸುತ್ತಿದೆ. ಇವು ಒಂದು ರೀತಿಯ ಭಿನ್ನ ಲುಕ್ ನೀಡುವುದು ಸುಳ್ಳಲ್ಲ.

ಸೀರೆಯ ಮೇಲೂ ಹೂವಿನ ಚಿತ್ತಾರ: ಹಿಂದೆ ನಟಿಯರು ದೊಡ್ಡ ದೊಡ್ಡ ಹೂವಿನ ಚಿತ್ತಾರದ ಸೀರೆ, ಉದ್ದ ತೋಳಿನ ರವಿಕೆ ಧರಿಸಿ ಸಿನಿಮಾಗಳಲ್ಲಿ ಹಾಡುಗಳಿಗೆ ನರ್ತಿಸುತ್ತಿದ್ದರು. ಈಗ ಅಂತಹ ಫ್ಯಾಷನ್ ಮತ್ತೆ ಟ್ರೆಂಡ್ ಆಗಿದೆ. ಪೂರ್ತಿ ಸೀರೆಯ ಮೇಲೆ ಒಂದೇ ಬಣ್ಣದ ದೊಡ್ಡ ದೊಡ್ಡ ಹೂವಿನ ಚಿತ್ತಾರವಿರುತ್ತದೆ. ಸೀರೆಗೆ ಕಾಂಟ್ರಾಸ್ಟ್ ಬಣ್ಣದಲ್ಲಿರುವ ಹೂವಿನ ಚಿತ್ತಾರಗಳು ಸೀರೆಯ ಅಂದವನ್ನು ಇನ್ನಷ್ಟು ಹೆಚ್ಚಿಸುತ್ತವೆ.

ನಟಿಯರಿಗೂ ಅಚ್ಚುಮೆಚ್ಚು: ಹೂವಿನ ಚಿತ್ತಾರದ ಉಡುಪುಗಳು, ಸೀರೆಗಳು, ಕುರ್ತಾ, ಚೂಡಿದಾರ್‌ಗಳು ಈಗ ನಟಿಯರನ್ನು ಕೂಡ ಹೆಚ್ಚು ಸೆಳೆಯುತ್ತಿವೆ. ಗಾಢ ಕೆಂಪು ಬಣ್ಣದ ಮೇಲೆ ಬಿಳಿ ಹೂವಿನ ಚಿತ್ತಾರವಿರುವ ಉದ್ದನೆಯ ಮ್ಯಾಕ್ಸಿ ಧರಿಸಿ ಫೋಟೊಗೆ ಪೋಸ್ ನೀಡಿದ್ದ ಶಿಲ್ಪಾ ಶೆಟ್ಟಿ ಆ ಫೋಟೊವನ್ನು ತಮ್ಮ ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡಿದ್ದರು. ಗಾಢ ಹಸಿರು ಬಣ್ಣದ ಲಾಂಗ್ ಡ್ರೆಸ್ ಮೇಲೆ ಹೂವಿನ ಚಿತ್ತಾರವಿರುವ ಡ್ರೆಸ್ ಧರಿಸಿದ ನಟಿ ಆಲಿಯಾ ಭಟ್ ಇನ್ನಷ್ಟು ಸುಂದರಿಯಾಗಿ ಕಂಡಿದ್ದು ಸುಳ್ಳಲ್ಲ. ಪ್ರಿಯಾಂಕ ಚೋಪ್ರಾ, ಕತ್ರಿನಾ ಕೈಫ್, ರಾಶಿ ಖನ್ನಾ, ಐಶ್ವರ್ಯಾ ರೈ ಎಲ್ಲರೂ ಹೂವಿನ ಚಿತ್ತಾರದ ಡ್ರೆಸ್ ಧರಿಸುವ ಮೂಲಕ ಈ ಟ್ರೆಂಡ್‌ಗೆ ಸೈ ಎಂದಿದ್ದಾರೆ.

ಪಾಶ್ಚಾತ್ಯ ಶೈಲಿಯಲ್ಲೂ ಟ್ರೆಂಡ್: ಪಾರ್ಟಿ ಅಥವಾ ಇತರ ಸಮಾರಂಭಗಳಿಗೆ ಧರಿಸುವ ಶಾರ್ಟ್ ಸ್ಕರ್ಟ್–ಟಾಪ್, ಮಿನಿ ಡ್ರೆಸ್, ಮಿನಿ ಫ್ರಾಕ್‌ನಂತಹ ಡ್ರೆಸ್‌ಗಳಲ್ಲೂ ಈಗ ಈ ಚಿತ್ತಾರ ಟ್ರೆಂಡ್ ಸೃಷ್ಟಿಸುತ್ತಿದೆ. ಇದರೊಂದಿಗೆ ಅದೇ ಬಣ್ಣದ ಅಂತಹದ್ದೇ ವಿನ್ಯಾಸವಿರುವ ಹ್ಯಾಂಡ್‌ಬ್ಯಾಗ್‌ಗಳು ಇನ್ನಷ್ಟು ಸ್ಟೈಲಿಷ್ ಆಗಿ ಕಾಣುವಂತೆ ಮಾಡುತ್ತಿವೆ.

ದುಪಟ್ಟಾ, ಲೆಹೆಂಗಾಕ್ಕೂ ಇದೇ ಅಚ್ಚುಮೆಚ್ಚು: ಭಾರತೀಯ ಶೈಲಿಯ ಉಡುಪುಗಳಾದ ಚೂಡಿದಾರ್, ಅನಾರ್ಕಲಿ, ಲೆಹೆಂಗಾ, ಕುರ್ತಾ, ಗೌನ್‌ನಂತಹ ಉಡುಪುಗಳಲ್ಲೂ ಈಗ ದೊಡ್ಡ ಚಿತ್ತಾರದ ವಿನ್ಯಾಸವು ರಾರಾಜಿಸುತ್ತಿದೆ. ಪ್ಲೇನ್ ಚೂಡಿದಾರ್ ಜೊತೆಗೆ ಸಂಪೂರ್ಣ ಹೂವಿನ ಚಿತ್ತಾರದ ದುಪಟ್ಟಾ ಧರಿಸಿದರೆ ಹೆಚ್ಚು ಆಕರ್ಷಕವಾಗಿ ಕಾಣುತ್ತದೆ.



ಆಸ್ತಮಾದಿಂದ ಗರ್ಭಧಾರಣೆಗೆ ತೊಂದರೆಯೇ?

ಸ್ಪಂದನ



ಡಾ. ವೀಣಾ ಎಸ್. ಭಟ್

- **26 ವರ್ಷ, ನಾನು ಕಳೆದ 3 ವರ್ಷಗಳಿಂದ ಆಸ್ತಮಾದಿಂದ ಬಳಲುತ್ತಿದ್ದೇನೆ. ಮೊದಲನೇ ಸಲ ಗರ್ಭ ಧರಿಸಿದಾಗ ಗರ್ಭಪಾತವಾಯಿತು. ಆಸ್ತಮಾದಿಂದ ಗರ್ಭಧಾರಣೆಗೆ ತೊಂದರೆಯಾಗದ ಹಾಗೆ ಹೇಗೆ ನಿಭಾಯಿಸುವುದು?**

ರೂಪಾ, ಊರಿನ ಹೆಸರಿಲ್ಲ.

ಉತ್ತರ: ರೂಪಾರವರೇ, ನಿಮ್ಮ ಆಸ್ತಮಾ ಕಾಯಿಲೆ ನಿಯಂತ್ರಣದಲ್ಲಿದ್ದರೆ ಗರ್ಭಧಾರಣೆಗೆ ಏನೂ ಅಡೆತಡೆಯಾಗಲಾರದು. ಈ ಹಿಂದೆ ಗರ್ಭಪಾತವಾಗಿದ್ದರೂ ಅದು ಆಸ್ತಮಾ ಕಾರಣದಿಂದಿರಲಿಕ್ಕಿಲ್ಲ. ಶೇ 30ಕ್ಕೂ ಹೆಚ್ಚು ಜನರಲ್ಲಿ ಏನೂ ತೊಂದರೆಯಾಗದೇ ಇದ್ದರೆ, ಇನ್ನು ಶೇ 30ರಷ್ಟು ಜನರಲ್ಲಿ ಆಸ್ತಮಾ ಕಡಿಮೆಯಾಗಬಹುದು, ಮತ್ತೆ ಶೇ 30ರಷ್ಟು ಜನರಲ್ಲಿ ಕಾಯಿಲೆ ಉಲ್ಬಣಗೊಳ್ಳುವ ಸಾಧ್ಯತೆ ಇದೆ. ಆದರೆ ನೀವು ನೆನಪಿಡಬೇಕಾದ ಮುಖ್ಯ ಸಂಗತಿಯೆಂದರೆ ಈಗಾಗಲೇ ತೆಗೆದುಕೊಳ್ಳುತ್ತಿರುವ ಯಾವುದೇ ಆಸ್ತಮಾ ಔಷಧಿಯನ್ನು ನಿಲ್ಲಿಸಬೇಡಿ. ಇನ್‌ಹೇಲರ್‌ಗಳಲ್ಲಂತೂ ಅತಿ ಕಡಿಮೆ ಪಾರ್ಶ್ವ ದುಷ್ಪರಿಣಾಮಗಳು ತಾಯಿ ಹಾಗೂ ಮಗುವಿನ ಮೇಲಾಗಬಹುದು ಅಥವಾ ಆಗದೇ ಇರಬಹುದು. ಹೆರಿಗೆಯಲ್ಲೂ ಕೂಡ ಹೆಚ್ಚಿನ ಸಂದರ್ಭಗಳಲ್ಲಿ ತೊಂದರೆಯಾಗುವುದಿಲ್ಲ. 24 ರಿಂದ 32 ವಾರಗಳಲ್ಲಿ ಕೆಲವೊಮ್ಮೆ ಆಸ್ತಮಾ ತೀವ್ರತೆ ಹೆಚ್ಚಾಗಬಹುದು. ತಜ್ಞವೈದ್ಯರ ಮೇಲ್ವಿಚಾರಣೆ ಹಾಗೂ ಸಲಹೆಯನ್ನು ಮುಂದುವರೆಸಿದರೆ ಗರ್ಭಾವಸ್ಥೆಯನ್ನು ಸುಗಮವಾಗಿ ದಾಟುತ್ತೀರಾ. ಇನ್ನು ನೆನಪಿಡಬೇಕಾದ ಸಂಗತಿಯೆಂದರೆ ನಿಮ್ಮ ಮಗುವಿಗೂ ಭವಿಷ್ಯದಲ್ಲಿ ಆಸ್ತಮಾ ಬರುವ ಸಂಭವ ಹೆಚ್ಚಿರುವುದರಿಂದ ನೀವು ಸುರಕ್ಷಿತ ಹಾಗೂ ದೀರ್ಘಾವಧಿ ಸ್ತನ್ಯಪಾನ ನಿಮ್ಮ ಮಗುವಿಗೆ ಮಾಡಿಸಿದಾಗ ಈ ಸಂಭವ ಕಡಿಮೆಯಾಗುತ್ತದೆ.

- **ಮದುವೆಯಾಗಿ ಒಂದೂವರೆ ವರ್ಷ. ಒಂದು ತಿಂಗಳ ಹಿಂದೆ ಗರ್ಭಧಾರಣೆಯಾಗಿ 36ನೇ ದಿನದಿಂದ ಹೊಟ್ಟೆನೋವು ಶುರುವಾಗಿ 47ನೇ ದಿನಕ್ಕೆ ಸ್ಕ್ಯಾನಿಂಗ್ ಮಾಡಿಸಿದಾಗ ಮಗು ಕಾಣಿಸ್ತಾಯಿಲ್ಲ, ಒಂದು ವಾರ ಬಿಟ್ಟು ಸ್ಕ್ಯಾನಿಂಗ್ ಮಾಡಿಸಿ ಎಂದಿದ್ದರು. ಆದರೆ 54ನೇ ದಿನಕ್ಕೆ ಹೊಟ್ಟೆನೋವು ತಡೆಯೋಕೇ ಆಗದೇ ಆಸ್ಪತ್ರೆಗೆ ಹೋದಾಗ ಎಕ್ಟೋಪಿಕ್ ಪ್ರೆಗ್ನೆನ್ಸಿ ಆಗಿದೆ, ಟ್ಯೂಬ್ ಬ್ಲಾಸ್ಟ್ ಆಗಿದೆ ಎಂದು ಲ್ಯಾಪ್ರೊಸ್ಕೋಪಿಕ್ ಶಸ್ತ್ರಚಿಕಿತ್ಸೆ ಮಾಡಿದರು. ನನಗೆ ಮುಂದೆ ಮಗು ಯಾವಾಗ ಆಗಬಹುದು. ಈ ಆಪರೇಷನ್ ಆದರೆ ಮಗು ಆಗುವುದು ತಡವೇ? ನನ್ನ ತೂಕ 41 ಕೆ.ಜಿ. ಯಾವುದೇ ಆರೋಗ್ಯ ಸಮಸ್ಯೆ ಇಲ್ಲ. ಭಯ ಆಗುತ್ತಿದೆ. ಏನು ಮಾಡಲಿ?**

ಹೆಸರು, ಊರು ಇಲ್ಲ.

ಉತ್ತರ: ನಿಮಗೆ ಎಕ್ಟೋಪಿಕ್ ಪ್ರೆಗ್ನೆನ್ಸಿ ಅಥವಾ ಎಡೆತಪ್ಪಿದ ಗರ್ಭದಿಂದಾಗಿ ಕೇವಲ ಒಂದು ಟ್ಯೂಬ್ ಅಥವಾ ಗರ್ಭನಾಳ ಗಾಸಿಯಾಗಿರುವುದಷ್ಟೇ. ನಿಮಗೆ ಇನ್ನೊಂದು ಗರ್ಭನಾಳ ಸರಿಯಾಗಿರುವುದರಿಂದ ಮಗು ಆಗಲು ಯಾವುದೇ ತೊಂದರೆಯಿಲ್ಲ. ನೀವು ಚಿಂತಿಸದೇ ಇನ್ನೊಂದು ಮಗು ಪಡೆಯಲು ಪ್ರಯತ್ನಿಸಿ. ತುಂಬಾ ಜನರಿಗೆ ಒಮ್ಮೆ ಎಕ್ಟೋಪಿಕ್ ಆದ ನಂತರ ಮತ್ತೆ ಮಕ್ಕಳಾಗಿವೆ, ಭಯ ಬೇಡ. ನಿಯಮಿತವಾಗಿ ದಿನಕ್ಕೊಂದು 5 ಮಿ.ಗ್ರಾಂ ನ ಫಾಲಿಕ್ ಆಸಿಡ್ ಮಾತ್ರೆಗಳನ್ನು ನುಂಗಿ. ಪೌಷ್ಟಿಕ ಆಹಾರವನ್ನು ಸೇವಿಸಿ, ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗುತ್ತಿದ್ದರೆ 12 ರಿಂದ 18 ದಿನಗಳವರೆಗೆ ಪತಿಯೊಂದಿಗೆ ಲೈಂಗಿಕ ಸಂಪರ್ಕ ಹೊಂದಿರಿ. ತಜ್ಞವೈದ್ಯರೊಂದಿಗೆ ಚಿಕಿತ್ಸೆ ಹಾಗೂ ಸಲಹೆಗಳನ್ನು ಪಡೆದುಕೊಳ್ಳಿ.

- **ಮೆನ್‌ಸ್ಟ್ರುಯೆಲ್ ಕಪ್ ಬಳಸುವುದು ಒಳ್ಳೆಯದೋ ಅಥವಾ ಪ್ಯಾಡ್ ಬಳಕೆ ಒಳ್ಳೆಯದೋ? ಯಾವ ಬ್ರಾಂಡ್ ಉಪಯೋಗಿಸಲಿ. ನನಗೆ 6–7ನೇ ದಿನ ಸ್ರಾವ ಆಗುತ್ತದೆ. ಬಿಳಿಮುಟ್ಟು ಯಾವಾಗಾಗುತ್ತದೆ? ಮುಟ್ಟಿಗೆ ಮೊದಲೋ ಅಥವಾ ನಂತರವೋ?**

ಚಂದನಾ, ಊರಿನ ಹೆಸರಿಲ್ಲ.

ಉತ್ತರ: ಚಂದನಾರವರೇ ನೀವು ನಿಮ್ಮ ವಯಸ್ಸು ತಿಳಿಸಿಲ್ಲ. ವಿವಾಹವಾಗಿದೆಯೇ, ಮಕ್ಕಳಾಗಿದೆಯೇ ತಿಳಿಸಿಲ್ಲ. ವಿವಾಹವಾಗಿದ್ದಲ್ಲಿ ನೀವು ಮುಟ್ಟಿನ ಬಟ್ಟಲು (ಮೆನ್‌ಸ್ಟ್ರುಯೆಲ್ ಕಪ್) ಉಪಯೋಗಿಸುವುದು ಒಳ್ಳೆಯದು. ಮಿತವ್ಯಯಕಾರಿ ಹಾಗೂ ಪರಿಸರ ಸ್ನೇಹಿಯೂ ಹೌದು. ಪ್ಯಾಡ್‌ನ ಹಾಗೆ 4–5 ಗಂಟೆಗೊಮ್ಮೆ ಬದಲಾಯಿಸಬೇಕೆಂದಿಲ್ಲ. 6 ರಿಂದ 7 ದಿನದವರೆಗೆ ಬ್ಲೀಡಿಂಗ್ ಕೆಲವೊಮ್ಮೆ ಆಗಬಹುದು. ಬಿಳಿಮುಟ್ಟು ಅಲ್ಪಸ್ವಲ್ಪ ಆಗುವುದು ಸಹಜ. ನೈಸರ್ಗಿಕವಾಗಿ ಮುಟ್ಟು ಬರುವ ಮುನ್ನ ಸ್ವಲ್ಪ ಬಿಳಿಮುಟ್ಟಾಗಬಹುದು. ಅಷ್ಟೇ ಅಲ್ಲಾ ಋತುಚಕ್ರದ ಮಧ್ಯದಲ್ಲಿ ಅಂಡಾಶಯದಿಂದ ಅಂಡೋತ್ಪತ್ತಿಯಾಗುವಾಗ ಸುಮಾರು 13 ಅಥವಾ 14ನೇ ದಿನದಲ್ಲಿ ಸ್ವಲ್ಪ ಬಿಳಿಮುಟ್ಟಾಗಬಹುದು. ಲೈಂಗಿಕವಾಗಿ ಉದ್ರೇಕಗೊಂಡಾಗಲೂ ಸ್ವಲ್ಪ ಮಟ್ಟಿಗೆ ಬಿಳಿಮುಟ್ಟು ಹೆಚ್ಚಾಗಬಹುದು. ಇದಕ್ಕೆಲ್ಲಾ ಚಿಕಿತ್ಸೆ ಬೇಡ. ಋತುಸ್ರಾವದ ನಂತರವೂ ಬಿಳಿಮುಟ್ಟಾದರೆ ಅದು ಸಹಜವಲ್ಲ ಮತ್ತು ಯಾವುದೇ ಬಿಳಿಮುಟ್ಟು ವಾಸನೆಯಿಂದ ಕೂಡಿದ್ದರೆ, ಜನನಾಂಗದ ಭಾಗದಲ್ಲಿ ತುರಿಕೆಯಿದ್ದಾಗ ಹಸಿರು–ಹಳದಿ ಬಣ್ಣದಿಂದ ಕೂಡಿದ್ದರೆ ಆಗ ಅದು ಅಸಹಜ ಎನಿಸಿಕೊಳ್ಳುತ್ತದೆ. ನೀವಾಗ ತಜ್ಞವೈದ್ಯರನ್ನು ಸಂಪರ್ಕಿಸಲೇಬೇಕು.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಸ್ಪಂದನ...

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳಿಸಬಹುದು.

ಬೇಸಿಗೆಯ ಧಗೆಗೆ ತ್ವಚೆಯ ಆರೈಕೆ

ಸಂದರ್ಶನ: ರೇಷ್ಮಾ

ಬೇಸಿಗೆ ಕಾಲ ಆರಂಭವಾಗಿ ಕೆಲದಿನಗಳು ಕಳೆದಿವೆ. ಈ ವರ್ಷ ಬಿಸಿಲ ಧಗೆ ಕೊಂಚ ಹೆಚ್ಚೇ ಇದೆ ಎನ್ನಬಹುದು. ಇದರೊಂದಿಗೆ ಬೇಸಿಗೆ ಬಂದಾಕ್ಷಣ ಸನ್‌ಬರ್ನ್, ಟ್ಯಾನ್, ದದ್ದು ಹಾಗೂ ತುರಿಕೆಯಂತಹ ಚರ್ಮದ ಸಮಸ್ಯೆಗಳು ಸಾಮಾನ್ಯ. ಈ ಸಮಸ್ಯೆಗಳಿಗೆ ಕಾರಣವೇನು? ಪರಿಹಾರವೇನು? ಹಾಗೂ ಚರ್ಮದ ಆರೋಗ್ಯ ರಕ್ಷಣೆಗೆ ಡಯೆಟ್ ಪಾಲನೆ ಹೇಗೆ ಎಂಬೆಲ್ಲಾ ವಿಷಯದ ಬಗ್ಗೆ ಮಾತನಾಡಿದ್ದಾರೆ ಬೆಂಗಳೂರಿನ ಚರ್ಮವೈದ್ಯೆ ಡಾ. ಪ್ರಿಯಾಂಕ ರೆಡ್ಡಿ.

- **ಬೇಸಿಗೆಯಲ್ಲಿ ಕಾಣಿಸುವ ಸಾಮಾನ್ಯ ಚರ್ಮದ ಸಮಸ್ಯೆಗಳು ಹಾಗೂ ಅವುಗಳಿಗೆ ಕಾರಣಗಳು?**

ಬೇಸಿಗೆಯಲ್ಲಿ ಬೆವರುವುದು ಜಾಸ್ತಿ ಆದ ಕಾರಣ ಅಲರ್ಜಿ, ಮೊಡವೆ ಹಾಗೂ ರೋಮದ ಬುಡದ ಫಾಲಿಕಲ್‌ಗಳಲ್ಲಿ ಸೋಂಕು ಉಂಟಾಗುವುದು ಮುಂತಾದ ಸಮಸ್ಯೆಗಳು ಹೆಚ್ಚು ಕಾಣಿಸುತ್ತವೆ. ಅದರಲ್ಲೂ ಕಂಕುಳಿನ ಕೆಳಗೆ, ಸ್ತನದ ಕೆಳಗೆ, ತೊಡೆ ಸಂದಿ ಸೇರಿದಂತೆ ಬೆವರು ನಿಲ್ಲುವ ಜಾಗದಲ್ಲಿ ಹೆಚ್ಚು ಸಮಸ್ಯೆ ಕಾಣಿಸುತ್ತದೆ. ಅದರೊಂದಿಗೆ ಸೂರ್ಯನ ಕಿರಣಗಳು ನೇರವಾಗಿ ಕೂದಲು ಹಾಗೂ ಚರ್ಮಕ್ಕೆ ತಾಗುವುದರಿಂದ ಸನ್ ಬರ್ನ್, ಟ್ಯಾನ್ ಮುಂತಾದ ತೊಂದರೆಗಳು ಕಾಣಿಸಿಕೊಳ್ಳುತ್ತವೆ.

- **ಚರ್ಮದ ಕಾಳಜಿ ಹೇಗೆ?**

ಕಾಳಜಿ ಎಂದರೆ ಮುಖ ಅಥವಾ ಚರ್ಮದ ಮೇಲೆ ಬಗೆ ಬಗೆಯ ಕ್ರೀಮ್‌ಗಳನ್ನು ಹಚ್ಚುವುದು ಎಂದು ಅರ್ಥವಲ್ಲ. ಕಾಳಜಿ ಎಂಬುದು ಇಡೀ ದೇಹಪ್ರಕೃತಿಯನ್ನು ಅವಲಂಬಿಸಿರುತ್ತದೆ. ಚರ್ಮದ ಆರೋಗ್ಯವು ನಮ್ಮ ಜೀವನಶೈಲಿ, ಆಹಾರಕ್ರಮ ಎಲ್ಲವನ್ನೂ ಅವಲಂಬಿಸಿದೆ. ಬೇಸಿಗೆಯಲ್ಲಿ ಬೆವರಿನ ಕಾರಣದಿಂದ ಹಲವು ಸಮಸ್ಯೆಗಳು ಕಾಣಿಸಿಕೊಳ್ಳುವುದರಿಂದ ದೇಹದಲ್ಲಿ ಬೆವರಿನ ಅಂಶ ನಿಲ್ಲದಂತೆ ನೋಡಿಕೊಳ್ಳಬೇಕು. ಅದರಲ್ಲೂ ಜಿಮ್, ವ್ಯಾಯಾಮದಂತಹ ಚಟುವಟಿಕೆಯ ನಂತರ ತಕ್ಷಣಕ್ಕೆ ಸ್ನಾನ ಮಾಡಬೇಕು. ಸ್ನಾನ ಮಾಡಲು ಸಾಧ್ಯವಾಗದಿದ್ದರೆ ಒದ್ದೆ ಹತ್ತಿಬಟ್ಟೆಯಿಂದ ಮೈ ಒರೆಸಿಕೊಳ್ಳಬೇಕು.



ಡಾ. ಪ್ರಿಯಾಂಕ ರೆಡ್ಡಿ

ಪ್ರಜಾವಾಣಿ ನೋಡಿಯೊ

ಸಂದರ್ಶನದ ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ನೋಡಿ

- **ಸಮಸ್ಯೆ ನಿವಾರಣೆಗೆ ಮನೆಮದ್ದುಗಳು?**

ಚರ್ಮವನ್ನು ಸಮಸ್ಯೆ ಕಾಡದಂತೆ ಕಾಪಾಡಿಕೊಳ್ಳಲು ಪ್ರತಿನಿತ್ಯ ಲೋಳೆಸರ ತಿರುಳನ್ನು ಹಚ್ಚಿಕೊಳ್ಳಬೇಕು. ಅಂಗಡಿಯಲ್ಲಿ ಡಬ್ಬಿಗಳಲ್ಲಿ ಸಿಗುವ ಲೋಳೆಸರಕ್ಕಿಂತ ಕಾಂಡದಿಂದ ಸಿಗುವ ತಾಜಾ ತಿರುಳನ್ನು ಬಳಸುವುದು ಉತ್ತಮ. ಮನೆಯಲ್ಲಿ ತೇಯ್ದು ತಯಾರಿಸಿದ ಶ್ರೀಗಂಧದ ಲೇಪ ಕೂಡ ಬೇಸಿಗೆಯಲ್ಲಿ ಚರ್ಮದ ಆರೋಗ್ಯ ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.

ಮೊಟ್ಟೆ ಬಿರಿಯಾನಿ, ಕ್ಯಾಪ್ಸಿಕಂ ಮೊಟ್ಟೆ ಫ್ರೈ

ಹೇಮಲತಾ ಬೆಂಗಳೂರು

ನಳಪಾಕ

ಮೊಟ್ಟೆ ಬಿರಿಯಾನಿ

ಬೇಕಾಗುವ ಸಾಮಗ್ರಿಗಳು: ಮೊಟ್ಟೆ–5, ಟೊಮೆಟೊ–1, ಹಸಿಮೆಣಸು – 4ರಿಂದ 5, ಪುದಿನ – ಸ್ವಲ್ಪ, ಮೊಸರು – 1/4 ಕಪ್, ಶುಂಠಿ–ಬೆಳ್ಳುಳ್ಳಿ ಪೇಸ್ಟ್ – 1 ಟೀ ಚಮಚ, ಅರಿಸಿನ – 4 ಚಮಚ, ಖಾರದಪುಡಿ – 1 ಚಮಚ, ಕೊತ್ತಂಬರಿ ಪುಡಿ– 1 ಚಮಚ, ಗರಂಮಸಾಲ – 1 ಚಮಚ, ಕಸೂರಿಮೇಥಿ – 2 ಚಮಚ, ಉಪ್ಪು– ರುಚಿಗೆ ತಕ್ಕಷ್ಟು, ಅಕ್ಕಿ– 250 ಗ್ರಾಂ, ಎಣ್ಣೆ – 4ರಿಂದ 5 ಚಮಚ, ಮಸಾಲೆ ಸಾಮಾನುಗಳು (ಚಕ್ಕೆ, ಲವಂಗ, ಏಲಕ್ಕಿ– 2, ಪಲಾವ್ ಎಲೆ – 2, ಮರಾಠಿ ಮೊಗ್ಗು – 2, ಅನಾನಸ್ ಹೂ – 1)

ತಯಾರಿಸುವ ವಿಧಾನ: ಕುಕರ್‌ಗೆ ಎಣ್ಣೆ ಹಾಕಿ ಬಿಸಿಯಾದ ಮೇಲೆ ಮಸಾಲೆ ಸಾಮಾನುಗಳನ್ನು ಹಾಕಿ ಒಂದು ನಿಮಿಷ ಹುರಿಯಿರಿ. ಇದಕ್ಕೆ ಹೆಚ್ಚಿದ ಈರುಳ್ಳಿ ಹಾಕಿ, ಕಂದು ಬಣ್ಣ ಬರುವವರೆಗೂ ಹುರಿದುಕೊಳ್ಳಿ. ನಂತರ ಹೆಚ್ಚಿದ ಟೊಮೊಟೊ, ಪುದಿನ, ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಹಾಕಿ, ಟೊಮೆಟೊ ಮೆತ್ತಗಾಗುವವರೆಗೂ ಬಾಡಿಸಿಕೊಳ್ಳಿ. ಅರಿಸಿನ, ಖಾರದಪುಡಿ, ಕೊತ್ತಂಬರಿ ಪುಡಿ, ಗರಂಮಸಾಲೆ, ಕಸೂರಿಮೇಥಿ, ಉಪ್ಪು ಹಾಕಿ ಕೈಯಾಡಿಸಿ. ಈಗ ಮೊಸರು ಹಾಕಿ ತಿರುಗಿಸಿ, ಎಣ್ಣೆ ಬಿಡುವವರೆಗೂ ತಿರುವುತ್ತಿರಬೇಕು. ಎಣ್ಣೆ ಬಿಟ್ಟ ನಂತರ ಅರ್ಧ ಲೋಟ ನೀರು ಹಾಕಿ ಕುದಿಸಿ. ಕುದಿ ಬಂದ ನಂತರ ಒಂದೊಂದೇ ಮೊಟ್ಟೆಯನ್ನು ಒಡೆದು ಒಂದರ ಪಕ್ಕ ಒಂದರಂತೆ ಬಿಡಬೇಕು. ಮೊಟ್ಟೆ ಬೇಯುವವರೆಗೂ ಯಾವುದೇ ಕಾರಣಕ್ಕೂ ಕೈ ಆಡಿಸಬಾರದು. ಮೊಟ್ಟೆ ಬೆಂದ ನಂತರ 2 ಲೋಟ ನೀರು ಹಾಕಿ, ನೀರು ಕುದಿ ಬಂದ ನಂತರ ನೆನೆಸಿಟ್ಟ ಅಕ್ಕಿಯನ್ನು ಹಾಕಿ, ಕುಕರ್ ಮುಚ್ಚಳ ಮುಚ್ಚಿ ಎರಡು ವಿಷಲ್ ಕೂಗಿಸಿ. ಈಗ ಬಿಸಿಬಿಸಿಯಾದ ರುಚಿಕರ ಮೊಟ್ಟೆ ಬಿರಿಯಾನಿ ಸವಿಯಲು ಸಿದ್ಧ. ಇದನ್ನು ಮೊಸರುಬಜ್ಜಿಯೊಂದಿಗೆ ಸೇವಿಸಬಹುದು.



ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ



ಕ್ಯಾಪ್ಸಿಕಂ ಮೊಟ್ಟೆ ಫ್ರೈ

ಬೇಕಾಗುವ ಸಾಮಗ್ರಿಗಳು: ಕ್ಯಾಪ್ಸಿಕಂ – 1, ಮೊಟ್ಟೆ – 5, ಈರುಳ್ಳಿ – 1, ಟೊಮೆಟೊ – 1, ಶುಂಠಿ–ಬೆಳ್ಳುಳ್ಳಿ ಪೇಸ್ಟ್ – 1 ಚಮಚ, ಖಾರದಪುಡಿ – 1 ಚಮಚ, ಕೊತ್ತಂಬರಿ ಪುಡಿ – 1 ಚಮಚ, ಗರಂ ಮಸಾಲ – 1 ಚಮಚ, ಅರಿಸಿನ – 1/4 ಚಮಚ, ಕಾಳುಮೆಣಸಿನ ಪುಡಿ – 1/2 ಚಮಚ, ಕೊತ್ತಂಬರಿ ಸೊಪ್ಪು – ಸ್ವಲ್ಪ, ಉಪ್ಪು – ರುಚಿಗೆ ತಕ್ಕಷ್ಟು, ಎಣ್ಣೆ – 2 ಚಮಚ

ತಯಾರಿಸುವ ವಿಧಾನ: ಮೊಟ್ಟೆಗಳನ್ನು ಬೇಯಿಸಿ ಸಿಪ್ಪೆ ತೆಗೆದು ಸಣ್ಣದಾಗಿ ಹೆಚ್ಚಿಕೊಳ್ಳಿ. ಪಾತ್ರೆಗೆ ಎಣ್ಣೆ ಹಾಕಿ ಬಿಸಿಯಾದ ಮೇಲೆ ಈರುಳ್ಳಿ, ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಹಾಕಿ ಹುರಿದುಕೊಳ್ಳಿ. ನಂತರ ಟೊಮೆಟೊ ಮತ್ತು ಕ್ಯಾಪ್ಸಿಕಂ ಹಾಕಿ ಟೊಮೆಟೊ ಮೆತ್ತಗಾಗುವವರೆಗೂ ಕೈಯಾಡಿಸಿ. ಅದಕ್ಕೆ ಖಾರದಪುಡಿ, ಕೊತ್ತಂಬರಿ ಪುಡಿ, ಗರಂಮಸಾಲ, ಅರಿಸಿನ, ಮೆಣಸಿನ ಪುಡಿ ಹಾಕಿ ಹಸಿವಾಸನೆ ಹೋಗುವವರೆಗೂ ಹುರಿದುಕೊಳ್ಳಿ. ಈಗ ಹೆಚ್ಚಿಕೊಂಡ ಮೊಟ್ಟೆಯನ್ನು ಸೇರಿಸಿ 2 ನಿಮಿಷ ಮಿಶ್ರಣ ಮಾಡಿ ಕೊತ್ತಂಬರಿ ಸೊಪ್ಪಿನಿಂದ ಅಲಂಕರಿಸಿದರೆ ಕ್ಯಾಪ್ಸಿಕಂ ಮೊಟ್ಟೆ ಫ್ರೈ ರೆಡಿ.

ಆಗತ್ಯ ಸಿದ್ಧತೆ ಮಾಡಿಕೊಳ್ಳುತ್ತಿರುವ ಆರೋಗ್ಯ ಇಲಾಖೆ ● ಏಪ್ರಿಲ್ ಮೊದಲ ವಾರದಲ್ಲಿ ಪ್ರಾರಂಭ ಸಾಧ್ಯತೆ

ಆರೋಗ್ಯ ಉಪ ಕೇಂದ್ರಗಳಲ್ಲೇ ಕೋವಿಡ್ ಲಸಿಕೆ

• ವರುಣ ಹೆಗಡೆ

ಬೆಂಗಳೂರು: ಗ್ರಾಮೀಣ ಪ್ರದೇಶದಲ್ಲಿ ಸಮರ್ಪಕ ಸಾರಿಗೆ ವ್ಯವಸ್ಥೆ ಇಲ್ಲದಿರುವುದರಿಂದ ಆರೋಗ್ಯ ಕೇಂದ್ರಗಳಿಗೆ ತೆರಳಿ, ಕೋವಿಡ್ ಲಸಿಕೆ ಪಡೆಯುವುದು ಹಿರಿಯ ನಾಗರಿಕರು ಸೇರಿದಂತೆ ಅರ್ಹ ಫಲಾನುಭವಿಗಳಿಗೆ ಸವಾಲಾಗಿದೆ. ಹೀಗಾಗಿ, ರಾಜ್ಯದ 8,871 ಆರೋಗ್ಯ ಉಪ ಕೇಂದ್ರಗಳನ್ನೇ ಕೋವಿಡ್ ಲಸಿಕೆ ಕೇಂದ್ರಗಳನ್ನಾಗಿ ಪರಿವರ್ತಿಸಲು ಸರ್ಕಾರ ಮುಂದಾಗಿದೆ.

ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವ ಕಾರಣ ಲಸಿಕೆ ವಿತರಣೆ ಅಭಿಯಾನವನ್ನು ಪರಿಣಾಮಕಾರಿಯಾಗಿ ನಡೆಸಲು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಶಿಫಾರಸು ಮಾಡಿದೆ. ಆರೋಗ್ಯ ಇಲಾಖೆಯು ದಿನವೊಂದಕ್ಕೆ 3 ಲಕ್ಷ ಮಂದಿಗೆ ಲಸಿಕೆ ವಿತರಿಸುವ ಗುರಿಯನ್ನು ಹಾಕಿಕೊಂಡಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇರಿದಂತೆ ಸದ್ಯ 3,500ಕ್ಕೂ ಅಧಿಕ ಕೇಂದ್ರಗಳಲ್ಲಿ ಲಸಿಕೆ ವಿತರಣೆ ನಡೆಯುತ್ತಿದೆ. ಆದರೆ, ಗ್ರಾಮೀಣ ಪ್ರದೇಶದಲ್ಲಿ ಲಸಿಕೆ ಪಡೆಯಲು ಹಿರಿಯ ನಾಗರಿಕರು ಹಾಗೂ ಕೋವಿಡೇತರ ಕಾಯಿಲೆ ಎದುರಿಸುತ್ತಿರುವ 45 ವರ್ಷ ಮೇಲ್ಪಟ್ಟವರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ಹೀಗಾಗಿ, ಎಲ್ಲ ಉಪ ಕೇಂದ್ರಗಳಲ್ಲಿ ಹಂತ ಹಂತವಾಗಿ ಲಸಿಕೆ ವಿತರಣೆಗೆ ಆರೋಗ್ಯ ಇಲಾಖೆ ತಯಾರಿ ನಡೆಸಿದೆ.

ದಟ್ಟಣೆ ನಿವಾರಣೆ: ಕೇಂದ್ರ ಸರ್ಕಾರದ ಸೂಚನೆ ಅನುಸಾರ ರಾಜ್ಯದಲ್ಲಿಯೂ ಏಪ್ರಿಲ್ 1ರಿಂದ 45 ವರ್ಷ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ವಿತರಣೆ ಪ್ರಾರಂಭವಾಗಲಿದೆ. ಹೀಗಾಗಿ, ಸದ್ಯ ಇರುವ ಆರೋಗ್ಯ ಕೇಂದ್ರಗಳಲ್ಲಿ ದಟ್ಟಣೆ ಹೆಚ್ಚಿ, ಹಿರಿಯ ನಾಗರಿಕರಿಗೆ ಸಮಸ್ಯೆ ಆಗಬಾರದು ಎಂಬ ಕಾರಣಕ್ಕೆ ಕೂಡ ಆರೋಗ್ಯ ಉಪ ಕೇಂದ್ರಗಳನ್ನು ಲಸಿಕೆ ವಿತರಣೆಗೆ ಬಳಸಿಕೊಳ್ಳಲಾಗುತ್ತಿದೆ.

'ಹೊರರೋಗಿಗಳಿಗೆ ಸೇವೆ ಒದಗಿಸುವ ಆರೋಗ್ಯ ಉಪ ಕೇಂದ್ರಗಳು 3 ಸಾವಿರದಿಂದ 5 ಸಾವಿರ ಜನಸಂಖ್ಯೆಗೆ ಒಂದರಂತೆ ಕಾರ್ಯನಿರ್ವಹಿಸುತ್ತಿವೆ. ಸಾರಿಗೆ ಸಮಸ್ಯೆಯಿಂದಲೇ ಬಹುತೇಕ ಹಿರಿಯ ನಾಗರಿಕರು ಲಸಿಕೆ ಹಾಕುವ ಕೇಂದ್ರಗಳಿಗೆ ತೆರಳಲು ಹಿಂದೇಟು ಹಾಕುತ್ತಿದ್ದಾರೆ. ಆರೋಗ್ಯ ಉಪ ಕೇಂದ್ರಗಳಲ್ಲಿ ಲಸಿಕೆ ಅಭಿಯಾನ ಪ್ರಾರಂಭಿಸಿದ ಬಳಿಕ ನಾವು ಹಾಕಿಕೊಂಡ ಗುರಿಯನ್ನು ತಲುಪಲು ಸಾಧ್ಯವಾಗುತ್ತದೆ' ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.



ಆರೋಗ್ಯ ಕೇಂದ್ರದ ಮುಂಭಾಗ ಹಿರಿಯ ನಾಗರಿಕರು ಲಸಿಕೆ ಪಡೆಯಲು ಕಾಯುತ್ತಿರುವುದು – ಪ್ರಜಾವಾಣಿ ಚಿತ್ರ

ಪರಿವರ್ತನೆಗೆ ಕೇಂದ್ರ ಅನುಮತಿ

ಆರೋಗ್ಯ ಉಪ ಕೇಂದ್ರಗಳನ್ನು ಕೋವಿಡ್ ಲಸಿಕೆ ಕೇಂದ್ರಗಳನ್ನಾಗಿ ಪರಿವರ್ತಿಸಲು ಅವಕಾಶ ನೀಡುವಂತೆ ಆರೋಗ್ಯ ಇಲಾಖೆಯು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿತ್ತು. ಇದಕ್ಕೆ ಸ್ಪಂದಿಸಿರುವ ಕೇಂದ್ರ ಆರೋಗ್ಯ ಸಚಿವಾಲಯ ಅನುಮತಿ ನೀಡಿ, ಲಸಿಕೆ ವಿತರಣೆಗೆ ಸೂಚಿಸಿದೆ. ಆದರೆ, ಕೇಂದ್ರದಲ್ಲಿ ಸರದಿಗಾಗಿ ಕಾಯುವ ಪ್ರದೇಶ, ಲಸಿಕೆ ಪಡೆಯುವ ಕೊಠಡಿ ಹಾಗೂ ವೀಕ್ಷಣಾ ಕೊಠಡಿ ಇರಬೇಕು. ಲಸಿಕೆಗಳ ಶೇಖರಣೆಗೆ ಶೀತಲೀಕರಣ ವ್ಯವಸ್ಥೆ ಮಾಡಿಕೊಳ್ಳುವ ಜತೆಗೆ ಅಗತ್ಯ ಆರೋಗ್ಯ ಸಿಬ್ಬಂದಿಯನ್ನು ನಿಯೋಜಿಸಬೇಕು. ಲಸಿಕೆ ವಿತರಣೆಗೆ ಅನುಸರಿಸಬೇಕಾದ ಮಾರ್ಗಸೂಚಿ ಪಾಲಿಸಬೇಕು ಎಂದು ತಿಳಿಸಿದೆ.

ಎಲ್ಲ ಅರ್ಹ ಫಲಾನುಭವಿಗಳು ಲಸಿಕೆ ಪಡೆದುಕೊಳ್ಳಬೇಕು. ಆರೋಗ್ಯ ಉಪ ಕೇಂದ್ರಗಳಲ್ಲಿ ಲಸಿಕೆ ವಿತರಣೆ ಪ್ರಾರಂಭಿಸಲು ಯೋಜನೆ ರೂಪಿಸಲಾಗುತ್ತಿದ್ದು, ಮಾರ್ಗಸೂಚಿ ಹೊರಡಿಸಲಾಗುವುದು

ಡಾ. ಓಂಪ್ರಕಾಶ್ ಪಾಟೀಲ್, ಆರೋಗ್ಯ ಇಲಾಖೆ ನಿರ್ದೇಶಕ

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ.ಒಆರ್‌ಜಿ ವರ್ಲ್ಡೋಮೀಟರ್

	ವಿಶ್ವ	ಭಾರತ	ರಾಜ್ಯ
ಒಟ್ಟು ಪ್ರಕರಣ / ಒಟ್ಟು ಸೋಂಕಿತರು	12.63 ಕೋಟಿ ▲	1.19 ಕೋಟಿ ▲	9,81,044 ▲
ಸಕ್ರಿಯ ಪ್ರಕರಣ	2.16 ಕೋಟಿ ▲	4.48 ಲಕ್ಷ ▲	19,553 ▲
ಗುಣಮುಖ	10.18 ಕೋಟಿ ▲	1.12 ಕೋಟಿ	9,48,988 ▲
ಸಾವು	27.70 ಲಕ್ಷ ▲	1.61 ಲಕ್ಷ	12,484 ▲

ದಿನದ ವರದಿ

	ವಿಶ್ವ	ಭಾರತ	ರಾಜ್ಯ
ಹೊಸ ಪ್ರಕರಣ	6.28 ಲಕ್ಷ ▲	60,376 ▲	2,566 ▲
ಗುಣಮುಖ	10.17 ಲಕ್ಷ ▲	29,250 ▲	1,207 ▲
ಸಾವು	10,387 ▼	277 ▼	13 ▲

174 ಐಸಿಯುನಲ್ಲಿ ಇರುವವರು ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರೆಜಿಲ್	ಅಮೆರಿಕ	ಫ್ರಾನ್ಸ್
97,586 ▲	67,046 ▲	45,641 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಫ್ರಾನ್ಸ್	ಬ್ರೆಜಿಲ್
70.18 ▼	40.44 ▲	12.48

ಎಲ್ಲಿ ಹೆಚ್ಚು ಸಾವು

ರಾಜ್ಯ	ಸಾವು
ಮಹಾರಾಷ್ಟ್ರ	53,907 ▲
ತಮಿಳುನಾಡು	12,650 ▲
ದೆಹಲಿ	10,978

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ರಾಜ್ಯ	ಪ್ರಕರಣ
ಮಹಾರಾಷ್ಟ್ರ	26.37 ▲
ಕೇರಳ	11.13 ▲
ಆಂಧ್ರಪ್ರದೇಶ	8.96 ▲

ಪ್ರಜಾವಾಣಿ ಗ್ರಾಫಿಕ್ಸ್

ಪರೀಕ್ಷೆ ಜತೆಗೆ ಪ್ರಕರಣ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಿಸಿದಂತೆ ಪ್ರಕರಣಗಳೂ ಅಧಿಕ ಸಂಖ್ಯೆಯಲ್ಲಿ ಪತ್ತೆಯಾಗುತ್ತಿವೆ. ಶುಕ್ರವಾರ 1.12 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದ್ದು, 2,566 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಕೇವಲ 48 ಗಂಟೆಗಳಲ್ಲಿ 5,089 ಪ್ರಕರಣಗಳು ಖಚಿಪಟ್ಟಿವೆ. ಈವರೆಗೆ ಸೋಂಕಿತರಾದವರ ಸಂಖ್ಯೆ 9.81 ಲಕ್ಷ ದಾಟಿದೆ. ಬೆಂಗಳೂರು (1,490), ಉಡುಪಿ (210), ತುಮಕೂರು (126), ಕಲಬುರ್ಗಿಯಲ್ಲಿ (109) ಹೊಸ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ವರದಿಯಾಗಿವೆ. ಕೋವಿಡ್ ಪೀಡಿತ ಮೃತರ ಸಂಖ್ಯೆ ಕೂಡ ಮತ್ತೆ ಏರಿಕೆ ಕಂಡಿದ್ದು, ಬೆಂಗಳೂರಿನಲ್ಲಿ ಮೂವರು, ಕಲಬುರ್ಗಿ ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ ತಲಾ ಇಬ್ಬರು, ತುಮಕೂರು, ಮೈಸೂರು, ಮಂಡ್ಯ, ಕೋಲಾರ, ಬೀದರ್, ಬೆಳಗಾವಿಯಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಈವರೆಗೆ ಮೃತಪಟ್ಟವರ ಸಂಖ್ಯೆ 12,484ಕ್ಕೆ ತಲುಪಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 20 ಸಾವಿರದ ಗಡಿ (19,553) ಸಮೀಪಿಸಿದೆ. ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗುವವರ ಸಂಖ್ಯೆ ಮತ್ತಷ್ಟು ಏರಿಕೆ ಕಂಡಿದ್ದು, ಒಂದು ದಿನದ ಅವಧಿಯಲ್ಲಿ 24 ಮಂದಿ ಐಸಿಯುಗೆ ದಾಖಲಾಗಿದ್ದಾರೆ. ಸದ್ಯ 174 ಮಂದಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಈವರೆಗೆ 31.76 ಲಕ್ಷ ಡೋಸ್ ಲಸಿಕೆಯನ್ನು ಫಲಾನುಭವಿಗಳಿಗೆ ನೀಡಲಾಗಿದೆ. 5.42 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಲಸಿಕೆ ಪಡೆದಿದ್ದು, ಇವರಲ್ಲಿ 3.32 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. 60 ವರ್ಷ ಮೇಲ್ಪಟ್ಟವರಲ್ಲಿ 15.61 ಲಕ್ಷ ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. 45ರಿಂದ 60 ವರ್ಷದೊಳಗಿನ ಕೋವಿಡೇತರ ಕಾಯಿಲೆ ಎದುರಿಸುತ್ತಿರುವವರಲ್ಲಿ 4.51 ಲಕ್ಷ ಮಂದಿ ಲಸಿಕೆ ಪಡೆದುಕೊಂಡಿದ್ದಾರೆ.

ಅಂಕಿ ಅಂಶ ಮುಚ್ಚಿಡುವ ಅಗತ್ಯ ಇಲ್ಲ: ಸುಧಾಕರ್

ಬೆಂಗಳೂರು: 'ಕೋವಿಡ್ ಅಂಕಿ– ಅಂಶಗಳನ್ನು ಮುಚ್ಚಿಡುವ ಅವಶ್ಯ ಸರ್ಕಾರಕ್ಕೆ ಇಲ್ಲ, ಅದು ಸಾಧ್ಯವೂ ಇಲ್ಲ' ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಹೇಳಿದ್ದಾರೆ.

'ಸರ್ಕಾರ ಕೋವಿಡ್ ಅಂಕಿ ಅಂಶ, ಸಾವಿನ ಸಂಖ್ಯೆ ಮುಚ್ಚಿಡುತ್ತಿದೆ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯೆ ನೀಡಿರುವ ಅವರು, ವಾಸ್ತವ ಅಂಕಿ–ಅಂಶಗಳನ್ನು ಮಾತ್ರ ಸರ್ಕಾರ ಘೋಷಿಸುತ್ತಿದೆ ಎಂದು ಹೇಳಿದ್ದಾರೆ.

'ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಎಲ್ಲ ವಿರೋಧ ಪಕ್ಷಗಳ ನಾಯಕರು ಸಲಹೆ, ಸೂಚನೆಗಳನ್ನು ನೀಡಬಹುದು. ಲೋಪಗಳಿದ್ದರೂ ಹೇಳಬಹುದು. ಚರ್ಚೆಯ ವಿಚಾರದಲ್ಲಿ ಮುಕ್ತವಾಗಿದ್ದೇವೆ' ಎಂದಿದ್ದಾರೆ.

'ಕೋವಿಡ್ ಹರಡುವುದನ್ನು ತಪ್ಪಿಸಲು ಕಳೆದ ವರ್ಷವೂ ಅನೇಕ ಹಬ್ಬಗಳ ಆಚರಣೆಗಳನ್ನು ನಿಯಂತ್ರಿಸಲಾಗಿತ್ತು. ಈಗಲೂ ಮಾರ್ಗಸೂಚಿ ಹೊರಡಿಸಲಾಗಿದೆ. ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದ್ದು, ಜನರು ಇದನ್ನು ಗಂಭೀರವಾಗಿ ಪರಿಗಣಿಸಿ ಸುರಕ್ಷತಾ ಕ್ರಮ ವಹಿಸಬೇಕು. ಯುವಜನರು ತಮ್ಮ ಕುಟುಂಬದ ಹಿರಿಯರನ್ನು ಲಸಿಕೆ ಪಡೆಯಲು ಕೇಂದ್ರಕ್ಕೆ ಕರೆದುಕೊಂಡು ಹೋಗಬೇಕು' ಎಂದು ಕೋರಿದರು.

ಕೊಳೆಗೇರಿ: ಹಕ್ಕುಪತ್ರ ಪಡೆಯುವ ದರದಲ್ಲಿ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ಎಲ್ಲ ನಗರ ಪ್ರದೇಶಗಳ ಕೊಳೆಗೇರಿಗಳಲ್ಲಿ ವಾಸಿಸುವವರಿಗೆ ಹಕ್ಕುಪತ್ರ ಪಡೆಯಲು ನಿಗದಿಪಡಿಸಿದ್ದ ದರವನ್ನು ಶೇ 50ಕ್ಕಿಂತ ಹೆಚ್ಚು ಕಡಿತಗೊಳಿಸಿ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯದ 1,873 ಕೊಳೆಗೇರಿಗಳಲ್ಲಿ ವಾಸ ಮಾಡುತ್ತಿರುವ 15,83,134 ಜನರನ್ನು ಒಳಗೊಂಡ 3,12,969 ಕುಟುಂಬಗಳಿಗೆ ಇದರಿಂದ ಅನುಕೂಲವಾಗಲಿದೆ ಎಂದು ವಸತಿ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 600 ಚದರಡಿ ವಿಸ್ತೀರ್ಣದವರೆಗೆ ಮನೆ ಅಥವಾ ಗುಡಿಸಲು ಹೊಂದಿದ್ದವರಿಗೆ ಹಕ್ಕುಪತ್ರ ಪಡೆಯಲು ಸಾಮಾನ್ಯವರ್ಗದವರಿಗೆ ₹10 ಸಾವಿರ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ(ಎಸ್‌ಸಿಎಸ್‌ಟಿ) ₹5 ಸಾವಿರ ವಿಧಿಸಲಾಗುತ್ತಿತ್ತು. ಅದನ್ನು ಕ್ರಮವಾಗಿ ₹4 ಸಾವಿರ ಹಾಗೂ ₹2 ಸಾವಿರಕ್ಕೆ ಇಳಿಸಲಾಗಿದೆ. ನಗರಸಭೆ ವ್ಯಾಪ್ತಿಯಲ್ಲಿ 600 ಚದರ ಅಡಿಗಳ ವಿಸ್ತೀರ್ಣದವರೆಗೂ ಈ ಹಿಂದೆ ಇದ್ದ ₹ 4 ಸಾವಿರ ಹಾಗೂ ಎಸ್‌ಸಿ/ ಎಸ್‌ಟಿ ಸಮುದಾಯದವರಿಗೆ ₹2 ಸಾವಿರ ದರವನ್ನು ಕ್ರಮವಾಗಿ ₹2 ಸಾವಿರ ಹಾಗೂ ₹1 ಸಾವಿರಕ್ಕೆ ಇಳಿಸಲಾಗಿದೆ.



ವಿ. ಸೋಮಣ್ಣ

ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಹಕ್ಕುಪತ್ರಗಳನ್ನು ಪಡೆಯಲು 1,200 ಚದರ ಅಡಿಗಳವರೆಗೆ ₹3 ಸಾವಿರ ಎಸ್‌ಸಿ/ ಎಸ್‌ಟಿ ಸಮುದಾಯದವರಿಗೆ ₹1,500 ನಿಗದಿ ಮಾಡಲಾಗಿತ್ತು. ಅದನ್ನು ಕ್ರಮವಾಗಿ ₹2ಸಾವಿರ ಹಾಗೂ ₹1 ಸಾವಿರಕ್ಕೆ ಇಳಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಸಿ.ಡಿ. ಪ್ರಕರಣ; ಎರಡು ಪುಟಗಳ ದೂರಿನಲ್ಲಿ ಯುವತಿ ಅಳಲು

'ಕಿರುಚಿತ್ರದಿಂದ ಪರಿಚಯ, ಲೈಂಗಿಕ ಕ್ರಿಯೆ ನಡೆಸಿ ವಂಚನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಮೇಶ ಜಾರಕಿಹೊಳಿ ಅವರಿಂದ ತಮಗೆ ಅನ್ಯಾಯ ಆಗಿದೆ ಎಂದು ತಮ್ಮ ವಕೀಲರ ಮೂಲಕ ಬೆಂಗಳೂರು ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಎರಡು ಪುಟಗಳ ದೂರು ನೀಡಿರುವ ಯುವತಿ, ಸಾಕಷ್ಟು ಆರೋಪಗಳನ್ನು ಮಾಡಿದ್ದಾರೆ.

ಈ ದೂರಿನ ಪ್ರಮುಖ ಅಂಶಗಳು ಇಲ್ಲಿವೆ.

- ಸಚಿವರಾಗಿದ್ದ ರಮೇಶ ಜಾರಕಿಹೊಳಿ ಅವರನ್ನು ಕಿರುಚಿತ್ರ ಮಾಡುವ ಸಂಬಂಧ ಭೇಟಿ ಮಾಡಿದ್ದೆ. ಮೊಬೈಲ್ ನಂಬರ್ ಪಡೆದಿದ್ದ ಅವರು, ಕರೆ ಮಾಡಿ ನನ್ನ ಹಾಗೂ ನನ್ನ ಕುಟುಂಬದವರ ಬಗ್ಗೆ ವಿಚಾರಿಸಿ ಸಲುಗೆಯಿಂದ ಮಾತನಾಡಲಾರಂಭಿಸಿದ್ದರು
- ಆಗಾಗ ಕರೆ ಮಾಡಿದ್ದ ಅವರು, ನನಗೆ ಸರ್ಕಾರಿ ನೌಕರಿ ಕೊಡಿಸುವುದಾಗಿ ಹೇಳಿದರು. ಅದಕ್ಕಾಗಿ ನೀನು ನನ್ನ ಜೊತೆ ಎಲ್ಲ ರೀತಿಯಲ್ಲೂ ಸಹಕಾರ ನೀಡಬೇಕು ಎಂದು ಕೇಳಿದ್ದರು.
- ಸಚಿವರಾಗಿದ್ದರಿಂದ ಕೆಲಸ ಕೊಡಿಸುತ್ತಾರೆಂದು ನಂಬಿದೆ. ನನ್ನ ಬಳಿ ಲಕ್ಷಾಂತರ ರೂಪಾಯಿ ಹಣವಿಲ್ಲದಿರುವುದನ್ನು ತಿಳಿದುಕೊಂಡಿದ್ದ ಅವರು, ಸಹಕರಿಸಿ ಖುಷಿ ನೀಡಬೇಕೆಂದು ಕೇಳಿದ್ದರು. ಅದನ್ನು ನಂಬಿ, ಅವರು ಹೇಳಿದಂತೆ ನಡೆದುಕೊಂಡು ಬಂದೆ.
- ದೆಹಲಿಯ ಕರ್ನಾಟಕ ಭವನದಲ್ಲಿ ಉಳಿದುಕೊಂಡಿದ್ದೇನೆ ಎಂದು ವಿಡಿಯೊ ಕರೆ ಮಾಡಿದ್ದ ಅವರು, ನನ್ನೊಂದಿಗೆ ಲೈಂಗಿಕ ವಿಚಾರಗಳನ್ನು ಮಾತನಾಡಿ, ಬಟ್ಟೆ ತೆಗೆದು ನಗ್ನಳಾಗಿ ಖಾಸಗಿ ಅಂಗಗಳನ್ನು ತೋರಿಸುವಂತೆ ಕೇಳಿದರು. ಅವರ ಹೇಳಿದಂತೆ ನಗ್ನಳಾಗಿ ಗುಪ್ತ ಅಂಗಗಳನ್ನು ತೋರಿಸಿದೆ. ಅದಕ್ಕೆ ಅವರು ಅಶ್ಲೀಲವಾಗಿ ಮಾತನಾಡಿದರು.
- ನನ್ನ ಸರ್ಕಾರಿ ಕೆಲಸದ ಬಗ್ಗೆ ಮಾತನಾಡಲು ಬೆಂಗಳೂರಿನಲ್ಲಿರುವ ನಿವಾಸಕ್ಕೆ ಬರುವಂತೆ ಅವರು ಹೇಳಿದ್ದರು. ಅವರು ಹೇಳಿದ ಅಪಾರ್ಟ್‌ಮೆಂಟ್‌ಗೆ ಹೋದೆ. ನನ್ನೊಂದಿಗೆ ಅಶ್ಲೀಲವಾಗಿ ಮಾತನಾಡಿದ ಅವರು, ತಮ್ಮ ಕೊಠಡಿಗೆ ಕರೆದೊಯ್ದು ಬಟ್ಟೆ ತೆಗೆಸಿ ಲೈಂಗಿಕ ಕ್ರಿಯೆ ನಡೆಸಿದರು. ಇದೇ ರೀತಿ ಎರಡು ಬಾರಿ ಅಪಾರ್ಟ್‌ಮೆಂಟ್‌ಗೆ ಕರೆದು ಲೈಂಗಿಕ ಕ್ರಿಯೆ ನಡೆಸಿದರು.
- ಎದುರು ಮಾತನಾಡಲು ಹೆದರಿ, ಅವರು ಹೇಳಿದಂತೆ ಮಾಡಿರುತ್ತೇನೆ. ಸರ್ಕಾರಿ ಕೆಲಸದ ಬಗ್ಗೆ ಕೇಳಿದಾಗ, ಸ್ವಲ್ಪ ಹಣ ಬೇಕಾದರೆ ಕೇಳು ಕೆಲಸದ ಕಥೆ ಆಮೇಲೆ ನೋಡೋಣ ಎಂದು ತಿರಸ್ಕಾರ ಮಾಡಿದರು.
- ಕೆಲಸದ ಆಮಿಷವೊಡ್ಡಿ ಲೈಂಗಿಕವಾಗಿ ಬಳಸಿಕೊಂಡಿದ್ದನ್ನು ಪ್ರಶ್ನಿಸಿದ್ದಕ್ಕೆ ಅಶ್ಲೀಲ ಹಾಗೂ ಅವಾಚ್ಯ ಶಬ್ದಗಳಿಂದ ನಿಂದಿಸಿ ಬೈದು ಕಳುಹಿಸಿದರು. ಇದಾದ ನಂತರ ಅವರು ನನ್ನೊಂದಿಗೆ ಮಾತನಾಡಿದ ಮತ್ತು ಲೈಂಗಿಕ ಸಂಭೋಗ ನಡೆಸಿದ ಅಶ್ಲೀಲ ವಿಡಿಯೊ ಮಾಧ್ಯಮಗಳಲ್ಲಿ ಪ್ರಸಾರವಾಗಿದೆ. ನಾನು ಇವರ ವಿರುದ್ಧ ದೂರು ನೀಡದಂತೆ ಈ ರೀತಿ ಕುತಂತ್ರವನ್ನು ರಮೇಶ ಜಾರಕಿಹೊಳಿ ಮಾಡಿರುತ್ತಾರೆ.
- ನಾನು ದೂರು ನೀಡದಂತೆ ತಡೆಯಲು ಮತ್ತು ಅವರ ಕೈಗೆ ಸಿಕ್ಕರೆ ಕೊಂದು ಬಿಡಲು ಎಲ್ಲ ಪ್ರಯತ್ನ ಮಾಡುತ್ತಿದ್ದಾರೆ. ಹಣವಂತರು, ಪ್ರಭಾವಿಗಳಾದ ಮಾಜಿ ಸಚಿವ ರಮೇಶ ಜಾರಕಿಹೊಳಿ ಅವರಿಂದ ನನಗೂ ಮತ್ತು ನನ್ನ ಕುಟುಂಬದ ಸದಸ್ಯರಿಗೂ ಜೀವ ಬೆದರಿಕೆ ಇದೆ. ದಯಮಾಡಿ, ನಮಗೆ ಭದ್ರತೆ ಕೊಡಿ.
- ನನ್ನನ್ನು ಲೈಂಗಿಕವಾಗಿ ಬಳಸಿಕೊಂಡು ಕೆಲಸ ಕೊಡಿಸದೇ ಮೋಸ ಮಾಡಿ ಅಶ್ಲೀಲವಾಗಿ ನಿಂದಿಸಿ ಕೊಲೆ ಮಾಡಲು ಪ್ರಯತ್ನಿಸುತ್ತಿರುವ ರಮೇಶ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡುತ್ತೇನೆ.
- ನಾನು ನೇರವಾಗಿ ಯಾವ ಠಾಣೆಗೂ ಬಂದು ದೂರು ನೀಡದಂತೆ ಪೊಲೀಸ್ ಇಲಾಖೆಯನ್ನು ಬಳಸಿಕೊಳ್ಳುತ್ತಿದ್ದಾರೆ. ನನ್ನ ಪರವಾಗಿ ಯಾರೂ ಮಾತನಾಡದಂತೆ ತೇಜೋವಧೆ ಮಾಡುತ್ತಿದ್ದಾರೆ. ನನಗೆ ಸಹಾಯ ಮಾಡಿದವರಿಗೆ ಹಾಗೂ ಮಾಡುತ್ತಿರುವವರಿಗೆ ಗುರಿಯಾಗಿಸಿ, ಅವರ ಮನೆಯವರು ಹಾಗೂ ಕುಟುಂಬಸ್ಥರಿಗೆ ಹಿಂಸೆ ಕೊಡುತ್ತಿರುವುದು ಬಹಳ ನೋವಾಗಿದೆ.
- ನನಗೆ ಭದ್ರತೆ ಇಲ್ಲದ ಕಾರಣ ಕೈಯಲ್ಲಿ ಬರೆದು ಈ ದೂರನ್ನು ನನಗೆ ಪರಿಚಿತರಾದ ವಕೀಲ ಜಗದೀಶ ಮೂಲಕ ಕಳುಹಿಸುತ್ತಿದ್ದೇನೆ. ನನಗೆ ಆಗುತ್ತಿರುವ ಮಾನಸಿಕ ಹಿಂಸೆ ಮತ್ತು ಕುಟುಂಬದ ಸದಸ್ಯರು ಎದುರಿಸುತ್ತಿರುವ ಒತ್ತಡ, ಆತ್ಮಹತ್ಯೆಗೆ ಯತ್ನಿಸುವಂತೆ ಮಾಡಿದೆ. ರಮೇಶ ಜಾರಕಿಹೊಳಿ ಹಾಗೂ ಅವರ ಕಡೆಯವರಿಂದ ನಮಗೆ ಯಾವುದೇ ಅಪಾಯವಾಗದಂತೆ ರಕ್ಷಣೆ ನೀಡಬೇಕೆಂದು ಕೈ ಮುಗಿದು ಪ್ರಾರ್ಥನೆ ಮಾಡುತ್ತೇನೆ.

ರಮೇಶ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ

ಅದನ್ನು ಆಧರಿಸಿ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಸದ್ಯದಲ್ಲೇ ಪ್ರಕರಣದ ತನಿಖೆ ಜವಾಬ್ದಾರಿ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ಹಸ್ತಾಂತರವಾಗಲಿದೆ.

'ಕಿರುಚಿತ್ರ ಮಾಡುವುದಕ್ಕಾಗಿ ಸಚಿವರಾಗಿದ್ದ ರಮೇಶ ಜಾರಕಿಹೊಳಿ ಅವರನ್ನು ಸಂಪರ್ಕಿಸಿದ್ದೆ. ನನ್ನ ಮೊಬೈಲ್ ನಂಬರ್ ಪಡೆದಿದ್ದ ಅವರು, ಕರೆ ಮಾಡಿ ಸಲುಗೆಯಿಂದ ಮಾತನಾಡಲಾರಂಭಿಸಿದ್ದರು. ಸರ್ಕಾರಿ ಕೆಲಸ ಕೊಡಿಸುವುದಾಗಿ ಹೇಳಿದ್ದ ಅವರು ನನ್ನನ್ನು ಲೈಂಗಿಕವಾಗಿ ಬಳಸಿಕೊಂಡು ವಂಚಿಸಿದ್ದಾರೆ. ಅವರಿಂದ ಜೀವ ಬೆದರಿಕೆಯೂ ಇದೆ. ರಮೇಶ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಿ' ಎಂದು ಯುವತಿ ದೂರಿನಲ್ಲಿ ಒತ್ತಾಯಿಸಿದ್ದಾರೆ.

ದೂರು ಪರಿಶೀಲನೆ ನಡೆಸಿ ಪೊಲೀಸರು, ಲೈಂಗಿಕ ದೌರ್ಜನ್ಯ (ಐಪಿಸಿ 354 ಎ), ಜೀವ ಬೆದರಿಕೆ (ಐಪಿಸಿ 506), ಅವಾಚ್ಯ ಶಬ್ದಗಳಿಂದ ನಿಂದನೆ (ಐಪಿಸಿ 504), ಅಧಿಕಾರದಲ್ಲಿದ್ದುಕೊಂಡು ಅತ್ಯಾಚಾರ (376–ಸಿ), ನೌಕರಿ ಕೊಡಿಸುವುದಾಗಿ ವಂಚಿಸಿದ (ಐಪಿಸಿ 417) ಆರೋಪ ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ರಮೇಶ ಜಾರಕಿಹೊಳಿ ಪ್ರಕರಣ ದಾಖಲಿಸಿದ್ದಾರೆ.

ಆಡಿಯೊದಲ್ಲಿದೆ ಡಿಕೆಶಿ ಹೆಸರು

ಒಂದನೇ ಪುಟದಿಂದ

ತಮ್ಮ: ಮೂರು ಹೊತ್ತು ಊಟ ಮಾಡೋನಾ ದಿವಸಕ್ಕೆ ಸಾಕು.
ಮತ್ತೊಬ್ಬ ಯುವಕ: ಭಾಯಿ ಟೆನ್ಷನ್ ತಗೋಬೇಡ, ಆರಾಮ್ ಇರು. ನಾವೀಗ ಅಲ್ಲೇ ಬಂದಿದೀವಿ. ನಿಂಗ್ ಹೇಳುದ್ದಲ್ಲಾ ಯಾರೋ ಹೊಂಟರಾ ಅಂತಾ. ಅವರೇ ಯಾರ, ಒಂದು ಅರ್ಧ ಗಂಟೆ ಅವ್ರು ಬರ್ತಾರ. ನಿಂಗ್ ಫೋನ್ ಮಾಡ್ತೀನಿ ನಾನು. ಆಯ್ತು.

ತಮ್ಮ: ಬ್ರೋ ಪ್ಲೀಸ್ ಬ್ರೋ, ಇಲ್ಲಿ ಮನ್ಯಾಗ ಎಲ್ಲ ಟೆನ್ಷನ್ ಐತಿ
ಮತ್ತೊಬ್ಬ ಯುವಕ: ಟೆನ್ಷನ್ ಮಾಡ್ಕೋಬೇಡ
ತಮ್ಮ: ಲೇ ಅದು ನಾಳೆ ಸ್ಟೇಟ್‌ಮೆಂಟ್ ಕೊಡು ಅಂತಾರಾ
ಯುವತಿ: ಲೇ ಅದೆಲ್ಲ ನಾನ್ ಹೋಗಲ್ಲಾ ಅಲ್ಲೀತನ.
ಮತ್ತೊಬ್ಬ ಯುವಕ: ಅಲ್ಲೀತನ ಹೋಗಲ್ಲ ಭಾಯಿ, ನೀನ್ ಟೆನ್ಷನ್ ಮಾಡ್ಕೋಬೇಡ.
ತಮ್ಮ: ಇಲ್ಲಾ ಬ್ರೋ, ನಾಳೆ ಕೊಡ್ಬೇಕಾಗುತ್ತೆ. ನಾಳೆ ಅಂವ ರಾಜೀನಾಮೆ ಕೊಡ್ಬೇಕ್ ಅಲ್ಲಿ.
ಯುವತಿ: ನಾನಂತೂ ಅದೆಲ್ಲ ಇಲ್ಲಾ
ತಮ್ಮ: ಮತ್ ನೀ ಮೀಡಿಯಾದಾಗೆ ಎಲ್ಲ ಫೋನ್ ಹಚ್ಚಿ ಮಾತಾಡಿದ್ಯಲ್ಲ?
ಮತ್ತೊಬ್ಬ ಯುವಕ: ಮೀಡಿಯಾದಾಗ್ ಫೋನ್ ಮಾಡಿದ್ ಅಲ್ಲ ಭಾಯಿ.
ಯುವತಿ: ಮೀಡಿಯಾಕ್ಕ್ ಫೋನ್ ಮಾಡಿದ್ದ್ ಅಲ್ಲ ಅದು. ಅವನ ಸರಿ ಯಾರೋ ಮಾತಾಡಿರೋದು, ವಾಯ್ಸ್ ನಂದು ಕೊಟ್ಟಿರೋದು. ಮಾಡ್ಯುಲೇಷನ್ ಮಾಡೋಕ್ ಬರ್ತೈತಿ ವಾಯ್ಸ್. ಮಾಡ್ಯುಲೇಷನ್ ವಾಯ್ಸ್ ಅದು ಅಷ್ಟೇ. ನಾನು ಎಲ್ಲೂ ಬರೋಲ್ಲ. ದಟ್ ಈಸ್ ನಾಟ್ ಮಿ. ನನ್ಗಿ ಯಾರ್ ಅಂತಾನೂ ಗೊತ್ತಿಲ್ಲ.
ತಮ್ಮ: ಹೊರಗ್ ಎಲ್ಲೂ ಅಡ್ಯಾಡ್‌ಬಡಾ ಲೇ.
ಯುವತಿ: ಇಲ್ಲ ಇಲ್ಲ ಎಲ್ಲೂ ಇಲ್ಲ. ಜಸ್ಟ್ ಏನೂ ಇಲ್ಲೇ ಬಂದೀವಿ, ಅವ್ರ್ ಬರ್ತಾರಾ, ಅವ್ರ್ ಜತೆ
ತಮ್ಮ: ಲೇ... ಮ್ಯಾಟ್ರು ಭಾಳಾ ಕೆಟ್ಟ್ ಸೀರಿಯಸ್ ಐತಿ. ನಾಳೆ ಅವ್ನ್ ಶಾಸಕ. ಅವ್ನು ನಾಳೆ ರಾಜೀನಾಮೆ ಕೊಡ್ಬೇಕಂತೆ.
ಯುವತಿ: ನಾನೂ ಆಕಾಶ್ ಇಬ್ರೂ ಹೊಂಟೀವಿ. ನನ್ ಜೊತೆ ಆಕಾಶ್ ಇರ್ತಾನಾ, ಅಷ್ಟರೆ ನಂಬ್ತಿ.
ಯುವತಿ: ಮಮ್ಮಿ ನೀ ಆರೆ ನನ್ ನಂಬೇ ಮಮ್ಮಿ.
ತಾಯಿ: ನಂಬೀನಾ. ನಾ ಇಷ್ಟು ದಿನ ನಂಬೀನೆ
ಯುವತಿ: ಆಕಾಶ್, ನನ್ ಫ್ರೆಂಡ್ಸ್ ಎಲ್ಲ ಸಪೋರ್ಟ್ ಮಾಡಾ ಹತ್ಯಾರಾ. ನೀವೇ ಮಾಡ್ತಿಲ್ಲ. ನಂಗ್ ಅಂಜ್ಕಿ ಬರಾ ಹತ್ಯಾದಾ.
ತಾಯಿ: ನಾನ್ ನಂಬೀನೆ ಬೆಂಗ್ಳೂರ್ನಾಗಾ ಬಿಟ್ಟೀನಿ. ನೀನ್ ಊರಿಗ್ ಬಂದ್ ಬಿಡು. ರಾಜಕೀಯದವ್ರ್ ಜತೆ ಹೋಗ್‌ಬ್ಯಾಡಾ ಅಂತ ನಾನ್ ಹೇಳಿರ್ಲಿಲ್ಲಾ?
ಯುವತಿ: ನೀನ್ ತಲೆ ಕೆಡಿಸ್ಕೋಬೇಡ.
ತಾಯಿ: ನಿನ್ ಡ್ಯಾಡಿಗ್ ಹೇಳಿದ್ರೆ ಸತ್ತ್ ಹೋಕ್ಕಾನಾ.
ಯುವತಿ: ಡ್ಯಾಡಿಗ್ ಏನ್ ಹೇಳಿರಿ?
ತಾಯಿ: ಏನೂ ಗೊತ್ತಿಲ್ಲ, ನಾಳೆಗೆ ನ್ಯೂಸ್ ಏನಾರು ನೋಡಿದ್ರಾ ಗ್ಯಾರಂಟಿ ಸೂಸೈಡ್ ಕತೆಯಾ. ದಯವಿಟ್ಟು ನೀನ್ ಅದನ್ ಬಿಟ್ಟೇ ಊರಿಗ್ ಬಂದ್ ಬಿಡು.
ತಮ್ಮ: ಅಂವ ಬಂದು ಎಲ್ಲ ಫುಲ್ ವಿಡಿಯೊ ತೋರ್ಸಿದಾ. ನಿಂದೆಲ್ಲ ಫೇಸ್ ಕ್ಲಿಯರ್, ನೀ ಮಾತಾಡೋದು ಎಲ್ಲ ಐತಿ ಅಲ್ಲಿ.
ಯುವತಿ: ಲೇ ಅದು ನಾ ಅಲ್ಲಪ್ಪಾ. ಅದೆಲ್ಲ ಗ್ರಾಫಿಕ್ಸ್.
ತಮ್ಮ: ಏನ್ ಗ್ರಾಫಿಕ್ಸ್? ಯಾರಾರು ನಂಬ್ತಾರಾ?
ಯುವತಿ: ಆಯ್ತು ನಾ ಎಲ್ಲ ಕ್ಲಿಯರ್ ಮಾಡಿಸ್ತೀನಿ ಅವಾಗಾರ ನಂಬ್ತೀಯಾ?
ತಮ್ಮ: ನೀ ಈಗ್ ಯಾರ ಜೋಡಿ ಮಾತಾಡ್ತೀಯ?
ಯುವತಿ: ನಾನು ಡಿ.ಕೆ. ಶಿವಕುಮಾರ್ ಮನೆ ಬಳಿ ಬಂದೀನಿ.
ತಮ್ಮ: ಲೊಕೇಷನ್ ಎಲ್ಲ ಕಳ್ಸು ನಾಲ್ಕ್ ಜನ್ರಿಗೆ. ಇದು ಭಾಳಾ ಡೇಂಜರ್. ನಾಳೆ ಅವ್ರ್ ಸರ್ಕಾರ ಬೀಳಿಸ್ತಾರಾ, ಅವ್ರ್ ಅಷ್ಟೇನ್ ಈಸಿಯಾಗಿ ಬಿಡೊಲ್ಲ.
ಯುವತಿ: ಆಯ್ತು
ತಮ್ಮ: ಏನೇ ಡಿಸಿಷನ್ ತಗೊಳ್ಳೊದಾದ್ರೂ ಭಾಳಾ ಯೋಚ್ನೆ ಮಾಡು. ಸ್ಟೇಟ್ಮೆಂಟ್‌ಗೆ ಕರೆದರೆ ನೂರು ಸರಿ ಯೋಚ್ನೆ ಮಾಡು. ಅವನ ವಿರುದ್ಧ ಕೊಟ್ಟರೆ ಏನಾಗುತ್ತೆ? ಅವನ ಪರವಾಗಿ ಕೊಟ್ಟರೆ ಏನಾಗುತ್ತೆ? ಭಾಳಾ ಯೋಚನೆ ಮಾಡಿ ಕೊಡು.

ಟೈರ್‌ಗೆ ಬೆಂಕಿ, ಸಂಸದರ ಭಾವಚಿತ್ರಕ್ಕೆ ಚಪ್ಪಲಿ ಏಟು; ಮತ ನೀಡಲ್ಲ ಎಂದು ಪ್ರತಿಜ್ಞೆ

ಶರಣು ಸಲಗರಗೆ ಟಿಕೆಟ್: ಅಸಮಾಧಾನದ ಹೊಗೆ

ಪ್ರಜಾವಾಣಿ ವಾರ್ತೆ

ಬೀದರ್: ಬಸವಕಲ್ಯಾಣ ವಿಧಾನಸಭಾ ಉಪ ಚುನಾವಣೆಯ ಬಿಜೆಪಿ ಟಿಕೆಟ್ ಶರಣು ಸಲಗರ ಅವರಿಗೆ ಘೋಷಿಸಿದ ನಂತರ ಪಕ್ಷದಲ್ಲಿ ಅಸಮಾಧಾನ ಭುಗಿಲೆದ್ದಿದೆ. ಕೆಲ ಕಾರ್ಯಕರ್ತರು ಟೈರ್‌ಗೆ ಬೆಂಕಿ ಹಚ್ಚಿದರೆ, ಇನ್ನು ಕೆಲವರು ಸಂಸದ ಭಗವಂತ ಖೂಬಾ ಅವರ ಭಾವಚಿತ್ರಕ್ಕೆ ಚಪ್ಪಲಿಯಿಂದ ಹೊಡೆದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಸವಕಲ್ಯಾಣದ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ನೂರಾರು ಸಂಖ್ಯೆಯಲ್ಲಿ ಸೇರಿದ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

'ನಾನು ದೇಶದ ಅಭಿಮಾನಿ, ಸ್ವಾಭಿಮಾನಿ, ಮೋದಿ ಅಭಿಮಾನಿ. ಆದರೆ, ಈ ಸಲ ಬಿಜೆಪಿಗೆ ಮತ ನೀಡುವುದಿಲ್ಲ. ನನಗೆ ಬೇಕಾದ ವ್ಯಕ್ತಿ ಅಥವಾ ಬೇರೆ ಪಕ್ಷಕ್ಕೆ ನೀಡುತ್ತೇನೆ ಎಂದು ತಂದೆ, ತಾಯಿ, ಬಸವಣ್ಣ ಹಾಗೂ ಮನೆ ದೇವರ ಮೇಲೆ ಪ್ರಮಾಣ ಮಾಡುತ್ತೇನೆ' ಎಂದು ನೂರಾರು ಕಾರ್ಯಕರ್ತರು ಪ್ರತಿಜ್ಞೆ ಮಾಡಿದರು.

'ಸ್ಥಳೀಯರಿಗೆ ಟಿಕೆಟ್ ಸಿಗದಿರಲು ಭಗವಂತ ಖೂಬಾ ಅವರೇ ಕಾರಣ. ಬಿಜೆಪಿ ಟಿಕೆಟ್ ಮಾರಿಕೊಂಡ ಭಗವಂತ ಖೂಬಾಗೆ ಧಿಕ್ಕಾರ', 'ಚೋರ್ ಹೈ, ಎಂ.ಪಿ. ಚೋರ್ ಹೈ' ಎಂದು ಘೋಷಣೆಗಳನ್ನು ಕೂಗಿದರು.

ಪ್ರತಿಕ್ರಿಯೆ ನೀಡುವ ಸ್ಥಿತಿಯಲ್ಲಿಲ್ಲ: 'ಕೊನೆ ಕ್ಷಣದವರೆಗೂ ಟಿಕೆಟ್ ನನಗೇ ದೊರೆಯಲಿದೆ ಎನ್ನುವ ವಿಶ್ವಾಸ ಇತ್ತು. ಪಕ್ಷ ಬೇರೊಬ್ಬರಿಗೆ ಕೊಟ್ಟಿದೆ. ಸದ್ಯ ನಾನು ಪ್ರತಿಕ್ರಿಯೆ ನೀಡುವ ಸ್ಥಿತಿಯಲ್ಲಿ ಇಲ್ಲ' ಎಂದು ಸೂರ್ಯಕಾಂತ ನಾಗಮಾರಪಳ್ಳಿ ಹೇಳಿದರು.

ಸ್ವಾಗತ: 'ಬಿಜೆಪಿ ವರಿಷ್ಠರು ತೆಗೆದುಕೊಂಡಿರುವ ನಿರ್ಧಾರವನ್ನು ಸ್ವಾಗತಿಸುತ್ತೇವೆ. 18 ಆಕಾಂಕ್ಷಿಗಳಲ್ಲಿ ಜಿಲ್ಲೆಯ ಸಮರ್ಥರೂ ಇದ್ದರು. ಪಕ್ಷದ ತತ್ವ, ಸಿದ್ಧಾಂತದ ಮೇಲೆ ನಂಬಿಕೆ ಇದ್ದವರು ಪಕ್ಷದ ನಿರ್ಧಾರವನ್ನು ಸ್ವಾಗತಿಸಬೇಕು' ಎಂದು ಬಿಜೆಪಿ ತಾಲ್ಲೂಕು ಘಟಕದ ಅಧ್ಯಕ್ಷ ಅಶೋಕ ವಾಕರೆ ಪ್ರತಿಕ್ರಿಯಿಸಿದರು.

'ಬಿಜೆಪಿ ಕಾರ್ಯಕರ್ತರೇ ಅಲ್ಲ'

ರಾಷ್ಟ್ರೀಯ ಪಕ್ಷದಲ್ಲಿ ಸಂಸದರೊಬ್ಬರೇ ತೀರ್ಮಾನ ಕೈಗೊಳ್ಳುವುದಿಲ್ಲ. ಪಕ್ಷದ ಅಭ್ಯರ್ಥಿ ಆಯ್ಕೆ ಸಮಿತಿ ಸಮೀಕ್ಷೆ ನಡೆಸಿದೆ. ಮುಖಂಡರ ಹಾಗೂ ಕಾರ್ಯಕರ್ತರ ಅಭಿಪ್ರಾಯವನ್ನೂ ಸಂಗ್ರಹಿಸಿದೆ. ಅದರಂತೆ ಗೆಲ್ಲುವ ಅವಕಾಶ ಇರುವ ಅಭ್ಯರ್ಥಿಗೆ ಟಿಕೆಟ್ ಕೊಡಲಾಗಿದೆ. ನನ್ನ ವಿರುದ್ಧ ಆರೋಪ ಮಾಡುವವರು ಬುದ್ಧಿಹೀನರು. ಪ್ರತಿಭಟನೆ ನಡೆಸಿದವರು ಬಿಜೆಪಿ ಕಾರ್ಯಕರ್ತರೇ ಅಲ್ಲ ಎಂದು ಸಂಸದ ಭಗವಂತ ಖೂಬಾ ಪ್ರತಿಕ್ರಿಯಿಸಿದ್ದಾರೆ.

'ನಾನು ಪಕ್ಷ ಒಪ್ಪಿತ ಅಭ್ಯರ್ಥಿ'

ನನ್ನ ಸಾಮಾಜಿಕ ಸೇವೆ ಪರಿಗಣಿಸಿ ಪಕ್ಷ ಟಿಕೆಟ್ ನೀಡಿದೆ. ಟಿಕೆಟ್ ಸಿಗದವರಿಗೆ ಬೇಸರವಾಗುವುದು ಸಹಜ. ಚುನಾವಣೆಯಲ್ಲಿ ಎಲ್ಲರೂ ನನ್ನ ಪರವಾಗಿ ಕೆಲಸ ಮಾಡಲಿದ್ದಾರೆ. ಮಾರ್ಚ್ 30ರಂದು ಬೆಳಿಗ್ಗೆ 11 ಗಂಟೆಗೆ ಪಕ್ಷದ ಮುಖಂಡರ ನೇತೃತ್ವದಲ್ಲಿ ನಾಮಪತ್ರ ಸಲ್ಲಿಸಲಿದ್ದೇನೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ ಕಟೀಲ್, ಸಂಸದ ಭಗವಂತ ಖೂಬಾ ಮತ್ತಿತರರು ಉಪಸ್ಥಿತರಿರುವರು.

–**ಶರಣು ಸಲಗರ,** ಬಿಜೆಪಿ ಅಭ್ಯರ್ಥಿ

ಸಿಡಿ ಪ್ರಕರಣ: ಡಿಕೆಶಿ ರಾಜೀನಾಮೆಗೆ ಬಿಜೆಪಿ ಆಗ್ರಹ

ಬೆಂಗಳೂರು: 'ಸಿಡಿ ಪ್ರಕರಣದಲ್ಲಿ ಡಿ.ಕೆ.ಶಿವಕುಮಾರ್ ಹೆಸರು ಪ್ರಸ್ತಾಪವಾಗಿದೆ. ಅನೈತಿಕ, ಅಧರ್ಮದ ರಾಜಕಾರಣಕ್ಕೆ ಮುನ್ನುಡಿ ಬರೆದ ಈ 'ಮಹಾನಾಯಕ'ನರಾಜೀನಾಮೆಯನ್ನು ತಕ್ಷಣವೇ ಪಡೆಯಬೇಕು' ಎಂದು ಬಿಜೆಪಿ ಟ್ವೀಟ್ ಮೂಲಕ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರನ್ನು ಆಗ್ರಹಿಸಿದೆ.

'ಸದನದ ಸದಸ್ಯನ ಹೆಸರು ಬಂದಿದೆ ಎಂಬ ನೆಪ ಹೇಳಿ ಸದನದಲ್ಲಿ ಕಲಾಪ ನಡೆಯಲೂ ಬಿಡದ ಕಾಂಗ್ರೆಸ್ ಸದಸ್ಯರೇ ಈಗೇನು ಹೇಳುವಿರಿ? ಮಹಾನಾಯಕ ಹೆಸರು ಪ್ರಸ್ತಾಪವಾಗಿದೆ. ವಿಶೇಷ ಅಧಿವೇಶನ ಕರೆದು ಚರ್ಚಿಸುವಷ್ಟು ವಿಚಾರಗಳಿವೆ. ಮಹಾನಾಯಕನ ರಾಜೀನಾಮೆ ಪಡೆದು ಸದನದಲ್ಲಿ ಈ ಬಗ್ಗೆ ಯಾವಾಗ ಚರ್ಚಿಸುತ್ತೀರಿ' ಎಂದು ಟ್ವೀಟ್‌ನಲ್ಲಿ ಬಿಜೆಪಿ ಪ್ರಶ್ನಿಸಿದೆ.

'ಸಿಡಿ ಪ್ರಕರಣದ ಸಂತ್ರಸ್ತೆ ನೇರವಾಗಿ ಡಿ.ಕೆ ಹೆಸರು ಪ್ರಸ್ತಾಪ ಮಾಡಿದ್ದಾಳೆ. ಮಹಾನಾಯಕ ನಮ್ಮ ಜತೆ ಇದ್ದಾನೆ ಎಂಬ ಮಾತುಗಳನ್ನೂ ಆಡಿದ್ದಾಳೆ. ಸದನದಲ್ಲಿ ಬೊಬ್ಬಿರಿದ ಮಹಾಶೂರರು ಈಗೇನು ಹೇಳುತ್ತಾರೆ? ಕಾಂಗ್ರೆಸ್ ಕಚೇರಿಯಲ್ಲೇ ಷಡ್ಯಂತ್ರ ನಡೆದಿದೆಯೇ' ಎಂದೂ ಪ್ರಶ್ನಿಸಿದೆ.

'ಆರಂಭದಿಂದಲೂ ಮಹಾ ನಾಯಕನ ಸುತ್ತಲೂ ಪ್ರಕರಣ ಗಿರಕಿ ಹೊಡೆಯುತ್ತಿತ್ತು. ಮಹಾನಾಯಕನ ಮನೆಯ ಬಳಿ ನಾನು ಬಂದಿದ್ದೇನೆ ಎಂದು ಸಂತ್ರಸ್ತೆ ಹೇಳಿಕೊಂಡಿದ್ದಾಳೆ. ಮಹಾ ನಾಯಕನಿಗೂ ಪ್ರಕರಣದ ಮಾಸ್ಟರ್ ಮೈಂಡ್‌ಗಳಿಗೂ ಇರುವ ಸಂಬಂಧವನ್ನು ಕಾಂಗ್ರೆಸ್ ಬಹಿರಂಗಗೊಳಿಸಬೇಕು ಎಂದು ಟ್ವೀಟ್‌ನಲ್ಲಿ ಒತ್ತಾಯಿಸಿದೆ.

'ಶನಿವಾರ ದೊಡ್ಡ ಬಾಂಬ್ ಸ್ಫೋಟ'

ಬೆಂಗಳೂರು: 'ನಾಳೆ (ಶನಿವಾರ) ಸಂಜೆ 4 ರಿಂದ 6 ಗಂಟೆಯ ಒಳಗೆ ದೊಡ್ಡ ಬಾಂಬ್ ಸ್ಫೋಟವಾಗುತ್ತದೆ. ದೊಡ್ಡ ಮಟ್ಟದ ಬೆಳವಣಿಗೆ ಆಗಲಿದ್ದು, ನಾನೇ ಆಗ ಮಾತನಾಡುತ್ತೇನೆ' ಎಂದು ರಮೇಶ ಜಾರಕಿಹೊಳಿ ಹೇಳಿದ್ದಾರೆ.

'ಇದು ಬರಿ ಟ್ರಯಲ್, ನಾಳೆ ಸಂಜೆಯವರೆಗೆ ಕಾಯಿರಿ ಬಾಂಬ್ ಸ್ಫೋಟವಾಗುತ್ತದೆ. ಆಡಿಯೊದಲ್ಲಿ ಡಿ.ಕೆ.ಶಿವಕುಮಾರ್ ಹೆಸರು ಪ್ರಸ್ತಾಪ ಆಗಿದೆ. ತನಿಖೆ ನಡೆಯಲಿ. ಆಡಿಯೊದಲ್ಲಿ ಹೆಸರು ಬಂದ ಮಾತ್ರಕ್ಕೆ ಡಿ.ಕೆ ಆರೋಪಿಯಲ್ಲ. ಅವರು ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರೆಯಲಿ. ನನಗೆ ಆದ ರೀತಿ ಅನ್ಯಾಯ ಅವರಿಗೆ ಆಗ ಬಾರದು. ನನ್ನ ಹಾಗೆ ಅವರು ರಾಜೀನಾಮೆ ಕೊಡುವುದು ಬೇಡ' ಎಂದರು. 'ಶಿವಕುಮಾರ್ ಬಗ್ಗೆ ಆರೋಪ ಮಾಡುವುದಿಲ್ಲ. ಯಾವುದೇ ಪುರಾವೆ ಇಲ್ಲದೆ ಏನೂ ಹೇಳುವುದಿಲ್ಲ. ನಾನು ಯಾರಿಗೂ ಕೆಟ್ಟದ್ದನ್ನು ಬಯಸಿಲ್ಲ' ಎಂದರು.

'ಸರ್ಕಾರವನ್ನೇ ತೆಗೆದವನು ನಾನು. ಇದೆಲ್ಲ ಯಾವ ಲೆಕ್ಕ. ಸಮ್ಮಿಶ್ರ ಸರ್ಕಾರ ಉರುಳಿಸಿ, ಬಿಜೆಪಿ ಸರ್ಕಾರ ತಂದಿದ್ದಕ್ಕೆ ಷಡ್ಯಂತ್ರ ನಡೆಸಿದ್ದಾರೆ. ಇಂತಹ ದೂರುಗಳಿಗೆಲ್ಲ ಅಂಜುವುದಿಲ್ಲ. ನನ್ನ ವಿರುದ್ಧ ನಡೆದ ಷಡ್ಯಂತ್ರದ ಎಲ್ಲ ವಿವರವನ್ನೂ ಸಂಗತಿಯನ್ನು ಗೃಹ ಸಚಿವರ ಗಮನಕ್ಕೆ ತಂದಿದ್ದೇನೆ ಎಂದರು.

ರಮೇಶ ಬಂಧನಕ್ಕೆ ಕಾಂಗ್ರೆಸ್ ಆಗ್ರಹ

ಬೆಂಗಳೂರು: ಅತ್ಯಾಚಾರ ಆರೋಪದಡಿ ಪ್ರಕರಣ ದಾಖಲಾಗಿರುವುದರಿಂದ ಶಾಸಕ ರಮೇಶ ಜಾರಕಿಹೊಳಿ ಅವರನ್ನು ತಕ್ಷಣ ಬಂಧಿಸಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

ಈ ಕುರಿತು ಟ್ವಿಟರ್‌ನಲ್ಲಿ ಆಗ್ರಹಿಸಿರುವ ಪಕ್ಷ, 'ಎಫ್‌ಐಆರ್ ದಾಖಲಾದರೂ ಅತ್ಯಾಚಾರ ಆರೋಪಿಯನ್ನು ರಕ್ಷಿಸಲಾಗುತ್ತಿದೆ. ಪ್ರಭಾವಿ ವ್ಯಕ್ತಿಯನ್ನು ರಕ್ಷಿಸಲಾಗುತ್ತಿದೆ ಎಂಬ ಕಳಂಕ ಕರ್ನಾಟಕಕ್ಕೆ ಬೇಡ. ಅದೇನಿದ್ದರೂ ಉತ್ತರ ಪ್ರದೇಶದ ಯೋಗಿಯ ಆಡಳಿತಕ್ಕಿರಲಿ' ಎಂದು ಹೇಳಿದೆ.

ತಿಂಗಳೊಳಗೆ ಅನುಷ್ಠಾನ: ಸಚಿವ ಕೋಟ ಶ್ರೀನಿವಾಸ ಪೂಜಾರಿ

ದೇಗುಲ ಸಿಬ್ಬಂದಿಗೆ 6ನೇ ವೇತನ ಶ್ರೇಣಿ

ಪ್ರಜಾವಾಣಿ ವಾರ್ತೆ

ಮೈಸೂರು: ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಇಲಾಖೆಯ ದೇಗುಲಗಳ ಸಿಬ್ಬಂದಿಗೆ, ಶೀಘ್ರದಲ್ಲೇ 6ನೇ ವೇತನ ಶ್ರೇಣಿ ಜಾರಿಗೊಳಿಸಲಾಗುವುದು ಎಂದು ಮುಜರಾಯಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ಶುಕ್ರವಾರ ಚಾಮುಂಡಿ ಬೆಟ್ಟದಲ್ಲಿ ತಿಳಿಸಿದರು.

'6ನೇ ವೇತನ ಆಯೋಗದ ಶ್ರೇಣಿ ಜಾರಿಗೆ ಕೆಲವೊಂದು ತೊಡಕುಗಳಿವೆ. ಈಗಾಗಲೇ ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸಿದ್ದೇವೆ. ಏ.9ರಂದು ವಿಧಾನಸೌಧದಲ್ಲಿ ರಾಜ್ಯ ಧಾರ್ಮಿಕ ಪರಿಷತ್ ಸಭೆ ನಡೆಯಲಿದೆ. ಅಲ್ಲಿ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು. ಮುಖ್ಯಮಂತ್ರಿ ಜೊತೆ ಚರ್ಚಿಸಿ, ತಿಂಗಳೊಳಗೆ ಅನುಷ್ಠಾನಗೊಳಿಸುತ್ತೇವೆ' ಎಂದರು.

'ರಾಜ್ಯದ ವಿವಿಧೆಡೆ ಜಾತ್ರಾ ಮಹೋತ್ಸವ ನಡೆಯುತ್ತಿದ್ದು, ಕೋವಿಡ್–19 ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸೂಚಿಸಿದ್ದೇವೆ. ಸಂಪ್ರದಾಯ ಪಾಲನೆಗಷ್ಟೇ ಅವಕಾಶ ಕೊಡಲಾಗಿದೆ. ಪ್ರಕರಣ ಹೆಚ್ಚಾದರೆ ಜನರು ಸೇರುವುದನ್ನೂ ನಿರ್ಬಂಧಿಸಲಾಗುವುದು. ಅನಿವಾರ್ಯವಾದರೆ ಭಕ್ತರು ದೇಗುಲ ಪ್ರವೇಶಿಸುವುದನ್ನು ನಿಷೇಧಿಸುವ ಚಿಂತನೆ ನಡೆದಿದೆ' ಎಂದರು.

ಹಾಸ್ಟೆಲ್ ವಾಸ್ತವ್ಯ: 'ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ರಾಜ್ಯದಲ್ಲಿ 2,400ಕ್ಕೂ ಹೆಚ್ಚು ಹಾಸ್ಟೆಲ್‌ಗಳು ಕಾರ್ಯ ನಿರ್ವಹಿಸುತ್ತಿದ್ದು, ಕೋವಿಡ್–19 ಮಾರ್ಗಸೂಚಿ ಅನುಸರಿಸಲಾಗುತ್ತಿದೆ. ಹಾಸ್ಟೆಲ್ ಸುಧಾರಣೆ ನಿಟ್ಟಿನಲ್ಲಿ, ಜಿಲ್ಲಾ ಹಂತದ ಅಧಿಕಾರಿಗಳು ವಾರಕ್ಕೊಂದು ದಿನ ಹಾಸ್ಟೆಲ್‌ನಲ್ಲಿ ವಾಸ್ತವ್ಯ ಮಾಡಬೇಕು. ರಾಜ್ಯ ಮಟ್ಟದ ಅಧಿಕಾರಿಗಳು 15 ದಿನಕ್ಕೊಮ್ಮೆ ಹಾಸ್ಟೆಲ್‌ನಲ್ಲಿ ವಾಸ್ತವ್ಯ ಹೂಡಬೇಕುಎಂದುಈಗಾಗಲೇಸೂಚಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಚೊಚ್ಚಲ ಚುನಾವಣೆಯಲ್ಲಿ ಅಣ್ಣಾಮಲೈಗೆ ಹಲವು ಸವಾಲು

● ಇ.ಟಿ.ಬಿ. ಶಿವಪ್ರಿಯನ್

ಅರವಕುರಿಚಿ (ತಮಿಳುನಾಡು): ಕರ್ನಾಟಕದಲ್ಲಿ ಒಂದು ದಶಕ ಐಪಿಎಸ್ ಅಧಿಕಾರಿಯಾಗಿದ್ದ ಕೆ. ಅಣ್ಣಾಮಲೈ ಅವರು, ಈಗ ತಮಿಳುನಾಡು ರಾಜಕೀಯದಲ್ಲಿ ತಮ್ಮ ಛಾಪು ಮೂಡಿಸಲು ಬೆವರು ಹರಿಸುತ್ತಿದ್ದಾರೆ. ಅಧಿಕಾರಿಯಾಗಿದ್ದಾಗ ತಮ್ಮ ಕಾರ್ಯಶೈಲಿಯಿಂದಾಗಿ 'ಸಿಂಘಂ' ಎಂದೇ ಖ್ಯಾತರಾಗಿದ್ದ ಅವರು ತಮ್ಮ ಹುಟ್ಟೂರು ಅರವಕುರಿಚಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ.

ಐಪಿಎಸ್‌ಗೆ ರಾಜೀನಾಮೆ ನೀಡಿದ ಬಳಿಕ ಕರೂರು ಜಿಲ್ಲೆಯ ತಮ್ಮ ಹುಟ್ಟೂರಲ್ಲಿ ನೆಲೆಯಾದ ಅಣ್ಣಾಮಲೈ ಅವರು ವಿದ್ಯಾರ್ಥಿಗಳಿಗೆ ನೆರವಾಗುವುದಕ್ಕಾಗಿ ಪ್ರತಿಷ್ಠಾನವೊಂದನ್ನು ಆರಂಭಿಸಿದ್ದಾರೆ. ಅವರು ಸ್ಪರ್ಧಿಸಿರುವ ಅರವಿಕುರಿಚಿ ಕ್ಷೇತ್ರದಲ್ಲಿ ಬಿಜೆಪಿಗೆ ನೆಲೆಯೇನೂ ಇಲ್ಲ. ಮತ ಸೆಳೆಯಲು ಮಿತ್ರಪಕ್ಷ ಎಐಎಡಿಎಂಕೆಯ ಮೇಲೆಯೇ ಅವಲಂಬಿತರಾಗಬೇಕು. ಜತೆಗೆ, ಪ್ರತಿಸ್ಪರ್ಧಿಗಳು ಪ್ರಭಾವಿಗಳಾಗಿರುವುದರಿಂದ ಅಣ್ಣಾಮಲೈ ಮುಂದೆ ದೊಡ್ಡ ಸವಾಲೇ ಇದೆ.

ಮೈತ್ರಿಕೂಟದ ಇತರ ಪಾಲುದಾರ ಪಕ್ಷಗಳಾದ ಪಿಎಂಕೆ ಮತ್ತು ಟಿಎಂಎಂಕೆ ಕ್ಷೇತ್ರದ ಕೆಲವು ಪ್ರದೇಶಗಳಲ್ಲಿ ಪ್ರಭಾವ ಹೊಂದಿವೆ.

'ಪ್ರಾಮಾಣಿಕ ಅಧಿಕಾರಿ' ಎಂಬ ಹೆಸರು ಸ್ವಲ್ಪ ಮಟ್ಟಿಗೆ ನೆರವಾಗಬಹುದು. ಜತೆಗೆ, ಅಣ್ಣಾಮಲೈ ಅವರು ಇಲ್ಲಿನ ಪ್ರಭಾವಿ ಗೌಂಡರ್ ಸಮುದಾಯದವರು. ಇದು ಕೂಡ ಸಹಕಾರಿ ಆಗಬಹುದು. ಕೇಂದ್ರದಲ್ಲಿ ಬಿಜೆಪಿ ಅಧಿಕಾರದಲ್ಲಿ ಇರುವುದರಿಂದ ಕ್ಷೇತ್ರದ ಅಭಿವೃದ್ಧಿ ತಮಗೆ ಸುಲಭವಾಗಬಹುದು ಎಂದು ಅಣ್ಣಾಮಲೈ ಅವರು ಪ್ರಚಾರ


ಅಣ್ಣಾಮಲೈ

ಸಂದರ್ಭದಲ್ಲಿ ಹೇಳುತ್ತಿದ್ದಾರೆ.

ಪಕ್ಷದ ಸ್ಥಳೀಯ ಕಾರ್ಯಕರ್ತರ ಜತೆಗೆ, ಕರ್ನಾಟಕದ 'ಸ್ವಯಂಸೇವಕರ' ಗುಂಪು ಕೂಡ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದೆ. ಸಣ್ಣ ಸಣ್ಣ ಗುಂಪುಗಳಾಗಿ ಇವರು ಕರಪತ್ರಗಳನ್ನು ಹಂಚುತ್ತಿದ್ದಾರೆ ಮತ್ತು ಅಧಿಕಾರಿಯಾಗಿದ್ದಾಗ ಅಣ್ಣಾಮಲೈ ಹೇಗಿದ್ದರು ಎಂದು ಮತದಾರರಿಗೆ ಹೇಳುತ್ತಿದ್ದಾರೆ.

'ಅಣ್ಣಾಮಲೈ ಪರ ಪ್ರಚಾರಕ್ಕೆ ಇಲ್ಲಿಗೆ ಬಂದಿದ್ದೇನೆ. ಅವರೊಬ್ಬ ಒಳ್ಳೆಯ ಮನುಷ್ಯ. ಅವರು ಗೆಲ್ಲಬೇಕು. ನನ್ನ ಹರಕುಮುರುಕು ತಮಿಳಿನಲ್ಲಿ ಅವರ ಬಗ್ಗೆ ಜನರಿಗೆ ಹೇಳುತ್ತಿದ್ದೇನೆ' ಎಂದವರು ಬೆಂಗಳೂರಿನಿಂದ ಬಂದಿರುವ ಪುನೀತ್.

ಕುಡಿಯುವ ನೀರು ಮತ್ತು ನೀರಾವರಿಯೇ ದೊಡ್ಡ ಸಮಸ್ಯೆಗಳಾಗಿರುವ ಈ ಹಿಂದುಳಿದ ಕ್ಷೇತ್ರದಲ್ಲಿ ಗೌಂಡರ್ ಸಮುದಾಯದ ಆರ್. ಇಳಂಗೊ ಅವರನ್ನು ಡಿಎಂಕೆ ಕಣಕ್ಕಿಳಿಸಿದೆ. ಟಿ.ಟಿ.ವಿ. ದಿನಕರನ್ ಅವರ ಎಎಂಎಂಕೆ, ಕಮಲಹಾಸನ್ ಅವರ ಎಂಎನ್‌ಎಂ, ನಾಮ್ ತಮಿಳರ್ ಕಚ್ಚಿ ಪಕ್ಷದ ಅಭ್ಯರ್ಥಿಗಳೂ ಕಣದಲ್ಲಿ ಇದ್ದಾರೆ.

ಪಕ್ಷದ ಪರಂಪರಾಗತ ಮತಗಳ ಜತೆಗೆ ಮುಸ್ಲಿಂ ಮತಗಳ ಧ್ರುವೀಕರಣಕ್ಕೆ ಡಿಎಂಕೆ ಯತ್ನಿಸುತ್ತಿದೆ. ಬಿಜೆಪಿ ಇಲ್ಲಿ ಸ್ಪರ್ಧಿಸಿರುವುದರಿಂದ ಡಿಎಂಕೆಗೆ ಇದು ಸುಲಭವೂ ಆಗಬಹುದು.

ಪಲ್ಲಪಟ್ಟಿ ಪ್ರದೇಶದಲ್ಲಿರುವ ಮುಸ್ಲಿಮರ 35 ಸಾವಿರ ಮತಗಳೇ ಇಲ್ಲಿ ನಿರ್ಣಾಯಕ. ಬಿಜೆಪಿ ಕೂಡ ಅಲ್ಪಸಂಖ್ಯಾತ ಸಮುದಾಯದ ಮತಗಳನ್ನು ಸೆಳೆಯಲು ಯತ್ನಿಸುತ್ತಿದೆ. ಹಿಂದೂ ಮತಗಳ ಧ್ರುವೀಕರಣದ ಯತ್ನವನ್ನೂ ಬಿಜೆಪಿ ಮಾಡುತ್ತಿದೆ. ಮುಸ್ಲಿಂ ಪ್ರಾಬಲ್ಯದ ಪ್ರದೇಶಕ್ಕೆ ಅಣ್ಣಾಮಲೈ ಅವರು ಭೇಟಿ ನೀಡುವುದನ್ನು ಸ್ಥಳೀಯ ಜಮಾತ್ ವಿರೋಧಿಸಿದೆ.

'ನನಗೆ ಕೋಮು ರಾಜಕಾರಣ ಬೇಕಾಗಿಲ್ಲ. ಹಾಗಾಗಿಯೇ ಪಲ್ಲಪಟ್ಟಿಯಲ್ಲಿರುವ ನನ್ನ ಜನರನ್ನು ಸಮೀಪಿಸಿದ್ದೇನೆ. ಆ ಪ್ರದೇಶವನ್ನೂ ಅಭಿವೃದ್ಧಿ ಮಾಡಬೇಕು. ನಿರುದ್ಯೋಗ ಮತ್ತು ನೀರಿನ ಕೊರತೆ ಇಲ್ಲಿನ ದೊಡ್ಡ ಸಮಸ್ಯೆಗಳು. ಇವುಗಳ ಪರಿಹಾರಕ್ಕೆ ನಾನು ಯೋಜನೆ ರೂಪಿಸಿದ್ದೇನೆ' ಎಂದು ಅಣ್ಣಾಮಲೈ ಅವರು 'ಪ್ರಜಾವಾಣಿ'ಗೆ ಹೇಳಿದ್ದಾರೆ.

ಅಣ್ಣಾಮಲೈ ಅಂಥವರು ಶಾಸಕರಾಗಬೇಕು ಎಂದು ಕರೂರು–ಮದುರೈ ಹೆದ್ದಾರಿಯಲ್ಲಿ ಚಹಾದಂಗಡಿ ನಡೆಸುವ ಅರಿವಳಗನ್ ಹೇಳುತ್ತಾರೆ. ಆದರೆ, ಈ ಬಾರಿ ಅವರು ಗೆಲ್ಲುವ ಸಾಧ್ಯತೆ ಬಗ್ಗೆ ಅರಿವಳಗನ್‌ಗೆ ಖಚಿತವಾಗಿ ಹೇಳಲಾಗುತ್ತಿಲ್ಲ. ಈ ಪ್ರದೇಶದಲ್ಲಿ ಬಿಜೆಪಿಗೆ ಜನಪ್ರಿಯತೆ ಇಲ್ಲ ಎಂಬುದು ಅವರು ವಿವರಣೆ.

'ಎಐಎಡಿಎಂಕೆ ಅಥವಾ ಡಿಎಂಕೆ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರೆ ಅವರು ಖಂಡಿತವಾಗಿಯೂ ಗೆಲ್ಲುತ್ತಿದ್ದರು' ಎಂದು ಅವರು ಹೇಳುತ್ತಾರೆ.

'ನನ್ನ ವಿರುದ್ಧ ಷಡ್ಯಂತ್ರ ಮಾಡಲಾಗದು'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ನನ್ನ ವಿರುದ್ಧ ಯಾರೂ ಷಡ್ಯಂತ್ರ ಮಾಡಲಾಗುವುದಿಲ್ಲ. ಹೀಗಾಗಿ, ಯಮಕನಮರಡಿ ಕ್ಷೇತ್ರದ ಜನರು ಹಾಗೂ ಅಭಿಮಾನಿಗಳು ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ' ಎಂದು ಅಲ್ಲಿನ ಶಾಸಕ ಹಾಗೂ ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸತೀಶ ಜಾರಕಿಹೊಳಿ ಹೇಳಿದರು.

ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ, ತಾವು ಪ್ರತಿನಿಧಿಸುವ ಯಮಕನಮರಡಿ ಕ್ಷೇತ್ರದಲ್ಲಿ ಜನಾಭಿಪ್ರಾಯ ಆಲಿಸಲು ಶುಕ್ರವಾರ ನಡೆಸಿದ ಸಭೆಯಲ್ಲಿ ಅವರು ಮಾತನಾಡಿದರು.

'ಹಾಗೊಂದು ವೇಳೆ ಯಾರದರೂ ನನ್ನ ವಿರುದ್ಧ ಷಡ್ಯಂತ್ರ ಮಾಡಿದರೆ, ನಾನೂ ಎರಡು ಹೆಜ್ಜೆ ಮುಂದಿರುತ್ತೇನೆ.



ಎಷ್ಟೇ ದೊಡ್ಡವರಾದರೂ ಪಕ್ಷದ ಆದೇಶ ಪಾಲಿಸಲೇಬೇಕಾಗಿರುವುದು ನಮ್ಮ ಧರ್ಮ. ಹೀಗಾಗಿ, ಉಪ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದೇನೆ

ಸತೀಶ ಜಾರಕಿಹೊಳಿ, ಬೆಳಗಾವಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ

ರಾಜಕಾರಣದಲ್ಲಿ ಅವೆಲ್ಲವೂ ಸ್ವಾಭಾವಿಕ. ಆದರೆ, ನಮ್ಮ ಪಕ್ಷದಲ್ಲಿ ಅಂತಹ ವಾತಾವರಣ ಇಲ್ಲ. ಯಾರ ಮೇಲೂ ಸಂಶಯಪಡುವ ಅಗತ್ಯವಿಲ್ಲ' ಎಂದು ತಿಳಿಸಿದರು.

'ಟಿಕೆಟ್‌ಗಾಗಿ ಸರ್ಕಸ್ ಮಾಡುವುದನ್ನು ನೋಡಿದ್ದೀರಿ. ಆದರೆ, ನೀವೇ ಸ್ಪರ್ಧಿಸಬೇಕು ಎಂದು ಪಕ್ಷದ ಎಲ್ಲರೂ ಒಟ್ಟಾಗಿ ತಿಳಿಸಿ ಟಿಕೆಟ್ ಕೊಡುವುದನ್ನು ನೋಡಿದ್ದೀರಾ? ನನ್ನ ವಿಷಯದಲ್ಲಿ ಅದು ನಡೆದಿದೆ. ಶಾಸಕನಾದವನು ಸಂಸದನಾದರೆ ಅದು ರಾಜಕೀಯವಾಗಿ ಬಡ್ತಿ ಇದ್ದಂತೆ. ಈ ಅವಕಾಶ ಎಲ್ಲರಿಗೂ ಸಿಗುವುದಿಲ್ಲ. ರಾಷ್ಟ್ರ ರಾಜಕಾರಣಕ್ಕೆ ಹೋಗಲು ಬಡ್ತಿ ಸಿಗುತ್ತಿರುವುದಕ್ಕೆ ನಿಮ್ಮ ಆಶೀರ್ವಾದ ಕಾರಣ. ನನಗೇ ಟಿಕೆಟ್ ಕೊಡಲು ಪಕ್ಷದವರೆಲ್ಲರೂ ನಿರ್ಧರಿಸಿದರು. ಈ ಶ್ರೇಯಸ್ಸು ಯಮಕನಮರಡಿ ಕ್ಷೇತ್ರದ ಜನರಿಗೆ ಸಲ್ಲಬೇಕು. ರಾಜ್ಯದಾದ್ಯಂತ ನಾನು ಹೆಸರು ಮಾಡಲು ಯಮಕನಮರಡಿ ಕಾರಣ' ಎಂದು ಸ್ಮರಿಸಿದರು.

'ವಿಧಾನಸಭೆ ಚುನಾವಣೆಯಲ್ಲಿ ಅಭ್ಯರ್ಥಿಗಳ ಪರವಾಗಿ ಇಡೀ ಕುಟುಂಬದವರು, ಸಂಬಂಧಿಕರು ಬಂದು ಪ್ರಚಾರ ಮಾಡುತ್ತಾರೆ. ಎಷ್ಟು ಖರ್ಚು ಮಾಡುತ್ತಾರೆ ನೋಡಿದ್ದೇವೆ. ಮುಂಬೈ, ಬೆಂಗಳೂರಿನಿಂದಲೂ ಬಂದು ಪ್ರಚಾರ ಮಾಡುತ್ತಾರೆ. ಆದರೆ, ನಾವು ಹೋದ ವಿಧಾನಸಭಾ ಚುನಾವಣೆಯಲ್ಲಿ ಕ್ಷೇತ್ರಕ್ಕೆ ಬರಲಿಲ್ಲ. ನಮ್ಮ ಕುಟುಂಬದವರೂ ಬರಲಿಲ್ಲ. ಆದರೂ ನೀವೆಲ್ಲರೂ ನನ್ನನ್ನು ಗೆಲ್ಲಿಸಿದಿರಿ. ನಿಮ್ಮ ಋಣ ಹಾಗೂ ಪ್ರೀತಿ ನನ್ನನ್ನು ಕಾಡುತ್ತಲೇ ಇರುತ್ತದೆ' ಎಂದರು.

'ರಾಷ್ಟ್ರ ರಾಜಕಾರಣಕ್ಕೆ ಹೋಗಲು ಇದೊಂದು ಅವಕಾಶ. ಹೋಗಬಹುದೇ' ಎಂದು ಕೇಳಿದಾಗ, ನೆರೆದಿದ್ದವರು ಚಪ್ಪಾಳೆ ಮೂಲಕ ಬೆಂಬಲ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ಮಾತನಾಡಿದ ಅಭಿಮಾನಿಗಳು, 'ನಿಮ್ಮನ್ನು ರಾಜ್ಯ ರಾಜಕಾರಣದಿಂದ ದೂರವಿಡಲು ಷಡ್ಯಂತ್ರ ನಡೆದಿದೆ. ಆ ಬಗ್ಗೆ ಎಚ್ಚರದಿಂದಿರಬೇಕು' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.



ಮತನರ್ತನ ಅಸ್ಸಾಂನ ನಲ್ಬರಿ ಜಿಲ್ಲೆಯ ಚಮತಾ ಎಂಬಲ್ಲಿ ಬಿಜೆಪಿ ಶುಕ್ರವಾರ ನಡೆಸಿದ ಚುನಾವಣಾ ಪ್ರಚಾರ ರ‍್ಯಾಲಿಯಲ್ಲಿ ಬೆಂಬಲಿಗರು ನರ್ತಿಸಿ ಸಂಭ್ರಮಿಸಿದರು –ಪಿಟಿಐ ಚಿತ್ರ

ಮೊದಲ ಹಂತದ ಮತದಾನ ಇಂದು

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಹಾಗೂ ಅಸ್ಸಾಂ ವಿಧಾನಸಭಾ ಚುನಾವಣೆಯ ಮೊದಲ ಹಂತದ ಮತದಾನ ಪ್ರಕ್ರಿಯೆ ಶನಿವಾರ (ಮಾ. 27) ನಡೆಯಲಿದೆ. ಪಶ್ಚಿಮ ಬಂಗಾಳದ 30 ಹಾಗೂ ಅಸ್ಸಾಂನ 47 ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ.

ಪಶ್ಚಿಮ ಬಂಗಾಳದಲ್ಲಿ ಮೊದಲ ಹಂತದ ಮತದಾನ ನಡೆಯುವ 30 ಕ್ಷೇತ್ರಗಳ ಪೈಕಿ 27ರಲ್ಲಿ ಪ್ರಸಕ್ತ ಟಿಎಂಸಿ ಶಾಸಕರು ಇದ್ದಾರೆ. ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹಾಗೂ ಇನ್ನೊಂದು ಕ್ಷೇತ್ರದಲ್ಲಿ ಆರ್‌ಎಸ್‌ಪಿ ಶಾಸಕರಿದ್ದಾರೆ. 2019ರಲ್ಲಿ ಈ ಕ್ಷೇತ್ರಗಳ ಚಿತ್ರಣ ಬದಲಾಗಿದ್ದು, ಈ ಭಾಗದ ಎಲ್ಲಾ ಐದು ಲೋಕಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಿತ್ತು. ಈ ಬಾರಿ ತಲಾ 29 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಹಾಗೂ ಟಿಎಂಸಿಯ ಅಭ್ಯರ್ಥಿಗಳಿದ್ದಾರೆ. ಎಡಪಕ್ಷಗಳು, ಕಾಂಗ್ರೆಸ್ ಹಾಗೂ ಐಎಸ್‌ಎಫ್ ಮೈತ್ರಿಕೂಟವು 30 ಕ್ಷೇತ್ರಗಳಲ್ಲೂ ಅಭ್ಯರ್ಥಿಗಳನ್ನು ನಿಲ್ಲಿಸಿದೆ.

ಚುನಾವಣಾ ಕಣದಲ್ಲಿ...

- **ಆಯೋಗಕ್ಕೆ ಹೈಕೋರ್ಟ್ ಸೂಚನೆ:** ಮತದಾರರ ಪಟ್ಟಿಯಲ್ಲಿ ಒಬ್ಬರದ್ದೇ ಹೆಸರು ಹಲವು ಬಾರಿ ನಮೂದು ಆಗಿದೆ ಮತ್ತು ನಕಲಿ ಹೆಸರುಗಳ ಸೇರ್ಪಡೆ ಆಗಿವೆ. ಇವರಿಗೆ ಏಪ್ರಿಲ್ 6ರಂದು ನಡೆಯುವ ಮತದಾನದಲ್ಲಿ ಭಾಗವಹಿಸಲು ಅವಕಾಶ ಕೊಡಬಾರದು ಎಂದು ಕೋರಿ ಕಾಂಗ್ರೆಸ್ ಮುಖಂಡ ರಮೇಶ್ ಚೆನ್ನಿತ್ತಲ ಸಲ್ಲಿಸಿದ ಅರ್ಜಿಗೆ ವಿವರಣೆ ಕೊಡುವಂತೆ ಚುನಾವಣಾ ಆಯೋಗಕ್ಕೆ ಕೇರಳ ಹೈಕೋರ್ಟ್ ಸೂಚಿಸಿದೆ. ಒಟ್ಟು 4,34,042 ಹೆಸರುಗಳನ್ನು ವಂಚನೆ ಮೂಲಕ ಸೇರಿಸಲಾಗಿದೆ ಎಂದು ಚೆನ್ನಿತ್ತಲ ಅವರು ತಮ್ಮ ಅರ್ಜಿಯಲ್ಲಿ ಹೇಳಿದ್ದಾರೆ.
- **ರಾಜ್ಯಸಭೆ ಚುನಾವಣೆ:** ರಾಜ್ಯಸಭೆಯ ಮೂರು ಸ್ಥಾನಗಳಿಗೆ ಕೇರಳ ವಿಧಾನಸಭೆಯಿಂದ ನಡೆಯಬೇಕಿರುವ ಚುನಾವಣೆಗೆ ಸಂಬಂಧಿಸಿ ಕಾನೂನು ಚೌಕಟ್ಟಿನಲ್ಲಿಯೇ ಶೀಘ್ರ ನಿರ್ಧಾರ ಕೈಗೊಳ್ಳಲಾಗುವುದು ಎಂದು ಚುನಾವಣಾ ಆಯೋಗ ಹೇಳಿದೆ. ಚುನಾವಣೆಗೆ ಈ ಹಿಂದೆಯೇ ದಿನಾಂಕ ಪ್ರಕಟಿಸಲಾಗಿತ್ತು. ಆದರೆ, ಕೇಂದ್ರ ಕಾನೂನು ಸಚಿವಾಲಯವು ಈ ಸಂಬಂಧ ಆಯೋಗಕ್ಕೆ ಪತ್ರ ಬರೆದ ಕಾರಣ ಚುನಾವಣೆಯನ್ನು ಅಮಾನತಿನಲ್ಲಿ ಇರಿಸಲಾಗಿದೆ. ಪತ್ರವನ್ನು ಪರಿಶೀಲಿಸಿದ ಬಳಿಕ ನಿರ್ಧಾರ ಕೈಗೊಳ್ಳಲಾಗುವುದು ಎಂದು ಆಯೋಗ ಹೇಳಿದೆ. ಆಯೋಗದ ನಡೆಯನ್ನು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪ್ರಶ್ನಿಸಿದ್ದರು. 'ಈ ನಿರ್ಧಾರದ ಹಿಂದೆ ರಾಜಕೀಯ ಹಸ್ತಕ್ಷೇಪ ಇದೆ. ಮತ್ತೊಮ್ಮೆ ಸಂವಿಧಾನದ ಉಲ್ಲಂಘನೆ ಆಗಿದೆ' ಎಂದು ವಿಜಯನ್ ಹೇಳಿದ್ದರು.
- **ಅಪರಾಧ ಹಿನ್ನೆಲೆ:** ಪಶ್ಚಿಮ ಬಂಗಾಳದಲ್ಲಿ ಮೂರನೇ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿರುವ 205 ಅಭ್ಯರ್ಥಿಗಳ ಪೈಕಿ ಶೇ 26ರಷ್ಟು ಮಂದಿಯ ವಿರುದ್ಧ ಅಪರಾಧ ಪ್ರಕರಣಗಳಿವೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿ ಹೇಳಿದೆ. 53 ಮಂದಿಯ ವಿರುದ್ಧ ಪ್ರಕರಣಗಳಿವೆ; 43 ಮಂದಿಯ ವಿರುದ್ಧ ಗಂಭೀರ ಅಪರಾಧ ಪ್ರಕರಣಗಳೇ ದಾಖಲಾಗಿವೆ.

ಮಠ–ಮಂದಿರ ಸುತ್ತಿದ ಮಂಗಲಾ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಬಿಜೆಪಿಯಿಂದ ಟಿಕೆಟ್ ಘೋಷಣೆ ಆಗುತ್ತಿದ್ದಂತೆಯೇ, ದಿವಂಗತ ಸುರೇಶ ಅಂಗಡಿ ಅವರ ಪತ್ನಿ ಮಂಗಲಾ ಅಂಗಡಿ ಅವರು ಶುಕ್ರವಾರ ವಿವಿಧ ದೇಗುಲ, ಮಠಗಳಿಗೆ ಭೇಟಿ ನೀಡುವ ಮೂಲಕ ಪಕ್ಷದ ಸಾಂಪ್ರದಾಯಿಕ ಮತಗಳ ಮೇಲೆ ಕಣ್ಣಿಟ್ಟಿರುವ ಸಂದೇಶ ರವಾನಿಸಿದರು.

ಪುತ್ರಿಯರಾದ ಡಾ.ಸ್ಫೂರ್ತಿ ಪಾಟೀಲ ಮತ್ತು ಶ್ರದ್ಧಾ ಶೆಟ್ಟರ್ ಅವರೊಂದಿಗೆ ಕ್ಷೇತ್ರದ ವಿವಿಧೆಡೆ ಸಂಚರಿಸಿದರು. ಸುರೇಶ ಅಂಗಡಿ ಅವರು ಶುಭ ಕಾರ್ಯಕ್ರಮಗಳಿಗೆ ಮುನ್ನ ತೆರಳುತ್ತಿದ್ದ ರಾಣಿ ಚನ್ನಮ್ಮ ವೃತ್ತದಲ್ಲಿರುವ ಮಹಾಗಣಪತಿ ಮಂದಿರಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿ ಗೆಲುವು ದೊರಕಿಸಿಕೊಡುವಂತೆ ವಿಘ್ನ ನಿವಾರಕನಲ್ಲಿ ಮೊರೆ ಇಟ್ಟರು. ಅಲ್ಲಿಂದ ಲಕ್ಷ್ಮಿಟೇಕ್‌ನಲ್ಲಿರುವ ಹುಕ್ಕೇರಿ ಹಿರೇಮಠದ ಶಾಖಾ ಮಠಕ್ಕೆ ಭೇಟಿ ನೀಡಿ, ಪೂಜೆ ಸಲ್ಲಿಸಿ ಪೀಠಾಧಿಪತಿ ಚಂದ್ರಶೇಖರ



ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮಂಗಲಾ ಅಂಗಡಿ ಅವರು ಶುಕ್ರವಾರ ಗಣಪತಿ ಮಂದಿರಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು

ಶಿವಾಚಾರ್ಯ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. ನಂತರ ಶಿವಬಸವ ನಗರದಲ್ಲಿರುವ ಕಾರಂಜಿ ಮಠದಲ್ಲಿ ಅಲ್ಲಿನ ಪೀಠಾಧಿಪತಿ ಗುರುಸಿದ್ಧ ಸ್ವಾಮೀಜಿಯವರಿಂದ ಆಶೀರ್ವಾದ ಪಡೆದರು.

ಬಳಿಕ ಪಕ್ಷದ ಮಹಾನಗರ ಘಟಕದ ಕಚೇರಿಗೆ ತೆರಳಿ ಅಲ್ಲಿ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಸಮಾಲೋಚನೆ ನಡೆಸಿದರು. 'ಸುರೇಶ ಅಂಗಡಿ ಅವರು ಕೈಗೊಂಡಿದ್ದ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗಬೇಕಾಗಿದೆ. ಜನರ ಸೇವೆ ಮಾಡಬೇಕಾಗಿದೆ. ಈ ದಿಸೆಯಲ್ಲಿ ಪತಿಗೆ ತೋರಿದ ಪ್ರೀತಿ–ವಿಶ್ವಾಸವನ್ನು ನನಗೂ ತೋರುತ್ತೀರಿ ಎಂದು ನಂಬಿದ್ದೇನೆ. ಕಷ್ಟಕಾಲದಲ್ಲಿ ನಮ್ಮ ಕುಟುಂಬದ ಜೊತೆಗಿದ್ದ ನಿಮ್ಮೆಲ್ಲರಿಗೂ ಋಣಿ' ಎಂದು ಭಾವನಾತ್ಮಕ ಮಾತುಗಳ ಮೂಲಕ ಕಾರ್ಯಕರ್ತರ ಮನ ಗೆಲ್ಲಲು ಪ್ರಯತ್ನಿಸಿದರು.

ತಾವು 'ಅಭ್ಯರ್ಥಿ' ಎನ್ನುವುದು ಖಚಿತ ಆಗುತ್ತಿದ್ದಂತೆಯೇ ಮಂಗಲಾ ಸಾಮಾಜಿಕ ಜಾಲತಾಣದಲ್ಲೂ ಸಕ್ರಿಯರಾಗಿದ್ದಾರೆ. ಫೇಸ್‌ಬುಕ್‌ನಲ್ಲಿ ಖಾತೆ ಹೊಂದಿರುವ ಅವರಿಗೆ ಫಾಲೋವರ್‌ಗಳ ಸಂಖ್ಯೆ ದಿಢೀರನೆ ಸಾವಿರಗಟ್ಟಲೆ ಏರಿಕೆಯಾಗಿದೆ. 'ಅಭಿವೃದ್ಧಿಯ ಸಂಕಲ್ಪ ನಮ್ಮದು! ಇರಲಿ ಬಿಜೆಪಿಗೆ ಮತ ನಿಮ್ಮದು! ಕ್ಷೇತ್ರದ ಪ್ರಗತಿಗಾಗಿ ನಿಮ್ಮ ಬೆಂಬಲ ಹಾಗೂ ಸಹಕಾರದ ನಿರೀಕ್ಷೆಯಲ್ಲಿ ನಾನು' ಎಂಬ ಕವರ್ ಫೋಟೊ ಹಾಕಿ, ಸುರೇಶ ಅಂಗಡಿ ಅವರೊಂದಿಗೆ ಇರುವ ಹೊಸ ಪ್ರೊಫೈಲ್ ಫೋಟೊ ಬಳಸಿದ್ದಾರೆ.

ಟಿಕೆಟ್ ಆಕಾಂಕ್ಷಿಯೂ ಆಗಿದ್ದ ನವದೆಹಲಿಯಲ್ಲಿ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಶಂಕರಗೌಡ ಪಾಟೀಲ ಸೇರಿದಂತೆ ಹಲವರು ಮಂಗಲಾ ಅವರನ್ನು ಭೇಟಿಯಾಗಿ ಅಭಿನಂದಿಸಿದರು.

ನುಡಿ–ಕಿಡಿ

ಕಾಂಗ್ರೆಸ್‌ನ ದಾಳಿಯಿಂದ ಅಸ್ಸಾಂನ ಅಸ್ಮಿತೆಯನ್ನು ರಕ್ಷಿಸುವ ಹೋರಾಟ ಇದು. ಮತಬ್ಯಾಂಕ್ ರಾಜಕಾರಣಕ್ಕಾಗಿ ಅಸ್ಸಾಂನ ಅಸ್ಮಿತೆಯ ಜತೆ ಆಟವಾಡುವ ಕಾಂಗ್ರೆಸ್‌ನ ಹುನ್ನಾರವನ್ನು ತಡೆಯಲು ಎಲ್ಲ ಪ್ರಯತ್ನಗಳನ್ನೂ ಮಾಡುತ್ತೇವೆ



ಜಿತೇಂದ್ರ ಸಿಂಗ್, ಬಿಜೆಪಿ ಮುಖಂಡ


ಅಸ್ಸಾಂ ಅಥವಾ ಇತರೆಡೆಗಳಿಗೆ ಸಂಬಂಧಿಸಿದ ನಿರ್ಧಾರವನ್ನು ದೆಹಲಿಯಲ್ಲಿ ಕುಳಿತ ಇಬ್ಬರು ತೆಗೆದುಕೊಳ್ಳುತ್ತಾರೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಅಥವಾ ರಾಜ್ಯದ ನಾಯಕರಿಗೆ ಬೆಲೆಯೇ ಇಲ್ಲ. ಅಸ್ಸಾಂ ಮುಖ್ಯಮಂತ್ರಿ ಯಾರಾಗಬೇಕು, ಆಳ್ವಿಕೆ ಹೇಗಿರಬೇಕು ಎಂಬುದನ್ನು ಗುಜರಾತಿ ಯಜಮಾನರೇ ತೀರ್ಮಾನಿಸಿದ್ದರು

ಕಮಲ್‌ನಾಥ್, ಕಾಂಗ್ರೆಸ್ ಮುಖಂಡ

ಭಾರತದ ಅರ್ಥ ವ್ಯವಸ್ಥೆಯು ಹಳಿ ತಪ್ಪಿದೆ. ಕೈಗಾರಿಕಾ ಪ್ರಗತಿ ಇಲ್ಲವೇ ಇಲ್ಲ. ನರೇಂದ್ರ ಮೋದಿ ಅವರ ಗಡ್ಡ ಬೆಳೆಯುವುದು ಬಿಟ್ಟರೆ ಬೇರೆ ಯಾವ ಬೆಳವಣಿಗೆಯೂ ದೇಶದಲ್ಲಿ ಆಗುತ್ತಿಲ್ಲ. ಮೋದಿ ಅವರು ಒಮ್ಮೊಮ್ಮೆ ರವೀಂದ್ರನಾಥ ಟ್ಯಾಗೋರ್ ಅವರಂತೆ, ಕೆಲವೊಮ್ಮೆ ಮಹಾತ್ಮ ಗಾಂಧಿಯಂತೆ ಬಟ್ಟೆ ಧರಿಸುತ್ತಿದ್ದಾರೆ


ಮಮತಾ ಬ್ಯಾನರ್ಜಿ, ಟಿಎಂಸಿ ಮುಖ್ಯಸ್ಥೆ


ಪೌರತ್ವ (ತಿದ್ದುಪಡಿ) ಕಾಯ್ದೆಯು (ಸಿಎಎ) ಕೇಂದ್ರದ ಕಾನೂನು. ಯಾವುದೇ ವಿಧಾನಸಭೆಯಲ್ಲಿ ಅದನ್ನು ಬದಲಾಯಿಸಲು ಸಾಧ್ಯವಿಲ್ಲ. ರಾಹುಲ್ ಗಾಂಧಿಗೆ ಅದು ಕೂಡ ಗೊತ್ತಿಲ್ಲವೇ?

ನಿತಿನ್ ಗಡ್ಕರಿ, ಕೇಂದ್ರ ಸಚಿವ

ಆಗ ಶಾಸಕರ ಆಪ್ತಸಹಾಯಕ; ಈಗ ಅಭ್ಯರ್ಥಿ

● ತೀರ್ಥಕುಮಾರ ಬೆಳಕೋಟಾ

ಕಮಲಾಪುರ (ಕಲಬುರ್ಗಿ ಜಿಲ್ಲೆ): ಇಬ್ಬರು ಶಾಸಕರು ಮತ್ತು ಕಲಬುರ್ಗಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಆಪ್ತ ಸಹಾಯಕರಾಗಿದ್ದ ಶರಣು ಸಲಗರ ಈಗ ಬಸವಕಲ್ಯಾಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ.ಕಮಲಾಪುರ ತಾಲ್ಲೂಕಿನ ವಿ.ಕೆ.ಸಲಗರ ಗ್ರಾಮದಲ್ಲಿ ಜನಿಸಿರುವ ಶರಣು ಸಲಗರ ಎಂ.ಎಸ್ಸಿ ಎಂ.ಇಡಿ ಓದಿದ್ದಾರೆ. 2002ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ನೇಮಕ. ಅದೇ ವೇಳೆ ಶಾಸಕರಾಗಿದ್ದ ರೇವುನಾಯಕ ಬೆಳಮಗಿ ಅವರ ಆಪ್ತ ಸಹಾಯಕರಾಗಿದ್ದರು. 2004ರಿಂದ 2011ರ ವರೆಗೆ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿದ್ದವರಿಗೆ ಹಾಗೂ 2013ರಲ್ಲಿ ಜೇವರ್ಗಿ ಶಾಸಕ ಡಾ.ಅಜಯ ಸಿಂಗ್ ಅವರಿಗೆ ಆಪ್ತಸಹಾಯಕರಾಗಿದ್ದರು.

2011ರಲ್ಲಿ ಪ್ರೌಢಶಾಲೆ ಶಿಕ್ಷಕರಾಗಿ ಪದೋನ್ನತಿ ಹೊಂದಿದರು. 2014ರಲ್ಲಿ ಶಿಕ್ಷಕ ಹುದ್ದೆಗೆ ರಾಜೀನಾಮೆ ನೀಡಿ ಕಾಂಗ್ರೆಸ್ ಸೇರಿದರು.



2016ರಲ್ಲಿ ಆಳಂದ ತಾಲ್ಲೂಕಿನ ಚಿಂಚನಸೂರ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಟಿಕೆಟ್ ಸಿಗಲಿಲ್ಲ ಎಂದು ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದರು. ಕಲಬುರ್ಗಿ ಗ್ರಾಮೀಣ ಮಂಡಲದ ಬಿಜೆಪಿ ಅಧ್ಯಕ್ಷರೂ ಆದರು.

ಕಲಬುರ್ಗಿ ಗ್ರಾಮೀಣ ಕ್ಷೇತ್ರದ ಬಿಜೆಪಿಯಲ್ಲಿ ವೈಮನಸ್ಸು ಉಂಟಾಗಿದ್ದರಿಂದ ಮತ್ತು ಈ ಕ್ಷೇತ್ರ ಪರಿಶಿಷ್ಟ ಜಾತಿಗೆ ಮೀಸಲಾಗಿರುವುದರಿಂದ ಇಲ್ಲಿ ತಮಗೆ (ಇವರು ವೀರಶೈವ ಲಿಂಗಾಯತ) ರಾಜಕೀಯ ಭವಿಷ್ಯ ಇಲ್ಲ ಎಂಬ ಕಾರಣಕ್ಕೆ ಬಸವಕಲ್ಯಾಣ ಕ್ಷೇತ್ರದಲ್ಲಿ ಪಕ್ಷದ ಚಟುವಟಿಕೆಯಲ್ಲಿ ತೊಡಗಿದರು.

ಅವರ ಪತ್ನಿ ಸಾವಿತ್ರಿ ಅವರು ಸಮಾಜಕಲ್ಯಾಣ ಇಲಾಖೆಯ ವಸತಿ ನಿಲಯದ ಮೇಲ್ವಿಚಾರಕಿಯಾಗಿದ್ದರು. 2016ರ ಕೆಎಎಸ್ ಪರೀಕ್ಷೆಯಲ್ಲಿ ಪಾಸಾಗಿ ತಹಶೀಲ್ದಾರರಾದರು. ಸುಮಾರು ಎರಡು ವರ್ಷಗಳಿಂದ ಬಸವಕಲ್ಯಾಣ ತಹಶೀಲ್ದಾರರಾಗಿದ್ದ ಅವರಿಗೆ ಈಗಷ್ಟೇ ವರ್ಗಾವಣೆ ಆಗಿದೆ.

ಎರಡು ಮೊಕದ್ದಮೆ: 2018ರ ವಿಧಾನಸಭೆ ಚುನಾವಣೆ ಪೂರ್ವ ರೇವುನಾಯಕ ಬೆಳಮಗಿ ಹಾಗೂ ಬಸವರಾಜ ಮತ್ತಿಮೂಡ ಬೆಂಬಲಿಗರ ಮಧ್ಯೆ ಕಲಬುರ್ಗಿ ಬಿಜೆಪಿ ಕಚೇರಿಯಲ್ಲಿ ಕಲಹವಾಗಿತ್ತು. ಶರಣು ಸಲಗರ ಸೇರಿ ಆರು ಜನರು ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಿ ಬೆಳಮಗಿ ಬೆಂಬಲಿಗರು ಕಲಬುರ್ಗಿಯ ಬ್ರಹ್ಮಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

2018ರ ಜುಲೈ ತಿಂಗಳಲ್ಲಿ ನರೋಣಾ ಗ್ರಾಮದ ಕಾರ್ಯಕರ್ತರ ಜಗಳ ಪೊಲೀಸ್ ಠಾಣೆ ಮೆಟ್ಟಿಲೇರಿದಾಗ ಆಗಿನ ಪಿಎಸ್‌ಐ ಗಜಾನನ ನಾಯಕ್ ಸಂಧಾನ ನಡೆಸಿದ್ದಾರೆ ಎಂದು ಶರಣು ಸಲಗರ ಮಧ್ಯಪ್ರವೇಶಿಸಿದ್ದರು. ಆಗ ಇದರ ವಿಡಿಯೊ ವೈರಲ್ ಆಗಿತ್ತು. 'ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ' ಎಂದು ಪಿಎಸ್‌ಐ ಅವರು ನರೋಣ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಲವ್ ಜಿಹಾದ್, ಜಮೀನು ಜಿಹಾದ್ ವಿರುದ್ಧ ಕಾಯ್ದೆ: ಶಾ



ಕಮಲಾಪುರ್ (ಅಸ್ಸಾಂ) (ಪಿಟಿಐ): ಅಸ್ಸಾಂನಲ್ಲಿ ಮತ್ತೆ ಅಧಿಕಾರಕ್ಕೆ ಬಂದರೆ 'ಲವ್ ಜಿಹಾದ್ ಮತ್ತು ಜಮೀನು ಜಿಹಾದ್' ನಿಯಂತ್ರಣಕ್ಕೆ ಕಾಯ್ದೆ ರೂಪಿಸಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಅಸ್ಸಾಂ ಸಂಸ್ಕೃತಿ ಮತ್ತು ವೈಶಿಷ್ಟ್ಯವನ್ನು ಬಲಪಡಿಸಲು ಅಗತ್ಯವಾದ ಕಾನೂನು ಮತ್ತು ನೀತಿ ರೂಪಿಸಲಾಗುವುದು ಎಂದೂ ಅವರು ಭರವಸೆ ಕೊಟ್ಟಿದ್ದಾರೆ.

ಕೋಮು ಹೆಸರಿನಲ್ಲಿ ಹೊರಗಿಡುವಿಕೆ ಮತ್ತು ಪ್ರತ್ಯೇಕತಾವಾದಕ್ಕೆ ಕುಮ್ಮಕ್ಕು ನೀಡುವ ಸಂಘಟನೆಗಳು ಮತ್ತು ವ್ಯಕ್ತಿಗಳನ್ನು ಗುರುತಿಸಿ ಅವರಲ್ಲಿನ ತೀವ್ರವಾದವನ್ನು ಸರಿಪಡಿಸಲು ನೀತಿ ರೂಪಿಸಲಾಗುವುದು ಎಂದು ಬಿಜೆಪಿಯ ಪ್ರಣಾಳಿಕೆಯಲ್ಲಿ ಹೇಳಲಾಗಿದೆ.

ಪುದುಚೇರಿಗೆ ಬಿಜೆಪಿ ಪ್ರಣಾಳಿಕೆ

ಪುದುಚೇರಿ (ಪಿಟಿಐ): ಪುದುಚೇರಿ ವಿಧಾನಸಭೆಗೆ ಬಿಜೆಪಿಯ ಪ್ರಣಾಳಿಕೆ, 'ಬೆಸ್ಟ್ (BEST) ಪುದುಚೇರಿ' ಅನ್ನು ಶುಕ್ರವಾರ ಇಲ್ಲಿ ಬಿಡುಗಡೆ ಮಾಡಲಾಯಿತು.

ಕೆ.ಜಿ. ತರಗತಿಯಿಂದ ಉನ್ನತ ಶಿಕ್ಷಣದವರೆಗೆ ಹೆಣ್ಣುಮಕ್ಕಳಿಗೆ ಉಚಿತ ಶಿಕ್ಷಣ, ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ, ಜವಳಿ ಉದ್ದಿಮೆಗಳನ್ನು ಪುನರಾರಂಭಿಸುವುದು, ಜವಳಿ ಪಾರ್ಕ್ ಆರಂಭ ಸೇರಿದಂತೆ ಅನೇಕ ಭರವಸೆಗಳನ್ನು ಪ್ರಣಾಳಿಕೆಯಲ್ಲಿ ನೀಡಲಾಗಿದೆ.

ಪುದುಚೇರಿಯನ್ನು ವ್ಯಾಪಾರ (B), ಶಿಕ್ಷಣ (E), ಅಧ್ಯಾತ್ಮ (S) ಹಾಗೂ ಪ್ರವಾಸೋದ್ಯಮ (T) ಕೇಂದ್ರವಾಗಿಸುವ ಭರವಸೆಯನ್ನು ನೀಡಲಾಗಿದೆ. ತಮಿಳು ಕವಿ ಸುಬ್ರಹ್ಮಣ್ಯಭಾರತಿ ಅವರ ಪ್ರತಿಮೆ ಸ್ಥಾಪನೆ, ಹೂಡಿಕೆದಾರರನ್ನು ಆಕರ್ಷಿಸಲು ಜಾಗತಿಕ ಹೂಡಿಕೆದಾರರ ಸಮಾವೇಶ ಆಯೋಜನೆ, ಬಂದರು ಹಾಗೂ ಮೂಲಸೌಲಭ್ಯಗಳನ್ನು ಉತ್ತಮಪಡಿಸುವ ಮೂಲಕ ಮೀನುಗಾರರ



ಪುದುಚೇರಿ ವಿಧಾನಸಭಾ ಚುನಾವಣೆಗೆ ಬಿಜೆಪಿಯ ಪ್ರಣಾಳಿಕೆ 'ಬೆಸ್ಟ್ ಪುದುಚೇರಿ' ಅನ್ನು ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶುಕ್ರವಾರ ಬಿಡುಗಡೆ ಮಾಡಿದರು –ಪಿಟಿಐ ಚಿತ್ರ

ಅಭಿವೃದ್ಧಿಗೆ ಕ್ರಮ ಮುಂತಾದವುಗಳ ಉಲ್ಲೇಖವೂ ಪ್ರಣಾಳಿಕೆಯಲ್ಲಿದೆ.

ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, 'ಬಿಜೆಪಿ ಅಧಿಕಾರಕ್ಕೆ ಬಂದರೆ, ಈವರೆಗೆ ಬೆಳಕು ಕಾಣದಿರುವ ಎಲ್ಲಾ ಯೋಜನೆಗಳನ್ನು ಪೂರ್ಣ ಪ್ರಮಾಣದಲ್ಲಿ ಜಾರಿ ಮಾಡಲಾಗುವುದು. ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯು ಎಲ್ಲಾ ಕ್ಷೇತ್ರಗಳಲ್ಲೂ ಅಭಿವೃದ್ಧಿ ಸಾಧಿಸಬೇಕು ಎಂಬುದು ಪ್ರಧಾನಿ ನರೇಂದ್ರ ಮೋದಿ ಅವರ ನಿರೀಕ್ಷೆಯಾಗಿದೆ' ಎಂದರು.

ಬಿಜೆಪಿ ಟಿಕೆಟ್ ಹಂಚಿಕೆಯಲ್ಲಿ ಡೀಲ್ : ಖೂಬಾ

ಪ್ರಜಾವಾಣಿ ವಾರ್ತೆ

ಬೀದರ್: 'ಬಸವಕಲ್ಯಾಣ ಕ್ಷೇತ್ರದ ಉಪ ಚುನಾವಣೆಯ ಬಿಜೆಪಿ ಟಿಕೆಟ್ ಹಂಚಿಕೆಯಲ್ಲಿ ಡೀಲ್ ಆಗಿದೆ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ. ಈಗ ನನಗೂ ಈ ಸಂಶಯ ಕಾಡುತ್ತಿದೆ' ಎಂದು ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಹೇಳಿದರು.



'ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯ ಬಿಜೆಪಿ ಟಿಕೆಟ್‌ಅನ್ನು ಈ ತಾಲ್ಲೂಕು ಹಾಗೂ ಬೀದರ್ ಜಿಲ್ಲೆಯವರನ್ನು ಬಿಟ್ಟು ಬೇರೆ ಜಿಲ್ಲೆಯವರಿಗೆ ಕೊಡಲಾಗಿದೆ. ಡೀಲ್ ಆರೋಪ ಸತ್ಯವೋ, ಮಿಥ್ಯವೋ ತಿಳಿದುಕೊಳ್ಳಬೇಕಿದೆ' ಎಂದು ಅವರು ಪ್ರತಿಕ್ರಿಯಿಸಿದರು.

'ಬಿಜೆಪಿ, ಪ್ರಧಾನಮಂತ್ರಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ನಂಬಿ ಜೆಡಿಎಸ್ ಶಾಸಕ ಇದ್ದಾಗಲೇ ಬಿಜೆಪಿ ಸೇರಿದ್ದೆ. ನನ್ನನ್ನು ಕಡೆಗಣಿಸಿ ಹೊರ ಜಿಲ್ಲೆಯವರಿಗೆ ಟಿಕೆಟ್ ನೀಡಲಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಸ್ಕಿ: ಬೆಂಗಳೂರಿನ ದೀಪಿಕಾ ನಾಮಪತ್ರ

ಪ್ರಜಾವಾಣಿ ವಾರ್ತೆ

ರಾಯಚೂರು: ಮಸ್ಕಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಬೆಂಗಳೂರಿನ ದೀಪಿಕಾ ಎಸ್. ಎಂಬವರು ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿದ್ದಾರೆ.

ಇವರ ಪತಿ ರವಿ ಪಡಸಲಗಿ ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕು ಬಿದರಿ ಗ್ರಾಮದವರು. ದೀಪಿಕಾ ಅವರ ಪರವಾಗಿ ಸೂಚಕ ನಾಗಪ್ಪ ನಾಮಪತ್ರ ಸಲ್ಲಿಸಿದರು.



ಎಂ.ಟೆಕ್ ಓದಿದ್ದು, ಪತಿ ಸಾಫ್ಟ್‌ವೇರ್ ಎಂಜಿನಿಯರ್.

20 ಕ್ಷೇತ್ರಗಳಲ್ಲಿ ಮಾಜಿ ಸಚಿವರು ಮತ್ತು ಶಾಸಕರ ಮಕ್ಕಳ ಸ್ಪರ್ಧೆ

ಕೇರಳ ಕಣ: ಮಕ್ಕಳು, ಅಳಿಯ, ನೆಂಟರ ದಂಡು

ತಿರುವನಂತಪುರ (ಪಿಟಿಐ): ಕೇರಳ ವಿಧಾನಸಭೆ ಚುನಾವಣಾ ಕಣದಲ್ಲಿ ಹಿರಿಯ ರಾಜಕಾರಣಿಗಳ ಮಕ್ಕಳು, ಅಳಿಯಂದಿರು ಮತ್ತು ನೆಂಟರ ದೊಡ್ಡ ದಂಡೇ ಇದೆ.

ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಅಳಿಯ ಪಿ.ಎ. ಮೊಹಮ್ಮದ್ ರಿಯಾಸ್ ಅವರು ಬೇಪೂರ್ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ. ಡಿವೈಎಫ್‌ಐನ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ರಿಯಾಸ್‌ಗೆ ಇದು ಮೊದಲ ವಿಧಾನಸಭಾ ಚುನಾವಣೆ. ಕೇರಳದ ಮಾಜಿ ಮುಖ್ಯಮಂತ್ರಿ ಕೆ. ಕರುಣಾಕರನ್ ಅವರ ಮಕ್ಕಳಾದ ಕೆ. ಮುರಳೀಧರನ್ ಮತ್ತು ಪದ್ಮಜಾ ವೇಣುಗೋಪಾಲ್ ಅವರು ನೇಮಮ್ ಮತ್ತು ತ್ರಿಶ್ಶೂರ್ ಕ್ಷೇತ್ರದಲ್ಲಿ ಕಣದಲ್ಲಿದ್ದಾರೆ.

140 ಕ್ಷೇತ್ರಗಳ ಪೈಕಿ 20 ಕ್ಷೇತ್ರಗಳಲ್ಲಿ ಮಾಜಿ ಸಚಿವರು ಮತ್ತು ಶಾಸಕರ ಮಕ್ಕಳು ಸ್ಪರ್ಧಿಸುತ್ತಿದ್ದಾರೆ.


ತಿರುವನಂತಪುರದಲ್ಲಿ ನಡೆದ ಚುನಾವಣಾ ಪ್ರಚಾರ ಸಮಾರಂಭದಲ್ಲಿ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪಿಟಿಐ ಚಿತ್ರ

ಸೀಟು ಹಂಚಿಕೆಯಲ್ಲಿ ತಾರತಮ್ಯ ಆಗಿದೆ ಎಂಬುದು ಕೇರಳದಲ್ಲಿ ಪ್ರತಿಭಟನೆಗೆ ಕಾರಣವಾಗಿದೆ. ಕಾಂಗ್ರೆಸ್ ಮಹಿಳಾ ಮೋರ್ಚಾದ ಮಾಜಿ ಅಧ್ಯಕ್ಷೆ ಲತಿಕಾ ಸುರೇಶ್ ಅವರು ತಲೆ ಬೋಳಿಸಿ ಪ್ರತಿಭಟನೆ ನಡೆಸಿದ್ದರು. ಏಟುಮಾನೂರು ಕ್ಷೇತ್ರದಿಂದ ಲತಿಕಾ ಅವರಿಗೆ ಟಿಕೆಟ್ ನಿರಾಕರಿಸಲಾಗಿತ್ತು. ಹಾಗಾಗಿ ಅವರು ಪಕ್ಷೇತರರಾಗಿ ಸ್ಪರ್ಧಿಸುತ್ತಿದ್ದಾರೆ.

ಕಾಂಗ್ರೆಸ್‌ನ ಹಿರಿಯ ನಾಯಕಿ ಕೆ.ಸಿ. ರೋಸಾಕುಟ್ಟಿ ಅವರೂ ಪಕ್ಷ ಬಿಟ್ಟಿದ್ದಾರೆ. ಕಲ್ಪೆಟ್ಟ ಕ್ಷೇತ್ರದಲ್ಲಿ ಅವರಿಗೆ ಟಿಕೆಟ್ ನಿರಾಕರಿಸಲಾಗಿತ್ತು. ಎಡರಂಗದಲ್ಲಿಯೂ ಅತೃಪ್ತಿಯ ಪ್ರಮಾಣ ದೊಡ್ಡದೇ ಇದೆ.

ಮಾಜಿ ಸಚಿವ ಇಬ್ರಾಹಿಂ ಕುಂಞಿ ಅವರ ಮಗ ಪಿ.ಇ. ಅಬ್ದುಲ್ ಗಫೂರ್ (ಕಲಮಶ್ಶೇರಿ), ಕಾಂಗ್ರೆಸ್‌ನ ಮಾಜಿ ಶಾಸಕ ಕೆ. ಅಚ್ಯುತನ್ ಅವರ ಮಗ ಸುಮೇಶ್, ಎನ್. ವಿಜಯನ್ ಪಿಳ್ಳೆ ಅವರ ಮಗ ಡಾ.ಸುಜಿತ್ ಅವರು ಸ್ಪರ್ಧಿಸುತ್ತಿದ್ದಾರೆ.

ಕುಟ್ಟನಾಡಿನಿಂದ ಎನ್‌ಸಿಪಿ ಅಭ್ಯರ್ಥಿಯಾಗಿರುವ ಥಾಮಸ್ ಕೆ. ಥಾಮಸ್ ಅವರು ಮಾಜಿ ಸಚಿವ ಥಾಮಸ್ ಚಾಂಡಿಯ ಮಗ. ಸಿಪಿಎಂನ ಪ್ರಭಾರ ಕಾರ್ಯದರ್ಶಿ ಎ. ವಿಜಯರಾಘವನ್ ಅವರ ಹೆಂಡತಿ ಆರ್. ಬಿಂದು ಅವರು ಇರಿಞಾಲಕುಡದಿಂದ ಸ್ಪರ್ಧಿಸುತ್ತಿದ್ದಾರೆ. ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್ ಅವರ ಅಳಿಯ ಪಿ.ವಿ. ಶ್ರೀನಿಜಿನ್ ಅವರನ್ನು ಕುಟ್ಟನಾಡ್‌ನಿಂದ ಎಲ್‌ಡಿಎಫ್ ಕಣಕ್ಕೆ ಇಳಿಸಿದೆ.

ಸಂಬಂಧಿಕರನ್ನು ಕಣಕ್ಕೆ ಇಳಿಸುವ ಪ್ರವೃತ್ತಿ ಕೇರಳದಲ್ಲಿ ಹೆಚ್ಚುತ್ತಿದೆ. ಯುಡಿಎಫ್‌ನಲ್ಲಿಯೇ ಇದು ಹೆಚ್ಚು. ಹಿಂದಿನ ಯುಡಿಎಫ್ ಸಚಿವ ಸಂಪುಟದ ಸದಸ್ಯರಲ್ಲಿ ಆರು ಮಂದಿ ಹಿರಿಯ ರಾಜಕಾರಣಿಗಳ ಮಕ್ಕಳೇ ಇದ್ದರು ಎಂದು ರಾಜಕೀಯ ವಿಶ್ಲೇಷಕ ಮತ್ತು ವಕೀಲ ಎ. ಜಯಶಂಕರ್ ಹೇಳುತ್ತಾರೆ.

'ಪುದುಚೇರಿ ಮತದಾನ ಮುಂದೂಡಿಕೆ ಸಾಧ್ಯವೇ?'


ಚೆನ್ನೈ (ಪಿಟಿಐ): ಪುದುಚೇರಿ ಬಿಜೆಪಿ ಘಟಕವು ಮತದಾರರ ಆಧಾರ್ ವಿವರಗಳನ್ನು ಪಡೆದುಕೊಂಡಿದೆ ಎಂಬ ಆರೋಪದ ಬಗ್ಗೆ ಗಂಭೀರವಾದ ತನಿಖೆ ಅಗತ್ಯವಿದೆ ಎಂದು ಮದ್ರಾಸ್ ಹೈಕೋರ್ಟ್ ಶುಕ್ರವಾರ ಹೇಳಿದೆ. ಈ ತನಿಖೆ ಪೂರ್ಣಗೊಳ್ಳುವವರೆಗೆ ಪುದುಚೇರಿ ವಿಧಾನಸಭೆಯ ಚುನಾವಣೆ ಮುಂದೂಡಲು ಸಾಧ್ಯವೇ ಎಂದು ಚುನಾವಣಾ ಆಯೋಗವನ್ನು ಕೇಳಿದೆ. ಪುದುಚೇರಿಯಲ್ಲಿ ಏಪ್ರಿಲ್ 6ಕ್ಕೆ ಮತದಾನ ನಿಗದಿಯಾಗಿದೆ.

ಕೇವಲ ಆರೋಪಗಳ ಆಧಾರದಲ್ಲಿ ಚುನಾವಣೆ ಮುಂದೂಡಲು ಸಾಧ್ಯವಿಲ್ಲ, ಆದರೆ, ಬಿಜೆಪಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ ಎಂದು ಆಯೋಗವು ಕೋರ್ಟ್‌ಗೆ ತಿಳಿಸಿದೆ.

ಡಿವೈಎಫ್‌ಐ ಪುದುಚೇರಿ ಘಟಕದ ಅಧ್ಯಕ್ಷ ಎ. ಆನಂದ್ ಅವರು ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಸಂಜೀವ್ ಬ್ಯಾನರ್ಜಿ ನೇತೃತ್ವದ ಪೀಠವು ನಡೆಸಿತು. ಪುದುಚೇರಿ ಬಿಜೆಪಿ ಘಟಕವು ಮತದಾರರ ಆಧಾರ್ ವಿವರಗಳನ್ನು ಅಕ್ರಮವಾಗಿ ಪಡೆದಿದೆ. ಅದರ ಆಧಾರದಲ್ಲಿ ಹಲವು ವಾಟ್ಸ್‌ಆ್ಯಪ್ ಗುಂಪುಗಳನ್ನು ಮಾಡಿಕೊಂಡು ಪ್ರಚಾರ ನಡೆಸುತ್ತಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಮತದಾರರ ಮೊಬೈಲ್ ಸಂಖ್ಯೆಗಳನ್ನು ಎಲ್ಲಿಂದ ಪಡೆದುಕೊಳ್ಳಲಾಗಿದೆ ಎಂಬ ಬಗ್ಗೆ ತನಿಖೆ ನಡೆಸಬಹುದು ಎಂದು ಆಯೋಗದ ಪರ ವಕೀಲ ಜಿ. ರಾಜಗೋಪಾಲನ್ ಹೇಳಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ನಿಮ್ಮ ಜೀವನದಲ್ಲಿ ಸರಿಯಾದ ವ್ಯಕ್ತಿಯನ್ನು ನೀವು ಹುಡುಕ ಬಯಸುವಿರಾದರೆ, ಮೊದಲು ನೀವು ಸರಿಯಾದ ವ್ಯಕ್ತಿಯಾಗಿ. -ದೀಪಕ್ ಚೋಪ್ರಾ

ಪಡಿತರ ಕಳ್ಳಸಾಗಣೆ ತಡೆಗೆ ಬಿಗಿಯಾದ ಕ್ರಮ ಅಗತ್ಯ

ಬಡ ಕುಟುಂಬಗಳ ಜನ ಹಸಿವಿನಿಂದ ಬಳಲಬಾರದು ಎಂಬ ಮಹತ್ತರವಾದ ಉದ್ದೇಶದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಪಡಿತರ ಧಾನ್ಯಗಳನ್ನು ಒದಗಿಸುತ್ತಿವೆ. ರಾಜ್ಯದಲ್ಲಿ ಆದ್ಯತಾ ವಲಯದ (ಬಿಪಿಎಲ್) ಕುಟುಂಬಗಳ ಪ್ರತೀ ಸದಸ್ಯರಿಗೆ ತಿಂಗಳಿಗೆ 5 ಕೆ.ಜಿ. ಅಕ್ಕಿ ಮತ್ತು ಪ್ರತೀ ಕುಟುಂಬಕ್ಕೆ ತಲಾ 2 ಕೆ.ಜಿ. ಗೋಧಿ ಹಾಗೂ ಅಂತ್ಯೋದಯ ಅನ್ನ ಯೋಜನೆಯ ಫಲಾನುಭವಿಗಳಾಗಿರುವ ಕಡು ಬಡತನದ ಕುಟುಂಬಗಳಿಗೆ ತಿಂಗಳಿಗೆ 35 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುತ್ತಿದೆ. ಆದ್ಯತಾ ವಲಯದಿಂದ ಹೊರಗಿರುವ (ಎಪಿಎಲ್) ಕುಟುಂಬಗಳಿಗೂ ರಿಯಾಯಿತಿ ದರದಲ್ಲಿ ಆಹಾರ ಧಾನ್ಯ ಒದಗಿಸುವ ವ್ಯವಸ್ಥೆ ಜಾರಿಯಲ್ಲಿದೆ. ಅಂತ್ಯೋದಯ ಅನ್ನ ಯೋಜನೆಯ 10.90 ಲಕ್ಷ ಫಲಾನುಭವಿಗಳು ಮತ್ತು 1.16 ಕೋಟಿ ಬಿಪಿಎಲ್ ಕುಟುಂಬಗಳಿಗೆ ರಾಜ್ಯ ಸರ್ಕಾರವು ಕೇಂದ್ರದ ನೆರವಿನಲ್ಲಿ ಉಚಿತವಾಗಿ ಆಹಾರ ಧಾನ್ಯಗಳನ್ನು ವಿತರಿಸುತ್ತಿದೆ. ಉಚಿತ ಪಡಿತರ ವಿತರಣೆಗಾಗಿ ವರ್ಷಕ್ಕೆ ಸಾವಿರಾರು ಕೋಟಿ ರೂಪಾಯಿಗಳನ್ನು ಸರ್ಕಾರ ವೆಚ್ಚ ಮಾಡುತ್ತಿದೆ. ಆದರೆ, ಬಡ ಕುಟುಂಬಗಳ ಹಸಿವು ನೀಗಿಸುವುದಕ್ಕಾಗಿ ಸರ್ಕಾರ ಪೂರೈಸುತ್ತಿರುವ ಆಹಾರ ಧಾನ್ಯವನ್ನು ಅಕ್ರಮವಾಗಿ ಕಾಳಸಂತೆಗೆ ಸಾಗಿಸಿ, ಮಾರಾಟ ಮಾಡುವ ಜಾಲಗಳು ರಾಜ್ಯದ ಎಲ್ಲೆಡೆ ಸಕ್ರಿಯವಾಗಿವೆ ಎಂಬ ಆರೋಪ ಹಿಂದಿನಿಂದಲೂ ಇದೆ. ಮಾರ್ಚ್ 16ರಂದು ಬೆಂಗಳೂರಿನ ಕರ್ನಾಟಕ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮದಿಂದಲೇ ಕೋಲಾರ ಜಿಲ್ಲೆಯ ಬಂಗಾರಪೇಟೆಯ ಅಕ್ಕಿ ಗಿರಣಿಯೊಂದಕ್ಕೆ ಪಡಿತರ ಅಕ್ಕಿಯ ಚೀಲಗಳನ್ನು ಹೊತ್ತೊಯ್ಯುತ್ತಿದ್ದ ಲಾರಿಯೊಂದನ್ನು ಅಧಿಕಾರಿಗಳು ವಶಕ್ಕೆ ಪಡೆದು, ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಈ ಪ್ರಕರಣವು ಉಚಿತ ಪಡಿತರ ವಿತರಣಾ ಯೋಜನೆಯ ಅತ್ಯಧಿಕ ಸಂಖ್ಯೆಯ ಫಲಾನುಭವಿಗಳನ್ನು ಹೊಂದಿರುವ ಬೆಂಗಳೂರು ನಗರದಿಂದ ಭಾರಿ ಪ್ರಮಾಣದಲ್ಲಿ ಪಡಿತರ ಧಾನ್ಯಗಳನ್ನು ಕಳ್ಳಸಾಗಣೆ ಮಾಡಲಾಗುತ್ತಿದೆ ಎಂಬ ಆರೋಪಕ್ಕೆ ಪುರಾವೆ ಒದಗಿಸಿದೆ. ಪ್ರಕರಣ ದಾಖಲಿಸುವ ಹಂತದಲ್ಲಿ ನಡೆದಿರುವ ಬೆಳವಣಿಗೆಗಳು, ವಿಳಂಬ ಗತಿಯ ತನಿಖೆ ಎಲ್ಲವೂ ಪಡಿತರ ಧಾನ್ಯದ ಕಳ್ಳಸಾಗಣೆ ಜಾಲದ ಜತೆಗೆ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು ಸಕ್ರಿಯವಾದ ನಂಟು ಹೊಂದಿದ್ದಾರೆ ಎಂಬ ಆರೋಪಕ್ಕೆ ಪುಷ್ಟಿ ನೀಡುವಂತಿವೆ.



ಕಳ್ಳಸಾಗಣೆದಾರರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಕಣ್ಗಾವಲು ವ್ಯವಸ್ಥೆಯನ್ನು ಮತ್ತಷ್ಟು ಬಿಗಿಗೊಳಿಸಬೇಕು

ನಿಯಮಗಳ ಪ್ರಕಾರ, ಕರ್ನಾಟಕ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮ ಅಥವಾ ಭಾರತೀಯ ಆಹಾರ ನಿಗಮದ ಉಗ್ರಾಣಗಳಿಂದ ಜಿಪಿಎಸ್ ಸಾಧನ ಅಳವಡಿಸಿದ ಲಾರಿಯಲ್ಲಿ ನಿಗದಿತ ದಾಖಲೆಗಳೊಂದಿಗೆ ತಾಲ್ಲೂಕು ಮಟ್ಟದ ವಿತರಣಾ ಕೇಂದ್ರಗಳಿಗೆ ಪಡಿತರ ಧಾನ್ಯವನ್ನು ಸಾಗಿಸಬೇಕು. ಅಲ್ಲಿಂದ ಜಿಪಿಎಸ್ ಅಳವಡಿಸಿದ ವಾಹನದಲ್ಲೇ ನ್ಯಾಯಬೆಲೆ ಅಂಗಡಿಗಳಿಗೆ ಪಡಿತರ ವಿತರಣೆ ಮಾಡಬೇಕು. ಉಗ್ರಾಣಗಳು, ತಾಲ್ಲೂಕು ಮಟ್ಟದ ಸಗಟು ವಿತರಣಾ ಕೇಂದ್ರಗಳಲ್ಲಿ ಸಿ.ಸಿ. ಟಿ.ವಿ. ಕ್ಯಾಮೆರಾ ಕಣ್ಗಾವಲಿನಲ್ಲೇ ಆಹಾರ ಧಾನ್ಯಗಳ ವಿತರಣೆ ಮತ್ತು ಸಾಗಣೆ ಪ್ರಕ್ರಿಯೆ ನಡೆಯಬೇಕು. ಆದರೆ, ಬಹುತೇಕ ಉಗ್ರಾಣಗಳು, ವಿತರಣಾ ಕೇಂದ್ರಗಳಲ್ಲಿ ನಿಯಮಗಳ ಪಾಲನೆ ಆಗುತ್ತಿಲ್ಲ ಎಂಬ ಆರೋಪವಿದೆ. ಆಹಾರ ಧಾನ್ಯಗಳ ಸಗಟು ಸಾಗಣೆಗೆ ಗುತ್ತಿಗೆ ಪಡೆದಿರುವವರೇ ಕಾಳಸಂತೆಗೆ ಮಾರಾಟ ಮಾಡುತ್ತಿರುವ ಪ್ರಕರಣಗಳೂ ಆಗಾಗ ಬಯಲಿಗೆ ಬರುತ್ತಿವೆ. ಆಹಾರ ಇಲಾಖೆ, ರಾಜ್ಯ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮ, ಭಾರತೀಯ ಆಹಾರ ನಿಗಮದ ಅಧಿಕಾರಿಗಳು ಹಾಗೂ ಪೊಲೀಸರ ಸಹಕಾರದಲ್ಲೇ ಈ ಜಾಲ ಸಲೀಸಾಗಿ ಪಡಿತರ ಧಾನ್ಯವನ್ನು ಕಳ್ಳಸಾಗಣೆ ಮಾಡುತ್ತಿದೆ ಎಂಬ ಆರೋಪವನ್ನು ಅಲ್ಲಗಳೆಯಲಾಗದು. ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಹಂಚಿಕೆ ಮಾಡಲು ಒದಗಿಸಿದ ಅಕ್ಕಿಯನ್ನು ಮಧ್ಯಾಹ್ನದ ಬಿಸಿಯೂಟ ಯೋಜನೆಗೆ ಸಂಬಂಧಿಸಿದ ದಾಖಲೆಗಳನ್ನು ಬಳಸಿ ಕಳ್ಳಸಾಗಣೆ ಮಾಡುತ್ತಿರುವ ಆರೋಪವೂ ಇದೆ. ಪಡಿತರ ಧಾನ್ಯಗಳನ್ನು ಕಾಳಸಂತೆಗೆ ಕಳ್ಳಸಾಗಣೆ ಮಾಡುವವರ ವಿರುದ್ಧದ ಕ್ರಮ ಅಗತ್ಯ ವಸ್ತುಗಳ ಕಾಯ್ದೆಯಡಿ ಪ್ರಕರಣ ದಾಖಲಿಸುವುದಕ್ಕೆ ಸೀಮಿತವಾಗಬಾರದು. ಕಳ್ಳಸಾಗಣೆದಾರರ ವಿರುದ್ಧ ಕಠಿಣ ಕ್ರಮ ಜರುಗಿಸುವುದರ ಜತೆಗೆ ಉಗ್ರಾಣಗಳ ನಿರ್ವಹಣೆ, ಪಡಿತರ ವಿತರಣೆ, ಮೇಲುಸ್ತುವಾರಿಯ ಜವಾಬ್ದಾರಿ ಹೊಂದಿರುವ ಎಲ್ಲ ಹಂತದ ಅಧಿಕಾರಿಗಳನ್ನೂ ಇಂತಹ ಪ್ರಕರಣಗಳಲ್ಲಿ ಹೊಣೆಗಾರರನ್ನಾಗಿ ಮಾಡಿದರೆ ಅಕ್ರಮಗಳನ್ನು ತಪ್ಪಿಸಲು ಸಾಧ್ಯ. ಜಿಪಿಎಸ್, ಸಿ.ಸಿ. ಟಿ.ವಿ. ಕ್ಯಾಮೆರಾ ಕಣ್ಗಾವಲು ಸೇರಿದಂತೆ ತಂತ್ರಾಂಶಗಳ ಬಳಕೆ ಹಾಗೂ ಕಣ್ಗಾವಲು ವ್ಯವಸ್ಥೆಯನ್ನು ಬಿಗಿಗೊಳಿಸುವತ್ತ ಸರ್ಕಾರ ಗಮನಹರಿಸಬೇಕಿದೆ.

ದಿನದ ಟ್ವೀಟ್

ಹೊಸ ಚಿಂತನೆ ಬರಲಿ



ಸೇವೆಯಲ್ಲಿ ಹೆಸರು ಗಳಿಸಿರುವ ಐಎಎಸ್, ಐಪಿಎಸ್ ಅಧಿಕಾರಿಗಳು ಕೆಲಸ ಬಿಟ್ಟು ರಾಜಕೀಯಕ್ಕೆ ಬರುತ್ತಿರುವುದು ಉತ್ತಮ ಬೆಳವಣಿಗೆ. ಹೊಸ ಪಕ್ಷ ಕಟ್ಟಿ ಅವರೆಲ್ಲ ಫ್ರೆಶ್ ಚಿಂತನೆಯೊಂದಿಗೆ ಜನರ ಮುಂದೆ ಬರಬೇಕು. ಹೊಸ ಚಿಂತನೆಯಿಂದ ಅವರಿಗೆ ಯಾವುದೇ ಹಳೇ ಪಕ್ಷಗಳ ಐತಿಹಾಸಿಕ ತಪ್ಪು ಒಪ್ಪುಗಳ ಹೊರೆ ನಿಭಾಯಿಸುವ ಅವಶ್ಯಕತೆ ಇರುವುದಿಲ್ಲ.

ರವಿಕುಮಾರ್, ನಾಗರಿಕ

---

25 ವರ್ಷಗಳ ಹಿಂದೆ

ಬುಧವಾರ, 27-3-1996

● **ಎಂಸಿಎಫ್ ಬಿಕ್ಕಟ್ಟು ಅಂತ್ಯ 29ರಿಂದ ಉತ್ಪಾದನೆ**

ಮಂಗಳೂರು, ಮಾರ್ಚ್ 26– ಮುಖ್ಯಮಂತ್ರಿ ಎಚ್.ಡಿ.ದೇವೇಗೌಡ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಇಂದು ನಡೆದ ಸಭೆಯಲ್ಲಿ, ಇಲ್ಲಿಯ ಮಂಗಳೂರು ರಸಗೊಬ್ಬರ ಕಾರ್ಖಾನೆಯ ಮುಷ್ಕರನಿರತ ಕಾರ್ಮಿಕರು ಕೆಲಸಕ್ಕೆ ಹಾಜರಾಗಲು ಒಪ್ಪಿಕೊಂಡಿದ್ದು, ಆಡಳಿತ ಮಂಡಳಿಯು ಈ ಹಿಂದೆ ವಜಾ ಮಾಡಿದ್ದ ಆರು ಮಂದಿ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಲು ಒಪ್ಪಿಗೆ ನೀಡಿದೆ.

ಕಳೆದ ಮೂರು ತಿಂಗಳಿನಿಂದ ಹಲವು ಸಮಸ್ಯೆಗಳನ್ನು ಎದುರಿಸಿ ರಸಗೊಬ್ಬರ ಉತ್ಪಾದನೆಯನ್ನು ಅನಿವಾರ್ಯವಾಗಿ ನಿಲ್ಲಿಸಿದ್ದ ಕಾರ್ಖಾನೆಯು ಈ ತಿಂಗಳ 29ರಿಂದ ಮತ್ತೆ ಆರಂಭವಾಗಲಿದೆ ಎಂದು ಆಡಳಿತ ಮಂಡಳಿಯ ಮೂಲಗಳು ತಿಳಿಸಿವೆ.

● **ರಾಜ್ಯ ರೈತ ಸಂಘ ಇಬ್ಭಾಗ ಸಂಭವ**

ಬೆಂಗಳೂರು, ಮಾರ್ಚ್ 26– ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯೊಂದಿಗೆ ಹೊಂದಾಣಿಕೆಗೆ ರಾಜ್ಯ ರೈತ ಸಂಘದ ಕೆಲ ಪ್ರಮುಖರು ಮುಂದಾಗಿದ್ದು, ಇದರಿಂದ ರೈತ ಸಂಘ ಹೋಳಾಗುವ ಸಾಧ್ಯತೆಗಳು ದಟ್ಟವಾಗಿವೆ.

● **ರೇಖೆಗಳಲ್ಲಿ ಜಗತ್ತು ಕಂಡ ಹೆಬ್ಬಾರ ಇನ್ನಿಲ್ಲ**

ಬೆಂಗಳೂರು, ಮಾರ್ಚ್ 26– ಸರಳ ರೇಖಾ ಚಿತ್ರಗಳಲ್ಲಿ ಬದುಕಿನ ದಟ್ಟ ಚಿತ್ರಣ ನೀಡಿದ, ನಾಡಿನ ಸಮಕಾಲೀನ ಕಲೆಗೆ ರಾಷ್ಟ್ರೀಯ ಮನ್ನಣೆ ದೊರಕಿಸಿಕೊಟ್ಟ ಅನುಭಾವಿ ಕಲಾಕಾರ ಕಟ್ಟಂಗೇರಿ ಕೃಷ್ಣ ಹೆಬ್ಬಾರರು (85) ಇಂದು ಸಂಜೆ ಮುಂಬೈನ ಅವರ ಮಗಳ ನಿವಾಸದಲ್ಲಿ ಕೊನೆ ಉಸಿರೆಳೆದರು.

50 ವರ್ಷಗಳ ಹಿಂದೆ

ಶನಿವಾರ, 27-3-1971

● **ದಂಡಿನ ದಮನದ ದವಡೆಯಲ್ಲಿ 'ಸ್ವತಂತ್ರ ಬಾಂಗ್ಲಾದೇಶ'ದ ಉದಯ**

ನವದೆಹಲಿ, ಮಾರ್ಚ್ 26– ಪೂರ್ವ ಪಾಕಿಸ್ತಾನದಲ್ಲಿ ಅಂತರ್ಯುದ್ಧ ಪ್ರಾರಂಭವಾಗಿದ್ದು, ಢಾಕಾ ಮತ್ತು ಪ್ರಾಂತ್ಯದ ಇತರ ಕಡೆಗಳಲ್ಲಿ ಪಾಕಿಸ್ತಾನದ ಸೈನ್ಯ ಹಾಗೂ ಪೂರ್ವ ಪಾಕಿಸ್ತಾನ್ ರೈಫಲ್ ಪಡೆ ಮತ್ತು ಪೊಲೀಸರ ನಡುವೆ ನಡೆಯುತ್ತಿರುವ ಭೀಕರ ಹೋರಾಟದಲ್ಲಿ ಭಾರಿ ಸಾವು–ನೋವು ಉಂಟಾಗಿದೆಯೆಂದು ಇತ್ತೀಚೆಗೆ ಬಂದ ಸುದ್ದಿ ತಿಳಿಸಿದೆ.

'ಬಂಗಾಳ ದೇಶ ಉದಯವಾಯಿತು' ಎಂದು ಅವಾಮಿ ಲೀಗ್ ನಾಯಕ ಷೇಖ್ ಮುಜೀಬುರ್ ರೆಹಮಾನ್ ಅವರು 'ಸ್ವಾಧಿನ್ ಬಾಂಗ್ಲಾ' (ಸ್ವತಂತ್ರ ಬಂಗಾಳ) ಬೇತರ್ ಕೇಂದ್ರದಿಂದ ಮಾತನಾಡುತ್ತಾ ಘೋಷಿಸಿದರು.

● **ರಾಜ್ಯಕ್ಕೆ ಸ್ವಲ್ಪ ಸಮಯ ರಾಷ್ಟ್ರಪತಿ ಆಡಳಿತ**

ಬೆಂಗಳೂರು, ಮಾರ್ಚ್ 26– ಮೈಸೂರು ರಾಜ್ಯ ತನ್ನ ಇತಿಹಾಸದಲ್ಲೇ ಪ್ರಥಮವಾಗಿ ಕೆಲ ಕಾಲದವರೆಗೆ ರಾಷ್ಟ್ರಪತಿ ಆಡಳಿತಕ್ಕೆ ಒಳಪಡಲಿದೆ.

ರಾಜ್ಯದ ವಿಧಾನಸಭೆಯನ್ನು ಕೆಲಕಾಲ ಸ್ಥಗಿತಗೊಳಿಸಿ (ಸಸ್ಪೆಂಡ್) ರಾಷ್ಟ್ರಪತಿ ಆಡಳಿತವನ್ನು ಜಾರಿಗೆ ತರಬೇಕೆಂದು ರಾಜ್ಯಪಾಲ ಶ್ರೀ ಧರ್ಮವೀರ ಅವರು ಇಂದು ಮಧ್ಯಾಹ್ನ ರಾಷ್ಟ್ರಪತಿಗೆ ತಮ್ಮ ಶಿಫಾರಸನ್ನು ಕಳುಹಿಸಿಕೊಟ್ಟರು.

ಶ್ರೀ ವೀರೇಂದ್ರ ಪಾಟೀಲ್ ಅವರ ಮಂತ್ರಿಮಂಡಲ ರಾಜೀನಾಮೆ ನೀಡಿದ ನಂತರ ಇಂದಿನವರೆಗೆ ಆಡಳಿತ ಕಾಂಗ್ರೆಸ್ಸಿಗಾಗಲಿ ಮತ್ತಿತರ ಯಾವ ಪಕ್ಷಕ್ಕೇ ಆಗಲಿ ಹೊಸ ಸರ್ಕಾರ ರಚಿಸಲು ಸಾಧ್ಯವಾಗಲಿಲ್ಲ.

ಸಾಂವಿಧಾನಿಕ ಮೌಲ್ಯಗಳ ಪ್ರತಿಪಾದನೆಯಲ್ಲೇ ಅಪಾಯ ಕಂಡ ಆಧುನಿಕ ವಿ.ವಿಯೊಂದರ ಕತೆ

ನಿಜ ಪ್ರಾಧ್ಯಾಪಕರೊಬ್ಬರ ರಾಜೀನಾಮೆ ಪ್ರಸಂಗ



ಅನುರಣನ

ನಾರಾಯಣ ಎ.

ದೆಹಲಿಯ ಅಶೋಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರತಾಪ್ ಭಾನು ಮೆಹ್ತಾ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ರಾಜೀನಾಮೆ ಕೊಡುವುದು, ರಾಜೀನಾಮೆ ಪಡೆಯುವುದೆಲ್ಲಾ ಮಾಮೂಲಿಯಾಗಿರುವ ಈ ಕಾಲದಲ್ಲಿ, ಒಂದು ಖಾಸಗಿ ವಿಶ್ವವಿದ್ಯಾಲಯದ ಒಬ್ಬ ಪ್ರಾಧ್ಯಾಪಕರ ಪ್ರಕರಣವೊಂದು ಏನು ಮಹಾ? ವಿಶ್ವ-ವಿದ್ಯಾಲಯಗಳು ಬೊಕ್ಕಸಕ್ಕೆ ಭಾರ, ಅಲ್ಲಿ ಕಲಿಸುವವರು ಭೂಮಿಗೆ ಭಾರ ಎಂಬ ಒಂದು ಮನಃಸ್ಥಿತಿ ಸ್ಥೂಲವಾಗಿ ವ್ಯಾಪಿಸಿರುವ ಸಮಾಜ ಇದು.

ಈ ಮನಃಸ್ಥಿತಿಯನ್ನು ಸಮರ್ಥಿಸುವ ರೀತಿಯಲ್ಲಿ ಹಲವಾರು ವಿಶ್ವವಿದ್ಯಾಲಯಗಳು ಮತ್ತು ಅಲ್ಲಿರುವವರು ನಡೆದುಕೊಳ್ಳುತ್ತಿರುವ ಪರಿಸ್ಥಿತಿಯೂ ಈ ದೇಶದಲ್ಲಿದೆ. ಇವೆಲ್ಲವನ್ನೂ ಒಪ್ಪಿಕೊಂಡ ನಂತರವೂ ಮೆಹ್ತಾ ಅವರ ರಾಜೀನಾಮೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಯಾಕೆಂದರೆ, ಇಲ್ಲಿ ವರ್ತಮಾನದ ಪ್ರಮುಖ ಆಗುಹೋಗುಗಳ ಸುಳಿಗಳೊಳಗಿನ ಸುಳಿಗಳಲ್ಲಿ ಸಿಕ್ಕಿ ಹಾಕಿಕೊಂಡಿರುವ ಹಲವಾರು ಪ್ರಶ್ನೆಗಳಿವೆ. ಆ ಒಳಸುಳಿಗಳನ್ನು ಅರ್ಥೈಸುವ ಮೊದಲು ಎರಡು ವಿಷಯಗಳನ್ನು ಸ್ಪಷ್ಟಪಡಿಸಬೇಕಿದೆ.

ಅಶೋಕ ವಿಶ್ವವಿದ್ಯಾಲಯವು ದೇಶದ 'ಯಾವುದೋ ಇನ್ನೊಂದು' ಖಾಸಗಿ ವಿಶ್ವವಿದ್ಯಾಲಯ ಅಲ್ಲ. ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವ ಸಾವಿರಾರು ಖಾಸಗಿ- ಸರ್ಕಾರಿ ವಿಶ್ವವಿದ್ಯಾಲಯಗಳು ನಾಯಿಕೊಡೆಗಳಂತೆ ಎದ್ದು ನಿಲ್ಲುತ್ತಿರುವ ಈ ಕಾಲಘಟ್ಟದಲ್ಲಿ, ಅಶೋಕ ವಿಶ್ವವಿದ್ಯಾಲಯ ನಿಜ ಅರ್ಥದ ವಿಶ್ವವಿದ್ಯಾಲಯವಾಗಿ ಎದ್ದು ನಿಂತ ಒಂದು ಸಂಸ್ಥೆ. ಜಾಗತಿಕ ಮಟ್ಟದ ವಿಶ್ವವಿದ್ಯಾಲಯ ಎನ್ನುವಷ್ಟರ ಮಟ್ಟಿಗೆ ಅದರ ಹೆಸರು ಪಸರಿಸಿದೆ. ಹಾಗೆಯೇ, ಮೆಹ್ತಾ ಕೂಡಾ. ಅವರನ್ನು ಈ ದೊಡ್ಡ ದೇಶದ ಪ್ರಾಧ್ಯಾಪಕರುಗಳ ಪೈಕಿ 'ಇನ್ನೊಬ್ಬರು' ಅಂತ ಪರಿಗಣಿಸಲಾಗದು. ಅವರು ಸಮಕಾಲೀನ ಭಾರತದ ಅತ್ಯಂತ ಮೇಧಾವಿ ಮತ್ತು ಸಮಚಿತ್ತದ ವಿಶ್ಲೇಷಕರಲ್ಲಿ ಒಬ್ಬರು. ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿರುವ ಸಮಾಜ ವಿಜ್ಞಾನಿ.

ಮೆಹ್ತಾ ಅವರ ರಾಜೀನಾಮೆ ಪತ್ರದ ಎರಡು ವಾಕ್ಯಗಳು ಗಮನ ಸೆಳೆಯುತ್ತವೆ: 'ನಾನು ಈ ಹುದ್ದೆಯಲ್ಲಿ ಮುಂದುವರಿಯುವುದು ವಿಶ್ವವಿದ್ಯಾಲಯಕ್ಕೆ ರಾಜಕೀಯ ಹೊರೆ (political liability) ಎಂದು ಆಡಳಿತ ಮಂಡಳಿ ಭಾವಿಸಿದೆ!' ಮುಂದಿನ ವಾಕ್ಯ: 'ಸಾಂವಿಧಾನಿಕ ಮೌಲ್ಯಗಳಾದ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಬೆಂಬಲಿಸುವ ನನ್ನ ಬರವಣಿಗೆಯು ವಿಶ್ವವಿದ್ಯಾಲಯದ ಹಿತಾಸಕ್ತಿಗೆ ಧಕ್ಕೆ ತರುತ್ತಿದೆ ಎನ್ನುವ ಗ್ರಹಿಕೆಯನ್ನು ಮನಗಂಡು ನಾನು ರಾಜೀನಾಮೆ ನೀಡುತ್ತಿದ್ದೇನೆ'.

ಒಬ್ಬ ಪ್ರಾಧ್ಯಾಪಕ ಒಂದು ವಿಶ್ವವಿದ್ಯಾಲಯಕ್ಕೆ ರಾಜಕೀಯವಾಗಿ ಹೊರೆಯಾಗುವುದು ಎಂದರೆ ಏನು? ಇದು ಇಲ್ಲಿರುವ ಪ್ರಶ್ನೆ. ಮೆಹ್ತಾ ಅವರು ಇಂದಿನ ರಾಜಕೀಯದ ಅರ್ಥಹೀನ ಎಡ-ಬಲ ಗುಂಪುಗಳಲ್ಲಿ ಗುರುತಿಸಿಕೊಂಡವರಲ್ಲ. ಅವರು ಈಗಿನ ಸರ್ಕಾರವನ್ನು ಟೀಕಿಸಿ ಬರೆಯುವುದು, ಮಾತನಾಡುತ್ತಿರುವುದು ನಿಜ. ಅವರು ಈ ಹಿಂದಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವನ್ನೂ ಟೀಕಿಸುತ್ತಿದ್ದರು. ಆ ಕಾಲಕ್ಕೆ 'ಹೊಸ ನಾಯಕತ್ವ' ದೇಶಕ್ಕೆ ಬೇಕು ಎಂದು ಬಯಸಿದವರಲ್ಲಿ ಅವರೂ ಒಬ್ಬರು. ಹಾಗಾಗಿ ಇವತ್ತಿಗೂ 'ಶುದ್ಧ' ಉದಾರಿಗಳು ಅವರ ಮೇಲೆ ಕತ್ತಿ ಮಸೆಯುತ್ತಿದ್ದಾರೆ. ಮೆಹ್ತಾ ಆಳುವ ಪಕ್ಷವನ್ನೂ ಅದರ ನಾಯಕನನ್ನೂ ಟೀಕಿಸುವುದನ್ನೇ ಹವ್ಯಾಸವನ್ನಾಗಿಸಿಕೊಂಡ ಚಿಂತಕರಲ್ಲ. ಅಳೆದು-ತೂಗದೆ ಯಾವುದೇ ತೀರ್ಮಾನಕ್ಕೆ ಬರುವವರಲ್ಲ. ಸುತ್ತಿ ಬಳಸಿ ಆಡುವವರೂ ಅಲ್ಲ- ಎಂದೂ ಧ್ವನಿ ಏರಿಸಿ ಮಾತನಾಡದೆ ಹೋದರೂ ಒಮ್ಮೆ ಮನವರಿಕೆಯಾದ ವಾದವನ್ನು ಮಂಡಿಸುವಲ್ಲಿ ಪೆಟ್ಟೊಂದು -ತುಂಡೆರಡು ಎಂಬ ನೀತಿಯನ್ನು ಪಾಲಿಸುತ್ತಾ ಬಂದವರು. ಒಬ್ಬ ಚಿಂತಕನಾಗಿ, ಸಂಶೋಧಕನಾಗಿ, ವಿಶ್ಲೇಷಕನಾಗಿ ತಾನು ಕಂಡ ಸತ್ಯಗಳನ್ನು ಸಾರ್ವಜನಿಕ-ವಾಗಿ ಪ್ರತಿಪಾದಿಸುವ ಕೆಲಸವನ್ನು ಅವರು ಮಾಡಿದ್ದು ವಿಶ್ವವಿದ್ಯಾಲಯಕ್ಕೆ 'ರಾಜಕೀಯ ಹೊರೆ' ಆಗುತ್ತದೆ!

ಯಾವುದೋ ರಾಜಕೀಯ ವ್ಯಕ್ತಿ ಹುಟ್ಟುಹಾಕಿದ ಅಥವಾ ಹಣ ಮಾಡುವ ದಂಧೆಯ ಭಾಗವಾಗಿ ಕಟ್ಟಿದ್ದ ಒಂದು ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಈ ಅಭಿಪ್ರಾಯಕ್ಕೆ ಬಂದಿದ್ದರೆ ಅದರಲ್ಲಿ ಅಸಹಜ ಏನೂ ಇರುತ್ತಿರಲಿಲ್ಲ. ಅಶೋಕ ವಿಶ್ವವಿದ್ಯಾಲಯ ಹಾಗಲ್ಲ. ಅದು ಖಾಸಗಿ ವಿಶ್ವವಿದ್ಯಾಲಯವಾಗಿದ್ದರೂ ಅದನ್ನು ಕಟ್ಟಿದವರು ಉದ್ಯಮ ಕ್ಷೇತ್ರದ ದಿಗ್ಗಜರಾಗಿದ್ದರೂ ಅವರ ಉದ್ದೇಶ ಇದ್ದದ್ದೇ ಈ ದೇಶದಲ್ಲೊಂದು ನಿಜ ಅರ್ಥದ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕು, ಅಲ್ಲಿ ಮುಕ್ತ ಚಿಂತನೆ ಇರಬೇಕು, ಅಲ್ಲಿ ನಿತ್ಯ ಕುತೂಹಲಿ ವಿದ್ಯಾರ್ಥಿ ಸಮೂಹ ಇರಬೇಕು, ಅಲ್ಲಿ ನಿರಂತರ ಅಧ್ಯಯನಶೀಲ ಪ್ರಾಧ್ಯಾಪಕರ ಸಮೂಹ ಇರಬೇಕು, ಅಲ್ಲಿ ಸ್ವಂತಿಕೆಯಿಂದ ಯೋಚಿಸಲು ಪ್ರೇರೇಪಿಸುವ ಶೈಕ್ಷಣಿಕ ವಾತಾವರಣ ಇರಬೇಕು ಎಂಬಂತಹ ಕಾರಣಗಳಿಗಾಗಿ.

ಇಂತಹ ಒಂದಷ್ಟು ವಿಶ್ವವಿದ್ಯಾಲಯಗಳು ಈ ದೇಶದಲ್ಲಿ ತಲೆಯೆತ್ತದ ಹೊರತು ದೇಶಕ್ಕೆ ಭವಿಷ್ಯ ಇಲ್ಲ ಎನ್ನುವುದನ್ನು ಮನಗಂಡು, ಅವರು ತಮ್ಮ ಸ್ವಂತ ಸಂಪತ್ತನ್ನು ಧಾರೆ ಎರೆದು ಕಟ್ಟಿದ ಸಂಸ್ಥೆ ಅದು. ಸ್ವತಂತ್ರವಾಗಿ ಯೋಚಿಸುವ ಮನಸ್ಸುಗಳನ್ನು ಸೃಷ್ಟಿಸದೇ ಹೋದರೆ ಆಗುವ ನಷ್ಟಗಳೇನು ಎನ್ನುವುದನ್ನು ಅವರು ತಮ್ಮ ಸ್ವಂತ ಉದ್ಯಮಗಳಲ್ಲೇ ಕಂಡುಕೊಂಡು ಇಂತಹದ್ದೊಂದು ಸಾಹಸಕ್ಕೆ ಇಳಿದಿದ್ದಿರಬೇಕು. ಸರ್ಕಾರಿ ಧನಸಹಾಯದ ಮೇಲೆ ಎಳ್ಳಷ್ಟೂ ಅವಲಂಬಿಸಿಲ್ಲದ ಈ ವಿಶ್ವವಿದ್ಯಾಲಯದಲ್ಲೇ ಪ್ರಾಧ್ಯಾಪಕನ ಹಾಗಿರುವ ಪ್ರಾಧ್ಯಾಪಕರೊಬ್ಬರು 'ರಾಜಕೀಯ ಹೊರೆ'ಯಾಗುತ್ತಾರೆ ಎಂದರೆ ಆ ರಾಜಕೀಯ ಯಾವುದು? 'ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ' ಬರವಣಿಗೆಗಳು ಇಂತಹದ್ದೊಂದು ವಿಶ್ವವಿದ್ಯಾಲಯವೊಂದರ ಹಿತಾಸಕ್ತಿಗೆ ಮಾರಕವಾಗುವುದು ಎಂದರೆ ಏನು? ಯಾರ ಹಿತಾಸಕ್ತಿ? ಈ ಎಲ್ಲ ಪ್ರಶ್ನೆಗಳಿಗೂ ಉತ್ತರ ಎಲ್ಲರಿಗೂ ಗೊತ್ತಿದೆ.



ಅಭದ್ರತೆ ಎನ್ನುವುದು ಅಧಿಕಾರಸ್ಥರನ್ನು ಸದಾ ಕಾಡುವ ಮನೋರೋಗ. ಈ ರೋಗಕ್ಕೆ ಹೊರಗಣ ಔಷಧಿ ಫಲಿಸುವುದಿಲ್ಲ. ಪ್ರಬುದ್ಧತೆ ಇದ್ದ ಅಧಿಕಾರಸ್ಥ ನಾಯಕರಿಗೆ ಮಾತ್ರ ಅಭದ್ರತೆಯನ್ನು ಮೀರಿ ಅಧಿಕಾರ ಚಲಾಯಿಸಲು ಸಾಧ್ಯ ಆಗುವುದು. ಈ ರೋಗದ ವಿಶೇಷತೆ ಅಂದರೆ, ಅದರ ದುಷ್ಪರಿಣಾಮ ಆಗುವುದು ಅದು ಯಾರನ್ನು ಕಾಡುತ್ತದೋ ಅವರ ಮೇಲಲ್ಲ. ಅಧಿಕಾರಸ್ಥರ ಈ ರೋಗಕ್ಕೆ ಬೆಲೆ ತೆರಬೇಕಾಗಿ ಬರುವುದು ಅವರು ಯಾರನ್ನು ತಮ್ಮ ಅಭದ್ರತೆಗೆ ಕಾರಣ ಅಂತ ಊಹಿಸುತ್ತಾರೋ ಅವರು.

ಒಂದು ವಿರೋಧಾಭಾಸ ಗಮನಿಸಿ. ಅಹಮದಾಬಾದಿನ ಸರ್ಕಾರಿ ಸ್ವಾಮ್ಯದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಇತ್ತೀಚೆಗೆ ಸಲ್ಲಿಕೆಯಾದ ಒಂದು ಪಿಎಚ್.ಡಿ ಪ್ರಬಂಧದಲ್ಲಿ, ಕೇಂದ್ರದಲ್ಲಿ ಆಳುವ ಪಕ್ಷದ ಚರ್ಯೆಯನ್ನು ವಿವರಿಸಿದ ರೀತಿ ಸರಿ ಇಲ್ಲ ಅಂತ ರಾಜಕಾರಣಿಯೊಬ್ಬರು ಆಕ್ಷೇಪ ಎತ್ತಿದರು. ಕೇಂದ್ರ ಸರ್ಕಾರದ ಶಿಕ್ಷಣ ಇಲಾಖೆಯ ಅಧಿಕಾರಿಗಳು ಸದರಿ ಪ್ರಬಂಧವನ್ನು ಪರಿಶೀಲನೆಗೆ ಒಪ್ಪಿಸಬೇಕು ಎಂದು ಸಂಸ್ಥೆಗೆ ಹೇಳಿದರು. ಅದಕ್ಕೆ ಪ್ರತಿಕ್ರಿಯಿಸಿದ ಸಂಸ್ಥೆಯ ನಿರ್ದೇಶಕರು 'ಪಿಎಚ್.ಡಿ ಪ್ರಬಂಧ ಪರಿಶೀಲಿಸುವುದು ನಿಮ್ಮ ಕೆಲಸವಲ್ಲ. ಅದನ್ನು ವಿಧಿವತ್ತಾಗಿ ಪರಿಶೀಲಿಸಲಾಗಿದೆ, ಪದವಿ ನೀಡಲಾಗಿದೆ ಮತ್ತು ಸಂಸ್ಥೆಯ ನಿರ್ಧಾರ ಅಂತಿಮ' ಅಂತ ಕಡ್ಡಿ ಮುರಿದ ಹಾಗೆ ಹೇಳಿದರು.

ಅವರು ರಾಜೀನಾಮೆ ನೀಡಿಲ್ಲ. ಸರ್ಕಾರಿ ಸ್ವಾಮ್ಯದ ಜೆಎನ್‌ಯುನಲ್ಲಿ ಸರ್ಕಾರದ ಕಡು ಟೀಕಾಕಾರರು ಇದ್ದಾರೆ. ಅವರ್‍ಯಾರೂ ರಾಜೀನಾಮೆ ನೀಡಿಲ್ಲ. ಸರ್ಕಾರಿ ಸ್ವಾಮ್ಯದ ವಿಶ್ವವಿದ್ಯಾಲಯಗಳಿಗೆ ಇದ್ದ ಸ್ವಾತಂತ್ರ್ಯ- ಸ್ವಾಯತ್ತತೆ ಸಾಲದು ಎಂದು ಸ್ಥಾಪನೆಯಾದ ಖಾಸಗಿ ವಿಶ್ವವಿದ್ಯಾಲಯದಲ್ಲಿ ಸಾಂವಿಧಾನಿಕ ಮೌಲ್ಯವನ್ನು ಪ್ರತಿಪಾದಿಸಿದರೂ ಅಪಾಯ. ಇದರ ಅರ್ಥ ಇಷ್ಟೇ. ಒಂದು ಒಳ್ಳೆಯ ಸರ್ಕಾರಿ ವಿಶ್ವವಿದ್ಯಾಲಯಕ್ಕೆ ಯಾವುದೇ ಖಾಸಗಿ ವಿಶ್ವವಿದ್ಯಾಲಯ ಸಾಟಿಯಾಗಲಾರದು.

ಖಾಸಗಿ ವಿಶ್ವವಿದ್ಯಾಲಯಗಳು ಕಲಿಸುವ-ಕಲಿಯುವ ಉತ್ಕೃಷ್ಟ ಕೇಂದ್ರಗಳಾದಾವೋ ಏನೋ. ಆದರೆ ಅಧಿಕಾರಸ್ಥರನ್ನು ಎದುರು ಹಾಕಿಕೊಂಡು ಮುಕ್ತ ಅಭಿಪ್ರಾಯಗಳನ್ನು ಪ್ರತಿಪಾದಿಸುವಲ್ಲಿ ಅವುಗಳು ಸರ್ಕಾರಿ ವಿಶ್ವ-ವಿದ್ಯಾಲಯಗಳನ್ನು ಸರಿದೂಗಲಾರವು. ಆದರೆ ಇದು ಒಂದು ಸಣ್ಣ ಸಮಾಧಾನ ಅಷ್ಟೇ. ಯಾಕೆಂದರೆ, ಈ ಧೈರ್ಯ ತೋರಬಲ್ಲ ಸಾರ್ವಜನಿಕ ವಿಶ್ವವಿದ್ಯಾಲಯಗಳು ಬೆರಳೆಣಿಕೆಯಷ್ಟು ಮಾತ್ರ ಇವೆ. ಹಾಗೆಯೇ, ಈ ಸಂಸ್ಥೆಗಳಲ್ಲಿ ಈಗ ಇಂತಹ ಧೈರ್ಯ ತೋರುವ ಪ್ರಾಧ್ಯಾಪಕ ವೃಂದ ಇದೆ. ಮುಂದೆ ಇಂತಹ ಪ್ರಾಧ್ಯಾಪಕರು ಬಾರದಂತೆ ದೇಶದ ಅಭದ್ರ ನಾಯಕತ್ವ ನೋಡಿಕೊಳ್ಳುತ್ತದೆ.

ಒಮ್ಮೆ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಈ ರೀತಿಯ ಹೊಸಬರು ತುಂಬಿಕೊಂಡಾಗ ದೇಶದಲ್ಲಿ ನಿಜ ಅರ್ಥದ ವಿಶ್ವವಿದ್ಯಾಲಯಗಳೇ ಇರುವುದಿಲ್ಲ. ಹಾಗಾದಾಗ ಭಾರತದಲ್ಲಿ ಸಂಪೂರ್ಣ ಕತ್ತಲೆಯ ಯುಗವೊಂದು ಪ್ರಾರಂಭವಾದಂತೆ. ಅಂತಹ ಕತ್ತಲೆಯಲ್ಲಿ ತನಗೆ ಸಂಪೂರ್ಣ ಭದ್ರತೆ ಇರುತ್ತದೆ ಅಂತ ಯಾವುದೇ ಅಭದ್ರ ನಾಯಕತ್ವ ದೃಢವಾಗಿ ನಂಬುತ್ತದೆ.

ಚುರುಮುರಿ



ನಮ್ಮ ವೋಟು ಅವ್ರಿಗೆ...

● ಸುಧೀಂದ್ರ

ಬ್ಯಾಂಕಿನ ಕೆಲಸವಿತ್ತೂಂತ ಆಫೀಸಿಗೆ ರಜೆ ಹಾಕಿದ್ದೆ. ಬೇಗ ಮುಗೀತು. ಬಿಬಿಎಂಪಿಯ-ಲ್ಲೊಂದು ಕೆಲಸ ಬಾಕಿಯಿತ್ತು. ಹೋದರೆ ಅಲ್ಲಿ ಜನವೋ ಜನ. ಪರಿಚಯದ ಲಕ್ಕಪ್ಪನೋರು ನನ್ನ ನೋಡಿ ಹಲ್ಕಿರಿದರು. 'ಸಾರ್, ನೀವೂ ಐ.ಡಿ. ಕಾರ್ಡ್ ಸರೆಂಡರ್ ಮಾಡೋಕ್ಕೆ ಬಂದ್ರಾ?' ಎಂದು ಗಾಬರಿಯಿಂದ ಪ್ರಶ್ನಿಸಿದರು. 'ವೋಟರ್ಸ್ ಐ.ಡಿ.ಯಲ್ಲಿ ನನ್ನ ಮತ್ತು ಅಪ್ಪನ ಹೆಸರುಗಳು ಅದಲುಬದಲಾಗಿವೆ. ಕರೆಕ್ಷನ್ ಮಾಡಿಸ್ಬೇಕೂಂತ ಬಂದೆ' ಅಂದೆ.

'ತಮಿಳ್ನಾಡು ಎಲೆಕ್ಷನ್ ಮುಗಿದ ಮೇಲೆ ಬನ್ನಿ' ಅಂದ್ರು ಲಕ್ಕಪ್ಪನವರು. ಅದಕ್ಕೂ ನಮಗೂ ಏನು ಸಂಬಂಧಾಂತ ಪ್ರಶ್ನಿಸುವಷ್ಟರಲ್ಲಿ 'ಅಲ್ಲಿನ ವೋಟರ್ಸ್ ಲಿಸ್ಟಿಗೆ ಹೆಸರು ಸೇರಿಸೋಕ್ಕೆ, ಇಲ್ಲಿನ ಐ.ಡಿ. ಕ್ಯಾನ್ಸಲ್ ಮಾಡಿಸೋವ್ರು ಜಾಸ್ತಿಯಾಗಿ-ದ್ದಾರೆ' ಅಂದ್ರು.

ಮರುದಿನ ಬೆಳಿಗ್ಗೆ ಕಾಫಿ ಕುಡಿಯುವ ಹೊತ್ತಿಗೆ ಮನೆಗೆಲಸದ ಸೆಲ್ವಿ ಬಂದ್ಲು. 'ಗವರ್ಮೆಂಟೋರೇ ಇನ್ಮೇಲೆ ಎಕ್ಸಾಮಲ್ಲಿ ಕಾಪಿ ಮಾಡೋಕ್ಕೆ ಬಿಡ್ತಾರಂತೆ, ಹೌದಾ ಅಂಕಲ್' ಅಂತ ಪ್ರಶ್ನಿಸಿದಳು. ಪತ್ರಿಕೆಗಳನ್ನು ಓದಲು ಬರದಿದ್ದರೂ ಆಯಾ ಸಮಯದ ನ್ಯೂಸ್‌ಗಳನ್ನು ತಿಳ್ಕೊಳ್ಳೋದರಲ್ಲಿ ಅವಳು ಎಕ್ಸ್‌ಪರ್ಟ್.

ತನ್ನಿಬ್ಬರು ಮಕ್ಕಳ ಎಕ್ಸಾಮ್ ಬಗ್ಗೆ ಸದಾ ಯೋಚನೆ ಮಾಡೋ ಸೆಲ್ವಿ ಇಂಥ ಬಾಂಬ್‌ಗಳನ್ನು ಆಗಾಗ ಎಸೀತಿರ್ತಾಳೆ. ಅವಳ ಪ್ರಶ್ನೆಗೆ ನಾನು ಕುಡೀತಿದ್ದ ಕಾಫಿ ಪೇಪರ್ ಮೇಲೆ ಕೊಂಚ ಚೆಲ್ತು.

ಮುಖಪುಟದಲ್ಲೇ 'ಗೆದ್ರೆ ಕ್ಷೇತ್ರದ ಜನರಿಗೆಲ್ಲಾ ಚಂದ್ರನತ್ತ ಟೂರ್ ಕರ್ಕೊಂಡು ಹೋಗ್ತೀನಿ' ಅನ್ನೋ ತಮಿಳುನಾಡು ರಾಜಕಾರಣಿಯೊ-ಬ್ಬರ ಚಿತ್ರ ಪ್ರಕಟವಾಗಿತ್ತು. 'ನಿಮ್ಮೂರ್‍ನಲ್ಲಿ ಕಾಫಿ ಮಿಶೀನೂ ವಾಷಿಂಗ್ ಮಿಶೀನೂ ಫ್ರೀಯಾಗಿ ಕೊಡ್ತಾರಂತೆ' ಅಂದೆ.

'ಹಾಗಿದ್ರೆ ನಾವೂ ಅಲ್ಲಿಗೇ ಶಿಫ್ಟ್ ಆಗೋಣ' ಅಂದಳು ಹೆಂಡತಿ. 'ಮಾತಾಡೋಕ್ಕೆ ನಿನಗೆ ತಮಿಳೇ ಬರೋಲ್ವಲ್ಲ' ಅಂದೆ. 'ಕಾಪಿ ಮಾಡಿ ಹೆಂಗೋ ಎಕ್ಸಾಂ ಪಾಸ್ ಮಾಡ್ಕೋತೀನಿ' ಅಂದ್ಲು ಹೆಂಡ್ತಿ.

'ಮನೆ ಕ್ಲೀನ್ ಮಾಡೋ ಮಿಶೀನೂ ಕೊಡ್ತಾರೆ' ಎನ್ನುತ್ತಾ ಸೆಲ್ವಿ ಕಸಪೊರಕೆ ಕೈಗೆತ್ತಿಕೊಂಡ್ಲು.

ಸಂಗತ

ನಕಲಿ ಖಾತೆಗಳ ಅಸಲಿಯತ್ತು

ನಮ್ಮ ಸೈಬರ್ ಕ್ರೈಂ ನಿಯಂತ್ರಣ ವ್ಯವಸ್ಥೆ ಹೆಚ್ಚು ಬಲಶಾಲಿಯಾಗಬೇಕಿದೆ

● ಡಾ. ಸಿಬಂತಿ ಪದ್ಮನಾಭ ಕೆ. ವಿ.

ಸಾಮಾಜಿಕ ಜಾಲತಾಣಗಳಲ್ಲಿನ ಸೆಲೆಬ್ರಿಟಿಗಳ ನಕಲಿ ಖಾತೆಗಳ ಬಗ್ಗೆ ಮಾತಾಡಿಕೊಳ್ಳುತ್ತಿದ್ದ ಜನಸಾಮಾನ್ಯರು ಈಗ ತಮ್ಮದೇ ನಕಲಿ ಖಾತೆಗಳ ಬಗ್ಗೆ ತಲೆಕೆಡಿಸಿಕೊಳ್ಳುವ ಕಾಲ ಬಂದಿದೆ. ತಾವು ಪ್ರತಿದಿನ ವ್ಯವಹರಿಸುತ್ತಿರುವ ಖಾತೆಗಳು ಅಸಲಿಯೋ ನಕಲಿಯೋ ಎಂದು ಗೊಂದಲಕ್ಕೊಳಗಾಗುವುದರ ಜೊತೆಗೆ, ಯಾವ ಕ್ಷಣದಲ್ಲಿ ತಮ್ಮದೇ ಹೆಸರಲ್ಲಿ ನಕಲಿ ಖಾತೆ ಸೃಷ್ಟಿಯಾಗಿ ಮುಜುಗರಕ್ಕೊಳಗಾಗುವ ಸಂದರ್ಭ ಬರುತ್ತದೋ ಎಂಬ ಆತಂಕ ಅನೇಕರನ್ನು ಕಾಡುತ್ತಿದೆ.


ಫೇಸ್‌ಬುಕ್‌ನಲ್ಲಿ ತೀರಾ ಪರಿಚಿತರೊಬ್ಬರಿಂದ ಫ್ರೆಂಡ್ ರಿಕ್ವೆಸ್ಟ್ ಬಂತೆಂದು ಸ್ವೀಕರಿಸಿಬಿಟ್ಟರೆ, ಮರುಕ್ಷಣ ಅವರಿಂದ ಹಣದ ಬೇಡಿಕೆ. 'ಬಹಳ ತೊಂದರೆಯಲ್ಲಿದ್ದೇನೆ. ನಿಮ್ಮಲ್ಲಿ ಗೂಗಲ್ ಪೇ ಅಥವಾ ಫೋನ್ ಪೇ ಇದೆಯೇ? ತುರ್ತಾಗಿ ಹತ್ತು ಸಾವಿರ ರೂಪಾಯಿ ಬೇಕಾಗಿದೆ. ಕೂಡಲೇ ವರ್ಗಾಯಿಸಿಬಿಡಿ. ನಾಳೆಯೇ ವಾಪಸ್ ಕೊಡುತ್ತೇನೆ'- ಇದು ಅಂತಹ ಖಾತೆಗಳ ಸಾಮಾನ್ಯ ವರಸೆ.

ನಮಗೆ ಬಹಳ ಗೊತ್ತಿರುವ ವ್ಯಕ್ತಿಗಳಿಂದ ಇಂತಹ ಕೋರಿಕೆ ಬಂದಾಗ 'ಛೇ, ಏನು ತೊಂದರೆಯಾಯಿತೋ ಏನೋ? ಸಹಾಯ ಮಾಡೋಣ' ಎಂದು ಅನಿಸುವುದು ಸಹಜ. ಒಂದಷ್ಟು ಮಂದಿ ಅವರಿಗೆ ಫೋನ್ ಮಾಡಿಯೋ ವೈಯಕ್ತಿಕ ಮೆಸೇಜ್ ಮಾಡಿಯೋ ಖಚಿತಪಡಿಸಿಕೊಳ್ಳುವ ಕೆಲಸ ಮಾಡಿದರೆ, ಕೆಲವು ಮಂದಿ ಅದೇನೂ ಮಾಡದೆ ನೇರವಾಗಿ ಹಣವನ್ನು ಕೊಟ್ಟು ಮೋಸ ಹೋಗುವುದುಂಟು. ಇಂತಹ ಪ್ರಕರಣಗಳು ಇತ್ತೀಚಿನ ದಿನಗಳಲ್ಲಂತೂ ಬಹುವಾಗಿ ವರದಿಯಾಗುತ್ತಿವೆ. 'ನನ್ನ ಹೆಸರಿನಲ್ಲಿ ಫೇಕ್ ಅಕೌಂಟ್ ಸೃಷ್ಟಿಯಾಗಿದೆ. ದಯಮಾಡಿ ಯಾರೂ ಪ್ರತಿಕ್ರಿಯಿಸಬೇಡಿ, ಹಣ ನೀಡಬೇಡಿ' ಎಂದು ಪರಿಚಿತರು ಪ್ರಕಟಿಸಿಕೊಳ್ಳುವುದು ತೀರಾ ಸಾಮಾನ್ಯ ಎಂಬ ಹಂತಕ್ಕೆ ಬಂದಿದೆ.

ತಂತ್ರಜ್ಞಾನದಿಂದ ಬದುಕು ಸ್ಮಾರ್ಟ್ ಆಗಿದೆ ಅಂದುಕೊಳ್ಳುತ್ತೇವೆ. ಅಂತೆಯೇ ಕಳ್ಳರೂ ಸ್ಮಾರ್ಟ್ ಆಗುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳಿಂದ ಸಂವಹನದ ಪ್ರಜಾಪ್ರಭುತ್ವ ಸಾಧ್ಯವಾಗಿದೆ ಎಂದು ನಿನ್ನೆಮೊನ್ನೆಯವರೆಗೆ ವ್ಯಾಖ್ಯಾನಿಸುತ್ತಿದ್ದ ಸಂವಹನ ಪಂಡಿತರು, ಈ ಪ್ರಜಾಪ್ರಭುತ್ವ ಅಸಲಿಯೋ ನಕಲಿಯೋ ಎಂಬ ಸಂಶಯದಲ್ಲಿ ಬಿದ್ದಿದ್ದಾರೆ.

ಫೇಸ್‌ಬುಕ್ ಇಂದು ಜಗತ್ತಿನಲ್ಲೇ ಅತಿಹೆಚ್ಚು ಜನಪ್ರಿಯವಾಗಿರುವ ಸಾಮಾಜಿಕ ಜಾಲತಾಣವಾಗಿದ್ದು, 274 ಕೋಟಿ ಸಕ್ರಿಯ ಬಳಕೆದಾರರನ್ನು ಹೊಂದಿದೆ. ಯುಟ್ಯೂಬ್ 229 ಕೋಟಿ ಖಾತೆಗಳನ್ನು ಹೊಂದಿ ಎರಡನೇ ಸ್ಥಾನದಲ್ಲಿದ್ದರೆ, 200 ಕೋಟಿ ಬಳಕೆದಾರರೊಂದಿಗೆ ವಾಟ್ಸ್‌ಆ್ಯಪ್, 130 ಕೋಟಿ ಬಳಕೆದಾರರೊಂದಿಗೆ ಫೇಸ್‌ಬುಕ್ ಮೆಸೆಂಜರ್, 122 ಕೋಟಿ ಬಳಕೆದಾರರೊಂದಿಗೆ ಇನ್‌ಸ್ಟಾಗ್ರಾಂ ಹಾಗೂ 35 ಕೋಟಿ ಬಳಕೆದಾರರೊಂದಿಗೆ ಟ್ವಿಟರ್ ನಂತರದ ಸ್ಥಾನದಲ್ಲಿವೆ. ಯಾವುದೇ ಸಾಮಾಜಿಕ ಜಾಲತಾಣ ಜನಪ್ರಿಯವಾಗುತ್ತಿದ್ದಂತೆ ಅದನ್ನು ದುರ್ಬಳಕೆ ಮಾಡಿ-ಕೊಳ್ಳುವವರ ಸಂಖ್ಯೆಯೂ ಹೆಚ್ಚಾಗುತ್ತದೆ.

ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಟ್ವಿಟರ್ ಕಂಪನಿಗಳು ಈ ನಕಲಿಗಳನ್ನು ನಿಭಾಯಿಸಲು ಹರಸಾಹಸಪಡುತ್ತಿವೆ. ನಕಲಿಗಳನ್ನು ನಿಯಂತ್ರಿಸಲು ಈ ಕಂಪನಿಗಳು ತಂತ್ರಗಾರಿಕೆಗಳನ್ನು ಹೆಚ್ಚಿಸುತ್ತಿರುವಂತೆಯೇ, ನಕಲಿಗಳು ಕೂಡ ಮೋಸದ ಹೊಸಹೊಸ ದಾರಿಗಳನ್ನು ಹುಡುಕುತ್ತಿರುತ್ತಾರೆ. 2018ರ ಮೊದಲ ಮೂರು ತಿಂಗಳಲ್ಲಿ ಫೇಸ್‌ಬುಕ್ 58 ಕೋಟಿ ನಕಲಿ ಖಾತೆಗಳನ್ನು ನಿಷ್ಕ್ರಿಯಗೊಳಿಸಿದ್ದರೆ, ಕೊನೆಯ ಮೂರು ತಿಂಗಳಲ್ಲಿ 120 ಕೋಟಿ ನಕಲಿ ಖಾತೆಗಳನ್ನು ತೆಗೆದುಹಾಕಿತು. 2019ರ ಮೊದಲ ಮೂರು ತಿಂಗಳಲ್ಲಿ 220 ಕೋಟಿ ಖಾತೆಗಳನ್ನೂ ಕೊನೆಯ ಮೂರು ತಿಂಗಳಲ್ಲಿ 110 ಕೋಟಿ ಖಾತೆಗಳನ್ನೂ 2020ರ ಅಂತ್ಯಕ್ಕೆ 130 ಕೋಟಿ ಖಾತೆಗಳನ್ನೂ ನಿಷ್ಕ್ರಿಯಗೊಳಿಸಿತು.



ನಕಲಿ ಖಾತೆಗಳನ್ನು ತೆಗೆದುಹಾಕಿದ ಇಮ್ಮಡಿ ವೇಗದಲ್ಲಿ ಮತ್ತೆ ನಕಲಿಗಳು ಸೃಷ್ಟಿಯಾಗುತ್ತಿವೆ. ಇನ್‌ಸ್ಟಾಗ್ರಾಂನಲ್ಲಿ 9.5 ಕೋಟಿ ನಕಲಿ ಖಾತೆಗಳು, ಟ್ವಿಟರ್‌ನಲ್ಲಿ ಪ್ರತೀ 10 ಖಾತೆಗಳಲ್ಲಿ ಒಂದು ಖಾತೆ ನಕಲಿ ಇರುವುದಾಗಿಯೂ ಸಮೀಕ್ಷೆಗಳು ಬಹಿರಂಗಪಡಿಸಿವೆ. ಫೇಸ್‌ಬುಕ್‌ನಲ್ಲಿ ಶೇ 13ರಷ್ಟು ನಕಲಿ ಖಾತೆಗಳಿರುವುದಾಗಿ ಸ್ವತಃ ಕಂಪನಿಯೇ ಒಪ್ಪಿಕೊಂಡಿದೆ.

ನಕಲಿ ಖಾತೆಗಳಲ್ಲಿ ಎರಡು ವರ್ಗದವು ಇವೆ: ಒಂದು, ಸಾಫ್ಟ್‌ವೇರ್ ಸಹಾಯದಿಂದ ಏಕಕಾಲಕ್ಕೆ ಬಹುಸಂಖ್ಯೆಯಲ್ಲಿ ಸೃಷ್ಟಿಯಾದವು. ಇನ್ನೊಂದು, ವ್ಯಕ್ತಿಗಳಿಂದ ಸೃಷ್ಟಿಯಾದವು. ಎರಡರಿಂದಲೂ ಅವುಗಳದ್ದೇ ಆದ ಅಪಾಯಗಳಿವೆ. ಸಾಫ್ಟ್‌ವೇರ್‌ಗಳನ್ನು ಬಳಸಿ ಹುಟ್ಟುಹಾಕುವ ಖಾತೆಗಳು ವಿವಿಧ ಕಂಪನಿಗಳು ಹಾಗೂ ರಾಜಕಾರಣಿಗಳಿಗೆ ಹೆಚ್ಚಿನ 'ಫಾಲೋವರ್ಸ್' ಅಥವಾ 'ಲೈಕ್ಸ್' ಅನ್ನು ಸೃಷ್ಟಿಸುವ ಮೂಲಕ ನಕಲಿ ಜನಪ್ರಿಯತೆಯನ್ನು ತಂದುಕೊಡುತ್ತವೆ. ಮಾನವನಿರ್ಮಿತ ನಕಲಿ ಖಾತೆಗಳಂತೂ ಇದಕ್ಕಿಂತ ಹೆಚ್ಚು ಅಪಾಯಕಾರಿ. ಜನಸಾಮಾನ್ಯರ ಖಾಸಗಿತನ, ಗೋಪ್ಯತೆ ಹಾಗೂ ಆದಾಯದೊಂದಿಗೆ ಚೆಲ್ಲಾಟ ಆಡುವ ಇವು ಸಾಮಾಜಿಕ ಬದುಕಿನಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಬಲ್ಲವು.

ನಮ್ಮ ಸೈಬರ್ ಕ್ರೈಂ ನಿಯಂತ್ರಣ ವ್ಯವಸ್ಥೆಯು ಚಾಪೆ ಕೆಳಗೆ ತೂರಿದರೆ ಕ್ರಿಮಿನಲ್‌ಗಳು ರಂಗೋಲಿ ಕೆಳಗೆ ತೂರುತ್ತಿದ್ದಾರೆ. ವಾಸ್ತವವಾಗಿ ಕೇವಲ ಕಾನೂನಿನಿಂದ ತಡೆಗಟ್ಟಬಹುದಾದ ಸಮಸ್ಯೆ ಇದಲ್ಲ. ಅದಕ್ಕೆ ಜನರು ಜಾಗೃತರಾಗಿರುವುದೇ ಸರಿಯಾದ ಪರಿಹಾರ. ಸಾಮಾಜಿಕ ಜಾಲತಾಣಗಳ ಅಪಾಯಗಳಿಗೆ ಬಲಿ ಬೀಳದಂತೆ ಜನಸಾಮಾನ್ಯರನ್ನು ಎಚ್ಚರಿಸುವುದು, ಅವುಗಳ ಸರಿಯಾದ ಬಳಕೆಯ ಬಗ್ಗೆ ಅವರಲ್ಲಿ ಅರಿವು ಮೂಡಿಸುವುದು ಹೆಚ್ಚು ಪ್ರಯೋಜನಕಾರಿ.

ವಾಚಕರ ವಾಣಿ

ಭಾವೋದ್ವೇಗದ ಹೇಳಿಕೆ ಸಮರ್ಥನೀಯವಲ್ಲ

ರಾಜ್ಯದ ಆರೋಗ್ಯ ಸಚಿವ ಡಾ. ಕೆ.ಸುಧಾಕರ್ ತಮ್ಮನ್ನೂ ಒಳಗೊಂಡಂತೆ ರಾಜ್ಯದ ಎಲ್ಲಾ 225 ಶಾಸಕರ ಬಗ್ಗೆ ಆಡಿರುವ ಕೆಟ್ಟ ಅಭಿರುಚಿಯ ಮಾತುಗಳ ಬಗ್ಗೆ ರಾಜ್ಯದಾದ್ಯಂತ ಮಹಿಳೆಯರಿಂದ ಪ್ರತಿಭಟನೆ ವ್ಯಕ್ತವಾಗುತ್ತಿದೆ. ಜವಾಬ್ದಾರಿಯುತ ಸ್ಥಾನದಲ್ಲಿರುವ ಸಚಿವರು ವಿಧಾನಸಭೆಯ ಸ್ಪೀಕರ್, ಮುಖ್ಯಮಂತ್ರಿ ಸೇರಿದಂತೆ ಎಲ್ಲಾ ಶಾಸಕರನ್ನು ಏಕ ಪತ್ನಿ ವ್ರತಸ್ಥರೇ ಅಲ್ಲವೇ ಎಂಬ ಬಗ್ಗೆ ಪರೀಕ್ಷೆಗೆ ಒಳಪಡಿಸಬೇಕೆಂದು ಹೇಳಿದ್ದಾರೆ. ನಂತರ ಮುಖ್ಯಮಂತ್ರಿಯವರ ಸಲಹೆಯಂತೆ, ತಾವಾಡಿದ ಮಾತುಗಳ ಬಗ್ಗೆ ಸದನದಲ್ಲಿ ವಿಷಾದ ವ್ಯಕ್ತಪಡಿಸಿದ್ದಾರೆ.

ಕೆಲವೊಮ್ಮೆ ಮಾತಿನ ಭರದಲ್ಲಿ, ಆಕ್ರೋಶಪೂರಿತ ಸನ್ನಿವೇಶಗಳಲ್ಲಿ ಇಂತಹ ಮಾತುಗಳು ಹೊರಬರಬಹುದು. ಸಿ.ಡಿ ವಿವಾದದಲ್ಲಿ ಸಿಲುಕಿರುವ ರಮೇಶ್ ಜಾರಕಹೊಳಿ ಅವರನ್ನು ಸಮರ್ಥಿಸುವ ಭರದಲ್ಲಿ ಸಚಿವರ ಬಾಯಿಯಿಂದ ಅಂತಹ ಕೆಟ್ಟ ಮಾತುಗಳು ಬಂದಿರಬಹುದು. ಆದರೆ, ಸಚಿವರಂತಹ ಜವಾಬ್ದಾರಿಯುತ ಸ್ಥಾನದಲ್ಲಿರುವವರು ಭಾವೋದ್ವೇಗಕ್ಕೆ ಒಳಗಾಗಿ ಈ ಬಗೆಯ ಹೇಳಿಕೆಗಳನ್ನು ನೀಡಬಾರದು. ಪ್ರಸ್ತುತ ಅವರು ಆರೋಗ್ಯ ಸಚಿವರಾಗಿದ್ದು, ಕೊರೊನಾ ವಿರುದ್ಧದ ಹೋರಾಟದ ನಾಯಕತ್ವ ವಹಿಸಿದ್ದಾರೆ. ರಾಜ್ಯದಲ್ಲಿ ಕೊರೊನಾದ ಹಾವಳಿ ಗಂಭೀರ ಸ್ವರೂಪ ಪಡೆಯುತ್ತಿದೆ. ಸೋಂಕಿತರ ಸಂಖ್ಯೆ ಏರುಗತಿಯಲ್ಲಿ ಸಾಗಿದೆ. ಇಂತಹ ಗಂಭೀರ ಹಾಗೂ ಸೂಕ್ಷ್ಮವಾದ ಸನ್ನಿವೇಶದಲ್ಲಿ ಆರೋಗ್ಯ ಸಚಿವರು ಎಡವಟ್ಟು ಮಾಡಿಕೊಂಡಿದ್ದಾರೆ. ಇನ್ನು ಮುಂದಾದರೂ ಅವರು ಜವಾಬ್ದಾರಿಯುತವಾಗಿ ವರ್ತಿಸಲಿ.

ಕೆ.ವಿ.ವಾಸು, ಮೈಸೂರು

ವಾಸ್ತವ ಮರೆಮಾಚುವ ಅನಗತ್ಯ ಸಮರ್ಥನೆ

ಇಂದು, ಏರುತ್ತಿರುವ ಇಂಧನದ ಬೆಲೆ ಒಂದೆಡೆಯಾದರೆ, ದೈನಂದಿನ ಅಗತ್ಯ ವಸ್ತುಗಳ ಬೆಲೆಯಲ್ಲಿನ ಹೆಚ್ಚಳವು ಜನಸಾಮಾನ್ಯರ ಜೀವನವನ್ನು ಕಡುಕಷ್ಟಕ್ಕೆ ತಳ್ಳಿದೆ. ವಸ್ತುಸ್ಥಿತಿ ಹೀಗಿರುವಾಗ, ಆಳುವ ಪಕ್ಷ ಅಥವಾ ಸರ್ಕಾರವನ್ನು ಬೆಂಬಲಿಸಬೇಕೆಂಬ ಏಕೈಕ ಉದ್ದೇಶದಿಂದ, ವಾಸ್ತವದ ಅರಿವಿದ್ದೂ ಪ್ರಸ್ತುತ ಸ್ಥಿತಿಯನ್ನು ಮರೆಮಾಚಿ ಸಮರ್ಥಿಸಿಕೊಳ್ಳುವುದು ಎಷ್ಟರಮಟ್ಟಿಗೆ ಸರಿ?

ಇಂತಹ ಸಮಸ್ಯೆಗಳ ಕುರಿತು ಇತ್ತೀಚೆಗೆ ಕೆಲ ಸ್ನೇಹಿತರ ಜೊತೆಗೆ ಚರ್ಚೆ ನಡೆಸಿದ ವೇಳೆ, ಬೆಲೆ ಏರಿಕೆ ಕುರಿತು ಅವರಲ್ಲಿ ಒಬ್ಬ, 'ಆಹಾರ ಸಾಮಗ್ರಿಗಳ ಬೆಲೆಯಲ್ಲಿನ ಹೆಚ್ಚಳವು ನಮಗೆ ಸ್ವಲ್ಪ ಕಷ್ಟವಾದರೂ ದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ' ಎಂದ. ಈ ಉತ್ತರ ನನ್ನನ್ನು ದಿಗ್ಭ್ರಮೆಗೊಳಿಸಿತು. 'ದೇಶ ಮೊದಲಾ ಅಥವಾ ದೇಶದ ಜನತೆ ಮೊದಲಾ? ಜನರಿಲ್ಲದೆ ರಾಷ್ಟ್ರ ಹೇಗೆ ಅಸ್ತಿತ್ವದಲ್ಲಿರಲು ಸಾಧ್ಯ' ಎಂಬ ಪ್ರಶ್ನೆಗೆ ಅವನ ಉತ್ತರ ನಿರೀಕ್ಷಿಸಿದ ಹಾಗೆ ಸಮರ್ಥನೆಯಲ್ಲೇ ಕೊನೆಯಾಯಿತು. ವಿಪರ್ಯಾಸವೆಂದರೆ, ಈಗಿನ ಸರ್ಕಾರದ ವೈಫಲ್ಯದ ಬಗ್ಗೆ ಮಾತನಾಡಿದರೆ, ಹಿಂದಿನ ಸರ್ಕಾರಗಳ ವೈಫಲ್ಯದ ಬಗ್ಗೆ ಮಾತನಾಡುತ್ತಾರೆ. ಈ ಸಮರ್ಥನೆಗಳಿಗೆ ಕೊನೆಯಿದೆಯೇ?

ನಮ್ಮಲ್ಲಿರುವ ಸವಾಲುಗಳಿಗೆ ಅದರ ಮೂಲಕಾರಣವನ್ನು ಹುಡುಕಬೇಕೇ ವಿನಾ ನಮ್ಮನ್ನು ಒಂದು ಸೀಮಿತ ಚೌಕಟ್ಟಿಗೆ ಒಳಪಡಿಸಿಕೊಂಡರೆ, ತಲೆಗೆ ಹಾಕಿದ ನೀರು ಕಾಲಿಗೆ ಬರಲೇಬೇಕು ಎಂಬಂತೆ ಮುಂದೊಂದು ದಿನ ವಾಸ್ತವಕ್ಕೆ ನಾವು ಮುಖಾಮುಖಿ ಆಗಲೇಬೇಕಾಗುತ್ತದೆ. ಆಗ ನಮ್ಮ ಒಳ ಮನಸ್ಸಿಗೆ ಸೂಕ್ತ ಉತ್ತರ ಕೊಟ್ಟುಕೊಳ್ಳಲು ಸಾಧ್ಯವಿದೆಯೇ?

ಪ್ರವೀಣ ನಾಗಪ್ಪ ಯಲವಿಗಿ, ಹಾವೇರಿ

ಹೇ ರಾಮ್!

ಅಧಿಕಾರಕ್ಕೇರಲು ಬೇಕಿವರಿಗೆ
ಮರ್ಯಾದಾ ಪುರುಷೋತ್ತಮ ರಾಮ,
ನಂತರ ಏನು ಮಾಡಿದರೂ, ಏನೆಲ್ಲ
ಮಾತನಾಡಿದರೂ ನಡೆಯುತ್ತದೆ
ರಾಮ ರಾಮ...!

ಆನಂದ ರಾಮತೀರ್ಥ
ಜಮಖಂಡಿ

ಚೀನಾ ಅಭಿವೃದ್ಧಿ ಮಾದರಿ ಉದಾಹರಣೆ ಆದೀತೇ?

'ಚೀನಾದಲ್ಲಿ ಗರೀಬಿ ಹಟಾವೊ' ಎಂಬ ಸುಧೀಂದ್ರ ಕುಲಕರ್ಣಿ ಅವರ ಲೇಖನ (ಪ್ರ.ವಾ., ಮಾರ್ಚ್ 25) ಚೀನಾ ಮತ್ತು ಆ ದೇಶದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ಕುರಿತ ಕೆಲವು ಪೂರ್ವಗ್ರಹಗಳನ್ನು ದೂರ ಮಾಡುತ್ತದೆ. ಬಡತನದ ಹಿನ್ನೆಲೆಯಿಂದ ಬಂದ ಷಿ, ಚೀನಾದಲ್ಲಿ ಅತೀ ಕಡಿಮೆ ಅವಧಿಯಲ್ಲಿ ಬಡತನ ನಿರ್ಮೂಲನೆ ಮಾಡಿ ಯಶ ಕಂಡದ್ದು ಅನುಕರಣೀಯ.

ನಮ್ಮಲ್ಲೂ ಅನೇಕ ಬಡತನ ನಿರ್ಮೂಲನೆ ಕಾರ್ಯಕ್ರಮಗಳು ದಶಕಗಳಿಂದ ಜಾರಿಯಲ್ಲಿವೆ. ಆದರೆ ಪ್ರಬಲ ರಾಜಕೀಯ ಇಚ್ಛಾಶಕ್ತಿಯುಳ್ಳ ನಾಯಕತ್ವದ ಕೊರತೆ, ಅದಕ್ಷ ಆಡಳಿತ ಯಂತ್ರ, ಭ್ರಷ್ಟಾಚಾರದ ತಾಂಡವ ನೃತ್ಯ, ಇವುಗಳಿಂದಾಗಿ ನಮ್ಮಲ್ಲಿ ಯಾವುದೇ ಬಡತನ ನಿರ್ಮೂಲನೆ ಕಾರ್ಯಕ್ರಮವು ಸಮರ್ಪಕವಾಗಿ ಅನುಷ್ಠಾನಗೊಂಡದ್ದಿಲ್ಲ. ಪ್ರತಿಯೊಂದರಲ್ಲೂ ಹಗರಣಗಳ ಸರಮಾಲೆ. ಇದಕ್ಕೆ ಯಾರೂ ಹೊಣೆಗಾರರಾಗುತ್ತಿಲ್ಲ ಕೂಡ. ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಳೆಯಿತು ಎಂಬಂತೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆಡಳಿತಾರೂಢ ಮತ್ತು ವಿರೋಧ ಪಕ್ಷಗಳು ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತ, ಪರಸ್ಪರ ದೂಷಿಸಿಕೊಳ್ಳುತ್ತ, ದೇಶದ ಜನರ ದಿಕ್ಕು ತಪ್ಪಿಸುತ್ತಿವೆ.

ಪ್ರಜಾಪ್ರಭುತ್ವ ವ್ಯವಸ್ಥೆ ಇಲ್ಲದೇ ಇರುವುದು ಚೀನಾ ದೇಶದ ದೊಡ್ಡ ಕೊರತೆ ಆಗಿರಬಹುದು. ಆದರೆ ನಮ್ಮ ದೇಶದ ಪ್ರಜಾಪ್ರಭುತ್ವದ ದೇಗುಲಗಳೆನಿಸಿದ ಶಾಸನಸಭೆಗಳು ನಡೆಯುತ್ತಿರುವ ರೀತಿ ನೀತಿಗಳನ್ನು, ದಿನನಿತ್ಯ ಎಂಬಂತೆ ಅನಾವರಣಗೊಳ್ಳುತ್ತಿರುವ ನಮ್ಮ ಜನಪ್ರತಿನಿಧಿಗಳ ಅವಾಂತರಗಳನ್ನು, ಶಿಥಿಲಗೊಳ್ಳುತ್ತಿರುವ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗಮನಿಸಿದರೆ, ಪ್ರಜಾಪ್ರಭುತ್ವವೇ ನಮ್ಮ ದೌರ್ಬಲ್ಯವೇನೋ ಎಂದೆನಿಸುತ್ತದೆ. ನಮ್ಮ ಪ್ರಜಾಪ್ರಭುತ್ವವು ರಾಜಕಾರಣಿಗಳಿಂದ, ರಾಜಕಾರಣಿಗಳಿಗಾಗಿ, ರಾಜಕೀಯಕ್ಕಾಗಿ ಇರುವ ವ್ಯವಸ್ಥೆಯಾಗಿ ಮಾರ್ಪಟ್ಟಿದೆ. ನಾವು ಇದಕ್ಕಾಗಿ ದೊಡ್ಡ ಬೆಲೆಯನ್ನು ತೆರುತ್ತಿದ್ದೇವೆ. ಜನರ ದೂರು ದುಮ್ಮಾನಗಳನ್ನು ಕೇಳುವವರಿಲ್ಲದಂತಾಗಿದೆ. ಯಾರಿಂದಲೂ ಪಾಠ ಕಲಿಯಬೇಕಿಲ್ಲ ಎಂಬ ಧೋರಣೆ, ಧಿಮಾಕಿನಲ್ಲಿರುವ ನಮ್ಮ ರಾಜಕಾರಣಿಗಳಿಗೆ ಚೀನಾದ ಅಭಿವೃದ್ಧಿ ಮಾದರಿ ಎಂದಾದರೂ ಉದಾಹರಣೆ ಆದೀತೇ? ಇವರು ಬೇರೆಯೇ ಮತ್ತು ಇವರ ಆದ್ಯತೆಗಳು ಬೇರೆಯೇ.

ವೆಂಕಟೇಶ ಮಾಚಕನೂರ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಭಾರತ– ಬಾಂಗ್ಲಾ: ಸುವರ್ಣ ಬಂಧ

ನೆರೆಯ ಬಾಂಗ್ಲಾದೇಶವು ಶುಕ್ರವಾರ (ಮಾರ್ಚ್ 26) ತನ್ನ 50ನೇ ಸ್ವಾತಂತ್ರ್ಯ ದಿನವನ್ನು ಆಚರಿಸಿಕೊಂಡಿದೆ. ಯಾವುದೇ ರಾಷ್ಟ್ರಕ್ಕೆ ಇದು ಒಂದು ಮಹತ್ವದ ಘಟ್ಟ. ಬಾಂಗ್ಲಾದೇಶದ ಜತೆಗೆ, ಭಾರತಕ್ಕೂ ಇದು ಒಂದು ರೀತಿ ಹೆಮ್ಮೆಯ ಕ್ಷಣ. ಯಾಕೆಂದರೆ, ಬಾಂಗ್ಲಾದೇಶವು ಐವತ್ತು ವರ್ಷಗಳ ಹಿಂದೆ ಪಾಕಿಸ್ತಾನದಿಂದ ಸಿಡಿದು ಸ್ವತಂತ್ರಗೊಳ್ಳುವುದರ ಹಿಂದಿನ ದೊಡ್ಡ ಶಕ್ತಿಯೇ ಭಾರತವಾಗಿತ್ತು. ಆ ಕಾರಣಕ್ಕಾಗಿಯೇ 50ನೇ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಬಾಂಗ್ಲಾದೇಶವು ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಹ್ವಾನಿಸಿದೆ.

ಮೋದಿ ಅವರು ಎರಡು ದಿನಗಳ ಬಾಂಗ್ಲಾದೇಶ ಪ್ರವಾಸ ಆರಂಭಿಸಿದ್ದಾರೆ. ಕೋವಿಡ್ ಸಂಕಷ್ಟದ ನಂತರ ಮೋದಿ ಅವರದ್ದು ಇದು ಮೊದಲ ವಿದೇಶ ಯಾತ್ರೆ. ಪಾಕಿಸ್ತಾನ ಮತ್ತು ಚೀನಾದ ಜತೆಗೆ ಭಾರತದ ಸಂಬಂಧ ಸ್ವಲ್ಪ ಹದಗೆಟ್ಟಿರುವ ಈ ಸಂದರ್ಭದಲ್ಲಿ ಮೋದಿ ಅವರ ಬಾಂಗ್ಲಾದೇಶ ಪ್ರವಾಸಕ್ಕೆ ಹಲವು ಮಹತ್ವಗಳಿವೆ.

ಹಾಗೆ ನೋಡಿದರೆ, ಬಾಂಗ್ಲಾದೇಶದ ಜತೆಗಿನ ಭಾರತದ ಸಂಬಂಧ ಕಳೆದ ಒಂದೆರಡು ದಶಕಗಳಿಂದ ಅಷ್ಟು ಆತ್ಮೀಯವಾಗೇನೂ ಇಲ್ಲ. 1970ರ ದಶಕದಲ್ಲಿ ರಾಜತಾಂತ್ರಿಕ ಮಾರ್ಗದಲ್ಲಿ ಬಾಂಗ್ಲಾದೇಶದ ಸಮಸ್ಯೆಯತ್ತ ಜಗತ್ತಿನ ಗಮನವನ್ನು ಸೆಳೆಯುವುದು, ಆನಂತರ ಪಾಕಿಸ್ತಾನದ ಜತೆಗಿನ ಯುದ್ಧದಲ್ಲಿ ನೇರವಾಗಿ ಭಾಗಿಯಾಗಿ ಬಾಂಗ್ಲಾದೇಶವನ್ನು (ಅಂದಿನ ಪೂರ್ವ ಪಾಕಿಸ್ತಾನ) ಸ್ವತಂತ್ರಗೊಳಿಸಿದ್ದು ಭಾರತವೇ. ಇದಾದ ನಂತರ ಕೆಲವು ವರ್ಷಗಳ ಕಾಲ ಭಾರತ ಮತ್ತು ಬಾಂಗ್ಲಾ ಸಂಬಂಧ ಆತ್ಮೀಯವಾಗಿತ್ತು. ಆದರೆ ಕ್ರಮೇಣ ಒಂದೊಂದೇ ವಿಚಾರದಲ್ಲಿ ಸಣ್ಣ–ಪುಟ್ಟ ಭಿನ್ನಮತಗಳು ಕಾಣಿಸಲಾರಂಭಿಸಿದವು. ‘ನಮ್ಮ ನಿಲುವುಗಳಿಗೆ ಭಾರತದಿಂದ ಸರಿಯಾದ ಸ್ಪಂದನೆ ಲಭಿಸಲಿಲ್ಲ’ ಎಂದು ಬಾಂಗ್ಲಾದೇಶವು ಆರೋಪಿಸಿದ್ದೂ ಇದೆ.

ಕಾಲಕ್ರಮೇಣ ನದಿ ನೀರು ಹಂಚಿಕೆ, ಗಡಿಯಲ್ಲಿ ಶಾಂತಿ ಕಾಪಾಡುವುದೇ ಮುಂತಾದ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳು ಹೆಚ್ಚಾಗತೊಡಗಿದವು. ಸಾಗರ ಗಡಿ ನಿಗದಿ ವಿಚಾರದಲ್ಲೂ ಬಾಂಗ್ಲಾದೇಶವು ಭಾರತದ ಜತೆ ತಕರಾರು ತೆಗೆದು, ಜಾಗತಿಕ ವೇದಿಕೆಗಳಲ್ಲಿ ಅದನ್ನು ಪ್ರಸ್ತಾಪಿಸಿತ್ತು. ಇತ್ತೀಚೆಗೆ ಮ್ಯಾನ್ಮಾರ್‌ನ ರೋಹಿಂಗ್ಯಾ ವಲಸಿಗರ ಸಮಸ್ಯೆಯು ಭಾರತ–ಬಾಂಗ್ಲಾ ಸಂಬಂಧವನ್ನು ಇನ್ನಷ್ಟು ಹಾಳು ಮಾಡಲು ಕಾರಣವಾಯಿತು.

ಸನಿಹ ಬಂದ ಚೀನಾ: ಈಮಧ್ಯೆ, ಭಾರಿ ಪ್ರಮಾಣದ ಹೂಡಿಕೆಯ ಮೂಲಕ, ಬಾಂಗ್ಲಾದೇಶಕ್ಕೆ ಹತ್ತಿರವಾದ ಚೀನಾ, ಭಾರತ– ಬಾಂಗ್ಲಾದೇಶ ನಡುವಿನ ಬಿರುಕು ಇನ್ನಷ್ಟು ಆಳವಾಗುವಂತೆ ಮಾಡಿತು. 2016ರ ನಂತರ ಬಾಂಗ್ಲಾದೇಶದಲ್ಲಿ ಚೀನಾ ಕೋಟ್ಯಂತರ ರೂಪಾಯಿಯ ಹೂಡಿಕೆ ಮಾಡಿತು. ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಬಾಂಗ್ಲಾದೇಶಕ್ಕೆ ಭೇಟಿನೀಡಿದರು. ಇದರಿಂದ ಸಹಜವಾಗಿ ಎರಡೂ ರಾಷ್ಟ್ರಗಳು ಹತ್ತಿರವಾದವು.

ಆದರೆ, ಚೀನಾ ಜತೆಗಿನ ಸ್ನೇಹದಿಂದಾಗಿ ಭಾರತದ ಜತೆಗಿನ ಸಂಬಂಧಕ್ಕೆ ಧಕ್ಕೆಯಾಗಿದೆ ಎಂಬುದನ್ನು ಬಾಂಗ್ಲಾದೇಶ ಒಪ್ಪಲಿಲ್ಲ. ‘ಚೀನಾದ ಜತೆಗೆ ದೊಡ್ಡ ಪ್ರಮಾಣದಲ್ಲಿ ವ್ಯಾಪಾರ ವಹಿವಾಟು ನಡೆಯುತ್ತದೆ. ಅದಕ್ಕೂ, ಭಾರತದ ಜತೆಗಿನ ಸಂಬಂಧಕ್ಕೂ ತಾಳೆ ಹಾಕುವಂತಿಲ್ಲ. ತನ್ನ ಆರ್ಥಿಕ ಅಭಿವೃದ್ಧಿಗಾಗಿ ಬಾಂಗ್ಲಾದೇಶವು ಎಲ್ಲಾ ರಾಷ್ಟ್ರಗಳ ಜತೆಗೆ ಸೌಹಾರ್ದ ಸಂಬಂಧವನ್ನು ಬಯಸುತ್ತದೆ’ ಎಂದು ಅಲ್ಲಿನ ವಿಶ್ಲೇಷಕರು ಹೇಳಿದ್ದರು.

ಈಗ ಪರಿಸ್ಥಿತಿ ಬದಲಾಗಿದೆ. ಗಡಿಯಲ್ಲಿ ‘ಚೀನಾದ ತಂಟೆ’ ಹೆಚ್ಚಾಗುತ್ತಿದ್ದಂತೆ, ಭಾರತವು ನೆರೆ ರಾಷ್ಟ್ರಗಳ ಜತೆಗಿನ ಸಂಬಂಧವನ್ನು ಇನ್ನಷ್ಟು ಗಟ್ಟಿಗೊಳಿಸುವ ಪ್ರಯತ್ನ ಆರಂಭಿಸಿದೆ.

ಸ್ವಾತಂತ್ರ್ಯೋತ್ಸವದ ಸುವರ್ಣ ಸಂದರ್ಭದಲ್ಲಿ ಮೋದಿ ಅವರ ಭೇಟಿಯು ಉಭಯ ರಾಷ್ಟ್ರಗಳ ನಡುವಿನ ಕಹಿಯನ್ನು ದೂರವಾಗಿಸಿ, ಸಂಬಂಧವನ್ನು ಗಟ್ಟಿಗೊಳಿಸಬಹುದೆಂದು ನಿರೀಕ್ಷಿಸಲಾಗಿದೆ. ಇತ್ತೀಚೆಗಷ್ಟೇ ಉಭಯ ರಾಷ್ಟ್ರಗಳ ನಡುವೆ ‘ಮೈತ್ರಿ ಸೇತು’ ಸೇತುವೆ ಉದ್ಘಾಟನೆಗೊಂಡಿದೆ. ಬಾಂಗ್ಲಾದಲ್ಲಿ ಇನ್ನಷ್ಟು ಹೂಡಿಕೆಯ ಪ್ರಸ್ತಾವಗಳೊಂದಿಗೆ ಮೋದಿ ಅವರು ಅಲ್ಲಿಗೆ ಹೋಗಿದ್ದಾರೆ. ಅಷ್ಟೇ ಅಲ್ಲ ಕೋವಿಡ್ ಲಸಿಕೆಯ ‘ಉಡುಗೊರೆ’ಯನ್ನೂ ಜತೆಗೆ ಒಯ್ದಿದ್ದಾರೆ. ಜಾಗತಿಕ ಮಟ್ಟದಲ್ಲಿ ಬದಲಾಗಿರುವ ರಾಜಕೀಯ ಸನ್ನಿವೇಶದಲ್ಲಿ ಸಂಬಂಧವನ್ನು ಸುಧಾರಿಸಿಕೊಳ್ಳುವುದು ಎರಡೂ ರಾಷ್ಟ್ರಗಳಿಗೆ ಅಗತ್ಯವೂ ಆಗಿದೆ.

ಆಧಾರ: ಪಿಟಿಐ, ಎಎಫ್‌ಪಿ



ಪ್ರಧಾನಿ ನರೇಂದ್ರ ಮೋದಿ ಅವರನ್ನು ಬಾಂಗ್ಲಾದೇಶ ಪ್ರಧಾನಿ ಶೇಕ್ ಹಸೀನಾ ಅವರು ಢಾಕಾ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ಬರಮಾಡಿಕೊಂಡರು

ಚುನಾವಣೆ ಮೇಲೆ ಪ್ರಭಾವ

ಪ್ರಧಾನಿ ನರೇಂದ್ರ ಮೋದಿ ಅವರ ಬಾಂಗ್ಲಾದೇಶದ ಪ್ರವಾಸವು ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಮೇಲೆ ಗಣನೀಯ ಪ್ರಭಾವ ಬೀರಲಿದೆ ಎಂದು ವಿಶ್ಲೇಷಕರು ಅಂದಾಜಿಸಿದ್ದಾರೆ. ಮೋದಿ ಅವರ ಈ ಪ್ರವಾಸದಲ್ಲಿ ಹೆಚ್ಚು ಮಹತ್ವ ಪಡೆದುಕೊಂಡಿರುವುದು ಒರಕಾಂಡಿ ಜಿಲ್ಲೆಯಲ್ಲಿರುವ ಠಾಕೂರ್‌ಬಾರಿ ಭೇಟಿ. ಬಾಂಗ್ಲಾದೇಶದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರಾಗಿರುವ ಹಿಂದೂ ಮತುವಾ ಸಮುದಾಯದವರ ಧಾರ್ಮಿಕ ಕೇಂದ್ರವಿದು.

ಮತುವಾ ಸಮುದಾಯಕ್ಕೆ ವೈಷ್ಣವ ಪಂಥದ ದೀಕ್ಷೆ ನೀಡಿದ್ದ ಶ್ರೀ ಶ್ರೀ ಹರಿಚಂದ್ರ ಠಾಕೂರ್ ಜೀ ಅವರ ದೇವಾಲಯವು ಠಾಕೂರ್‌ಬಾರಿಯಲ್ಲಿದೆ. ಮತುವಾ ಸಮುದಾಯದ ಜನರ ಜತೆ ಮೋದಿ ಅವರು ಇಲ್ಲಿ ಸಂವಾದ ನಡೆಸಲಿದ್ದಾರೆ. ಢಾಕಾಗೆ ಹೊರಡುವ ಮುನ್ನ ಶುಕ್ರವಾರ ಬೆಳಿಗ್ಗೆ ಸಹ ಮೋದಿ ಅವರು, ‘ಮತುವಾ ಸಮುದಾಯದ ಜನರ ಜತೆ ಸಂವಾದ ನಡೆಸಲು ನಾನು ಅತ್ಯಂತ ಕಾತರನಾಗಿದ್ದೇನೆ’ ಎಂದು ಹೇಳಿದ್ದರು.

ಪಶ್ಚಿಮ ಬಂಗಾಳದಲ್ಲೂ ಮತುವಾ ಸಮುದಾಯದ ಜನರು ಭಾರಿ ಸಂಖ್ಯೆಯಲ್ಲಿ ಇದ್ದಾರೆ. 1947ರ ನಂತರ ಬಾಂಗ್ಲಾದಿಂದ ಭಾರತಕ್ಕೆ ಬಂದ ಕೋಟ್ಯಂತರ ಜನರಲ್ಲಿ ಮತುವಾ ಸಮುದಾಯದವರೂ ಇದ್ದಾರೆ. ಹೀಗೆ ಬಾಂಗ್ಲಾದೇಶದಿಂದ ಬಂದಿರುವ ಜನರು ಪಶ್ಚಿಮ ಬಂಗಾಳದ ಉತ್ತರ 24 ಪರಗಣ, ದಕ್ಷಿಣ 24 ಪರಗಣ, ನಾದಿಯಾ, ಸಿಲಿಗುರಿ, ಕೂಚ್‌ಬಿಹಾರಿ, ಜಲಪೈಗುರಿ, ವರ್ಧಮಾನ್ ಜಿಲ್ಲೆಗಳಲ್ಲಿ ನೆಲೆಸಿದ್ದಾರೆ. ಒಟ್ಟು 30 ವಿಧಾನಸಭಾ ಕ್ಷೇತ್ರಗಳಲ್ಲಿ ಮತುವಾ ಜನರು ನಿರ್ಣಾಯಕರಾಗಿದ್ದಾರೆ.

ಈ ಸಮುದಾಯದ ಜನರಿಗೆ ಭಾರತದ ಪೌರತ್ವ ದೊರೆತಿಲ್ಲ. ಪೌರತ್ವ ನೀಡುತ್ತೇವೆ ಎಂದು ಬಿಜೆಪಿ ಘೋಷಿಸಿದ ನಂತರ, 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಬೆಂಬಲಿಸುವುದಾಗಿ ಈ ಸಮುದಾಯದ ನಾಯಕರು ಬಹಿರಂಗವಾಗಿ ಹೇಳಿದ್ದರು. ಪೌರತ್ವ ತಿದ್ದುಪಡಿ ಕಾಯ್ದೆ ಅಡಿಯಲ್ಲಿ ಈ ಸಮುದಾಯದ ಜನರಿಗೆ ಕೇಂದ್ರ ಸರ್ಕಾರವು ಪೌರತ್ವ ನೀಡಲಿದೆ. ‘ಈಗ, ಚುನಾವಣೆ ನಡೆಯುತ್ತಿರುವ ಸಮಯದಲ್ಲೇ ಮೋದಿ ಅವರು ಪಕ್ಕದ ಬಾಂಗ್ಲಾದಲ್ಲಿ ಮತುವಾ ಜನರ ಜತೆ ಸಂವಾದ ನಡೆಸಲಿದ್ದಾರೆ. ಭಾರತದಲ್ಲಿರುವ ಮತುವಾ ಜನರನ್ನು ಓಲೈಸಲೆಂದೇ ಮೋದಿ ಅವರು ಈ ಸಂವಾದ ನಡೆಸುತ್ತಿದ್ದಾರೆ. ಬಾಂಗ್ಲಾಗೆ ಪ್ರಯಾಣ ಆರಂಭಿಸುವ ಮುನ್ನ ಈ ಬಗ್ಗೆ ಬಹಿರಂಗವಾಗಿ ಘೋಷಿಸಿದ್ದಾರೆ. ಇವೆಲ್ಲವೂ ಚುನಾವಣೆಯ ಮೇಲೆ ಪ್ರಭಾವ ಬೀರಲಿದೆ’ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

51 ಶಕ್ತಿಪೀಠಗಳಲ್ಲಿ ಒಂದಾದ ಸುಗಂಧ ಶಕ್ತಿ ಪೀಠಕ್ಕೂ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಲಿದ್ದಾರೆ. ಶಕ್ತಿಯ ಆರಾಧಕರಿಗೆ ಇದು ಅತ್ಯಂತ ಮಹತ್ವದ ತೀರ್ಥ ಕ್ಷೇತ್ರವಾಗಿದ್ದು, ಬಂಗಾಳದ ಕಾಳಿಯ ಆರಾಧಕರು ಪ್ರತಿ ವರ್ಷ ಇಲ್ಲಿಗೆ ಲಕ್ಷಾಂತರ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ಕಾಳಿಯ ಆರಾಧಕರನ್ನು ಓಲೈಸುವ ಉದ್ದೇಶದಿಂದ ಮೋದಿ ಅವರು ಇಲ್ಲಿಗೆ ಭೇಟಿ ನೀಡುತ್ತಿದ್ದಾರೆ ಎಂಬ ಆರೋಪವೂ ಇದೆ.

ಮಹತ್ವದ ಕ್ಷೇತ್ರಗಳಿಗೆ ಮೋದಿ ಭೇಟಿ

ಎರಡು ದಿನದ ಬಾಂಗ್ಲಾ ಪ್ರವಾಸದಲ್ಲಿ ಮೋದಿ ಅವರು ಧಾರ್ಮಿಕವಾಗಿ ಮತ್ತು ಐತಿಹಾಸಿಕವಾಗಿ ಮಹತ್ವ ಪಡೆದಿರುವ ಹಲವು ಕ್ಷೇತ್ರಗಳಿಗೆ ಭೇಟಿ ನೀಡಲಿದ್ದಾರೆ. ಅವುಗಳ ವಿವರ ಇಲ್ಲಿದೆ

1. ಬಂಗಬಂಧು ಸ್ಮಾರಕ: ತುಂಗಿಪಾರಾದಲ್ಲಿ ಇರುವ ಬಂಗಬಂಧು ಸ್ಮಾರಕಕ್ಕೆ ಮೋದಿ ಅವರು ಭೇಟಿ ನೀಡಲಿದ್ದಾರೆ. ಬಾಂಗ್ಲಾದೇಶದ ಪಿತಾಮಹ ಬಂಗಬಂಧು ಶೇಕ್ ಮುಜಿಬುರ್ ರಹಮಾನ್ ಅವರ ಗೋರಿ ಇರುವ ಸ್ಥಳವಿದು. ಇಲ್ಲಿ ಮೋದಿ ಅವರು ರಹಮಾನ್ ಅವರ ಸ್ಮಾರಕಕ್ಕೆ ಗೌರವ ಸಲ್ಲಿಸಲಿದ್ದಾರೆ. 2021, ರಹಮಾನ್ ಅವರ ಜನ್ಮ ಶತಮಾನೋತ್ಸವ ವರ್ಷವೂ ಹೌದು.

2. ರವೀಂದ್ರ ಕುಟೀ ಬಾರಿ: ರವೀಂದ್ರನಾಥ ಟ್ಯಾಗೋರ್ ಅವರ ಮೂಲ ಊರು ಕುಶ್ತಿಯಾದಲ್ಲಿ, ಅವರ ಅಜ್ಜ ದ್ವಾರಕನಾಥ ಟ್ಯಾಗೋರ್ ಅವರು ನಿರ್ಮಿಸಿದ್ದ ಕುಟೀರವಿದೆ. ಈ ಸ್ಥಳಕ್ಕೆ ಮೋದಿ ಭೇಟಿ ನೀಡಲಿದ್ದಾರೆ. ರವೀಂದ್ರನಾಥ ಟ್ಯಾಗೋರ್ ಅವರು ಈ ಕುಟೀರದಲ್ಲಿ ಹಲವು ವರ್ಷಗಳನ್ನು ಕಳೆದಿದ್ದಾರೆ. ಗೀತಾಂಜಲಿಯ ಹಲವು ಪದ್ಯಗಳನ್ನು ಇಲ್ಲಿಯೇ ರಚಿಸಿದ್ದರು. ಗೀತಾಂಜಲಿಯನ್ನು ಇಲ್ಲಿಯೇ ಇಂಗ್ಲಿಷ್‌ಗೆ ಭಾಷಾಂತರಿಸಿದ್ದರು.

3. ಬಾಘಾ ಜತಿನ್ ಸ್ಮಾರಕ: ಬಂಗಾಳದ ಸ್ವಾತಂತ್ರ್ಯ ಹೋರಾಟಗಾರ ಜತಿಂದರ್‌ನಾಥ್ ಮುಖರ್ಜಿ ಅವರ ಪೂರ್ವಜರ ಮನೆ ಇರುವ ಸ್ಮಾರಕಕ್ಕೆ ಮೋದಿ ಭೇಟಿ ನೀಡಲಿದ್ದಾರೆ. ಪಶ್ಚಿಮ ಬಂಗಾಳ ಮತ್ತು ಬಾಂಗ್ಲಾದೇಶ ಎರಡಕ್ಕೂ ಬಾಘಾ ಜತಿನ್ ಅವರು ಅತ್ಯಂತ ಮಹತ್ವದ ನಾಯಕರಾಗಿದ್ದಾರೆ. ಲಾರ್ಡ್ ಕರ್ಜನ್ ವಿರುದ್ಧ ಹೋರಾಟಗಾರರಿಗೆ ತರಬೇತಿ ನೀಡಲು ಬಾಘಾ ಜತಿನ್ ಅವರು ಪಡೆಯೊಂದನ್ನು ಕಟ್ಟಿದ್ದರು. ಇವರಲ್ಲಿ ತರಬೇತಿ ಪಡೆದ ಸಾವಿರಾರು ಜನರು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗಿಯಾಗಿದ್ದರು.

4. ಯುದ್ಧ ಸ್ಮಾರಕ: 1971ರ ಬಾಂಗ್ಲಾ ವಿಮೋಚನಾ ಯುದ್ಧದಲ್ಲಿ ಹುತಾತ್ಮರಾದ ಯೋಧರ ಸ್ಮಾರಕಕ್ಕೆ ಮೋದಿ ಅವರು ಶುಕ್ರವಾರ ಭೇಟಿ ನೀಡಿದ್ದಾರೆ. ಹುತಾತ್ಮರಿಗೆ ಗೌರವ ಸಲ್ಲಿಸಿದ್ದಾರೆ.



ಕೆಟ್ಟದರ ದಹನವೇ ಕಾಮನಹಬ್ಬ

ಪುರಾವೆ ಇಲ್ಲದವು ಪುರಾಣವಾಗುತ್ತವೆ. ವಿಚಾರ ಇರುವವು ವಿಜ್ಞಾನವಾಗುತ್ತವೆ. ಅಂತೆಯೇ, ಕಲ್ಪನೆ ಇಲ್ಲದೆ ವಿಚಾರ ಹುಟ್ಟಲಾರದು, ವಿಚಾರವಿಲ್ಲದೆ ಜ್ಞಾನ ಬೆಳೆಯಲಾರದು. ಹೇಗೆ ಪಥ್ಯಬೋಧನೆಯೊಂದಿಗೆ ಪ್ರಯೋಗಶೀಲತೆಯೂ ಬೇಕೋ ಹಾಗೆಯೇ ಧರ್ಮ ಮತ್ತು ವಿಜ್ಞಾನ ಎರಡು ಮಿಳಿತವಾದಾಗಲೇ ಉತ್ತಮ ಫಲಿತಾಂಶ. ಧರ್ಮದಲ್ಲಿ ವಿಜ್ಞಾನವಿರಬೇಕು. ವಿಜ್ಞಾನದಲ್ಲಿ ಧರ್ಮವೂ ಇರಬೇಕು. ಧರ್ಮ ನೀತಿಮಾರ್ಗವಾದರೆ, ವಿಜ್ಞಾನ ವಿಕಾಸದ ಮಾರ್ಗ. ಅದು ವಿಕಾರಮಾರ್ಗವಾಗದಿರಲು ಧರ್ಮ ಕಡಿವಾಣವಾಗಬೇಕು. ಅದಕ್ಕಾಗಿ ಯಾರೂ ಭಗವಂತನಲ್ಲಿ ಭಕ್ತಿ (ಒಳ್ಳೆತನದಲ್ಲಿ ನಂಬಿಕೆ) ಇಡುವರೋ, ಅವರು ಜೀವನದಲ್ಲಿ ಮುಕ್ತಿ (ಉತ್ತಮ ಸಾಧನೆ) ಹೊಂದುತ್ತಾರೆ.

ಧರ್ಮ ಎಂದರೆ, ನಮ್ಮ ಬದುಕಿಗಿರುವ ನೈತಿಕ ಚೌಕಟ್ಟು. ವಿಜ್ಞಾನ ಎಂದರೆ ತಿಳಿವಳಿಕೆ. ಅದು ನಮ್ಮ ಸಾಧನೆಗಿರುವ ಪ್ರಯೋಗಶೀಲ ಮಾರ್ಗ. ನಾವು ಬದುಕುವ ರೀತಿಯನ್ನು ಕಲಿಯುವ ಪಥ್ಯ ಧರ್ಮವಾದರೆ, ಅದರಂತೆ ತಿಳಿವಳಿಕೆಯಿಂದ ಬದುಕುವುದು ವಿಜ್ಞಾನ. ಹೀಗಾಗಿ ಧರ್ಮ ಜ್ಞಾನಮಾರ್ಗವಾದರೆ, ವಿಜ್ಞಾನ ಕರ್ಮಮಾರ್ಗ. ಧರ್ಮ ಸರಿಯಾಗಿ ಅರ್ಥೈಸದಿದ್ದರೆ, ಕರ್ಮ ಹಾದಿ ತಪ್ಪುತ್ತದೆ. ಈಗ ಜಗತ್ತಿನಲ್ಲಿ ಆಗುತ್ತಿರುವ ಪ್ರಮಾದಕ್ಕೆ, ಮಾನವರ ತಲ್ಲಣಗಳಿಗೆ ಇದೇ ಕಾರಣವಾಗಿದೆ. ನಮ್ಮ ಧರ್ಮ ಹೇಳಿದ ಅದೆಷ್ಟೋ ಸೂಕ್ಷ್ಮವಿಚಾರಗಳನ್ನು ಮಾನವರು ಅರ್ಥೈಸದೆ, ಅರ್ಥೈಸಿದರೂ ಅನುಸರಿಸದೆ ತಪ್ಪು ಮಾಡುತ್ತಾ ಬಂದಿದ್ದಾರೆ. ನಮ್ಮ ಹಬ್ಬ-ಆಚರಣೆಗಳು ಆಮೋದ-ಪ್ರಮೋದಗಳಿಗಲ್ಲ, ಅವು ವಿಚಾರ ಮಂಡಿಸುವ, ಚಿಂತನ ನಡೆಸುವಂಥವು ಅನ್ನೋದು ನಮಗಿನ್ನೂ ಅರ್ಥವಾಗಿಲ್ಲ.

ಸೃಷ್ಟಿಯುಗದಲ್ಲಿ ಸತಿ ಆತ್ಮಹತ್ಯೆಯಿಂದ ವಿರಾಗಿಯಾದ ಶಿವನಿಗೆ, ಕಾಮೋತ್ತೇಜನ ಚುಚ್ಚಿದ ಮನ್ಮಥ ಸುಟ್ಟು ಭಸ್ಮವಾದ ಕಾಮನಹಬ್ಬದ ಆಚರಣೆ ಹಿಂದೆ ಒಂದು ತಿಳಿವಳಿಕೆ ಇದೆ. ಬೇಸಿಗೆಯಲ್ಲಿ ಹರಡುವ ಸಾಂಕ್ರಾಮಿಕ ರೋಗಗಳನ್ನು ತಡೆಯಲು, ಕೊಳೆಯ ವಸ್ತುಗಳನ್ನು ಸುಡುವ ಸೂಕ್ಷ್ಮ ತಿಳಿವಳಿಕೆಯೂ ಇದರಲ್ಲಿದೆ. ಇಲ್ಲಿ ಕಾಮ ಅಂದರೆ ಆಸೆ. ಸಲ್ಲದ ಆಸೆಯನ್ನು ಹುಟ್ಟಿಸುವ ಮದೋನ್ಮತ್ತರನ್ನು ನಿಗ್ರಹಿಸಿ, ಸಜ್ಜನಿಕೆ ಕಾಪಾಡುವುದೇ ಕಾಮದಹನ. ಸತ್ಯಯುಗದಲ್ಲಿ ಶ್ರೀಮನ್ನಾರಾಯಣನ ಭಕ್ತಿಯಿಂದ ಪುನೀತನಾದ ಪ್ರಹ್ಲಾದ ಬೆಂಕಿಯಂಥ ರಾಕ್ಷಸಿಯೊಂದಿಗಿದ್ದರೂ ಸುಟ್ಟು ಹೋಗಲಿಲ್ಲ. ಏಕೆಂದರೆ ಒಳ್ಳೆಯದರಲ್ಲಿ ನಂಬಿಕೆ ಇದ್ದವರಿಗೆ, ಕೆಟ್ಟವರೊಂದಿಗೆ ಇದ್ದರೂ ಕೆ(ಸು)ಟ್ಟು ಹೋಗುವುದಿಲ್ಲ. ಈ ‘ಸತ್ಯಸಾರ’ (ಬಣ್ಣ)ವನ್ನ ಎಲ್ಲರಿಗೂ ಮನಮುಟ್ಟುವಂತೆ ತಿಳಿಸಲು ಆಚರಿಸುವುದೇ (ಎರಚುವುದೇ) ಓಕುಳಿ ಹಬ್ಬದ ವೈಶಿಷ್ಟ್ಯ.


ಮನುಷ್ಯನ ಆಸೆಗಳಲ್ಲೇ ಕಾಮದ ಆಸೆ ಬಹಳ ದೊಡ್ಡದು. ಕಾಮದಾಸೆಗೆ ಬಹಳ ಬೇಗ ತುತ್ತಾಗುತ್ತಾರೆ. ಇಂಥ ಆಸೆಗೆ ದುರಹಂಕಾರ ಮೆತ್ತಿಕೊಂಡರೆ ಮದೋನ್ಮತ್ತರಾಗುತ್ತಾರೆ. ಕಾಮಕ್ಕೆ ಕಣ್ಣೂ ಇಲ್ಲ-ಕಿವಿಯೂ ಇಲ್ಲ, ಹೃದಯ ವಂತೂ ಇರುವುದೇ ಇಲ್ಲ. ಇಂಥ ದುರವಸ್ಥೆಯ ಕಾಮಕ್ಕೆ ಸೌಂದರ್ಯಮದ, ಶ್ರೀಮಂತಿಕೆಯ ಮದ ಸೇರಿಕೊಂಡರೆ ರಾಕ್ಷಸರಾಗುತ್ತಾರೆ. ವರ್ಣಭೇದ-ಹಣಭೇದದಲ್ಲಿ ತೊಡಗುವವರು ತಮಗಿಂತ ರೂಪ-ಹಣದಲ್ಲಿ ಕಡಿಮೆ ಇರುವವರನ್ನ ಅಸ್ಪೃಶ್ಯರಂತೆ ನೋಡುತ್ತಾರೆ. ಕಪ್ಪು ವರ್ಣಿಯನಾಗಿ, ಗೊಲ್ಲಕುಲದವನಾಗಿ ಇಂಥ ಅನಿಷ್ಟ ಕಂಡಿದ್ದ ಶ್ರೀಕೃಷ್ಣ, ದ್ವಾಪರಯುಗದಲ್ಲಿ ವರ್ಣಭೇದ-ಹಣಭೇದಗಳನ್ನು ತೊಡೆಯಲು ಹೋಳಿ ಹಬ್ಬವನ್ನು ಜಾರಿಗೆ ತಂದ.


ಮುಖ ನೋಡಿ ಮಣೆ ಹಾಕುವ ಮನುಷ್ಯನ ತಾರತಮ್ಯವನ್ನು ಅಳಿಸಿ, ನಾವೆಲ್ಲಾ ಒಂದೇ ಅಂತ ಮನುಷ್ಯರಲ್ಲಿ ಸಾಮರಸ್ಯ ಮೂಡಿಸುವ ಹೋಳಿ ಹಬ್ಬ ಕೇವಲ ಒಂದು ದಿನಕ್ಕೆ ಸೀಮಿತವಾಗಬಾರದು. ನಿತ್ಯ ನಮ್ಮ ಬಾಳಿನಲ್ಲಿ ಅಳವಡಿಸಿಕೊಂಡು ಸೌಹಾರ್ದಯುತವಾಗಿ ಬದುಕಬೇಕು. ನಮ್ಮಲ್ಲಿನ ಕೆಟ್ಟತನವನ್ನು ದಹಿಸಿ, ಒಳ್ಳೆತನ ಬೆಳೆಸುವುದೇ ಹೋಳಿ ಹಬ್ಬದ ತತ್ವ. ಸರ್ವರೂ ತಮ್ಮ ಮನೆ-ಮನದೊಳಗಿರುವ ಕೆಟ್ಟದ್ದಕ್ಕೆ ಬೆಂಕಿ ಇಟ್ಟು, ಉತ್ತಮ ಭಾವ(ಬಣ್ಣ)ವನ್ನು ಮನೆ-ಮನದೊಳಗೆ ಪರಸ್ಪರ ಹಂಚಿಕೊಂಡಾಗ ಭವದಲ್ಲಿ ಮೂಡುವ ನೆಮ್ಮದಿ ಭಾವವೇ ‘ಸಚ್ಚಿದಾನಂದ’ಭಾವ.

ಸುಯೆಜ್ ಸಂಚಾರ ಸ್ಥಗಿತ

ಸುಯೆಜ್ ಕಾಲುವೆಯಲ್ಲಿ ಎವರ್‌ಗ್ರೀನ್ ಕಂಪನಿಯ ಎವರ್ ಗಿವೆನ್ ಬೃಹತ್ ಕಂಟೇನರ್ ಹಡಗು ಸಿಲುಕಿಕೊಂಡಿರುವುದರಿಂದ, ನಾಲ್ಕು ದಿನಗಳಿಂದ ಕಾಲುವೆಯಲ್ಲಿ ಹಡಗು ಸಂಚಾರ ಸ್ಥಗಿತವಾಗಿದೆ. ವಿಶ್ವದ ಅತ್ಯಂತ ದಟ್ಟಣೆಯ ಸಮುದ್ರಮಾರ್ಗವಾದ ಸುಯೆಜ್ ಕಾಲುವೆ ಸ್ಥಗಿತವಾಗಿರುವ ಕಾರಣ, ಜಾಗತಿಕ ಮಟ್ಟದಲ್ಲಿ ವಾಣಿಜ್ಯ ವಹಿವಾಟಿನ ಮೇಲೆ ಭಾರಿ ಪರಿಣಾಮ ಬೀರಿದೆ. ಎಲ್ಲಕ್ಕಿಂತ ಮುಖ್ಯವಾಗಿ ವಿಶ್ವದ ಬಹುತೇಕ ರಾಷ್ಟ್ರಗಳಿಗೆ ಕಚ್ಚಾತೈಲ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಸುಯೆಜ್ ಕಾಲುವೆಯಲ್ಲಿ ಹಡಗು ಸಂಚಾರ ಆರಂಭವಾಗಲು ಇನ್ನೂ ಒಂದೆರಡು ವಾರಗಳು ಬೇಕಾಗಬಹುದು







ಆಗಿದ್ದೇನು?


ಮೆಡಿಟರೇನಿಯನ್ ಸಮುದ್ರದಿಂದ ಕೆಂಪು ಸಮುದ್ರದ ಕಡೆಗೆ ಬರುತ್ತಿದ್ದ ಎವರ್ ಗಿವೆನ್ ಹಡಗು, ಸುಯೆಜ್ ಕಾಲುವೆಯ ದಕ್ಷಿಣದ ತುದಿಯಲ್ಲಿ ಕೆಟ್ಟು ನಿಂತಿದೆ. ಇದೇ ವೇಳೆ ಬಿರುಗಾಳಿ ಬೀಸಿದ ಕಾರಣ, ಹಡಗಿನ ಮುಂಭಾಗ ದಕ್ಷಿಣದ ಕಡೆಗೆ, ಹಿಂಭಾಗ ಉತ್ತರದ ಕಡೆಗೆ ತೇಲಿದೆ. ಇದನ್ನು ನಿಯಂತ್ರಿಸಲು ಸಾಧ್ಯವಾಗದ ಕಾರಣ ಹಡಗು ಕಾಲುವೆಗೆ ಅಡ್ಡವಾಗಿ ನಿಂತಿದೆ. ಆದರೆ, ಹಡಗಿನ ಮುಂಭಾಗ ಮತ್ತು ಹಿಂಭಾಗವು ಕಾಲುವೆಯ ಅಂಚಿನಲ್ಲಿ ಇರುವ ಮರಳಿನಲ್ಲಿ ಸಿಲುಕಿಕೊಂಡಿದೆ. ಮರಳಿನಿಂದ ಅದನ್ನು ಬಿಡಿಸಲು ಸಾಧ್ಯವಾಗುತ್ತಿಲ್ಲ. ಕಾಲುವೆ ಸಂಪೂರ್ಣವಾಗಿ ಬಂದ್ ಆಗಿದೆ.

400 ಮೀಟರ್ ಹಡಗಿನ ಉದ್ದ | **2** ಲಕ್ಷ ಟನ್ ಹಡಗಿನ ತೂಕ | **22,000** ಹಡಗಿನಲ್ಲಿರುವ ಕಂಟೇನ್‌ನಗಳ ಸಂಖ್ಯೆ

ತೆರವು ಕಾರ್ಯಾಚರಣೆ

ಮರಳಿನಲ್ಲಿ ಸಿಲುಕಿರುವ ಎವರ್‌ಗ್ರೀನ್ ಹಡಗನ್ನು, ಬಿಡಿಸಲು ನಡೆಸುತ್ತಿರುವ ಕಾರ್ಯಾಚರಣೆಗಳು ವಿಫಲವಾಗಿವೆ. ಹಡಗನ್ನು ಕಾಲುವೆಯ ಮಧ್ಯಕ್ಕೆ ಎಳೆದು ತರಲು, ಭಾರಿ ಸಾಮರ್ಥ್ಯದ ಆರು ಟಗ್‌ಬೋಟ್‌ಗಳನ್ನು ಬಳಸಲಾಗುತ್ತಿದೆ. ಆದರೆ, ಹಡಗು ಸ್ವಲ್ಪವೂ ಸರಿದಿಲ್ಲ.

- ಹಡಗು ಸಿಲುಕಿರುವ ಸ್ಥಳದಲ್ಲಿ, ಕಾಲುವೆಯ ಅಡಿಯಲ್ಲಿ ಇರುವ ಮರಳನ್ನು ಹೊರತೆಗೆಯಲಾಗುತ್ತಿದೆ
- ಈವರೆಗೆ 20,000 ಘನ ಮೀಟರ್‌ನಷ್ಟು ಮರಳನ್ನು ಅಲ್ಲಿಂದ ಹೊರಗೆ ತೆಗೆಯಲಾಗಿದೆ
- ಇನ್ನೂ ಒಂದೆರಡು ವಾರಗಳವರೆಗೆ ಕಾರ್ಯಾಚರಣೆ ನಡೆಯುವ ಸಾಧ್ಯತೆ ಇದೆ



10,300 ಕಿ.ಮೀ. ಸುಯೆಜ್ ಕಾಲುವೆ ಮಾರ್ಗ

18,190 ಕಿ.ಮೀ. ಕೇಪ್ ಆಫ್ ಗುಡ್ ಹೋಪ್ ಮಾರ್ಗ

ಹಡಗಿನ ಕ್ಯಾಪ್ಟನ್ ಸೇರಿದಂತೆ ಎಲ್ಲಾ ಸಿಬ್ಬಂದಿಯೂ ಭಾರತೀಯರೇ ಆಗಿದ್ದಾರೆ. ಅವಘಡದಲ್ಲಿ ಯಾರಿಗೂ ಅಪಾಯವಾಗಿಲ್ಲ, ಸುರಕ್ಷಿತವಾಗಿದ್ದಾರೆ ಎಂದು ಎವರ್‌ಗ್ರೀನ್ ಕಂಪನಿ ತಿಳಿಸಿದೆ

ಪರಿಣಾಮಗಳು

ಕಾಲುವೆ ಸಂಪೂರ್ಣವಾಗಿ ಬಂದ್ ಆಗಿರುವ ಕಾರಣ ಸಂಚಾರ ಸ್ಥಗಿತವಾಗಿದೆ. ಹಡಗು ಸಿಲುಕಿದ್ದರೂ, ಉತ್ತರದ ಕಡೆಯಿಂದ ಹಲವು ಹಡಗುಗಳು ಕಾಲುವೆ ಪ್ರವೇಶಿಸಿವೆ. ಅವು ಹಿಂದಕ್ಕೂ ಹೋಗಲಾರದೆ, ಮುಂದಕ್ಕೂ ಹೋಗಲಾರದೆ ಸಿಲುಕಿಕೊಂಡಿವೆ. ಬೇರೆ ಹಡಗುಗಳು ಆಫ್ರಿಕಾವನ್ನು ಬಳಸಿ ಪ್ರಯಾಣ ಆರಂಭಿಸಿವೆ.

213 ಕಾಲುವೆಯ ಎರಡೂ ಬದಿಯಲ್ಲಿ ನಿಂತಿರುವ ಹಡಗುಗಳ ಸಂಖ್ಯೆ

12-14 ದಿನಗಳು ಆಫ್ರಿಕಾವನ್ನು ಬಳಸಿ ಹೋಗಲು ಹಡಗುಗಳಿಗೆ ಬೇಕಿರುವ ಹೆಚ್ಚುವರಿ ಸಮಯ

ಆಧಾರ: ರಾಯಿಟರ್ಸ್, ಬಿಬಿಸಿ, ಎಎಫ್‌ಪಿ

ಕಚ್ಚಾತೈಲ ಬೆಲೆ ಏರಿಕೆ


ಮಧ್ಯಪ್ರಾಚ್ಯ ದೇಶಗಳಿಂದ ವಿಶ್ವದ ವಿವಿಧೆಡೆಗೆ ಹೋಗಬೇಕಿರುವ ತೈಲವಾಹಕ ಹಡಗುಗಳು ಕಾಲುವೆಯಲ್ಲಿ ಸಿಲುಕಿವೆ. ಅಲ್ಲದೆ, ಹಲವು ಹಡಗುಗಳು ಆಫ್ರಿಕಾವನ್ನು ಬಳಸಿ ಪ್ರಯಾಣ ಆರಂಭಿಸಿರುವ ಕಾರಣ ಕಚ್ಚಾತೈಲ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ನಿಗದಿತ ಅವಧಿಯಲ್ಲಿ ಯಾವ ದೇಶಕ್ಕೂ ತೈಲ ಪೂರೈಕೆಯಾಗುತ್ತಿಲ್ಲ. ಇದರಿಂದ ಕಚ್ಚಾತೈಲದ ಕೊರತೆ ಆರಂಭವಾಗಿದೆ. ಕೊರತೆಯ ಕಾರಣ ಕಚ್ಚಾತೈಲದ ಬೆಲೆ ಏರಿಕೆಯಾಗಿದೆ. ಈಗ ಹಡಗುಗಳ ಸಂಚಾರದ ದೂರ ಏರಿಕೆ ಆಗುವ ಕಾರಣ, ಕಚ್ಚಾತೈಲ ಪೂರೈಕೆಯ ವೆಚ್ಚವೂ ಏರಿಕೆಯಾಗಲಿದೆ. ಅಂತಿಮವಾಗಿ ಭಾರತವೂ ಸೇರಿದಂತೆ, ವಿಶ್ವದ ಹಲವು ದೇಶಗಳಲ್ಲಿ ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಮತ್ತು ನೈಸರ್ಗಿಕ ಅನಿಲದ ಬೆಲೆಯಲ್ಲಿ ಏರಿಕೆಯಾಗಲಿದೆ

6% ಮೂರು ದಿನಗಳಲ್ಲಿ ಕಚ್ಚಾತೈಲದ ಬೆಲೆಯಲ್ಲಿ ಆಗಿರುವ ಏರಿಕೆಯ ಪ್ರಮಾಣ

30 ಸುಯೆಜ್ ಕಾಲುವೆಯಲ್ಲಿ ಸಿಲುಕಿರುವ ಕಚ್ಚಾತೈಲ ಟ್ಯಾಂಕರ್‌ಗಳು



ಗುಂಡಣ್ಣ



ದಿನ ಭವಿಷ್ಯ

ಶನಿವಾರ 27 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಉತ್ತರಭಾದ್ರ ಚತುರ್ದಶೀ ಗಂ. 50-32 (ರಾ. 2-38) ಶನಿವಾರ ನಿತ್ಯ ನಕ್ಷತ್ರ ಪೂರ್ವಫಲ್ಗುಣಿ ಗಂ. 30-55 (ಸಾ. 6-48) ಗಂಡ ನಾಮ ಯೋಗ ಗಂ 46-18 ಗರಜ ಕರಣ ಗಂ. 22-17 ವಿಷ ಗಂ. 48-16 ಅಮೃತ ಗಂ. 14-44 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ: 6-24 ಸೂರ್ಯಾಸ್ತ: 6-27 ಅದೃಷ್ಟ ಸಂಖ್ಯೆ 2 6

ಮೇಷ: ಅನಿರೀಕ್ಷಿತ ವ್ಯಕ್ತಿಯೊಬ್ಬರ ಭೇಟಿ. ಹಿರಿಯರ ಮಾತುಗಳಿಂದಾಗಿ ವ್ಯವಹಾರಗಳಲ್ಲಿ ಅನುಕೂಲ. ವಿದ್ಯಾರ್ಥಿಗಳಿಗೆ ವಿಶೇಷ ಅಧ್ಯಯನ ತಂಡದ ನೇತೃತ್ವ ವಹಿಸುವ ಸಾಧ್ಯತೆ. ಅನಿರೀಕ್ಷಿತ ಪ್ರಯಾಣದಿಂದಾಗಿ ಖರ್ಚು.

ವೃಷಭ: ವ್ಯಾಪಾರದ ಅಭಿವೃದ್ಧಿಗಾಗಿ ಚಿಂತನೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ. ವ್ಯಾಪಾರೋದ್ಯಮದಲ್ಲಿ ಎಚ್ಚರಿಕೆಯಿಂದಿರಬೇಕಾದುದು ಅನಿವಾರ್ಯ. ಗೃಹ ನಿರ್ಮಾಣ ಕಾರ್ಯಗಳಲ್ಲಿ ಯಶಸ್ಸು.

ಮಿಥುನ: ಸರ್ಕಾರಿ ಉದ್ಯೋಗಿಗಳಿಗೆ ಕೆಲಸದಲ್ಲಿನ ಒತ್ತಡ ಕೊಂಚ ಕಡಿಮೆಯಾಗಲಿದೆ. ಆರೋಗ್ಯದಲ್ಲಿ ಏರುಪೇರಾಗುವ ಲಕ್ಷಣ. ಮಹಿಳೆಯರಿಗೆ ಆಭರಣದ ವಿಷಯದಲ್ಲಿ ಎಚ್ಚರಿಕೆ ಅಗತ್ಯ. ಬರವಣಿಗೆಯಿಂದ ಕೀರ್ತಿಲಾಭ.

ಕರ್ಕಾಟಕ: ಮಹಿಳೆಯರಿಗೆ ಮಾನಸಿಕ ಇಷ್ಟಾರ್ಥಗಳು ನೆರವೇರಲಿವೆ. ಕುಟುಂಬದವರೊಂದಿಗೆ ಧಾರ್ಮಿಕ ಕ್ಷೇತ್ರ ದರ್ಶನ. ಹಮ್ಮಿಕೊಂಡಿರುವ ಕೆಲಸ ಕಾರ್ಯಗಳಲ್ಲಿ ಯಶಸ್ಸು. ಲೇವಾದೇವಿ ವ್ಯವಹಾರದಲ್ಲಿ ವಿಶೇಷ ಲಾಭ.

ಸಿಂಹ: ಸಾಮಾಜಿಕ ಕೆಲಸಗಳಲ್ಲಿ ತೊಡಗಿಕೊಳ್ಳಲಿದ್ದೀರಿ. ಧಾರ್ಮಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವ ಸಾಧ್ಯತೆ. ಸಾಮಾಜಿಕ ಗೌರವಾದರಗಳು ಪ್ರಾಪ್ತಿ. ಬಹುದಿನಗಳ ಬೇಡಿಕೆಗಳು ಈಡೇರುವ ಸಾಧ್ಯತೆ ಇದೆ.

ಕನ್ಯಾ: ಕೆಲಸದ ಒತ್ತಡದಿಂದಾಗಿ ಮಾನಸಿಕ ಗೊಂದಲ. ಹೊಸ ಯೋಜನೆಗಳು ಕಾರ್ಯರೂಪಕ್ಕೆ ತರುವ ಬಗ್ಗೆ ಚರ್ಚೆ. ರಾಜಕೀಯದಲ್ಲಿ ಯಶಸ್ಸು. ನ್ಯಾಯಾಲಯದಲ್ಲಿನ ಕಟ್ಲೆಗಳು ಅನುಕೂಲಕರವಾಗಲಿದೆ.

ತುಲಾ: ಅಪೇಕ್ಷಿತರಿಗೆ ಸಂತಾನ ಪ್ರಾಪ್ತಿ. ಯಂತ್ರೋಪಕರಣಗಳ ಖರೀದಿ ಅಥವಾ ರಿಪೇರಿಗಾಗಿ ಹೆಚ್ಚಿನ ವೆಚ್ಚ. ಪ್ರತಿಭಾವಂತ ಮಹಿಳೆಯರಿಗೆ ಉತ್ತಮ ಪ್ರೋತ್ಸಾಹ ದೊರಕಲಿದೆ.

ವೃಶ್ಚಿಕ: ಕೆಲಸ ಕಾರ್ಯಗಳಲ್ಲಿ ಯಶಸ್ಸು. ಹೊಸದೊಂದು ಉದ್ಯಮ ಪ್ರಾರಂಭಿಸುವ ಕಾರ್ಯದಲ್ಲಿ ತಲ್ಲೀನರಾಗುವಿರಿ. ಬಹುಕಾಲದ ಬಯಕೆಗಳು ಈಡೇರುವ ಸಾಧ್ಯತೆ. ದೂರದ ಪ್ರಯಾಣವೊಂದಕ್ಕೆ ಸಂಕಲ್ಪ.

ಧನು: ಸಾರ್ವಜನಿಕರ ಕೆಲಸ ಕಾರ್ಯಗಳಲ್ಲಿ ಯಶಸ್ಸು. ವ್ಯವಹಾರದಲ್ಲಿ ಪ್ರಗತಿ ಕುಂಠಿತ. ದಾಂಪತ್ಯ ಜೀವನವು ಸುಖಮಯವಾಗಲಿದೆ. ಅನಿರೀಕ್ಷಿತ ಪ್ರಯಾಣವೊಂದು ಮಾಡಬೇಕಾದೀತು.

ಮಕರ: ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಳ್ಳುವಂತೆ ಒತ್ತಡ. ಕೆಲಸ ಕಾರ್ಯಗಳಲ್ಲಿ ಮನೆಯವರ ಸಹಕಾರ. ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಪ್ರಗತಿ. ಆರೋಗ್ಯದ ಬಗ್ಗೆ ನಿಗಾ ಇರಲಿ.

ಕುಂಭ: ವೃತ್ತಿಯಲ್ಲಿ ಅಮಿತ ಒತ್ತಡ ಉಂಟಾಗಲಿದ್ದು ತಾಳ್ಮೆಯಿಂದ ವ್ಯವಹರಿಸುವುದು ಅವಶ್ಯಕ. ಸಂಶಯ ಪ್ರವೃತ್ತಿಯಿಂದಾಗಿ ಸಂಕಷ್ಟ. ಬಂಧುಗಳ ನೆರವಿನಿಂದ ಸಮಸ್ಯೆಗಳ ಪರಿಹಾರ.

ಮೀನ: ಸಹೋದ್ಯೋಗಿಗಳೊಂದಿಗೆ ಉಂಟಾಗಿದ್ದ ಮನಃಸ್ತಾಪ ದೂರ. ವೃತ್ತಿಯಲ್ಲಿನ ಸಮಸ್ಯೆಗಳನ್ನು ಸೂಕ್ತ ರೀತಿಯಲ್ಲಿ ಬಗೆಹರಿಸಿಕೊಳ್ಳುವಿರಿ. ಸಂಗಾತಿಯ ಸಂಪೂರ್ಣ ಸಹಕಾರ ಲಭ್ಯವಾಗಲಿದೆ.

ನಿಮ್ಮ ಜನ್ಮದಿನ 27-ಮಾರ್ಚ್ ಈ ದಿನವು ಅತ್ಯಂತ ಶುಭಕರವಾಗಿದ್ದು, ರಾಜಕೀಯ ಕ್ಷೇತ್ರದಲ್ಲಿ ಬೆಳವಣಿಗೆ ಸಾಧಿಸಲಿದ್ದೀರಿ. ಸಮಾಜದ ಏಳ್ಗೆಗಾಗಿ ಕೈಗೊಂಡ ಕಾರ್ಯಗಳಲ್ಲಿ ಸ್ವಲ್ಪಮಟ್ಟಿನ ವಿರೋಧ ಎದುರಿಸಬೇಕಾಗುವುದು. ಉತ್ತಮ ಕೆಲಸಗಳನ್ನು ಕೈಗೆತ್ತಿಕೊಂಡು ನಿಧಾನವಾಗಿ ಯಶಸ್ಸನ್ನು ಸಾಧಿಸಲಿದ್ದೀರಿ.


ಪದಬಂಧ 4549 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ಗುಳೆ ಹೋಗುವುದು (3)
4.ಮಠದ ಹತ್ತಿರ ಕಾಣಿಸಿದ ಆಮೆ (3)
5.ಕೊನೆಗೆ ವಿಕ್ರಯಿಸಿ ಮೋಸ ಹೋಗು (3)
6.ದನಕ್ಕಾಗಿಯೇ ನಡೆದ ಯುದ್ಧ (3)
8.ಕಳೆಯುವ ಲೆಕ್ಕವಿದು (5)
10.ಮುಳ್ಳುಗಳ ನಡುವೆ ಅರಳುವ ಹೂವು (3)
12.ವೃಕ್ಷದ ಬಳಿ ಸಂಭವಿಸಿದ ಸಾವು (3)
13.ಜಡಿಮಳೆಯಲ್ಲಿ ತಂದಿರುವ ವಂದರಿ (3)
15.ನದಿ ಇಲ್ಲಿದೆ (3)

ಮೇಲಿಂದ ಕೆಳಕ್ಕೆ

1.ಆದಿ ಎಂಬರ್ಥವೂ ಬರುವ ಹುಟ್ಟು (2)
2.ವಾಮಮಾರ್ಗದಲ್ಲಿ ಎಡಭಾಗವನ್ನು ನೋಡಿ! (2)
3.ತರ್ಕ ಮಾಡುತ್ತಿರುವ ವ್ಯಾಪಾರಿ (3)
4.ಹಸುವಿನ ಮರಿಯಿದು (2)
5.ಎಲ್ಲರನ್ನೂ ಒಂದುಗೂಡಿಸುವುದು (5)
7.ವ್ಯವಧಾನದಲ್ಲೇ ನೋಡಿ, ಇದು ಹೊಸದು (2)
9.ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ (2)
11.ಸೂರ್ಯನ ಕಾವು ಇಲ್ಲಿದೆ (3)
12.ಮಹಡಿಯಲ್ಲಿರುವ ನೈರ್ಮಲ್ಯ! (2)
14.ಬೆಲೆ ಬಾಳುವ ಮಣಿ (2)
16.ನಲ್ಲಿಯ ಹತ್ತಿರವಿರುವ ಏಡಿ (2)



4548ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮಲಯಜ 3.ಹಸನ್ಮುಖಿ 5.ಗಜ್ಜರಿ 6.ತಾರುಮಾರು 7.ರಿಯಾಯಿತಿ 9.ತರದೂದು 11.ಸಡಗರ 13.ಚಾಕರ 14.ಜವಾಹಿರಿ 15.ಸದ್ಭಾವನೆ

ಮೇಲಿಂದ ಕೆಳಕ್ಕೆ: 2.ಜಗದ್ಗುರು 3.ಹರಿದಾರಿ 4.ಖಗ 6.ತಾಯಿತ 8.ತಿಮಿರ 10.ದುರಾಚಾರಿ 11.ಸಮರಸ 12.ಹುಂಜ

ಸುಡೊಕು 4935

4		3		2		6		1
	6						9	
	7			3			4	8
	4		3		1		7	
1	3	7				4		5
			4		7		1	
	2		5				3	
6		9				5		4
	5				2		8	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4534 ಸುಡೊಕು

3	2	6	5	8	4	9	7	1
7	9	8	1	2	3	5	6	4
5	4	1	9	7	6	3	2	8
6	7	3	8	1	5	2	4	9
4	5	2	7	6	9	1	8	3
8	1	9	3	4	2	6	5	7
9	3	4	2	5	8	7	1	6
1	6	5	4	9	7	8	3	2
2	8	7	6	3	1	4	9	5

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,324
ಇಂದಿನ ಅಂತ್ಯ	14,507
▲	182
ದಿನದ ಗರಿಷ್ಠ	14,572

ವಿನಿಮಯ ದರ

$ ಡಾಲರ್	72.51
£ ಪೌಂಡ್	100
€ ಯುರೊ	85.5
¥ ಯೆನ್ (100ಕ್ಕೆ)	66.1

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹385
12 ಮೊಟ್ಟೆಗೆ	₹52

ಮೈಸೂರು

100 ಮೊಟ್ಟೆಗೆ	₹388

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1550 (1550)
ಸೋಯಾ (ರಿಫೈನ್ಡ್)	₹1245 (1260)
ಸೂರ್ಯಕಾಂತಿ (ರಿಫೈನ್ಡ್)	₹1740 (1740)
ಪಾಮೋಲಿನ್	₹1195 (1208)

ಕೊಬ್ಬರಿ ಧಾರಣೆ

ಬೆಂಗಳೂರು	₹15500-19000
ತುರುವೇಕೆರೆ	₹14600-14600

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	900-9050
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	350

ಅಡಿಕೆ
ಬಂಟ್ವಾಳ

ಕೋಕ	10000-22500
ಹೊಸತು	23500-41000
ಹಳತು	42500-50500

ಚಿತ್ರದುರ್ಗ

ಆಪಿ	42600-43000
ಬೆಟ್ಟೆ	33539-33969
ಕೆಂಪುಗೋಟು	29529-29989
ರಾಶಿ	42119-42559

ಸಿದ್ದಾಪುರ

ಬಿಳಿಗೋಟು	23109-31099
ಚಾಲಿ	35509-37309
ಕೋಕ	18099-29989
ಕೆಂಪುಗೋಟು	25089-30019
ರಾಶಿ	40099-41899
ತಟ್ಟಿಬೆಟ್ಟೆ	29899-39099

ಯಲ್ಲಾಪುರ

ಬಿಳಿಗೋಟು	23199-31611
ಕೋಕ	18299-29299
ಚಾಲಿ	32172-39661
ಕೆಂಪುಗೋಟು	26899-32899
ರಾಶಿ	39989-45998
ತಟ್ಟಿಬೆಟ್ಟೆ	33919-39769
ಆಪಿ	47699-48069

ಪುತ್ತೂರು

ಕೋಕ	9500-24000
ಹೊಸತು	28500-41000

ಶಿರಸಿ

ಬೆಟ್ಟೆ	22699-39699
ಬಿಳಿಗೋಟು	16899-31899
ಚಾಲಿ	31099-37611
ಹಳೆಚಾಲಿ	37699-38639
ರಾಶಿ	36599-42099

ಶಿವಮೊಗ್ಗ ಎಪಿಎಂಸಿ

ಬೆಟ್ಟೆ	41350-45000
ಗೊರಬಲು	13009-32500
ರಾಶಿ	36009-43500
ಸರಕು	48566-69596

ಚನ್ನಗಿರಿ (ತುಮ್ಕೋಸ್)

ರಾಶಿ	40509-43300
ಬೆಟ್ಟೆ	32099-34299

ರಾಮನಗರ ರೇಷ್ಮೆ

ಮಿಶ್ರತಳಿ (ಸಿ.ಬಿ)	218-378
ದ್ವಿತಳಿ (ಬಿ.ವಿ)	251-448

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	9,950	9,800	9,775	126.60ಸೆಂಟ್ಸ್
ಎಸಿ	4,060	3,800	3,775	
ಆರ್‌ಪಿ	5,100	5,100	5,100	
ಆರ್‌ಸಿ	3,000	3,000	2,875	1365 ಡಾಲರ್ಸ್

ಉ. ಕೊರಿಯಾ: ಮತ್ತೆ ಕ್ಷಿಪಣಿ ಪರೀಕ್ಷೆ

ಸೋಲ್ (ಎಪಿ): ಪೂರ್ವ ಕರಾವಳಿಯಲ್ಲಿ ಎರಡು ನೂತನ ಮಾದರಿಯ ಕ್ಷಿಪಣಿಗಳನ್ನು ಪರೀಕ್ಷಿಸಲಾಗಿದೆ ಎಂದು ಉತ್ತರ ಕೊರಿಯಾ ಶುಕ್ರವಾರ ತಿಳಿಸಿದೆ.

ಮಿಸ್ತ್ರಿ ಪದಚ್ಯುತಿ ಮಾನ್ಯ ಮಾಡಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಟಾಟಾ ಸಮೂಹದ ಕಾರ್ಯನಿರ್ವಾಹಕ ಅಧ್ಯಕ್ಷ ಸ್ಥಾನದಿಂದ ಸೈರಸ್ ಮಿಸ್ತ್ರಿ ಅವರನ್ನು ಕೆಳಗಿಳಿಸಿದ ಕ್ರಮವನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಮಾನ್ಯ ಮಾಡಿದೆ. ಮಿಸ್ತ್ರಿ ಅವರನ್ನು ಆ ಸ್ಥಾನಕ್ಕೆ ಮರುನೇಮಕ ಮಾಡಿದ್ದ ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯ (ಎನ್‌ಸಿಎಲ್‌ಎಟಿ) ಆದೇಶವನ್ನು ರದ್ದುಪಡಿಸಿದೆ. ಇದು ಕಾನೂನು ಸಮರದಲ್ಲಿ ಟಾಟಾ ಸಮೂಹಕ್ಕೆ ಸಿಕ್ಕಿರುವ ದೊಡ್ಡ ಜಯ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ, ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಮತ್ತು ವಿ. ರಾಮಸುಬ್ರಮಣಿಯನ್ ಅವರನ್ನು ಒಳಗೊಂಡ ನ್ಯಾಯಪೀಠವು, ಟಾಟಾ ಸಮೂಹ ಸಲ್ಲಿಸಿದ್ದ ಮೇಲ್ಮನವಿಯನ್ನು ಮಾನ್ಯ ಮಾಡಿ ಈ ತೀರ್ಪು ನೀಡಿದೆ.



ಸೈರಸ್ ಮಿಸ್ತ್ರಿ

ಮಿಸ್ತ್ರಿ ಅವರನ್ನು ಟಾಟಾ ಸನ್ಸ್ ಪ್ರೈವೇಟ್ ಲಿಮಿಟೆಡ್‌ನ ಆಡಳಿತ ಮಂಡಳಿಯ ಅಧ್ಯಕ್ಷ ಸ್ಥಾನದಿಂದ 2016ರ ಅಕ್ಟೋಬರ್‌ನಲ್ಲಿ ಕಿತ್ತುಹಾಕಿದ ಕ್ರಮವು 'ಬೇಟೆ, ಹಠಾತ್ ದಾಳಿ'ಗೆ ಸಮ ಎಂದು ಶಾಪೂರ್ಜಿ ಪಲ್ಲೋಂಜಿ ಸಮೂಹವು (ಎಸ್‌ಪಿ ಸಮೂಹ) ಸುಪ್ರೀಂ ಕೋರ್ಟ್‌ನಲ್ಲಿ ವಾದಿಸಿತ್ತು. ಎಸ್‌ಪಿ ಸಮೂಹವು ಮಿಸ್ತ್ರಿ ಕುಟುಂಬದ ಒಡೆತನಕ್ಕೆ ಸೇರಿದೆ, ಟಾಟಾ ಸನ್ಸ್‌ನಲ್ಲಿ ಶೇಕಡ 18.37ರಷ್ಟು ಷೇರುಪಾಲು ಹೊಂದಿದೆ.

ಮಿಸ್ತ್ರಿ ಅವರನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸುವ ಅಧಿಕಾರ ಆಡಳಿತ ಮಂಡಳಿಗೆ ಇದೆ ಎಂದು ಟಾಟಾ ಸಮೂಹ ಪ್ರತಿವಾದ ಮಂಡಿಸಿತ್ತು.

ಮಿಸ್ತ್ರಿ ಅವರನ್ನು ಕಾರ್ಯನಿರ್ವಾಹಕ ಅಧ್ಯಕ್ಷರನ್ನಾಗಿ ಪುನಃ ನೇಮಿಸಬೇಕು ಎಂದು ಎನ್‌ಸಿಎಲ್‌ಎಟಿ ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ 2020ರ ಜನವರಿಯಲ್ಲಿ ತಡೆ ನೀಡಿತ್ತು. ಮಿಸ್ತ್ರಿ ಅವರು 2012ರಲ್ಲಿ ಟಾಟಾ ಸನ್ಸ್‌ನ ಕಾರ್ಯನಿರ್ವಾಹಕ ಅಧ್ಯಕ್ಷ ಹುದ್ದೆಯನ್ನು ವಹಿಸಿಕೊಂಡಿದ್ದರು.

'ಗೆಲ್ಲುವ, ಸೋಲುವ ವಿಚಾರವಲ್ಲ...'



ಬೆಂಗಳೂರು: ಸುಪ್ರೀಂ ಕೋರ್ಟ್ ತೀರ್ಪಿಗೆ ಪ್ರತಿಕ್ರಿಯೆ ನೀಡಿರುವ ಟಾಟಾ ಟ್ರಸ್ಟ್ಸ್‌ನ ಅಧ್ಯಕ್ಷ ರತನ್ ಟಾಟಾ ಅವರು, 'ಇದು ಸಮೂಹವು ಪಾಲಿಸಿಕೊಂಡು ಬಂದಿರುವ ಮೌಲ್ಯಗಳನ್ನು ಮಾನ್ಯ ಮಾಡಿದಂತೆ ಇದೆ' ಎಂದು ಹೇಳಿದ್ದಾರೆ. ಈ ಮೌಲ್ಯಗಳೇ ಟಾಟಾ ಸಮೂಹದ ಪಾಲಿಗೆ ದಾರಿದೀಪದಂತೆ ಇವೆ ಎಂದು ಅವರು ಹೇಳಿದ್ದಾರೆ.

'ಇದು ಗೆಲ್ಲುವುದಕ್ಕೆ ಅಥವಾ ಸೋಲುವುದಕ್ಕೆ ಸಂಬಂಧಿಸಿದ ವಿಚಾರ ಅಲ್ಲ. ನನ್ನ ಪ್ರಾಮಾಣಿಕತೆಯ ಮೇಲೆ, ಸಮೂಹದ ನೈತಿಕ ನಡವಳಿಕೆಗಳ ಮೇಲೆ ಎಡೆಬಿಡದೆ ದಾಳಿ ನಡೆಸಲಾಯಿತು. ಈಗ ಬಂದಿರುವ ತೀರ್ಪು ನಮ್ಮ ಮೌಲ್ಯಗಳನ್ನು ಮಾನ್ಯ ಮಾಡಿದೆ' ಎಂದು ಟಾಟಾ ಅವರು ಟ್ವೀಟ್ ಮಾಡಿದ್ದಾರೆ.

ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿಗೆ ತಾವು ಕೃತಜ್ಞರಾಗಿ ಇರುವುದಾಗಿ ಅವರು ಹೇಳಿದ್ದಾರೆ. ಸುಪ್ರೀಂ ಕೋರ್ಟ್ ತೀರ್ಪು ಹೊರಬಂದ ನಂತರ ಟಾಟಾ ಸಮೂಹದ ಕೆಲವು ಕಂಪನಿಗಳ ಷೇರುಮೌಲ್ಯ ಹೆಚ್ಚಳ ಕಂಡಿತು.

ಕೃಷಿ ಕಾರ್ಯಕ್ರಮಗಳಿಗೆ ಒಟಿಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಕಾರ್ಯಕ್ರಮಗಳಿಗೆ ಮೀಸಲಾದ ಒಟಿಟಿ ವಾಹಿನಿ 'ಶ್ರಮಜೀವಿ ಟಿ.ವಿ.' ಆರಂಭವಾಗಿದೆ. 'ಫಾರ್ಮ್‌ಟಿವಿ' ಹೆಸರಿನ ಆ್ಯಪ್ ಹಾಕಿಕೊಂಡು ವಾಹಿನಿಯ ಕಾರ್ಯಕ್ರಮಗಳನ್ನು ವೀಕ್ಷಿಸಬಹುದು.

'ಪ್ರತಿದಿನ ಅರ್ಧ ಗಂಟೆ ಅವಧಿಯ ಕಾರ್ಯಕ್ರಮ ಪ್ರಸಾರ ಆಗುತ್ತಿದೆ. ಏಪ್ರಿಲ್ ಕೊನೆಯ ವೇಳೆಗೆ ಕಾರ್ಯಕ್ರಮ ಪ್ರಸಾರ ಅವಧಿಯನ್ನು ದಿನಕ್ಕೆ ಎರಡು ಗಂಟೆಗಳಿಗೆ ಹೆಚ್ಚಿಸಲಾಗುವುದು' ಎಂದು ವಾಹಿನಿಯ ಪ್ರಧಾನ ಸಂಪಾದಕ ಡಾ. ವೆಂಕಟ್ರಮಣ ಹೆಗಡೆ ತಿಳಿಸಿದ್ದಾರೆ.

ಕಾರ್ಯಕ್ರಮಗಳ ವೀಕ್ಷಣೆ ಸದ್ಯಕ್ಕೆ ಉಚಿತವಾಗಿದೆ.

'ಕೃಷಿ ಕ್ಷೇತ್ರದಲ್ಲಿನ ಎಲ್ಲರ ನಡುವೆ ಕೊಂಡಿಯಾಗಿ ಈ ಮಾಧ್ಯಮ ಕೆಲಸ ಮಾಡಲಿದೆ' ಎಂದು ಹೆಗಡೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ವಿವರಗಳಿಗೆ www.shramajeevi.com ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ಚೇತರಿಸಿಕೊಂಡ ಸೆನ್ಸೆಕ್ಸ್

ಮುಂಬೈ (ಪಿಟಿಐ): ಶುಕ್ರವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 568 ಅಂಶ ಏರಿಕೆ ದಾಖಲಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕವಾದ ನಿಫ್ಟಿ 182 ಅಂಶ ಏರಿಕೆ ಕಂಡಿತು. ಜಾಗತಿಕ ಷೇರು ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದಿದ್ದು ದೇಶಿ ಮಾರುಕಟ್ಟೆಗಳ ಮೇಲೆಯೂ ಪರಿಣಾಮ ಬೀರಿತು.

ಸೆನ್ಸೆಕ್ಸ್‌ನಲ್ಲಿ ಅತಿಹೆಚ್ಚಿನ ಏರಿಕೆಯನ್ನು ದಾಖಲಿಸಿದ್ದು ಬಜಾಜ್ ಫೈನಾನ್ಸ್ ಕಂಪನಿಯ ಷೇರುಗಳು. ಟೈಟಾನ್, ಏಷ್ಯನ್ ಪೇಂಟ್ಸ್, ಎಚ್‌ಯುಎಲ್, ಭಾರ್ತಿ ಏರ್‌ಟೆಲ್, ಬಜಾಜ್ ಆಟೊ ಮತ್ತು ನೆಸ್ಲೆ ಕಂಪನಿಯ ಷೇರುಗಳೂ ಏರಿಕೆ ಕಂಡವು.

ಪವರ್ ಗ್ರಿಡ್, ಇಂಡಸ್‌ಇಂಡ್ ಬ್ಯಾಂಕ್, ಐಟಿಸಿ ಮತ್ತು ಮಾರುತಿ ಷೇರುಗಳು ಇಳಿಕೆ ಕಂಡವು. 'ಹಾಲಿ ಆರ್ಥಿಕ ವರ್ಷದ ಕೊನೆಯ ತ್ರೈಮಾಸಿಕದಲ್ಲಿ ದೇಶದಲ್ಲಿ ಆರ್ಥಿಕ ಚಟುವಟಿಕೆಗಳು ಚೆನ್ನಾಗಿ ನಡೆದಿರುವ ಸೂಚನೆಗಳು ಇವೆ' ಎಂದು ಮಾರುಕಟ್ಟೆಯ ಚೇತರಿಕೆಗೆ ಒಂದು ಕಾರಣವನ್ನು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ನೀಡಿದರು.

ಕೋವಿಡ್–19ರ ಎರಡನೆಯ ಅಲೆ ಹಾಗೂ ಕೆಲವು ಷೇರುಗಳ ಬೆಲೆಯು ತೀರಾ ದುಬಾರಿ ಆಗಿರುವುದು ಮಾರುಕಟ್ಟೆಯಲ್ಲಿ ಅನಿಶ್ಚಿತ ಪರಿಸ್ಥಿತಿಗೆ ಕಾರಣವಾಗುವ ಸಾಧ್ಯತೆ ಇದೆ ಎಂದರು.

ರೂಪಾಯಿ ಚೇತರಿಕೆ: ಮೂರು ದಿನಗಳಿಂದ ಕುಸಿತದ ಹಾದಿಯಲ್ಲಿ ಇದ್ದ ರೂಪಾಯಿ ಮೌಲ್ಯವು ಅಮೆರಿಕನ್ ಡಾಲರ್ ಎದುರು ಶುಕ್ರವಾರ 11 ಪೈಸೆ ಚೇತರಿಕೆ ಕಂಡಿದೆ.

ಮುಂಬೈ ಧಾರಣೆ

ಶೇಂಗಾ

26-3-2021

ಜಾವಾ 70/80(ಹೊಸ)	10900-10950
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9000-9100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1560)
ಒಂದು ವಾರದ ಡೆಲಿವರಿ	1555 (1555)
ಸೋಯಾ ಕಚ್ಚಾ	1235 (1252)
ಪಾಮ್ ವಾರದ ಡೆಲಿವರಿ	1193 (1206)
ಸೂರ್ಯಕಾಂತಿ ಎಣ್ಣೆ ಕಚ್ಚಾ	1700 (1700)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
44,450 (44,900)
ಬೆಳ್ಳಿ ಕೆ.ಜಿ
64,600 (64,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಚಿನ್ನ ಇಳಿಕೆ, ಬೆಳ್ಳಿ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು 10 ಗ್ರಾಂಗೆ ₹ 147ರಷ್ಟು ಕಡಿಮೆ ಆಗಿದೆ. 10 ಗ್ರಾಂ ಚಿನ್ನವು ₹ 44,081ಕ್ಕೆ ಮಾರಾಟವಾಗಿದೆ.

ಬೆಳ್ಳಿಯ ಬೆಲೆಯಲ್ಲಿ ಏರಿಕೆ ಆಗಿದೆ. ಕೆ.ಜಿ. ಬೆಳ್ಳಿ ದರವು ₹ 1,036ರಷ್ಟು ಏರಿಕೆ ಆಗಿ ₹ 64,276ಕ್ಕೆ ಮಾರಾಟವಾಗಿದೆ. 'ಡಾಲರ್ ಬಲಿಷ್ಠಗೊಳ್ಳುತ್ತಿರುವ ಕಾರಣ ಚಿನ್ನದ ಬೆಲೆ ಇಳಿಕೆಯಾಗಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ತಪನ್ ಪಟೇಲ್ ಹೇಳಿದ್ದಾರೆ.

'ಏರ್ ಇಂಡಿಯಾ: ಬಿಡ್ ಶೀಘ್ರ'

ನವದೆಹಲಿ (ಪಿಟಿಐ): ಏರ್ ಇಂಡಿಯಾ ಖಾಸಗೀಕರಣದ ವಿಚಾರದಲ್ಲಿ ಕೇಂದ್ರ ಸರ್ಕಾರವು ಹಣಕಾಸಿನ ಬಿಡ್‌ಗಳನ್ನು ಮುಂದಿನ ಕೆಲವು ದಿನಗಳಲ್ಲಿ ಆಹ್ವಾನಿಸಲಿದೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಖಾತೆ ರಾಜ್ಯ ಸಚಿವ ಹರದೀಪ್ ಸಿಂಗ್ ಪುರಿ ತಿಳಿಸಿದ್ದಾರೆ.

'ಏರ್ ಇಂಡಿಯಾ ಕಂಪನಿಯನ್ನು ಖಾಸಗಿಯವರಿಗೆ ಮಾರಾಟ ಮಾಡಬೇಕು ಅಥವಾ ಕಂಪನಿಯನ್ನು ಮುಚ್ಚಬೇಕು. ಇವೆರಡನ್ನು ಹೊರತುಪಡಿಸಿದರೆ ಬೇರೆ ಆಯ್ಕೆ ಇಲ್ಲ' ಎಂದೂ ಅವರು ಹೇಳಿದ್ದಾರೆ.

'ಖಾಸಗಿಯವರು ಖರೀದಿ ಮಾಡುವವರೆಗೆ ಸರ್ಕಾರವೇ ಕಂಪನಿಯನ್ನು ನಡೆಸಿಕೊಂಡು ಹೋಗಬೇಕಿದೆ. ಬಿಡ್ದರ್‌ಗಳಿಂದ ಹಣಕಾಸಿನ ಬಿಡ್ ಬಂದ ನಂತರ, ನಾವು ಕಂಪನಿಯನ್ನು ಖಾಸಗಿಯವರಿಗೆ ಹಸ್ತಾಂತರ ಮಾಡುವುದಷ್ಟೇ ಬಾಕಿ ಉಳಿಯಲಿದೆ' ಎಂದು ಅವರು ಕಾರ್ಯಕ್ರಮವೊಂದರಲ್ಲಿ ವಿವರಿಸಿದ್ದಾರೆ.



'ಏರ್ ಇಂಡಿಯಾದ ನಿರ್ವಹಣೆ ಸರಿಯಾಗಿ ಇಲ್ಲದಿದ್ದ ಕಾರಣ ಒಟ್ಟು ಸಾಲದ ಮೊತ್ತವು ₹ 60 ಸಾವಿರ ಕೋಟಿ ಆಗಿದೆ. ನಾವು ಪ್ರತಿದಿನ ₹ 20 ಕೋಟಿ ನಷ್ಟ ಅನುಭವಿಸುತ್ತಿದ್ದೇವೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಬಳಿ ಹೋಗಿ ಹಣ ಕೊಡಿ ಎಂದು ಕೇಳುವ ಶಕ್ತಿ ನನಗಿಲ್ಲ' ಎಂದು ಪುರಿ ಹೇಳಿದ್ದಾರೆ.

'ಇ–ಮತದಾನ' ಸಿದ್ಧತೆಗೆ ಐಐಟಿ ಮದ್ರಾಸ್ ನೆರವು

ಹೈದರಾಬಾದ್ (ಪಿಟಿಐ): ವಿದ್ಯುನ್ಮಾನ ಮತದಾನ ವ್ಯವಸ್ಥೆಗಾಗಿ ಬ್ಲಾಕ್‌ಚೈನ್ ತಂತ್ರಜ್ಞಾನ ಅಳವಡಿಕೆ ಸಂಬಂಧ ಐಐಟಿ– ಮದ್ರಾಸ್ ಜೊತೆಗೂಡಿ ಕಾರ್ಯನಿರ್ವಹಿಸಲಾಗುತ್ತಿದೆ ಎಂದು ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ಸುನಿಲ್ ಅರೋರಾ ಶುಕ್ರವಾರ ಹೇಳಿದರು.

ಇಲ್ಲಿನ ಸರ್ದಾರ್ ವಲ್ಲಭಭಾಯಿ ಪಟೇಲ್ ರಾಷ್ಟ್ರೀಯ ಪೊಲೀಸ್ ಅಕಾಡೆಮಿಯಲ್ಲಿ ಭಾರತೀಯ ಪೊಲೀಸ್ ಸೇವೆಯ (ಐಪಿಎಸ್) ಪ್ರೊಬೇಷನರಿ ಅಭ್ಯರ್ಥಿಗಳೊಂದಿಗೆ ಸಂವಹನ ನಡೆಸಿದರು. 2024 ರ ಸಾರ್ವತ್ರಿಕ ಚುನಾವಣೆ ವೇಳೆಗೆ ಇ–ಮತದಾನದ ವ್ಯವಸ್ಥೆ ಸಾಕಾರಗೊಳ್ಳುವ ನಿರೀಕ್ಷೆ ಇದೆ ಎಂದರು.

ಸೌದಿ ಸಚಿವರ ಹೇಳಿಕೆಗೆ ಪ್ರಧಾನ್ ಅಸಮಾಧಾನ

ನವದೆಹಲಿ (ಪಿಟಿಐ): ಕಚ್ಚಾ ತೈಲವು ದುಬಾರಿ ಆಗಿರುವ ಪರಿಸ್ಥಿತಿಯನ್ನು ನಿಭಾಯಿಸಬೇಕು ಎಂದಾದರೆ ಭಾರತವು ತನ್ನ ಸಂಗ್ರಹಾಗಾರಗಳಲ್ಲಿ ಇರುವ ತೈಲವನ್ನು ಬಳಸಿಕೊಳ್ಳಬೇಕು ಎಂದು ಸೌದಿ ಅರೇಬಿಯಾದ ಇಂಧನ ಸಚಿವರು ನೀಡಿದ್ದ ಹೇಳಿಕೆಯು, 'ರಾಜತಾಂತ್ರಿಕವಾಗಿ ಸರಿಯಲ್ಲ' ಎಂದು ಕೇಂದ್ರ ಇಂಧನ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ.

'ಆ ರೀತಿಯ ಹೇಳಿಕೆಗಳನ್ನು ನಾನು ಸಮ್ಮತಿಸುವುದಿಲ್ಲ ಎಂದು ನಮ್ರವಾಗಿ ಹೇಳುತ್ತೇನೆ. ನಮ್ಮ ಸಂಗ್ರಹಾಗಾರಗಳಲ್ಲಿ ಇರುವ ತೈಲವನ್ನು ಯಾವಾಗ, ಹೇಗೆ ಬಳಸಬೇಕು ಎಂಬ ವಿಚಾರದಲ್ಲಿ ನಮ್ಮದೇ ಆದ ಕಾರ್ಯತಂತ್ರ ಇರುತ್ತದೆ. ನಮ್ಮ ಹಿತಾಸಕ್ತಿಗಳ ಬಗ್ಗೆ ನಮಗೆ ಅರಿವಿದೆ' ಎಂದು ಪ್ರಧಾನ್ ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ಕಚ್ಚಾ ತೈಲ ಬೆಲೆ ತಗ್ಗಬೇಕು ಎಂದಾದರೆ, ತೈಲದ ಪೂರೈಕೆಯನ್ನು 'ಒಪೆಕ್ +' ರಾಷ್ಟ್ರಗಳು ಹೆಚ್ಚಿಸಬೇಕು ಎಂದು ಪ್ರಧಾನ್ ಅವರು ಆಗ್ರಹಿಸಿದ್ದರು. ಈ ಆಗ್ರಹಕ್ಕೆ ಪ್ರತಿಯಾಗಿ ಸೌದಿ ಅರೇಬಿಯಾದ ಇಂಧನ ಸಚಿವ ರಾಜಕುಮಾರ ಅಬ್ದುಲ್‌ಅಜೀಜ್ ಬಿನ್ ಸಲ್ಮಾನ್ ಅವರು 'ಭಾರತವು ಹಿಂದಿನ ವರ್ಷ ಅಗ್ಗದ ಬೆಲೆಗೆ ಖರೀದಿಸಿ, ಸಂಗ್ರಹಾಗಾರಗಳಲ್ಲಿ ಭರ್ತಿ ಮಾಡಿಕೊಂಡಿರುವ ತೈಲವನ್ನು ಬಳಸಿಕೊಳ್ಳಲಿ' ಎಂದಿದ್ದರು.

ಮಕ್ಕಳ ಮೇಲೆ ದೌರ್ಜನ್ಯ: ಕೇರಳ, ಉತ್ತರ ಪ್ರದೇಶದಲ್ಲಿ ಅತ್ಯಧಿಕ ಪ್ರಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ 2017ರಿಂದ 2019ರ ಅವಧಿಯಲ್ಲಿ ನಡೆದಿರುವ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಮತ್ತು ಚಿತ್ರೀಕರಣ ಪ್ರಕರಣಗಳಲ್ಲಿ ಕೇರಳ ಮತ್ತು ಉತ್ತರಪ್ರದೇಶ ಮುಂಚೂಣಿಯಲ್ಲಿದ್ದು, ಶೇ 77.45ರಷ್ಟು ಪಾಲು ಹೊಂದಿವೆ.

ಈ ಅವಧಿಯಲ್ಲಿ ರಾಷ್ಟ್ರದಾದ್ಯಂತ ಚೈಲ್ಡ್ ಪೋರ್ನೋಗ್ರಫಿ ಪ್ರಕರಣಗಳ ಸಂಖ್ಯೆ ಕೂಡ 14 ಪಟ್ಟು ಏರಿಕೆಯಾಗಿದೆ.

ಉತ್ತರ ಪ್ರದೇಶ ಮತ್ತು ಕೇರಳದ ನಂತರದಲ್ಲಿ ಮಧ್ಯಪ್ರದೇಶ, ಕರ್ನಾಟಕ ಮತ್ತು ಪಶ್ಚಿಮ ಬಂಗಾಳ ಕೂಡ ಇದ್ದು, ಇಂಟರ್‌ನೆಟ್‌ನಲ್ಲಿ ಮಕ್ಕಳ ಮೇಲೆ ದೌರ್ಜನ್ಯ ಹೆಚ್ಚಿನ ಸಂಖ್ಯೆಯಲ್ಲಿ ನಡೆಯುತ್ತಿದೆ.

ರಾಜ್ಯಸಭೆಯಲ್ಲಿ ಗುರುವಾರ ಮಹಿಳಾ ಮತ್ತು ಮಕ್ಕಳ ಸಚಿವಾಲಯ ಈ ಮಾಹಿತಿ ಒದಗಿಸಿದೆ. 2017ರಲ್ಲಿ 7 ಇದ್ದ ಪ್ರಕರಣಗಳ ಸಂಖ್ಯೆ 2018ರಲ್ಲಿ 44 ಮತ್ತು 2019ರಲ್ಲಿ 102ಕ್ಕೆ ಏರಿಕೆಯಾಗಿದೆ ಎಂದು ಸಚಿವಾಲಯ ಹೇಳಿದೆ. ಕೇರಳದಲ್ಲಿ ಅತಿಹೆಚ್ಚು ಅಂದರೆ, 45 ಮತ್ತು ಉತ್ತರ ಪ್ರದೇಶದಲ್ಲಿ 34 ಹಾಗೂ ಮಧ್ಯ ಪ್ರದೇಶದಲ್ಲಿ 10 ಪ್ರಕರಣಗಳು ವರದಿಯಾಗಿವೆ.

ನವಲಖಾ ಜಾಮೀನು ಅರ್ಜಿ ತೀರ್ಪು ಕಾಯ್ದಿರಿಸಿದ 'ಸುಪ್ರೀಂ'

ನವದೆಹಲಿ: ಭೀಮಾ–ಕೋರೆಗಾಂವ್ ಪ್ರಕರಣದಲ್ಲಿ ಜಾಮೀನು ಕೋರಿ ಸಾಮಾಜಿಕ ಕಾರ್ಯಕರ್ತ ಗೌತಮ್ ನವಲಖಾ ಅವರು ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದ ತನ್ನ ತೀರ್ಪನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಕಾಯ್ದಿರಿಸಿತು.

ಗೌತಮ್ ಪರ ಹಿರಿಯ ವಕೀಲರಾದ ಕಪಿಲ್ ಸಿಬಲ್ ಹಾಗೂ ಎನ್‌ಐಎ ಪರ ಹಾಜರಾದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರ ವಾದ–ವಿವಾದಗಳನ್ನು ಆಲಿಸಿದ ನ್ಯಾಯಮೂರ್ತಿಗಳಾದ ಯು.ಯು. ಲಲಿತ್ ಮತ್ತು ಕೆ.ಎಂ. ಜೋಸೆಫ್ ಅವರನ್ನೊಳಗೊಂಡ ನ್ಯಾಯಪೀಠವು, ತನ್ನ ತೀರ್ಪನ್ನು ಕಾಯ್ದಿರಿಸಿರುವುದಾಗಿ ತಿಳಿಸಿತು.

ಕೆ.ಎಲ್‌. ರಾಹುಲ್ ಶತಕ ವ್ಯರ್ಥ; ವಿರಾಟ್ ಬಳಗವನ್ನು ಕಾಡಿದ ಬೌಲರ್‌ಗಳ ವೈಫಲ್ಯ

ಜಾನಿ–ಸ್ಟೋಕ್ಸ್ ಅಬ್ಬರಕ್ಕೆ ಒಲಿದ ಜಯ

ಪುಣೆ (ಪಿಟಿಐ): ಶುಕ್ರವಾರ ರಾತ್ರಿ ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಇಂಗ್ಲೆಂಡ್ ತಂಡದ ಜಾನಿ ಬೆಸ್ಟೊ ಮತ್ತು ಬೆನ್ ಸ್ಟೋಕ್ಸ್ ಅವರು ಆತಿಥೇಯ ಬೌಲರ್‌ಗಳ ಎಸೆತಗಳನ್ನು ದೂಳೀಪಟ ಮಾಡಿದರು.

ಇದರಿಂದಾಗಿ ಇಂಗ್ಲೆಂಡ್ ತಂಡವು ಭಾರತದ ಎದುರಿನ ಎರಡನೇ ಏಕದಿನ ಪಂದ್ಯದಲ್ಲಿ 6 ವಿಕೆಟ್‌ಗಳಿಂದ ಜಯಿಸಿತು. ಸರಣಿಯಲ್ಲಿ 1–1ರ ಸಮಬಲ ಸಾಧಿಸಿತು. ಆದರೆ, ಕನ್ನಡಿಗ ಕೆ.ಎಲ್. ರಾಹುಲ್ ಒಂದು ವರ್ಷದ ನಂತರ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ಗಳಿಸಿದ ಶತಕವೂ ವ್ಯರ್ಥವಾಯಿತು.

ಟಾಸ್ ಗೆದ್ದ ಇಂಗ್ಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ರಾಹುಲ್ (108; 114ಎಸೆತ, 7ಬೌಂಡರಿ, 2ಸಿಕ್ಸರ್) ಶತಕದ ಬಲದಿಂದ ಭಾರತ ತಂಡವು 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 336 ರನ್ ಗಳಿಸಿತು. ಅದಕ್ಕುತ್ತರವಾಗಿ ಇಂಗ್ಲೆಂಡ್ 43.3 ಓವರ್‌ಗಳಲ್ಲೇ 4 ವಿಕೆಟ್‌ಗಳಿಗೆ 337 ರನ್ ಗಳಿಸಿತು. ಜಾನಿ ಬೆಸ್ಟೊ (124; 112ಎಸೆತ, 11ಬೌಂಡರಿ, 7ಸಿಕ್ಸರ್) ಮತ್ತು ಬೆನ್ ಸ್ಟೋಕ್ಸ್ (99; 52ಎಸೆತ, 4ಬೌಂಡರಿ, 10ಸಿಕ್ಸರ್) ಅಬ್ಬರದ ಆಟ ಪ್ರವಾಸಿ ಬಳಗದ ಜಯಕ್ಕೆ ಕಾರಣವಾಯಿತು.

ಭಾರತದ ಆರಂಭಿಕ ಜೋಡಿ ರೋಹಿತ್‌ಶರ್ಮಾ ಮತ್ತು ಶಿಖರ್ ಧವನ್ ಬೇಗನೆ ಔಟಾದರು. ಈ ಹಂತದಲ್ಲಿ ನಾಯಕ ವಿರಾಟ್ ಕೊಹ್ಲಿ ಜೊತೆಗೂಡಿದ ಕೆ.ಎಲ್. ರಾಹುಲ್ ಇನಿಂಗ್ಸ್‌ಗೆ ಬಲ ತುಂಬಿದರು. ವಿರಾಟ್ (66; 79ಎಸೆತ) ಅವರೊಂದಿಗೆ ಮೂರನೇ ವಿಕೆಟ್ ಜೊತೆಯಾಟದಲ್ಲಿ 121 ರನ್ ಮತ್ತು ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ ರಿಷಭ್ ಪಂತ್ ಜೊತೆಗೆ 113 ರನ್ ಸೇರಿಸಿದರು. ಇದರಿಂದಾಗಿ ತಂಡವು ದೊಡ್ಡ ಮೊತ್ತ ಗಳಿಸಲು ಕಾರಣವಾಯಿತು.

ಬೆಸ್ಟೊ–ಬೆನ್ ಅಬ್ಬರ: ಆದರೆ ಬೌಲರ್‌ಗಳ ವೈಫಲ್ಯವು ಭಾರತ ತಂಡವನ್ನು ಕಾಡಿತು. ಇಂಗ್ಲೆಂಡ್ ಆರಂಭಿಕ ಜೋಡಿ ಬೆಸ್ಟೊ ಮತ್ತು ಜೇಸನ್ ರಾಯ್ (55; 52ಎಸೆತ, 7ಬೌಂಡರಿ, 1ಸಿಕ್ಸರ್) ಮೊದಲ ವಿಕೆಟ್ ಜೊತೆಯಾಟದಲ್ಲಿ 110 ರನ್‌ಗಳನ್ನು ಸೇರಿಸಿ ಸುಭದ್ರ ಅಡಿಪಾಯ ಹಾಕಿದರು.

17ನೇ ಓವರ್‌ನಲ್ಲಿ ಜೇಸನ್ ರನ್‌ಔಟ್ ಆದ ಮೇಲೆಯೇ ಭಾರತದ ಬೌಲರ್‌ಗಳು ಹೆಚ್ಚು ಸಂಕಟ ಅನುಭವಿಸಬೇಕಾಯಿತು. ಜಾನಿ ಜೊತೆಗೂಡಿದ ಬೆನ್ ಸ್ಟೋಕ್ಸ್ ಅಬ್ಬರಿಸಿದರು. ಅದರಲ್ಲಿಯೂ ಸ್ಪಿನ್ನರ್ ಕೃಣಾಲ್ ಪಾಂಡ್ಯ ಮತ್ತು ಕುಲದೀಪ್ ಯಾದವ್ ಅವರ ಎಸೆತಗಳನ್ನು ಮನಸಾರೆ ದಂಡಿಸಿದರು. 40 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಅದರಲ್ಲಿ ನಾಲ್ಕು ಸಿಕ್ಸರ್‌ಗಳಿದ್ದವು.

ಅದರ ನಂತರ ಅವರ ಆಟ ಶರವೇಗ ಪಡೆದುಕೊಂಡಿತು.ಶತಕದತ್ತ ದಾಪುಗಾಲಿಟ್ಟರು. ಕುಲದೀಪ್ ಹಾಕಿದ 33ನೇ ಓವರ್‌ನಲ್ಲಿ ಸಿಕ್ಸರ್ ಹ್ಯಾಟ್ರಿಕ್ ಕೂಡ ದಾಖಲಿಸಿದರು. ಶತಕ ಪೂರೈಸಲು ಒಂದು ರನ್ ಬೇಕಿದ್ದ ಸಂದರ್ಭದಲ್ಲಿ ಭುವನೇಶ್ವರ್ ಕುಮಾರ್ ಎಸೆತದಲ್ಲಿ ಔಟಾದರು. ಸ್ಟೋಕ್ಸ್ 190.38ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು. ಅವರು ಒಟ್ಟು 10 ಸಿಕ್ಸ್‌ರ್‌ಗಳನ್ನು ಸಿಡಿಸಿದರು. ಜಾನಿ ಜೊತೆಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 175 ರನ್‌ಗಳನ್ನು ಸೇರಿಸಿದರು.

ಜಾನಿ 95 ಎಸೆತಗಳಲ್ಲಿ ಶತಕ ಪೂರೈಸಿದರು. ಅದರಲ್ಲಿ ಆರು ಸಿಕ್ಸರ್ ಮತ್ತು ಎಂಟು ಬೌಂಡರಿಗಳಿದ್ದವು.

ಆಸೆ ಮೂಡಿಸಿದ್ದ ಪ್ರಸಿದ್ಧ: ಇನಿಂಗ್ಸ್‌ನ 37ನೇ ಓವರ್‌ನಲ್ಲಿ ಶತಕ ಸಾಧಕ ಜಾನಿ ಮತ್ತು ಹಂಗಾಮಿ ನಾಯಕ ಜೋಸ್ ಬಟ್ಲರ್ ವಿಕೆಟ್‌ಗಳನ್ನು ಪ್ರಸಿದ್ಧ ಕೃಷ್ಣ ತಮ್ಮ ಬುಟ್ಟಿಗೆ ಹಾಕಿಕೊಂಡರು. ಇದರಿಂದಾಗಿ ಪಂದ್ಯಕ್ಕೆ ತಿರುವು ಲಭಿಸುವ ಸಣ್ಣ ಆಸೆ ಚಿಗುರೊಡೆದಿತ್ತು. ಆಗ ಇಂಗ್ಲೆಂಡ್‌ಗೆ ಜಯಿಸಲು 13 ಓವರ್‌ಗಳಲ್ಲಿ 50 ರನ್‌ಗಳ ಅಗತ್ಯವಿತ್ತು.

ಆದರೆ ಡೇವಿಡ್ ಮಲಾನ್ ಮತ್ತು ಪದಾರ್ಪಣೆ ಪಂದ್ಯ ಆಡಿದ ಲಿಯಾಮ್ ಲಿವಿಂಗ್‌ಸ್ಟೋನ್ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು.


ಶತಕ ಸಂಭ್ರಮದಲ್ಲಿ ಕೆ.ಎಲ್‌. ರಾಹುಲ್ –ಪಿಟಿಐ ಚಿತ್ರ

ಸ್ಕೋರ್‌ಕಾರ್ಡ್

ಭಾರತ 6ಕ್ಕೆ 336 (50 ಓವರ್‌ಗಳಲ್ಲಿ)

ರೋಹಿತ್ ಶರ್ಮಾ ಸಿ ಆದಿಲ್ ರಶೀದ್ ಬಿ ಸ್ಯಾಮ್ ಕರನ್	25
ಶಿಖರ್ ಧವನ್ ಸಿ ಬೆನ್ ಸ್ಟೋಕ್ಸ್ ಬಿ ರೀಸ್ ಟಾಪ್ಲಿ	4
ವಿರಾಟ್ ಕೊಹ್ಲಿ ಸಿ ಜೋಸ್ ಬಟ್ಲರ್ ಬಿ ಆದಿಲ್ ರಶೀದ್	66
ಕೆ.ಎಲ್. ರಾಹುಲ್ ಸಿ ರೀಸ್ ಟಾಪ್ಲಿ ಬಿ ಟಾಮ್ ಕರನ್	108
ರಿಷಭ್ ಪಂತ್ ಸಿ ಜೇಸನ್ ರಾಯ್ ಬಿ ಟಾಮ್ ಕರನ್	77
ಹಾರ್ದಿಕ್ ಪಾಂಡ್ಯ ಸಿ ಜೇಸನ್ ರಾಯ್ ಬಿ ರೀಸ್ ಟಾಪ್ಲಿ	35
ಕೃಣಾಲ್ ಪಾಂಡ್ಯ ಔಟಾಗದೆ	12
ಶಾರ್ದೂಲ್ ಠಾಕೂರ್ ಔಟಾಗದೆ	0
ಇತರೆ (ಲೆಗ್‌ಬೈ 2, ವೈಡ್ 7)	9

ವಿಕೆಟ್ ಪತನ: 1–9 (ಶಿಖರ್ ಧವನ್; 3.5), 2–37 (ರೋಹಿತ್ ಶರ್ಮಾ, 8.4), 3–158 (ವಿರಾಟ್ ಕೊಹ್ಲಿ, 31.6), 4–271 (ಕೆ.ಎಲ್.ರಾಹುಲ್, 44.5), 5–308 (ರಿಷಭ್ ಪಂತ್, 46.5), 6–334 (ಹಾರ್ದಿಕ್ ಪಾಂಡ್ಯ, 49.5)

ಬೌಲಿಂಗ್: ಸ್ಯಾಮ್ ಕರನ್ 7–0–47–1, ರೀಸ್ ಟಾಪ್ಲಿ 8–0–50–2, ಟಾಮ್ ಕರನ್ 10–0–83–2, ಬೆನ್ ಸ್ಟೋಕ್ಸ್ 5–0–42–0, ಮೋಯಿನ್ ಅಲಿ 10–0–47–0, ಆದಿಲ್ ರಶೀದ್ 10–0–65–1

ಇಂಗ್ಲೆಂಡ್ 4ಕ್ಕೆ 337 (43.3 ಓವರ್‌ಗಳಲ್ಲಿ)

ಜೇಸನ್ ರಾಯ್ ರನೌಟ್ (ರೋಹಿತ್ ಶರ್ಮಾ/ರಿಷಭ್ ಪಂತ್)	55
ಜಾನಿ ಬೆಸ್ಟೊ ಸಿ ವಿರಾಟ್ ಕೊಹ್ಲಿ ಬಿ ಪ್ರಸಿದ್ಧ ಕೃಷ್ಣ	124
ಬೆನ್ ಸ್ಟೋಕ್ಸ್ ಸಿ ರಿಷಭ್ ಪಂತ್ ಬಿ ಭುವನೇಶ್ವರ ಕುಮಾರ್	99
ಡೇವಿಡ್ ಮಲಾನ್ ಔಟಾಗದೆ	16
ಜೋಸ್ ಬಟ್ಲರ್ ಬಿ ಪ್ರಸಿದ್ಧ ಕೃಷ್ಣ	0
ಲಿಯಾಮ್ ಲಿವಿಂಗ್‌ಸ್ಟೋನ್ ಔಟಾಗದೆ	27
ಇತರೆ (ಬೈ 4, ಲೆಗ್‌ಬೈ 2, ನೋಬಾಲ್ 2, ವೈಡ್ 8)	16

ವಿಕೆಟ್ ಪತನ: 1-110 (ಜೇಸನ್ ರಾಯ್, 16.3), 2–285 (ಬೆನ್ ಸ್ಟೋಕ್ಸ್, 35.2), 3–287 (ಜಾನಿ ಬೆಸ್ಟೊ, 36.1), 4–287 (ಜೋಸ್ ಬಟ್ಲರ್, 36.4)

ಬೌಲಿಂಗ್: ಭುವನೇಶ್ವರ ಕುಮಾರ್ 10–0–63–1, ಪ್ರಸಿದ್ಧ ಕೃಷ್ಣ 10–0–58–2, ಶಾರ್ದೂಲ್ ಠಾಕೂರ್ 7.3–0–54–0, ಕುಲದೀಪ್ ಯಾದವ್ 10–0–84–0, ಕೃಣಾಲ್ ಪಾಂಡ್ಯ 6–0–72–0

ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ ಆರು ವಿಕೆಟ್‌ಗಳ ಜಯ, ಮೂರು ಪಂದ್ಯಗಳ ಸರಣಿಯಲ್ಲಿ 1–1 ಸಮಬಲ

ಮುಂದಿನ ಪಂದ್ಯ: ಮಾರ್ಚ್ 28, ಪುಣೆಯಲ್ಲಿ


ಇಂಗ್ಲೆಂಡ್ ತಂಡದ ಬೆನ್ ಸ್ಟೋಕ್ಸ್ ಮತ್ತು ಜಾನಿ ಬೆಸ್ಟೊ –ರಾಯಿಟರ್ಸ್ ಚಿತ್ರ

ಗ್ರೇಮ್ ಸ್ಮಿತ್ ಹಿಂದಿಕ್ಕಿದ ವಿರಾಟ್ ಕೊಹ್ಲಿ

ಪುಣೆ: ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಮತ್ತೊಂದು ದಾಖಲೆ ಬರೆದಿದ್ದಾರೆ. ಏಕದಿನ ಕ್ರಿಕೆಟ್‌ನಲ್ಲಿ ನಾಯಕರಾಗಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರರ ಎಲೀಟ್ ಪಟ್ಟಿಯಲ್ಲಿ ದಕ್ಷಿಣ ಆಫ್ರಿಕಾದ ಮಾಜಿ ನಾಯಕ ಗ್ರೇಮ್ ಸ್ಮಿತ್ ಅವರನ್ನು ಕೊಹ್ಲಿ ಹಿಂದಿಕ್ಕಿ ಐದನೇ ಸ್ಥಾನಕ್ಕೇರಿದ್ದಾರೆ.

ಇಂಗ್ಲೆಂಡ್ ವಿರುದ್ಧದ ದ್ವಿತೀಯ ಏಕದಿನ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಈ ಸಾಧನೆ ಮಾಡಿದ್ದಾರೆ.

ಈ ಪಂದ್ಯ ಆರಂಭಕ್ಕೂ ಮುನ್ನ ವಿರಾಟ್ ಅವರಿಗೆ ಸ್ಮಿತ್ ದಾಖಲೆ ಮುರಿಯಲು 41 ರನ್‌ಗಳ ಅವಶ್ಯಕತೆಯಿತ್ತು.

ದಕ್ಷಿಣ ಆಫ್ರಿಕಾ ತಂಡದ ಮಾಜಿ ನಾಯಕ ಗ್ರೇಮ್ ಸ್ಮಿತ್ 150 ಪಂದ್ಯಗಳಿಂದ 5,416 ರನ್ ಪೇರಿಸಿದ್ದರು. ಈ ದಾಖಲೆಯನ್ನೀಗ ಕೊಹ್ಲಿ (5,442) ಮುರಿದಿದ್ದಾರೆ.

ಈ ಪಟ್ಟಿಯಲ್ಲಿ ಆಸ್ಟ್ರೇಲಿಯಾದ ಮಾಜಿ ನಾಯಕ ರಿಕಿ ಪಾಂಟಿಂಗ್ ಅಗ್ರಸ್ಥಾನದಲ್ಲಿದ್ದಾರೆ. ಪಾಂಟಿಂಗ್ 234 ಏಕದಿನ ಪಂದ್ಯಗಳಲ್ಲಿ 8,497 ರನ್ ಗಳಿಸಿದ್ದರು. ಭಾರತ ತಂಡದ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ಎರಡನೇ ಸ್ಥಾನದಲ್ಲಿದ್ದು, 200 ಪಂದ್ಯಗಳಿಂದ 6,641 ರನ್ ಪೇರಿಸಿದ್ದರು. ನ್ಯೂಜಿಲೆಂಡ್‌ನ ಸ್ಟೀಫನ್ ಫ್ಲೆಮಿಂಗ್ (6,295) ಮತ್ತು ಶ್ರೀಲಂಕಾದ ಅರ್ಜುನ್ ರಣತುಂಗಾ (5,608) ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನಗಳಲ್ಲಿ ಇದ್ದಾರೆ.

ಪಟ್ಟಿಯಲ್ಲಿ ಐದನೇ ಸ್ಥಾನದಲ್ಲಿರುವ ಕೊಹ್ಲಿ ಉಳಿದೆಲ್ಲರಿಗಿಂತ ಉತ್ತಮ ರನ್ ಗಳಿಕೆ ಸರಾಸರಿಯನ್ನು ಹೊಂದಿದ್ದಾರೆ. ಏಕದಿನ ಮಾದರಿಯಲ್ಲಿ ನಾಯಕನಾಗಿ ಶೇ. 70ರ ಸರಾಸರಿಯಲ್ಲಿ ರನ್ ಗಳಿಸಿರುವ ಏಕೈಕ ಬ್ಯಾಟ್ಸ್‌ಮನ್ ಎಂಬ ಶ್ರೇಯ ಅವರದ್ದಾಗಿದೆ.

ಎಂಜಲು ಬಳಸಿದ ಸ್ಟೋಕ್ಸ್‌ಗೆ ಎಚ್ಚರಿಕೆ

ಪುಣೆ (ಪಿಟಿಐ): ಶುಕ್ರವಾರ ಭಾರತ ಎದುರಿನ ಪಂದ್ಯದಲ್ಲಿ ಬೌಲಿಂಗ್ ಮಾಡುವಾಗ ಇಂಗ್ಲೆಂಡ್ ಆಲ್‌ರೌಂಡರ್ ಬೆನ್ ಸ್ಟೋಕ್ಸ್ ಚೆಂಡಿನ ಹೊಳಪು ಹೆಚ್ಚಿಸಲು ಎಂಜಲು ಬಳಕೆ ಮಾಡಿದರು.

ನಾಲ್ಕನೇ ಓವರ್ ಬೌಲಿಂಗ್ ಮಾಡುವ ಸಂದರ್ಭದಲ್ಲಿ ಬೆನ್ ಸ್ಟೋಕ್ಸ್ ಅವರು ಚೆಂಡಿಗೆ ಎಂಜಲು ಹಚ್ಚುವುದನ್ನು ಗಮನಿಸಿದ ಅಂಪೈರ್ ವೀರೇಂದ್ರ ಶರ್ಮಾ ಮತ್ತು ನಿತಿನ್ ಮೆನನ್ ಅವರು ಎಚ್ಚರಿಕೆ ನೀಡಿದರು.

ಐಸಿಸಿಯ ಕೋವಿಡ್ ತಡೆ ಮಾರ್ಗಸೂಚಿಯ ನ್ವಯ ಚೆಂಡಿಗೆ ಎಂಜಲು ಬಳಕೆಯನ್ನು ನಿಷೇಧಿಸಲಾಗಿದೆ.

ಶೂಟಿಂಗ್: ತೇಜಸ್ವಿನಿ–ಸಂಜೀವ್‌ಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ಅನುಭವಿ ಶೂಟಿಂಗ್ ಪಟುಗಳಾದ ಸಂಜೀವ್ ರಜಪೂತ್–ತೇಜಸ್ವಿನಿ ಸಾವಂತ್, ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್‌ನಲ್ಲಿ ಚಿನ್ನದ ಪದಕ ಮುಡಿಗೇರಿಸಿಕೊಂಡಿದ್ದಾರೆ.

ಇಲ್ಲಿಯ ಕರ್ಣಿ ಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಮಿಶ್ರ ತಂಡ ವಿಭಾಗದ 50 ಮೀಟರ್ ರೈಫಲ್ ತ್ರಿ ಪೊಸಿಷನ್ಸ್ ಸ್ಪರ್ಧೆಯಲ್ಲಿ ಶುಕ್ರವಾರ ಅವರು ಅಗ್ರಸ್ಥಾನ ಗಳಿಸಿದರು. ಈ ಸ್ಪರ್ಧೆಯಲ್ಲಿ ಭಾರತದ ಪುರುಷರ ತಂಡಕ್ಕೂ ಚಿನ್ನದ ಪದಕ ಒಲಿಯಿತು.

ಪದಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಭಾರತದ ಬಳಿ ಈಗ ಇರುವ ಒಟ್ಟು ಪದಕಗಳ ಸಂಖ್ಯೆ 25. ಅದರಲ್ಲಿ 12 ಚಿನ್ನ, ಏಳು ಬೆಳ್ಳಿ ಹಾಗೂ ಆರು ಕಂಚು.

ಶುಕ್ರವಾರ ಮಿಶ್ರ ತಂಡ ವಿಭಾಗದ ಫೈನಲ್ಸ್ ಹಣಾಹಣಿಯಲ್ಲಿ ಭಾರತದ ಶೂಟರ್‌ಗಳು 31–29 ಪಾಯಿಂಟ್ಸ್‌ನಿಂದ ಉಕ್ರೇನ್‌ನ ಸೆರಿಯ್ ಕುಲಿಷ್–ಅನ್ನಾ ಇಲಿನಾ ಅವರನ್ನು ಹಿಂದಿಕ್ಕಿದರು.

ಇದೇ ವಿಭಾಗದಲ್ಲಿ ಸ್ಪರ್ಧಿಸಿದ್ದ ಐಶ್ವರಿಪ್ರತಾಪ್ ಸಿಂಗ್ ತೋಮರ್–ಸುನಿಧಿ ಚೌಹಾನ್ 31–15ರಿಂದ ಅಮೆರಿಕದ ತಿಮೋಥಿ ಶೆರಿ–ವರ್ಜಿನಿಯಾ ಥ್ರೇಷರ್ ಅವರ ಸವಾಲನ್ನು ಮೀರಿ ಕಂಚಿನ ಪದಕಕ್ಕೆ ಮುತ್ತಿಟ್ಟರು.

ಅರ್ಹತಾ ಸುತ್ತಿನಲ್ಲಿ ರಜಪೂತ್–ತೇಜಸ್ವಿನಿ ಒಟ್ಟು 588 ಸ್ಕೋರ್ ಕಲೆಹಾಕಿ ಅಗ್ರಸ್ಥಾನ ಗಳಿಸಿದ್ದರು. ತೋಮರ್–ಸುನಿಧಿ ಗಳಿಸಿದ್ದು 580 ಪಾಯಿಂಟ್ಸ್. ಇವರು ಅರ್ಹತಾ ಸುತ್ತಿನಲ್ಲಿ ನಾಲ್ಕನೇ ಸ್ಥಾನ ಪಡೆದು ಫೈನಲ್ಸ್‌ಗೆ ಅರ್ಹತೆ ಪಡೆದಿದ್ದರು.

ಪುರುಷರ ವಿಭಾಗದಲ್ಲೂ ಪಾರಮ್ಯ: ನೀರಜ್ ಕುಮಾರ್, ಸ್ವಪ್ನಿಲ್ ಕುಸಾಲೆ ಹಾಗೂ ಚೈನ್ ಸಿಂಗ್ ಅವರನ್ನೊಳಗೊಂಡ ಭಾರತದ ಪುರುಷರ ತಂಡವೂ 50 ಮೀ. ರೈಫಲ್ 3 ಪೊಸಿಷನ್ಸ್‌ನಲ್ಲಿ ಅಗ್ರಸ್ಥಾನ ಪಡೆಯಿತು. ಫೈನಲ್ಸ್‌ನಲ್ಲಿ ಈ ಶೂಟರ್‌ಗಳು 47–25 ಪಾಯಿಂಟ್ಸ್‌ನಿಂದ ಅಮೆರಿಕ ತಂಡವನ್ನು ಮಣಿಸಿದರು.

ಅಮೆರಿಕ ತಂಡದಲ್ಲಿ ನಿಕೊಲಾಸ್ ಮೊವ್‌ರೆರ್, ತಿಮೋಥಿ ಶೆರಿ ಹಾಗೂ ಪ್ಯಾಟ್ರಿಕ್ ಸಂಡರ್ಮನ್ ಇದ್ದರು.

ಗುರುವಾರ ನಡೆಯಬೇಕಿದ್ದ ಈ ಸ್ಪರ್ಧೆಯ ಫೈನಲ್‌ನಲ್ಲಿ ಹಂಗರಿ ತಂಡದ ಶೂಟರ್‌ಗಳು ಆಂತರಿಕ ಕಲಹದಿಂದಾಗಿ ಹಿಂದೆ ಸರಿದಿದ್ದರು. ಹೀಗಾಗಿ ಮೂರನೇ ಸ್ಥಾನದಲ್ಲಿದ್ದ ಅಮೆರಿಕಕ್ಕೆ ಈ ಅವಕಾಶ ಸಿಕ್ಕಿತ್ತು.


ಸಂಜೀವ್, ತೇಜಸ್ವಿನಿ –ಪಿಟಿಐ ಚಿತ್ರ

ಇಸ್ರೇಲ್: ಮತಎಣಿಕೆ ಪೂರ್ಣ

ಟೆಲ್ ಅವಿವ್ (ರಾಯಿಟರ್ಸ್): ಇಸ್ರೇಲ್‌ನಲ್ಲಿ ರಾಜಕೀಯ ಅನಿಶ್ಚಿತತೆ ಮುಂದುವರಿದಿದೆ. ಚುನಾವಣೆಯ ಮತಗಳ ಎಣಿಕೆ ಮುಗಿದಿದ್ದು, ಪ್ರಧಾನಿ ಬೆಂಜಮಿನ್ ನೆತನ್ಯಾಹು ಅಥವಾ ಅವರ ವಿರೋಧಿ ಬಣಕ್ಕೆ ಸರಳ ಬಹುಮತ ಲಭಿಸಿಲ್ಲ.

ಇಸ್ರೇಲ್‌ನ ಕೇಂದ್ರ ಚುನಾವಣಾ ಸಮಿತಿಯು ಪ್ರಕಟಿಸಿದ ಅಂತಿಮ ಫಲಿತಾಂಶದ ಪ್ರಕಾರ, ನೆತನ್ಯಾಹು ನೇತೃತ್ವದ ಮೈತ್ರಿಕೂಟ 52 ಸ್ಥಾನಗಳನ್ನು, ಅವರ ವಿರೋಧಿ ಬಣ 57 ಸ್ಥಾನಗಳನ್ನು ಗೆದ್ದಿದೆ. ಸಂಸತ್ತಿನ ಒಟ್ಟು ಸದಸ್ಯ ಬಲ 120 ಆಗಿದ್ದು, ಅರ್ಧಕ್ಕಿಂತ ಹೆಚ್ಚು ಸ್ಥಾನಗಳನ್ನು ಸರಳ ಬಹುಮತಕ್ಕೆ ಪಡೆಯಬೇಕಿದೆ.

ಇಸ್ರೇಲ್‌ನಲ್ಲಿ ಎರಡು ವರ್ಷಗಳಲ್ಲಿ ನಾಲ್ಕು ಬಾರಿ ಚುನಾವಣೆ ನಡೆದಿದ್ದು, ಅನಿಶ್ಚಿತ ಫಲಿತಾಂಶವೇ ಬಂದಿತ್ತು. ನಾಲ್ಕು ಚುನಾವಣೆಗಳಲ್ಲಿ ನೆತನ್ಯಾಹು ಅವರು ಸರಳ ಬಹುಮತ ಪಡೆಯಲು ಯಶಸ್ವಿಯಾಗಿಲ್ಲ.

ಅವರು ಸ್ವತಃ ಸ್ಪರ್ಧೆಯಿಂದ ಹಿಂದೆ ಸರಿದು ಹೊಸ ಅಧ್ಯಾಯ ಆರಂಭವಾಗಲು ಅವಕಾಶ ಕಲ್ಪಿಸಬೇಕು ಎಂಬ ಮಾತು ಕೇಳಿಬರುತ್ತಿದೆ.

ಬಾಂಗ್ಲಾ ಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹ: ಮೋದಿ

ಢಾಕಾ (ಪಿಟಿಐ): 'ನನಗೆ ಆಗ 20–22 ವರ್ಷ ಇರಬಹುದೇನೋ. ನಾನು ಮತ್ತು ನನ್ನ ಸಹಪಾಠಿಗಳು ಬಾಂಗ್ಲಾದೇಶದ ಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹ ಮಾಡಿದ್ದೆವು' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಬಾಂಗ್ಲಾದೇಶದ ಸ್ವಾತಂತ್ರ್ಯಕ್ಕಾಗಿ 1971ರಲ್ಲಿ ನಡೆದಿದ್ದ ಯುದ್ಧದ ದಿನಗಳನ್ನು ಉಲ್ಲೇಖಿಸಿ ಅವರು ಈ ಮಾತು ಹೇಳಿದರು.

ಎರಡು ದಿನದ ಭೇಟಿಗಾಗಿ ಇಲ್ಲಿಗೆ ಬಂದಿರುವ ಪ್ರಧಾನಿ, ಬಾಂಗ್ಲಾದೇಶ ಸ್ವಾತಂತ್ರ್ಯೋತ್ಸವದ 50ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. 1971ರ ಸ್ವಾತಂತ್ರ್ಯದ ಹೋರಾಟದಲ್ಲಿ ಬಂಗಬಂಧು ಶೇಖ್ ಮುಜಿಬುರ್ ರೆಹಮಾನ್ ಅವರ ನಾಯಕತ್ವ ಮತ್ತು ಭಾರತೀಯ ಸೇನೆಯ ಕೊಡುಗೆಯನ್ನು ಅವರು ಸ್ಮರಿಸಿ, ಶ್ಲಾಘಿಸಿದರು.

1971ರ ಯುದ್ಧದ ದಿನಗಳನ್ನು ಸ್ಮರಿಸಿದ ಅವರು, ಪಾಕಿಸ್ತಾನದ ಸೇನೆಯು ಪೂರ್ವ ಪಾಕಿಸ್ತಾನದಲ್ಲಿ (ಈಗಿನ ಬಾಂಗ್ಲಾದೇಶ) ಜನರ ಮೇಲೆ ನಡೆಸಿದ್ದ ದೌರ್ಜನ್ಯದ ಚಿತ್ರಗಳು, ಭಾರತೀಯರಲ್ಲಿ ಕಳವಳವನ್ನು ಮೂಡಿಸಿದ್ದವು ಎಂದು ಹೇಳಿದರು.

'ಇದೊಂದು ಅವಿಸ್ಮರಣೀಯ ದಿನ. ಬಾಂಗ್ಲಾದೇಶ ಈ ಸಮಾರಂಭದಲ್ಲಿ ನನ್ನನ್ನೂ ಭಾಗಿಯಾಗಿಸಿದ್ದು ಸಂತಸ ಮೂಡಿಸಿದೆ' ಎಂದು ಮೋದಿ ಹೇಳಿದರು.

ಮುಂದಿನ 25 ವರ್ಷ ಭಾರತ ಮತ್ತು ಬಾಂಗ್ಲಾದೇಶಕ್ಕೆ ನಿರ್ಣಾಯಕವಾದುದು. ಪರಂಪರೆ, ಅಭಿವೃದ್ಧಿ, ಪ್ರಗತಿಯ ಗುರಿ ಮತ್ತು ಅವಕಾಶ ಎಲ್ಲವನ್ನು ಹಂಚಿಕೆ ಮಾಡಿಕೊಳ್ಳಬೇಕಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದರು.

ಗಾಂಧಿ ಶಾಂತಿ ಪ್ರಶಸ್ತಿಯನ್ನು ಶೇಖ್ ಮುಜಿಬುರ್ ರೆಹಮಾನ್ ಅವರಿಗೆ ಮರಣೋತ್ತರವಾಗಿ ನೀಡಿದ್ದು, ಕಳೆದ ವಾರ ಪ್ರಕಟಿಸಲಾಗಿತ್ತು. ಕಾರ್ಯಕ್ರಮದ ಆರಂಭದಲ್ಲಿ 'ಗಾಂಧಿ ಶಾಂತಿ ಪ್ರಶಸ್ತಿ'ಯನ್ನು ಪ್ರಧಾನಿ ಮೋದಿ ಅವರು, ಬಂಗಬಂಧು ಅವರ ಪುತ್ರಿಯರಾದ, ಬಾಂಗ್ಲಾ ಪ್ರಧಾನಿ ಶೇಖ್ ಹಸೀನಾ ಮತ್ತು ಶೇಖ್ ರೆಹನಾ ಅವರಿಗೆ ಪ್ರಧಾನ ಮಾಡಿದರು.


ಬಾಂಗ್ಲಾದೇಶದ ಸ್ಥಾಪಕ ಶೇಖ್ ಮುಜಿಬುರ್ ರೆಹಮಾನ್ ಅವರಿಗೆ ಮರಣೋತ್ತರವಾಗಿ ನೀಡಲಾದ ಗಾಂಧಿ ಶಾಂತಿ ಪ್ರಶಸ್ತಿಯನ್ನು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಢಾಕಾದಲ್ಲಿ ಅವರ ಪುತ್ರಿಯರಾದ ಬಾಂಗ್ಲಾ ಪ್ರಧಾನಿ ಶೇಖ್ ಹಸೀನಾ ಮತ್ತು ಶೇಖ್ ರೆಹನಾ ಅವರಿಗೆ ಹಸ್ತಾಂತರಿಸಿದರು.

ಇಮ್ರಾನ್ ವಿರುದ್ಧ ಟೀಕೆ

ಇಸ್ಲಾಮಾಬಾದ್ (ಪಿಟಿಐ): ಕೊರೊನಾ ಸೋಂಕಿಗೆ ಒಳಗಾಗಿದ್ದರೂ ತಮ್ಮ ಮಾಧ್ಯಮ ತಂಡದೊಂದಿಗೆ ಭೌತಿಕವಾಗಿ ಸಭೆ ನಡೆಸಿರುವ ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಅವರು ವಿರೋಧ ಪಕ್ಷ ಹಾಗೂ ಸಾರ್ವಜನಿಕರಿಂತ ತೀವ್ರ ಟೀಕೆಗೆ ಗುರಿಯಾಗಿದ್ದಾರೆ.

ಇಮ್ರಾನ್ ಖಾನ್ ಗುರುವಾರ ಕೋವಿಡ್ ಲಸಿಕೆಯ ಮೊದಲ ಡೋಸೇಜ್ ತೆಗೆದುಕೊಂಡಿದ್ದರು. ಶನಿವಾರ ಅವರಿಗೆ ಕೊರೊನಾ ಸೋಂಕು ದೃಢಪಟ್ಟಿತ್ತು. ಇದೇ ದಿನ, ದೇಶದ ಪ್ರಥಮ ಮಹಿಳೆ ಬುಶ್ರಾ ಬಿಬಿ ಅವರಿಗೂ ಕೊರೊನಾ ಸೋಂಕು ದೃಢಪಟ್ಟಿತ್ತು.

ಇಮ್ರಾನ್ ಖಾನ್ ಅವರು ತಮ್ಮ 'ಬನಿಗಾಲ' ನಿವಾಸದಲ್ಲಿ ಗುರುವಾರ ಮಾಧ್ಯಮ ತಂಡದೊಂದಿಗೆ ಸಭೆ ನಡೆಸಿದ್ದಾರೆ. ಸಭೆ ನಡೆಸುತ್ತಿರುವ ಫೋಟೊವನ್ನು, ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಶಿಬ್ಲಿ ಫರಾಜ್ ಮತ್ತು ಶಾಸಕ ಫೈಸಲ್ ಜಾವೇದ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದರು. ಇದಾದ ನಂತರ ಪ್ರಧಾನ ಮಂತ್ರಿ ವಿರುದ್ಧ ಸಾರ್ವಜನಿಕರಿಂದ ತೀವ್ರ ಟೀಕೆಗಳು ವ್ಯಕ್ತವಾಗಿವೆ ಎಂದು ಡಾನ್ ಪತ್ರಿಕೆ ವರದಿ ಮಾಡಿದೆ.

ಮ್ಯಾನ್ಮಾರ್: 320 ಮಂದಿ ಸಾವು

ಯಾಂಗೂನ್ (ಎಪಿ): ಮ್ಯಾನ್ಮಾರ್‌ನಲ್ಲಿ ಮಿಲಿಟರಿ ದಂಗೆಯನ್ನು ವಿರೋಧಿಸಿ ನಡೆಯುತ್ತಿರುವ ಪ್ರತಿಭಟನೆಯು ತೀವ್ರಗೊಂಡಿದ್ದು, ಇದುವರೆಗೆ ಸೇನಾ ಹಿಂಸಾಚಾರದಲ್ಲಿ 320 ಮಂದಿ ಮೃತಪಟ್ಟಿದ್ದಾರೆ ಎಂದು ಮ್ಯಾನ್ಮಾರ್‌ನ ರಾಜಕೀಯ ಕೈದಿಗಳ ಸಂಘಟನೆ ತಿಳಿಸಿದೆ.

'ಸೇನಾ ಹಿಂಸಾಚಾರದಿಂದಾಗಿ ಗುರುವಾರ 11 ಮಂದಿ ಮೃತಪಟ್ಟಿದ್ದಾರೆ. ಅದರ ಹಿಂದಿನ ದಿನವೂ 23 ಮಂದಿ ಸಾವಿಗೀಡಾಗಿದ್ದರು.

ಫೆಬ್ರುವರಿ 1ರಿಂದ ಗುರುವಾರದವರೆಗೆ ಒಟ್ಟು 2,981 ಮಂದಿಯನ್ನು ಬಂಧಿಸಲಾಗಿದೆ' ಎಂದು ಸಂಘಟನೆ ಹೇಳಿದೆ.

ಮ್ಯಾನ್ಮಾರ್‌ನ ಸೇನಾ ಒಡೆತನದ ಪ್ರಮುಖ ಎರಡು ಕಂಪನಿಗಳ ವಿರುದ್ಧ ಕಠಿಣ ನಿರ್ಬಂಧ ಹೇರುವುದಾಗಿ ಅಮೆರಿಕ ಮತ್ತು ಬ್ರಿಟನ್ ಘೋಷಿಸಿವೆ.

ಹಿಮದಲ್ಲಿ ಬಿದ್ದು 'ಎದ್ದ' ವಿನೋದ್

ದುರಂತಗಳಿಂದ ಎದೆಗುಂದದೆ ಮುನ್ನಡೆದ ಅಥ್ಲೀಟ್

• ವಿಕ್ರಂ ಕಾಂತಿಕೆರೆ

ಬೆಂಗಳೂರು: ಸೇನೆಯಲ್ಲಿದ್ದ ತಂದೆ ಶತ್ರುಗಳಿಗೆ ಎದೆಯೊಡ್ಡಿ ಕಾಲು ಕಳೆದುಕೊಂಡರು. ಅನುಕಂಪದ ಆಧಾರದಲ್ಲಿ ಕೆಲಸ ಸಿಕ್ಕಿತು. ಆದರೆ ಎರಡೇ ವರ್ಷದಲ್ಲಿ ಹಿಮದಡಿ ಸಿಲುಕಿ ಕಾಲುಗಳ ಸ್ವಾಧೀನ ಕಳೆದುಹೋಯಿತು. ಅಂಗಡಿ ಇಟ್ಟು ಜೀವನ ಸಾಗಿಸಲು ಪ್ರಯತ್ನಿಸುತ್ತಿರುವಾಗಲೇ ತಾಯಿ ಇಲ್ಲವಾದಳು. ದುರಂತಗಳು ಒಂದರ ಮೇಲೆ ಒಂದರಂತೆ ಬಂದು ಬಡಿದರೂ ಎದೆಗುಂದದ ವಿನೋದ್ ಕುಮಾರ್ ಮಲಿಕ್ ಕೊನೆಗೆ ಬದುಕು ಕಂಡುಕೊಂಡದ್ದು ಕ್ರೀಡೆಯಲ್ಲಿ; ಹರಿಯಾಣದ ಈ ಪ್ಯಾರಾ ಅಥ್ಲೀಟ್‌ಗೆ ಬೆಂಬಲವಾಗಿ ನಿಂತದ್ದು ಬೆಂಗಳೂರು.

2002ರಲ್ಲಿ ಸಿಯಾಚಿನ್‌ನಲ್ಲಿ ಸಂಭವಿಸಿದ ದುರಂತದಲ್ಲಿ ಬಿಎಫ್‌ಎಫ್ 22ನೇ ಬೆಟಾಲಿಯನ್‌ನ ವಿನೋದ್ ಕುಮಾರ್ ಒಳಗೊಂಡಂತೆ ನಾಲ್ವರು ಬೆಟ್ಟ ಹತ್ತುವಾಗ ಜಾರಿ ಬಿದ್ದರು. ಮೂವರು ಸಾವಿಗೀಡಾಗಿದರು. ವಿನೋದ್ 24 ತಾಸು ಹಿಮದಡಿ ಇದ್ದರು. ಕಣ್ಣುಬಿಟ್ಟದ್ದು ಸೇನಾ ಆಸ್ಪತ್ರೆಯಲ್ಲಿ. ಆಗ ಕಾಲುಗಳು ಮತ್ತು ಎಡಗೈಯಲ್ಲಿ ಸ್ವಾಧೀನ ಇರಲಿಲ್ಲ. ತಿಂಗಳುಗಳ ಚಿಕಿತ್ಸೆ ನಂತರ ಕುಳಿತುಕೊಳ್ಳಲಷ್ಟೇ ಸಾಧ್ಯವಾಯಿತು.

ಕಿರಾಣಿ ಅಂಗಡಿ ಇಟ್ಟುಕೊಂಡಿದ್ದ ವಿನೋದ್ 2016ರ ರಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ದೀಪಾ ಮಲಿಕ್ ಪದಕ ಗೆದ್ದಾಗ ಪುಳಕಗೊಂಡರು. ಅಂಗವಿಕಲರಿಗೆ ಕ್ರೀಡೆಯಲ್ಲಿ ಸಾಧನೆ ಮಾಡಲು ಅವಕಾಶ ಇದೆ ಎಂದು ತಿಳಿದಿದ್ದು ಆಗಲೇ. '30ನೇ ವಯಸ್ಸಿನಲ್ಲಿ ದೀಪಾ ಅವರು ಪದಕ ಗೆದ್ದಿದ್ದರು. ಅವರಿಗೆ ಸಾಧ್ಯವಾದದ್ದು ನಮಗ್ಯಾಗೆ ಆಗದು ಎಂದುಕೊಂಡು ಕ್ರೀಡಾ ಕ್ಷೇತ್ರಕ್ಕೆ ಲಗ್ಗೆ ಇಟ್ಟೆ' ಎನ್ನುತ್ತಾರೆ ವಿನೋದ್.

ರೋಹ್ಟಕ್‌ನಲ್ಲಿ ಡಿಸ್ಕಸ್ ಥ್ರೋ ಅಭ್ಯಾಸ ಆರಂಭವಾಯಿತು. ಆದರೆ ಅವರ ಆಶಯ ನಿಜ ಅರ್ಥದಲ್ಲಿ ಈಡೇರಿದ್ದು ಸತ್ಯನಾರಾಯಣ ಅವರ ಪರಿಚಯ ಆದ ಮೇಲೆ. ದೆಹಲಿಯಲ್ಲಿ ಸತ್ಯನಾರಾಯಣ ಅವರನ್ನು ಭೇಟಿಯಾದ ಅವರು ಬೆಂಗಳೂರು ಸೇರಿದರು. ಸಾಯ್ ಕೇಂದ್ರದಲ್ಲಿ ಅಭ್ಯಾಸ ಆರಂಭವಾಯಿತು. ಪ್ಯಾರಿಸ್‌ನಲ್ಲಿ ನಡೆದ ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಕೂದಲೆಳೆ ಅಂತರದಲ್ಲಿ ಕಂಚಿನ ಪದಕ ಕೈತಪ್ಪಿತು. ಆದರೆ ಈ ವರ್ಷದ ಫೆಬ್ರುವರಿಯಲ್ಲಿ ದುಬೈನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದು ಟೋಕಿಯೊ ಪ್ಯಾರಾಲಿಂಪಿಕ್ಸ್‌ಗೆ ಟಿಕೆಟ್ ಗಿಟ್ಟಿಸಿಕೊಂಡರು.


ವಿನೋದ್ ಕುಮಾರ್ ಮಲಿಕ್ –ಪ್ರಜಾವಾಣಿ ಚಿತ್ರ/ರಂಜು ಪಿ

ಚಿನ್ನದ ಸಂಭ್ರಮ

ಪ್ಯಾರಾಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದರೂ ಈ ವರೆಗೆ ಚಿನ್ನ ಗೆಲ್ಲಲಾಗದ ಕೊರಗು 41 ವರ್ಷದ ವಿನೋದ್ ಕುಮಾರ್ ಅವರನ್ನು ಕಾಡುತ್ತಿತ್ತು. ಆ ಬೇಸರ ಬೆಂಗಳೂರಿನಲ್ಲಿ ನೀಗಿದೆ. ಎಫ್ 53 ವಿಭಾಗದ ಸ್ಪರ್ಧಿಯಾಗಿರುವ ಅವರು ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಶುಕ್ರವಾರ 20.92 ಮೀಟರ್ಸ್ ಅಂತರದ ಸಾಧನೆಯೊಂದಿಗೆ ಚಿನ್ನ ಗೆದ್ದರು. ರಾಷ್ಟ್ರೀಯ ಮಟ್ಟದಲ್ಲಿ ಈ ಹಿಂದೆ ಮೂರು ಕಂಚಿನ ಪದಕಗಳು ಅವರಿಗೆ ಲಭಿಸಿದ್ದವು.

ಬದುಕಿಗೆ ತಿರುವು ಕೊಟ್ಟ, ಕ್ರೀಡಾ ಜೀವನಕ್ಕೆ ಚಿನ್ನದ ಹೊಳಪು ನೀಡಿದ ಬೆಂಗಳೂರಿನ ಬಗ್ಗೆ ವಿನೋದ್ ಅಭಿಮಾನದ ನುಡಿಗಳನ್ನಾಡಿದರು. 'ಪ್ರಜಾವಾಣಿ' ಜೊತೆ ಮಾತನಾಡಿದ ಅವರು 'ಇಲ್ಲಿನ ಹವಾಮಾನ ಕ್ರೀಡಾ ಸಾಧನೆಗೆ ಪೂರಕವಾಗಿದೆ. ಜನರಂತೂ ಹೃದಯ ವೈಶಾಲ್ಯ ಇರುವವರು' ಎಂದರು. 'ಆಗುವುದೆಲ್ಲವೂ ಒಳ್ಳೆಯದಕ್ಕೆ. ಕಷ್ಟಗಳಿಗೆ ಧೈರ್ಯಗೆಡಬಾರದು. ಅಂಗಾಂಗಗಳಿಗೆ ವೈಕಲ್ಯ ಸಂಭವಿಸಿದರೂ ಮನಸ್ಸು ಗಟ್ಟಿಯಾಗಿರಬೇಕು. ಮುಂದೆ ಸಾಗಲು ಅದರಿಂದ ಅನುಕೂಲವಾಗುತ್ತದೆ' ಎಂಬುದು ಅವರ ಸಿದ್ಧಾಂತ.

ರಾಧಾ, ರಕ್ಷಿತಾ, ಶರತ್, ವಸಂತ್‌ಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ರಾಧಾ ವಿ ಮತ್ತು ರಕ್ಷಿತಾ, ಶುಕ್ರವಾರ ಕೊನೆಗೊಂಡ ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್‌ನ ಓಟದ ಸ್ಪರ್ಧೆಯಲ್ಲಿ ಚಿನ್ನ ಗಳಿಸಿದರು. ಪುರುಷರ ವಿಭಾಗದಲ್ಲಿ ಶರತ್ ಎಂ.ಎಸ್ ಮತ್ತು ವಸಂತ ಕುಬಿಹಾಳ ಮಿಂಚಿದರು.

ಕರ್ನಾಟಕ ಒಟ್ಟಾರೆ ಆರು ಚಿನ್ನ, ಐದು ಬೆಳ್ಳಿ ಮತ್ತು ಏಳು ಕಂಚಿನ ಪದಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನ ಗಳಿಸಿತು. 33 ಚಿನ್ನ, 24 ಬೆಳ್ಳಿ ಮತ್ತು 15 ಕಂಚಿನ ಪದಕ ಗೆದ್ದ ಹರಿಯಾಣ ಮೊದಲ ಸ್ಥಾನ ಗಳಿಸಿತು.

13 ಚಿನ್ನ, 14 ಬೆಳ್ಳಿ ಮತ್ತು 15 ಕಂಚಿನ ಪದಕ ಗೆದ್ದ ದೆಹಲಿ ಎರಡನೇ ಸ್ಥಾನವನ್ನೂ ಎಂಟು ಚಿನ್ನ, ಏಳು ಬೆಳ್ಳಿ ಮತ್ತು ಐದು ಕಂಚು ಗೆದ್ದ ತಮಿಳುನಾಡು ಮೂರನೇ ಸ್ಥಾನವನ್ನೂ ಗಳಿಸಿತು.

ಕೊನೆಯ ದಿನದ ಫಲಿತಾಂಶಗಳು (ಕರ್ನಾಟಕದ್ದು ಮಾತ್ರ): ಪುರುಷರ ಟಿ42/63 ವಿಭಾಗದ 200 ಮೀ ಓಟ: ವಸಂತ ಕುಬಿಹಾಳ–1. ಕಾಲ: 24.46 ಸೆ; ಟಿ12/13 ವಿಭಾಗದ 5000 ಮೀ ಓಟ: ಶರತ್ ಎಂ.ಎಸ್–1. ಕಾಲ: 16:21.27 ನಿ; ಟಿ11 ವಿಭಾಗದ 5000 ಮೀ ಓಟ: ದೀಪಕ್ ಎಚ್.ಎಸ್–2. ಕಾಲ: 21;00.33 ನಿ; ಎಫ್ 51 ವಿಭಾಗದ ಕ್ಲಬ್ ಥ್ರೋ: ಅನಂತ ರಾವ್–3. ಅಂತರ: 21.01 ಮೀ; ಮಹಿಳೆಯರ ಟಿ11 ವಿಭಾಗದ 1500 ಮೀ ಓಟ: ರಕ್ಷಿತಾ ಆರ್–1. ಕಾಲ: 5:36.88 ನಿ; ಟಿ12.13 ವಿಭಾಗದ 1500 ಮೀ ಓಟ: ರಾಧಾ ವಿ–1. ಕಾಲ: 5:17.27 ನಿ; ಜಯಲಕ್ಷ್ಮಿ ಬಿ–2. ಕಾಲ: 6:17.76 ನಿ.

ಮುಂಬೈ ರೇಸ್

ಬೆಲ್ಲಟಾರ್ ಗೆಲ್ಲುವ ನಿರೀಕ್ಷೆ

ಸೋನಿ ಬ್ರಾರ್ ಟ್ರೋಫಿ ಶನಿವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಬೆಲ್ಲಟಾರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.45ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸಫ್ದಾರ್ 1, ಫಾರೆವರ್ ಫ್ರೀ 6, ಕೊಲೊಸಿಯಮ್ 7
2ನೇ ರೇಸ್: ಬೆಲ್ಲಟಾರ್ 4, ಭಕ್ತಾವರ್ 2, ಮೆಜೆಸ್ಟಿಕ್ ವಾರಿಯರ್ 3
3ನೇ ರೇಸ್: ರೈಸಿಂಗ್ ಬ್ರೇವ್ 1, ಪೆನ್ಜುಲ 6, ಡೌಸಬೆಲ್ 9
4ನೇ ರೇಸ್: ಮೂನ್ ರಿವರ್ 2, ಟಚ್ ಆಫ್ ಫೈತ್ 3, ಅಸೆಂಬುರ್ 5
5ನೇ ರೇಸ್: ಕ್ವಾರೆನ್ಸಿಯಾ 7, ಬಾವಾಜಿ 2, ಬೀಜೆ 1
6ನೇ ರೇಸ್: ಐರಾ 3, ಮೆಲಿಸಾಂಡ್ರೆ 4, ಮಿಂಕ್ಸ್ 1
7ನೇ ರೇಸ್: ಗೋಶಾಕ್ 2, ಸಾಂಡಲ್ವಾನ್ 1, ಫೆನ್ಸಿಂಗ್ 9
8ನೇ ರೇಸ್: ಸರ್ಕಸ್ ಕ್ವೀನ್ 4, ರೆಡ್ ಮೆರ್ಲಾಟ್ 1, ವಿಕ್ಟೋರಿನ 5
9ನೇ ರೇಸ್: ಇಮ್ಮೆಸ್ಯೂರಬಲ್ 1, ಫಾಸ್‌ಬೈಂಡರ್ 4, ಹಿಯೋಕ್ವೇನ್ 7

ಉತ್ತಮ ಬೆಟ್: ಸರ್ಕಸ್ ಕ್ವೀನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	3,4,5	6,7,8	7,8,9

ಕಾನ್ವೆ, ಡೆರಿಲ್ ಶತಕಗಳ ಅಬ್ಬರ

ವೆಲ್ಲಿಂಗ್ಟನ್ (ಎಪಿ): ಏಕದಿನ ಮಾದರಿಯಲ್ಲಿ ಮೊದಲ ಬಾರಿ ಶತಕಗಳನ್ನು ಗಳಿಸಿದ ಡೆವೊನ್ ಕಾನ್ವೆ ಹಾಗೂ ಆಲ್‌ರೌಂಡರ್ ಡೆರಿಲ್ ಮಿಚೆಲ್ ನ್ಯೂಜಿಲೆಂಡ್ ತಂಡಕ್ಕೆ ಭರ್ಜರಿ ಜಯ ತಂದುಕೊಟ್ಟರು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 50 ಓವರ್‌ಗಳಲ್ಲಿ 6ಕ್ಕೆ 318 (ಡೆವೊನ್ ಕಾನ್ವೆ 126, ಡೆರಿಲ್ ಮಿಚೆಲ್ ಔಟಾಗದೆ 100; ರುಬೆಲ್ ಹುಸೇನ್ 70ಕ್ಕೆ 3, ಸೌಮ್ಯ ಸರ್ಕಾರ್ 37ಕ್ಕೆ 1). **ಬಾಂಗ್ಲಾದೇಶ:** 42.4 ಓವರ್‌ಗಳಲ್ಲಿ 154 (ಮೊಹಮ್ಮದುಲ್ಲಾ ಔಟಾಗದೆ 76; ಮ್ಯಾಟ್ ಹೆನ್ರಿ 27ಕ್ಕೆ4, ಜೇಮ್ಸ್ ನೀಶಮ್ 27ಕ್ಕೆ5, ಕೈಲ್ ಜೇಮಿಸನ್ 30ಕ್ಕೆ 1). **ಫಲಿತಾಂಶ:** ನ್ಯೂಜಿಲೆಂಡ್ ತಂಡಕ್ಕೆ 164 ರನ್‌ಗಳ ಜಯ, ಮೂರು ಪಂದ್ಯಗಳ ಸರಣಿಯಲ್ಲಿ 3–0 ಗೆಲುವು.

ಬ್ಯಾಡ್ಮಿಂಟನ್: ಸೆಮಿಗೆ ಸೈನಾ; ಶ್ರೀಕಾಂತ್‌ಗೆ ಸೋಲು

ಪ್ಯಾರಿಸ್ (ಪಿಟಿಐ): ಭಾರತದ ಸೈನಾ ನೆಹ್ವಾಲ್, ಆರ್ಲಿಯನ್ಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸೆಮಿಫೈನಲ್ ತಲುಪಿದ್ದಾರೆ. ಆದರೆ ಕಿದಂಬಿ ಶ್ರೀಕಾಂತ್ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸೋತು ಹೊರಬಿದ್ದರು.

ಶುಕ್ರವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸೈನಾ 21-19, 17-21, 21-19ರಿಂದ ಅಮೆರಿಕದ ಐರಿಸ್ ವಾಂಗ್ ಅವರನ್ನು ಮಣಿಸಿದರು. ಪುರುಷರ ಸಿಂಗಲ್ಸ್ ಎಂಟರಘಟ್ಟದ



ಸೈನಾ ನೆಹ್ವಾಲ್–ಎಎಫ್‌ಪಿ ಚಿತ್ರ

ಪಂದ್ಯದಲ್ಲಿ ಶ್ರೀಕಾಂತ್ 19-21, 17-21ರಿಂದ ಫ್ರಾನ್ಸ್‌ನ ತೋಮಾ ಜೂನಿಯರ್ ಪೊಪೊವ್ ಎದುರು ಸೋತರು.

ಸೈನಾ, ಎರಡು ವರ್ಷಗಳ ಬಳಿಕ ಪ್ರಮುಖ ಟೂರ್ನಿಯೊಂದರ ಸೆಮಿಫೈನಲ್ ಪ್ರವೇಶಿಸಿದರು. 2019ರ ಜನವರಿಯಲ್ಲಿ ಇಂಡೊನೇಷ್ಯಾ ಮಾಸ್ಟರ್ಸ್ ಟೂರ್ನಿಯಲ್ಲಿ ಅವರು ಪ್ರಶಸ್ತಿ ಜಯಿಸಿದ್ದರು. ನಂತರ ನಿರಾಸೆ ಕಂಡಿದ್ದರು, ಮಹಿಳಾ ಡಬಲ್ಸ್ ವಿಭಾಗದಲ್ಲಿ ಅಶ್ವಿನಿ ಪೊನ್ನಪ್ಪ ಹಾಗೂ ಎನ್.ಸಿಕ್ಕಿರೆಡ್ಡಿಯೂ ನಾಲ್ಕರ ಘಟ್ಟಕ್ಕೆ ಲಗ್ಗೆ ಯಿಟ್ಟರು. ಭಾರತದ ಜೋಡಿಯು ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 21-14, 21-18ರಿಂದ ಮೂರನೇ ಶ್ರೇಯಾಂಕದ, ಇಂಗ್ಲೆಂಡ್‌ನ ಕ್ಲೋ ಬಿರ್ಚ್ ಹಾಗೂ ಲಾರೆನ್ ಸ್ಮಿತ್ ಅವರನ್ನು ಪರಾಭವಗೊ ಳಿಸಿದರು. ಭಾರತದ ಜೋಡಿ ಇಲ್ಲಿ ಎಂಟನೇ ಶ್ರೇಯಾಂಕ ಪಡೆದಿದೆ.

ನಾಲ್ಕರ ಘಟ್ಟಕ್ಕೆ ಕೃಷ್ಣ-ವಿಷ್ಣು: ಪುರುಷರ ಡಬಲ್ಸ್ ವಿಭಾಗದಲ್ಲಿ ಭಾರತದ ಕೃಷ್ಣ ಪ್ರಸಾದ್ ಗರ್ಗ್ ಹಾಗೂ ವಿಷ್ಣುವರ್ಧನ್ ಗೌಡ ಪಂಜಾಲ ಅವರೂ ಸೆಮಿಫೈನಲ್‌ಗೆ ಕಾಲಿಟ್ಟರು. ಎಂಟರಘಟ್ಟದ ಪಂದ್ಯದಲ್ಲಿ ಈ ಜೋಡಿ 21-17, 10-21, 22-20ರಿಂದ ಕ್ರಿಸ್ಟೊ ಪೊಪೊವ್-ತೋಮಾ ಜೂನಿಯರ್ ಪೊಪೊವ್ ಎದುರು ಗೆದ್ದರು. ಮತ್ತೊಂದು ಹಣಾಹಣಿಯಲ್ಲಿ ಎಂ.ಆರ್.ಅರ್ಜುನ್-ಧ್ರುವ ಕಪಿಲ 19-21, 21-18, 21-23ರಿಂದ ಕಾಲಮ್ ಹೆಮಿಂಗ್- ಸ್ಟೀವನ್ ಸ್ಟಾಲ್‌ವುಡ್ ಅವರಿಗೆ ಸೋತರು.

ಲಿಯೋನ್ ಮೆಂಡೊನ್ಸಾಗೆ ಪ್ರಶಸ್ತಿ

ಚೆನ್ನೈ (ಪಿಟಿಐ): ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ಲಿಯೋನ್ ಲ್ಯೂಕ್ ಮೆಂಡೊನ್ಸಾ, ಹಂಗರಿಯ ಕಿಸುಜಲ್ಲಾಸ್‌ನಲ್ಲಿ ನಡೆದ ಎರಡನೇ ಕುಮಾನಿಯಾ ಜಿಎಂ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದರು. ಗುರುವಾರ ಕೊನೆಗೊಂಡ ಟೂರ್ನಿಯ ಒಂಬತ್ತು ಸುತ್ತುಗಳಲ್ಲಿ 6.5 ಪಾಯಿಂಟ್ಸ್ ಕಲೆಹಾಕಿದ ಅವರು ಅಗ್ರಸ್ಥಾನ ಗಳಿಸಿದರು.

ಗೋವಾದ 15 ವರ್ಷದ ಲಿಯೋನ್, ಕಳೆದ ವರ್ಷದ ಡಿಸೆಂಬರ್‌ನಲ್ಲಿ ಭಾರತದ 67ನೇ ಗ್ರ್ಯಾಂಡ್‌ಮಾಸ್ಟರ್ ಎನಿಸಿಕೊಂಡಿದ್ದರು. ಈ ಟೂರ್ನಿಯಲ್ಲಿ ಅವರು ಐದು ಸುತ್ತುಗಳಲ್ಲಿ ಡ್ರಾ ಹಾಗೂ ನಾಲ್ಕರಲ್ಲಿ ಗೆಲುವು ಸಾಧಿಸಿದ್ದರು.



ಲಿಯೋನ್

'ವಿಶ್ವ ಸ್ಕೂಲ್ ಆನ್‌ಲೈನ್ ಟೂರ್ನಿಗಳಲ್ಲಿ ನಿರಂತರವಾಗಿ ಭಾಗವಹಿಸಿದ್ದರೂ, ಇಲ್ಲಿ ಪ್ರಶಸ್ತಿ ಗಳಿಸಿರುವುದು ಖುಷಿಯ ಕ್ಷಣ' ಎಂದು ಮೆಂಡೊನ್ಸಾ ಹೇಳಿದರು. ಟೂರ್ನಿಯಲ್ಲಿ ಐದು ಯುವ ಗ್ರ್ಯಾಂಡ್‌ಮಾಸ್ಟರ್‌ಗಳನ್ನು ಅವರು ಹಿಂದಿಕ್ಕಿದರು.

ಟೂರ್ನಿಯಲ್ಲಿ ಲಿಯೋನ್ (ಇಎಲ್‌ಒ ರೇಟಿಂಗ್ 2532) ಹಾಗೂ ಸ್ಲೋವೆಕಿಯಾದ ಮಿಲಾನ್ ಪ್ಯಾಚೆರ್ ಸಮನಾದ ಪಾಯಿಂಟ್ಸ್ ಗಳಿಸಿದ್ದರು. ಆದರೆ ಟೈಬ್ರೇಕ್‌ನಲ್ಲಿ ಗಳಿಸಿದ ಉತ್ತಮ ಸ್ಕೋರ್ ಆಧಾರದಲ್ಲಿ ಲಿಯೋನ್ ಅವರಿಗೆ ಪ್ರಶಸ್ತಿ ಒಲಿಯಿತು.

ಮಹಿಳಾ ಫುಟ್‌ಬಾಲ್: ಮೂರು ನಗರಗಳ ಆತಿಥ್ಯ

ಕೌಲಾಲಾಂಪುರ (ಪಿಟಿಐ): ಭಾರತದಲ್ಲಿ ನಿಗದಿಯಾಗಿರುವ 2022ರ ಮಹಿಳಾ ಏಷ್ಯಾಕಪ್ ಫುಟ್‌ಬಾಲ್ ಟೂರ್ನಿಗೆ ನವಿ ಮುಂಬೈ, ಅಹಮದಾಬಾದ್ ಹಾಗೂ ಭುವನೇಶ್ವರ ಆತಿಥ್ಯ ವಹಿಸಲಿವೆ.

ಮುಂದಿನ ವರ್ಷದ ಜನವರಿ 20ರಿಂದ ಫೆಬ್ರುವರಿ 6ರವರೆಗೆ ಈ ಟೂರ್ನಿಯು ನಡೆಯಲಿದೆ.

2022ರ ಫಿಫಾ 17 ವರ್ಷದೊಳಗಿನ ಮಹಿಳೆಯರ ವಿಶ್ವಕಪ್ ಟೂರ್ನಿಯೂ ಭಾರತದಲ್ಲೇ ಆಯೋಜನೆಯಾಗಲಿದೆ.

'ಏಷ್ಯಾದಲ್ಲಿ ಮಹಿಳಾ ಫುಟ್‌ಬಾಲ್ ವಿಶ್ವದರ್ಜೆಯ ಮಟ್ಟದಲ್ಲಿದೆ. ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಹಾಗೂ ಸ್ಥಳೀಯ ಆಯೋಜನಾ ಸಮಿತಿಯು ಏಷ್ಯಾಕಪ್ ಟೂರ್ನಿಗೆ ಸೂಕ್ತ ತಾಣಗಳನ್ನು ಆಯ್ಕೆ ಮಾಡಿದೆ' ಎಂದು ಏಷ್ಯನ್ ಫುಟ್‌ಬಾಲ್ ಕಾನ್ಫೆಡರೇಷನ್‌ನ (ಎಎಫ್‌ಸಿ) ಪ್ರಧಾನ ಕಾರ್ಯದರ್ಶಿ ಡ್ಯಾಟೊ ವಿಂಡ್ಸರ್ ಹೇಳಿದ್ದಾರೆ.

ನವಿ ಮುಂಬೈನ ಡಿ.ವೈ.ಪಾಟೀಲ್, ಅಹಮದಾಬಾದ್‌ನ ಟ್ರಾನ್ಸ್‌ಸ್ಟೇಡಿಯಾ ಹಾಗೂ ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯಲಿವೆ.

ಹರ್ಷಿಣಿಗೆ 'ಡಬಲ್' ಸಂಭ್ರಮ

ಬೆಂಗಳೂರು: ಅಗ್ರಶ್ರೇಯಾಂಕಿತ ಆಟಗಾರ್ತಿ ಕರ್ನಾಟಕದ ಹರ್ಷಿಣಿ ಎನ್. ಇಲ್ಲಿ ನಡೆದ ಎಂಎಟಿ-ಎಐಟಿಎ 14 ವರ್ಷದೊಳಗಿನವರ ಟೆನಿಸ್ ಟೂರ್ನಿಯ ಬಾಲಕಿಯರ ಸಿಂಗಲ್ಸ್ ಹಾಗೂ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು. ಬಾಲಕರ ಸಿಂಗಲ್ಸ್ ವಿಭಾಗದ ಪ್ರಶಸ್ತಿಯು ರಾಜ್ಯದ ಗಂಧರ್ವ ಜಿ.ಕೆ. ಅವರು ಪಾಲಾಯಿತು.

ಶುಕ್ರವಾರ ನಡೆದ ಬಾಲಕಿಯರ ಸಿಂಗಲ್ಸ್ ಫೈನಲ್ ಹಣಾಹಣಿಯಲ್ಲಿ ಹರ್ಷಿಣಿ 6-1, 6-2ರಿಂದ ಅನ್ವಿ ಪುನೆಗಂಟಿ ಅವರನ್ನು ಸೋಲಿಸಿದರು. ಡಬಲ್ಸ್ ವಿಭಾಗದಲ್ಲಿ ಸಂಗೀತಾ ರಾಮನ್ ಜೊತೆಗೂಡಿ 6-4, 6-0ರಿಂದ ಮಹಾರಾಷ್ಟ್ರ–ತಮಿಳುನಾಡಿನ ದೇವಾಂಶ್ರೀ –ಲಕ್ಷಿತಾ ಗೋಪಿನಾಥ್ ಅವರನ್ನು ಮಣಿಸಿ ಪ್ರಶಸ್ತಿಗೆ ಮುತ್ತಿಟ್ಟರು.